₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 03.04.2026 ಸಂಪುಟ: 11 ಸಂಚಿಕೆ:77 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

# ವಿಶ್ವವಾಣಿ

ವಿಶ್ವಾಸವೇ ವಿಶ್ವ

ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕ ಮುಖ್ಯಸ್ಥೆ, ರಾಜ್ಯಸಭಾ ಸಂಸದೆ ಸುಧಾಮೂರ್ತಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ, ಲೋಕಸಭಾ ಸಚಿವಾಲಯ ಪ್ರಕಟಿಸಿದ ಅವರ ಇತ್ತೀಚಿನ ಪುಸ್ತಕ 'ಟೈಡ್ಸ್ ಆಫ್ ಟೈಮ್: ಭಾರತ್ಸ್ ಹಿಸ್ಟರಿ ಥ್ರೂ ಮ್ಯೂರಲ್ಸ್ ಇನ್ ಪಾರ್ಲಿಮೆಂಟ್' ಪ್ರತಿಯನ್ನು ನೀಡಿದರು.


**ಸೊಂಪಾದ ಪುಟಗಳು**

ಜ್ಞಾನದಿಂದ ವಿಜ್ಞಾನದೆಡೆಗೆ ಹೊರಳುತ್ತಿದೆಯೇ ಸೈನ್ಸ್?

ಶಿಶಿರಕಾಲ – ಶಿಶಿರ್ ಹೆಗಡೆ 6

ಘಮಘಮಿಸುವ ಆ ವ್ಯಂಜನವನ್ನು ತಯಾರಿಸುವ ಕಾಲ!

ಶಶಾಂಕಣ – ಶಶಿಧರ ಹಾಲಾಡಿ 7


## ದಾರಿದೀಪೋಕ್ತಿ



ಕತ್ತಲೆಯನ್ನು ಶಪಿಸುತ್ತಾ ಕೂರುವುದಕ್ಕಿಂತ ಒಂದು ಸಣ್ಣ ದೀಪ ಹಚ್ಚುವುದು ಲೇಸು; ಹಾಗೆಯೇ ಪರಿಸ್ಥಿತಿಯನ್ನು ದೂಷಿಸುವ ಬದಲು, ಬದಲಾವಣೆಯನ್ನು ನಿಮ್ಮಿಂದಲೇ ಆರಂಭಿಸುವುದು ಲೇಸು. ನಿಮ್ಮಲ್ಲೇ ಎಲ್ಲ ಸಮಸ್ಯೆಗೂ ಪರಿಹಾರವಿದೆ

## ವಕ್ರತುಂಡೋಕ್ತಿ

ಪರರ ಮುಖ ನೋಡಿಯೇ ತಮ್ಮನ್ನು ತಾವು ತಿದ್ದಿಕೊಳ್ಳುವ ಕನ್ನಡಿಯಿಲ್ಲದ ತಾಣಕ್ಕೆ ಫೇಸ್ಬುಕ್ ಎನ್ನಬಹುದು.

### ಹೊರ್ಮುಜ್ ಜಲಸಂಧಿ ರಕ್ಷಣೆ ನಮ್ಮದಲ್ಲ ಎಂದ ಅಮೆರಿಕ ಇರಾನನ್ನು ಶಿಲಾಯುಗಕ್ಕೆ ತಳ್ಳುತ್ತೇವೆ: ಡೊನಾಲ್ಡ್ ಅಬ್ಬರ

# ಟ್ರಂಪ್ ಯೂಟರ್ನ್ ಮತ್ತೆ ಯುದ್ಧೋನ್ಮಾದ

## ಕಚ್ಚಾತೈಲ ಬೆಲೆ ಏರಿಕೆ, ಷೇರುಪೇಟೆಯಲ್ಲಿ ನಿಲ್ಲದ ಆತಂಕ

**ವಾಷಿಂಗ್ಟನ್:** ಇರಾನ್ ಯುದ್ಧವನ್ನು ಶೀಘ್ರವೇ ಕೊನೆಗೊಳಿಸಲಾಗುವುದು ಎಂದು ಹೇಳಿಕೆ ನೀಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮರುದಿನವೇ ಹೇಳಿಕೆ ಬದಲಿಸಿದ್ದು ಮೂರ್ನಾಲ್ಕು ವಾರ ಯುದ್ಧ ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ. ಈ ಹೇಳಿಕೆ ಬೆನ್ನಲ್ಲೇ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಭಾರೀ ಏರಿಕೆ ಕಂಡಿದೆ.

ಅಮೆರಿಕದ ಜನತೆಯನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಟ್ರಂಪ್ ಅವರು ಯುದ್ಧ ಸದ್ಯಕ್ಕೆ ನಿಲ್ಲಲ್ಲ ಎಂದು ಹೇಳಿಕೆ ನೀಡಿದ ಕ್ಷಣದಿಂದಲೇ ತೈಲ ರಫ್ತು ಮಾಡುವ ಒಪೆಕ್ ರಾಷ್ಟ್ರಗಳ ಬ್ರೆಂಟ್ ಕಚ್ಚಾತೈಲದ ಬೆಲೆ 4.5% ಏರಿಕೆಯಾಗಿದೆ. ಒಂದು ಬ್ಯಾರೆಲ್ (158 ಲೀಟರ್) ಕಚ್ಚಾ ತೈಲದ ದರ ಈಗ 106.42 ಡಾಲರ್‌ಗೆ (9,930 ರು.) ತಲುಪಿದೆ.

ಹೊರ್ಮುಜ್ ಜಲಸಂಧಿಯ ಮೂಲಕ ಬರುವ ತೈಲದ ಅಗತ್ಯ ಅಮೆರಿಕಕ್ಕಿಲ್ಲ. ಅಲ್ಲಿಂದ ತೈಲ ಪಡೆಯುವ ದೇಶಗಳೇ ಅದರ ರಕ್ಷಣೆಯ ಜವಾಬ್ದಾರಿ ಹೊರಬೇಕು. ತೈಲ ಬಿಕ್ಕಟ್ಟು ಎದುರಿಸುತ್ತಿರುವ ಮಿತ್ರರಾಷ್ಟ್ರಗಳು ತಮಗೆ ಬೇಕಾದ ತೈಲವನ್ನು ತಾವೇ ಹಾರ್ಮೋಜ್ ಜಲಸಂಧಿಯಿಂದ ಪಡೆದುಕೊಳ್ಳಲು ಧೈರ್ಯ ತೋರಬೇಕು. ಅಮೆರಿಕವು ವಿಶ್ವದ ಅತಿ ದೊಡ್ಡ ತೈಲ ಉತ್ಪಾದಕ ರಾಷ್ಟ್ರವಾಗಿರುವುದರಿಂದ, ಜಾಗತಿಕ ವಾಗಿ ತೈಲ ಬೆಲೆ ಏರಿಕೆಯಾದಾಗ ದೇಶಕ್ಕೆ ಆರ್ಥಿಕವಾಗಿ ಲಾಭವಾಗುತ್ತದೆ ಎಂದು ಟ್ರಂಪ್ ಹೇಳಿಕೊಂಡಿದ್ದಾರೆ. ಈ ಮೂಲಕ ಅಮೆರಿಕದ ಜತೆ ಕೈ ಜೋಡಿಸದ ನ್ಯಾಟೋ ರಾಷ್ಟ್ರಗಳತ್ತ ಪರೋಕ್ಷವಾಗಿ ಚಾಟಿ ಬೀಸಿದ್ದಾರೆ.

→ 8

### ಒಬಾಮಾ ವಿರುದ್ಧ ವಾಗ್ದಾಳಿ

ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರ ವಿದೇಶಾಂಗ ನೀತಿಗಳು ಇಂದಿನ ಪರಿಸ್ಥಿತಿಗೆ ಕಾರಣ. ಒಬಾಮಾ ಅವರ ನೇತೃತ್ವದಲ್ಲಿ ನಡೆದ ಇರಾನ್ ಅಣು ಒಪ್ಪಂದವು ಒಂದು ದುರಂತ. 2016ರಲ್ಲಿ ಒಬಾಮಾ ಆಡಳಿತವು ಇರಾನ್‌ಗೆ 17 ಕೋಟಿ ಡಾಲರ್ ಮೊತ್ತವನ್ನು ನಗದು ರೂಪದಲ್ಲಿ ನೀಡಿತ್ತು. ಈ ಒಪ್ಪಂದವನ್ನು ನಾನು ರದ್ದುಗೊಳಿಸದಿದ್ದರೆ ಇರಾನ್ ಈಗಾಗಲೇ ಅಣ್ವಸ್ತ್ರಗಳನ್ನು ತಯಾರಿಸಿರುತ್ತಿತ್ತು. ಅದು ಇಡೀ ಮಧ್ಯಪ್ರಾಚ್ಯದ ವಿನಾಶಕ್ಕೆ ಕಾರಣವಾಗುತ್ತಿತ್ತು.

### ತೈಲ ನಾವು ಕೊಡ್ತೇವೆ

ಸೌದಿ ಅರೇಬಿಯಾ ಮತ್ತು ರಷ್ಯಾ, ಎರಡನ್ನು ಸೇರಿಸಿದರೂ ಅವರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ತೈಲವನ್ನು ನಾವು ಉತ್ಪಾದಿಸುತ್ತಿದ್ದೇವೆ. ತೈಲದ ಕೊರತೆ ಎದುರಿಸುತ್ತಿರುವ ದೇಶಗಳು ಅಮೆರಿಕದಿಂದಲೇ ತೈಲ ಖರೀದಿಸಬಹುದು. ಒಂದು ವೇಳೆ ಇರಾನ್ ಶಾಂತಿ ಮಾತುಕತೆಗೆ ಬರದಿದ್ದರೆ ಮುಂದಿನ 2-3 ವಾರಗಳಲ್ಲಿ ಅಲ್ಲಿನ ತೈಲ ಕೇಂದ್ರಗಳು ಮತ್ತು ವಿದ್ಯುತ್ ಘಟಕಗಳ ಮೇಲೆ ಭೀಕರ ದಾಳಿ ನಡೆಸುತ್ತೇವೆ. ನಾವು ಇರಾನ್ ಅನ್ನು ಶಿಲಾಯುಗಕ್ಕೆ ಕೊಂಡೊಯ್ಯುತ್ತೇವೆ.

### ನಮ್ಮ ತಾಕತ್ತು ಗೊತ್ತಿಲ್ಲ

ಟ್ರಂಪ್ ಅವರ ಹೇಳಿಕೆಗಳಿಗೆ ಇರಾನ್ ಸೇನೆ ತೀಕ್ಷ್ಣವಾಗಿ ತಿರುಗೇಟು ನೀಡಿದೆ. ನಮ್ಮ ಸೇನಾ ಸಾಮರ್ಥ್ಯದ ಬಗ್ಗೆ ಅಮೆರಿಕಕ್ಕೆ ಯಾವುದೇ ಕಲ್ಪನೆಯಿಲ್ಲ. ಅವರು ಗುರಿಯಾಗಿಸಿಕೊಂಡಿರುವ ಸ್ಥಳಗಳು ಅತ್ಯಲ್ಪ. ನಮ್ಮ ಪ್ರಮುಖ ಸೇನಾ ಉತ್ಪಾದನಾ ಕೇಂದ್ರಗಳು ಶತ್ರುಗಳಿಗೆ ಸಿಗದಂತಹ ರಹಸ್ಯ ಸ್ಥಳಗಳಲ್ಲಿವೆ. ಅಮೆರಿಕ ಮತ್ತು ಇಸ್ರೇಲ್ ಸಂಪೂರ್ಣವಾಗಿ ಶರಣಾಗುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ. ನಾವು ಈವರೆಗೆ ಕೊಟ್ಟಿದ್ದಕ್ಕಿಂತಲೂ ಭೀಕರವಾದ ಹೊಡೆತವನ್ನು ನೀವು ಇನ್ನು ಮುಂದೆ ನಿರೀಕ್ಷಿಸಬಹುದು.

### ಅಮೆರಿಕನ್ನರಿಗೆ ಪತ್ರ

ಇರಾನ್ ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಅಮೆರಿಕದ ಜನತೆ ಉದ್ದೇಶಿಸಿ ಪತ್ರ ಬರೆದಿದ್ದಾರೆ. ತಮ್ಮ ದೇಶವು ಜನರ ಮೇಲೆ ಶತ್ರುತ್ವ ಹೊಂದಿಲ್ಲ, ಆದರೆ ಜಾಗತಿಕ ಮಟ್ಟದಲ್ಲಿ ಇರಾನ್‌ನ್ನು ಚಿತ್ರಿಸುವ ರೀತಿ ಅಚ್ಚರಿಯನ್ನುಂಟು ಮಾಡಿದೆ. ವಿಶ್ವದ ಅತ್ಯಂತ ಪ್ರಾಚೀನ ನಾಗರಿಕತೆಗಳಲ್ಲಿ ಒಂದಾದ ಇರಾನ್, ಆಧುನಿಕ ಇತಿಹಾಸದಲ್ಲಿ ದಾಳಿ, ವಿಸ್ತರಣೆ ಅಥವಾ ವಸಾಹತುಶಾಹಿಯ ಮಾರ್ಗವನ್ನು ಎಂದಿಗೂ ಅನುಸರಿಸಿಲ್ಲ.

# 2 ಜಿಲ್ಲೆಗಳ 277 ಎಕರೆ ಅರಣ್ಯ ಬಳಸಲು 34 ಕಠಿಣ ಷರತ್ತು

## ಎತ್ತಿನ ಹೊಳೆಗೆ ಕೇಂದ್ರ ಸರಕಾರ ತಾತ್ವಿಕ ಒಪ್ಪಿಗೆ

**ದೆಹಲಿ:** ಎತ್ತಿನಹೊಳೆ ಯೋಜನೆಗೆ ಹಾಸನ ಹಾಗೂ ತುಮಕೂರು ಜಿಲ್ಲೆಗಳ 277 ಎಕರೆ ಅರಣ್ಯ ಬಳಸಲು ಕೇಂದ್ರ ಪರಿಸರ ಸಚಿವಾಲಯದ ಅರಣ್ಯ ಸಲಹಾ ಸಮಿತಿ ಷರತ್ತುಬದ್ಧ ಅನುಮತಿ ನೀಡಿದ ಬೆನ್ನಲ್ಲೇ ಕೇಂದ್ರ ಸರಕಾರ ತಾತ್ವಿಕ ಅನುಮೋದನೆ ನೀಡಿದೆ.

ಈ ಬಗ್ಗೆ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (ಅರಣ್ಯ ಸಂರಕ್ಷಣಾ ವಿಭಾಗ) ಮಾಹಿತಿ ನೀಡಿದ್ದು, ಯೋಜನೆ ಮುಂದುವರಿಸಲು 34 ಷರತ್ತು ವಿಧಿಸಿದೆ. ಈ ಬೆಳವಣಿಗೆ ಬಳಿಕ ಸಚಿವಾಲಯದ ತಕರಾರಿನ ಕಾರಣದಿಂದ ವರ್ಷದಿಂದ ಸ್ಥಗಿತಗೊಂಡಿದ್ದ ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಮತ್ತೆ ಚಾಲನೆ ಸಿಗಲಿದೆ.

**ಕಠಿಣ ಷರತ್ತುಗಳು:** ಈಗಾಗಲೇ ಅರಣ್ಯ ಪ್ರದೇಶದಲ್ಲಿ ಒಪ್ಪಿಗೆ ಇಲ್ಲದೇ ಕಾಮಗಾರಿ ನಡೆಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕು. ಕಾಮಗಾರಿ ನಡೆಸಿದ ಸ್ಥಳದ ಮೌಲ್ಯದ ಆರು ಪಟ್ಟು ಮೌಲ್ಯವನ್ನು ದಂಡದ ರೂಪದಲ್ಲಿ ಪಾವತಿಸಬೇಕು.

### ಗೌಡರ ಮನವಿಗೆ ಸ್ಪಂದನೆ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಮಾರ್ಚ್ 9ರಂದು ರಾಜ್ಯಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿ, ಕೇಂದ್ರ ಸರಕಾರದ ಮಧ್ಯಪ್ರವೇಶಕ್ಕೆ ಭಾವನಾತ್ಮಕವಾಗಿ ಮನವಿ ಮಾಡಿದ್ದರು. ಇದಕ್ಕೆ ಕೇಂದ್ರ ಸ್ಪಂದಿಸಿದೆ. ಇದರಿಂದ, ಸಚಿವಾಲಯದ ತಕರಾರಿನ ಕಾರಣದಿಂದ ವರ್ಷದಿಂದ ಸ್ಥಗಿತಗೊಂಡಿದ್ದ ಎತ್ತಿನಹೊಳೆ ಯೋಜನೆ ಕಾಮಗಾರಿಗೆ ಮತ್ತೆ ಚಾಲನೆ ಸಿಗಲಿದೆ.

ಪರಿಸರ ಸಂರಕ್ಷಣೆ ಗಮನದಲ್ಲಿಟ್ಟುಕೊಂಡು ಕಾಮಗಾರಿ ನಡೆಸಬೇಕು ಎಂದು ಕೇಂದ್ರ ಹೇಳಿದೆ.

ಅರಣ್ಯ ಭೂಮಿಯ ಪ್ರಮಾಣಕ್ಕೆ ಸಮನಾಗಿ ಅರಣ್ಯೇತರ ಭೂಮಿಯಲ್ಲಿ ಗಿಡ ಬೆಳೆಸಬೇಕು. ಪರಿಹಾರ ಅರಣ್ಯೀಕರಣಕ್ಕಾಗಿ ಗುರುತಿಸಲಾದ ಅರಣ್ಯೇತರ ಭೂಮಿಯನ್ನು ರಾಜ್ಯ ಅರಣ್ಯ ಇಲಾಖೆಯ ಹೆಸರಿಗೆ ವರ್ಗಾವಣೆ ಮತ್ತು ಮ್ಯುಟೇಷನ್ ಮಾಡಬೇಕು, ಅದರ ವಿವರಗಳನ್ನು ಸಲ್ಲಿಸಬೇಕು ಎಂದು ಕೇಂದ್ರ ಸೂಚಿಸಿದೆ.

→ 8

## ಇಂಡೋನೇಷ್ಯಾ: 7.4 ತೀವ್ರತೆಯ ಭೂಕಂಪ: ಸುನಾಮಿ ಎಚ್ಚರಿಕೆ

**ಟೆರ್ನೇಟ್:** ಇಂಡೋನೇಷ್ಯಾದ ಉತ್ತರ ಮೊಲುಕ್ಕಾ ಸಮುದ್ರ ಪ್ರದೇಶದಲ್ಲಿ ಗುರುವಾರ ಮುಂಜಾನೆ ಭಾರೀ ಭೂಕಂಪ ಸಂಭವಿಸಿದ್ದು ಸುನಾಮಿಯ ಭೀತಿ ಎದುರಾಗಿದೆ. ರಿಕ್ಟರ್ ಮಾಪಕದಲ್ಲಿ 7.4 ತೀವ್ರತೆಯ ಭೂಕಂಪನ ದಾಖಲಾಗಿದ್ದು, ಅಮೆರಿಕದ ಸುನಾಮಿ ಮುನ್ನೆಚ್ಚರಿಕೆ ಕೇಂದ್ರವು ಇಂಡೋನೇಷ್ಯಾ, ಫಿಲಿಪ್ಪೈನ್ಸ್ ಮತ್ತು ಮಲೇಷ್ಯಾ ಕರಾವಳಿ ಪ್ರದೇಶಗಳಿಗೆ ಸುನಾಮಿ ಎಚ್ಚರಿಕೆ ನೀಡಿದ್ದು, ಸಮುದ್ರ ಅಲೆಗಳು 0.3ರಿಂದ 1 ಮೀಟರ್ ಎತ್ತರದವರೆಗೆ ಏರಬಹುದೆಂದು ಮುನ್ಸೂಚನೆ ಕೊಟ್ಟಿದೆ. ಭೂಮಿಯ ಒಳಭಾಗದಲ್ಲಿ 35 ಕಿಲೋಮೀಟರ್ ಆಳದಲ್ಲಿ ಕಂಪನ ಉಂಟಾಗಿದೆ.

## ರಾಜಾ ರವಿವರ್ಮನ ಕೃತಿ 167 ಕೋಟಿ ರು.ಗೆ ಸೇಲ್

**ಮುಂಬೈ:** ಭಾರತದ ವಿಶ್ವವಿಖ್ಯಾತ ಕಲಾವಿದ ರಾಜಾ ರವಿವರ್ಮ ಅವರ 'ಯಶೋದಾ ಮತ್ತು ಕೃಷ್ಣ' ತೈಲ ವರ್ಣಚಿತ್ರವು ಮುಂಬೈನ ಹರಾಜಿನಲ್ಲಿ ದಾಖಲೆಯ 167.2 ಕೋಟಿ ರೂಪಾಯಿಗೆ ಮಾರಾಟ ವಾಗಿದೆ. ಸೀರಮ್ ಇನ್‌ಸ್ಟಿಟ್ಯೂಟ್‌ನ ಸೈರಸ್ ಪೂನಾವಾಲಾ ಅವರು ಖರೀದಿ ಸಿದ ಈ ಕಲಾಕೃತಿಯು, ಭಾರತೀಯ ಕಲಾ ಇತಿ ಹಾಸದಲ್ಲಿ ಹೊಸ ದಾಖಲೆ ಸೃಷ್ಟಿಸಿದೆ. ರವಿವರ್ಮ ಅವರು 1890ರ ದಶಕದಲ್ಲಿ ರಚಿಸಿದ ಅತ್ಯಂತ ಅಪರೂಪದ ತೈಲ ವರ್ಣಚಿತ್ರ.

→ 8

ಬೆಂಗಳೂರಿನ ಕೋರಮಂಗಲದ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿವಿಧ ಶ್ರೇಣಿಯ 152 ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಿದರು. ಬಳಿಕ ಪ್ರಶಸ್ತಿ ಪುರಸ್ಕೃತರು ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಗ್ರೂಪ್ ಫೋಟೋ ಸೆಷನ್‌ನಲ್ಲಿ ಭಾಗವಹಿಸಿದರು. ಈ ವೇಳೆ ಗೃಹ ಸಚಿವ ಡಾ.ಜಿ. ಪರಮೇಶ್ವರ, ಗೃಹ ಇಲಾಖೆಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಡಿಜಿ-ಐಜಿ ಡಾ.ಎಂ.ಎ ಸಲೀಂ ಸೇರಿದಂತೆ ಹಿರಿಯ ಅಧಿಕಾರಿಗಳಿದ್ದರು.

## ದಾಳಿ ಮುಗಿದಿಲ್ಲ: ರಾಜನಾಥ್ ಸಿಂಗ್

**ತಿರುವನಂತಪುರಂ:** ಭಾರತದ ಮೇಲೆ ಮೇಲೆ ಯಾವುದೇ ದುಸ್ಸಾಹಸಕ್ಕೆ ನಡೆಸಿದರೂ ಪಾಕಿಸ್ತಾನಕ್ಕೆ ಚೇತರಿಸಿಕೊಳ್ಳಲಾಗದ ಹೊಡೆತ ನೀಡುವುದಾಗಿ ಭಾರತ ಎಚ್ಚರಿಸಿದೆ. ಭಾರತೀಯ ಸೈನಿಕರನ್ನು ಗೌರವಿಸುವ ಸಲುವಾಗಿ ಕೇರಳದ ತಿರುವನಂತಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಆಪರೇಷನ್ ಸಿಂಧೂರ ಕಾರ್ಯಾಚರಣೆ ಇನ್ನೂ ಮುಗಿದಿಲ್ಲ. ಮುಂದೊಮ್ಮೆ ಪಾಕಿಸ್ತಾನವು ಯಾವುದೇ ದುಸ್ಸಾಹಸಕ್ಕೆ ಮುಂದಾದರೆ ಭಾರತದ ಪ್ರತಿಕ್ರಿಯೆ ನಿರ್ಣಾಯಕವಾಗಿರಲಿದೆ ಎಂದು ಎಚ್ಚರಿಸಿದ್ದಾರೆ.

## ಆಮ್ ಆದ್ಮಿ ಧ್ವನಿಗೆ ಆಪ್ ಕೊಕ್: ರಾಘವ್ ಚಡ್ಡಾ ಸ್ಥಾನಮಾನ ರದ್ದು

**ದೆಹಲಿ:** ಸಂಸತ್ತಿನಲ್ಲಿ ಜನಸಾಮಾನ್ಯರ ಪರ ಧ್ವನಿ ಎತ್ತಿ ಅಲ್ಪಾವಧಿಯಲ್ಲಿಯೇ ಹೆಸರು ಮಾಡಿರುವ ಆಮ್ ಆದ್ಮಿ ಪಕ್ಷದ ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಅವರನ್ನು ಈಗ ಪಕ್ಷವೇ ದೂರ ಇಟ್ಟಿದೆ. ಪಕ್ಷದ ಪುನರ್ರಚನೆ ವೇಳೆ ಅವರನ್ನು ಸಂಸತ್ತಿನ ಉಪನಾಯಕ ಸ್ಥಾನದಿಂದ ವಜಾಗೊಳಿಸಲಾಗಿದೆ. ಚಡ್ಡಾ ಸ್ಥಾನಕ್ಕೆ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯದ ಕುಲಪತಿ ಮತ್ತು ಪಕ್ಷದ ಸಂಸದ ಡಾ. ಅಶೋಕ್ ಕುಮಾರ್ ಮಿತ್ತಲ್ ಅವರನ್ನು ನೇಮಕ ಮಾಡಿದೆ. ಅಬಕಾರಿ ಹಗರಣದಲ್ಲಿ ಖುಲಾಸೆಯಾದ ಪಕ್ಷದ ಅಧ್ಯಕ್ಷ ಅರವಿಂದ ಕೇಜ್ರಿವಾಲ್ ಅವರನ್ನು ಇತ್ತೀಚೆಗೆ ಪಕ್ಷದ ಇತರ ನಾಯಕರು ಭೇಟಿ ಮಾಡಿದ್ದರೂ ಛಡ್ಡಾ ಭೇಟಿ ಮಾಡಿರಲಿಲ್ಲ. ತಮ್ಮ ಸಾಮಾಜಿಕ ಮಾಧ್ಯಮದಲ್ಲೂ ಈ ವಿಷಯದ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ.

### ಆಮದು ಮೇಲಿನ ಕಸ್ಟಮ್ಸ್ ತೆರಿಗೆ ಇಳಿಸಿದ ಕೇಂದ್ರ

## ನಲವತ್ತು ಪೆಟ್ರೋ ಕೆಮಿಕಲ್ಸ್ ಉತ್ಪನ್ನಕ್ಕೆ ಸುಂಕ ವಿನಾಯಿತಿ

**ದೆಹಲಿ:** ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಹಿನ್ನೆಲೆಯಲ್ಲಿ ಇಂಧನ ತೈಲ ಅಭಾವವನ್ನು ಗಮನದಲ್ಲಿಟ್ಟುಕೊಂಡು, ಸುಮಾರು 40 ಪ್ರಮುಖ ಪೆಟ್ರೋಕೆಮಿಕಲ್ ಉತ್ಪನ್ನಗಳ ಆಮದು ಮೇಲಿನ ಕಸ್ಟಮ್ಸ್ ಸುಂಕದಲ್ಲಿ ಕೇಂದ್ರ ಸರಕಾರ ವಿನಾಯಿತಿ ನೀಡಿದೆ.

ಈ ವಿನಾಯಿತಿ ಜೂನ್ 30ರವರೆಗೆ ಜಾರಿಯಲ್ಲಿದ್ದು, ಪ್ಲಾಸ್ಟಿಕ್, ಪ್ಯಾಕೇಜಿಂಗ್, ವಸ್ತ್ರ, ಔಷಧ, ರಾಸಾಯನಿಕ, ವಾಹನ ಭಾಗಗಳು ಸೇರಿದಂತೆ ವಿವಿಧ ಉತ್ಪಾದನಾ ಕ್ಷೇತ್ರಗಳಿಗೆ ಪ್ರಯೋಜನಕಾರಿಯಾಗಲಿದೆ. ಹಣಕಾಸು ಸಚಿವಾಲಯ ಪ್ರಕಟಣೆ ಪ್ರಕಾರ, ದೇಶೀಯ ಕೈಗಾರಿಕೆಗಳಿಗೆ ಅಗತ್ಯವಿರುವ ಪೆಟ್ರೋ ಕೆಮಿಕಲ್ ಮೂಲ ವಸ್ತುಗಳ ಲಭ್ಯತೆ ನಿರಂತರವಾಗಿರಲು ಮತ್ತು ತಳ ಹಂತದ ಕ್ಷೇತ್ರಗಳ ಮೇಲಿನ ವೆಚ್ಚದ ಒತ್ತಡ ಕಡಿಮೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ.

ಇದರಿಂದ ಅಂತಿಮ ಉತ್ಪನ್ನಗಳ ಗ್ರಾಹಕರಿಗೂ ಪರಿಹಾರ ಸಿಗಲಿದೆ ಎಂದು ತಿಳಿಸಲಾಗಿದೆ. ವಿನಾಯಿತಿ ನೀಡಲಾದ ಉತ್ಪನ್ನಗಳಲ್ಲಿ ಮೆಥನಾಲ್, ಅನ್ಹೈಡ್ರಸ್ ಅಮೋನಿಯಾ, ಟೋಲ್ಯೂಯಿನ್, ಸ್ಟೈರಿನ್, ಡೈಕ್ಲೋರೋಮಿಥೇನ್ (ಮೆಥಿಲೀನ್ ಕ್ಲೋರೈಡ್), ವಿನೈಲ್ ಕ್ಲೋರೈಡ್, ಮೊನೋಮರ್ ಪಾಲಿಬುಟಾಡೈನ್, ಸ್ಟೈರಿನ್ ಬುಟಾಡೈನ್ ಮತ್ತು ಅನ್‌ಸ್ಯಾಚುರೇಟೆಡ್ ಪಾಲಿಯೆಸ್ಟರ್ ರೆಸಿನ್ ಸೇರಿವೆ.

### ಸುಪ್ರೀಂಕೋರ್ಟ್ ಕಿಡಿ, ಎನ್ಐಎ ತನಿಖೆಗೆ ಆದೇಶ

## ನ್ಯಾಯಾಂಗಕ್ಕೂ ದೀದಿ ಸಡ್ಡು 9 ಗಂಟೆ ಅಧಿಕಾರಿಗಳ ಒತ್ತೆ ಸೆರೆ

**ದೆಹಲಿ:** ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ನ್ಯಾಯಾಂಗ ಅಧಿಕಾರಿಗಳ ಮೇಲೆ ನಡೆದ ದಾಳಿಯನ್ನು ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿ ಸಿದ್ದು, ಅಧಿಕಾರಿಗಳ ಸುರಕ್ಷತೆಗಾಗಿ ಕೇಂದ್ರ ಸಶಸ್ತ್ರ ಪಡೆಗಳನ್ನು ನಿಯೋಜಿಸಲು ಸೂಚನೆ ನೀಡಿದೆ.

ಕೋಲ್ಕತ್ತಾ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಪತ್ರ ಬರೆದ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ಈ ಪ್ರಕರಣವನ್ನು ಗುರುವಾರ ಸ್ವಯಂ ವಿಚಾರಣೆಗೆತ್ತಿಕೊಂಡು ಪಶ್ಚಿಮ ಬಂಗಾಳ ಸರಕಾರದ ನಡೆಯನ್ನು ಕಟುವಾಗಿ ಟೀಕಿಸಿದೆ. ಮಾಲ್ಡಾ ಜಿಲ್ಲೆಯಲ್ಲಿ ವಿಶೇಷ ತೀವ್ರ ಪರಿಷ್ಕರಣೆಯ ಸಮಯದಲ್ಲಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸಿ ಹಾಕಿರುವುದನ್ನು ವಿರೋಧಿಸಿದ ಗುಂಪೊಂದು ಏಳು ನ್ಯಾಯಾಂಗ ಅಧಿಕಾರಿಗಳನ್ನು ಒಂಬತ್ತು ಗಂಟೆಗಳಿಗೂ ಹೆಚ್ಚು ಕಾಲ ಒತ್ತೆಯಾಳಾಗಿ ಇರಿಸಿಕೊಂಡಿತ್ತು.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ ಪಾಂಚೋಲಿ ಅವರಿದ್ದ ಪೀಠವು, ಈ ಘಟನೆ ಸಂಬಂಧ ಎನ್ಐಎ ಇಲ್ಲವೇ ಸಿಬಿಐ ತನಿಖೆಗೆ ಆದೇಶಿಸಿದೆ ರಾಜ್ಯದ ಮುಖ್ಯ ಕಾರ್ಯದರ್ಶಿ, ಜಿಲ್ಲಾಧಿಕಾರಿ ಮತ್ತು ಎಸ್ಪಿಗೆ ಸಮನ್ಸ್ ನೀಡಿದೆ.

### ತ್ವರಿತ ವಿಚಾರಣೆಗೆ ನಿರಾಕರಿಸಿದ ಸುಪ್ರೀಂಕೋರ್ಟ್

## ಕೇತಗಾನಹಳ್ಳಿ ಭೂ ಒತ್ತುವರಿ ಪ್ರಕರಣ: ಎಚ್ಡಿಕೆಗೆ ರಿಲೀಫ್

**ಬೆಂಗಳೂರು/ದೆಹಲಿ:** ಬಿಡದಿ ಸಮೀಪದ ಕೇತಗಾನಹಳ್ಳಿ ಭೂಮಿ ಪ್ರಕರಣಕ್ಕೆ ಸಂಬಂಧಿಸಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ಸಮಾಜ ಪರಿವರ್ತನಾ ಸಂಸ್ಥೆ ಸಲ್ಲಿಸಿ ರುವ ಅರ್ಜಿಯ ವಿಚಾರ ಣೆಯನ್ನು ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಇದರೊಂದಿಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ರಿಲೀಫ್ ದೊರೆತಿದ್ದು, ಪ್ರಕರಣವನ್ನು ಸಾಮಾನ್ಯ ಪ್ರಕರಣದ ವಿಚಾರಣೆಯಂತೆಯೇ ಕೈಗೆತ್ತಿಕೊಳ್ಳಲಾಗು ವುದು ಎಂದು ನ್ಯಾಯಪೀಠ ತಿಳಿಸಿದೆ. ಪ್ರಕರಣಕ್ಕೆ ಸಂಬಂಧಿಸಿ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ತಮ್ಮ ಮೇಲಿನ ಆರೋಪವನ್ನು ಪ್ರಶ್ನಿಸಿ ಸಚಿವ ಕುಮಾರಸ್ವಾಮಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ರಾಜ್ಯ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ತಡೆ ನೀಡಿತ್ತು. ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶದ ನಂತರ ಕರ್ನಾಟಕ ಹೈ ಕೋರ್ಟ್ ನ್ಯಾಯಾಂಗ ನಿಂದನೆ ಅರ್ಜಿ ವಿಚಾ ರಣೆಯನ್ನು ಅನಿರ್ದಿಷ್ಟಾವಧಿಗೆ ಮುಂದೂ ಡಿದೆ. ಅಂದರೆ ಮುಂದಿನ ವಿಚಾರಣೆಗೆ ದಿನಾಂಕವನ್ನು ನಿಗದಿಪಡಿಸಿಲ್ಲ. ಅರ್ಜಿದಾರರ ಪರವಾಗಿ ವಕೀಲ ಪ್ರಶಾಂತ್ ಭೂಷಣ್ ಅವರು ವಾದ ಮಂಡಿಸಿದರು.

### ಫನ್‌ತರಂಗ

– ರಘುಪತಿ ಶೃಂಗೇರಿ –

ವಿಧಾನಸೌಧ ಆವರಣದಲ್ಲಿ ಶಾಸಕರ ಗ್ರೂಪ್ ಫೋಟೋ ಶೂಟ್ – ಸುದ್ದಿ

ಏನ್ರೀ, ಯಾರದ್ದೂ ಗುರುತು ಸಿಕ್ತಿಲ್ಲವಲ್ಲ... ಎಲ್ರೂ ಹೊಟ್ಟೆ ಒಳ್ಗೆ ಎಳ್ಕೊಂಡಿದ್ರಾ ಫೋಟೋ ತೆಗೆಯೋವಾಗ...?



## ಬಕೆಟ್‌ಗೆ ಬಿದ್ದ ಮಗು ಸಾವು ನೊಂದ ತಾಯಿ ಆತ್ಮಹತ್ಯೆ

**ಬೆಂಗಳೂರು:** ಆಟವಾಡುತ್ತಿದ್ದ 11 ತಿಂಗಳ ಮಗು ಆಕಸ್ಮಿಕವಾಗಿ ನೀರಿನ ಬಕೆಟ್‌ನಲ್ಲಿ ಬಿದ್ದು ಮೃತಪಟ್ಟ ಬೆನ್ನಲ್ಲೇ ಮಗುವಿನ ಸಾವಿಗೆ ತಾನೇ ಕಾರಣ ಎಂದು ನೊಂದು ತಾಯಿ ಆತ್ಮಹತ್ಯೆ ಮಾಡಿಕೊಂಡಿರುವ ಹೃದಯ ವಿದ್ರಾವಕ ಘಟನೆ ಚಂದ್ರ ಲೇಔಟ್‌ನಲ್ಲಿ ನಡೆದಿದೆ.

ನಗರದ ನಿವಾಸಿಯಾದ 29 ವರ್ಷದ ಪ್ರತಿಭಾ ಮತ್ತು ಅವರ ಪುಟ್ಟ ಪುತ್ರ ಅಗಸ್ತ್ಯ ಮೃತ ದುರ್ದೈವಿಗಳು. ಪ್ರತಿಭಾ ಅವರು ಸಾಫ್ಟ್‌ವೇರ್ ವೃತ್ತಿಯಲ್ಲಿದ್ದು, ಪತಿ ಮಹಾಂತೇಶ್ ಅವರೊಂದಿಗೆ ಕಳೆದ ನಾಲ್ಕು ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಬುಧವಾರ ಮಹಾಂತೇಶ್ ಅವರು ಎಂದಿನಂತೆ ಕೆಲಸಕ್ಕೆ ತೆರಳಿದ್ದ ಸಂದರ್ಭದಲ್ಲಿ ಮನೆಯಲ್ಲಿ ಈ ಅವಘಡ ಸಂಭವಿಸಿದೆ. ಪ್ರತಿಭಾ ಅವರು ಟೆರೇಸ್ ಮೇಲೆ ಒಣಗಿದ ಬಟ್ಟೆಗಳನ್ನು ತರಲು ಹೋಗಿದ್ದ ವೇಳೆ, ಮನೆಯಲ್ಲಿ ತೆವಳುತ್ತಿದ್ದ ಮಗು ಅಗಸ್ತ್ಯ ವಾಷಿಂಗ್ ಏರಿಯಾಕ್ಕೆ ಹೋಗಿ ನೀರಿನಿಂದ ತುಂಬಿದ್ದ ಬಕೆಟ್‌ಗೆ ಬಿದ್ದಿದೆ. ವಾಪಸ್ ಬಂದ ತಾಯಿಗೆ ಮಗು ನೀರಿನಲ್ಲಿ ಬಿದ್ದು ಮೃತಪಟ್ಟಿರುವುದು ಕಂಡುಬಂದಿದೆ.

ಮಗು ಪ್ರಾಣ ಪಕ್ಷಿ ಹಾರಿ ಹೋಗಿರುವು ದನ್ನು ಕಂಡು ತೀವ್ರ ಆಘಾತಕ್ಕೊಳಗಾದ ಪ್ರತಿಭಾ, ಮಗುವಿನ ಸಾವಿಗೆ ತಾನೇ ಹೊಣೆ ಎಂಬ ಅಪರಾಧ ಪ್ರಜ್ಞೆಯಿಂದ ಮನೆಯಲ್ಲೇ ಆತ್ಮಹತ್ಯೆಗೆ ಶರಣಾಗಿದ್ದಾರೆ. ಸಂಜೆ 6.30ರ ಸುಮಾರಿಗೆ ಪತಿ ಮಹಾಂತೇಶ್ ಕೆಲಸ ಮುಗಿಸಿ ಮನೆಗೆ ಬಂದಾಗ ಬಾಗಿಲು ಒಳಗಿನಿಂದ ಲಾಕ್ ಆಗಿತ್ತು. ಅನುಮಾನಗೊಂಡು ಪರ್ಯಾಯ ಕೀ ಬಳಸಿ ಒಳಗೆ ಪ್ರವೇಶಿಸಿದಾಗ ಪತ್ನಿ ಮತ್ತು ಮಗುವಿನ ಶವ ಪತ್ತೆಯಾಗಿವೆ.

### ಆರ್ಟೆಮಿಸ್-II ಉಡ್ಡಯನ ಯಶಸ್ವಿ, ಶಶಿಯ ಅಂಗಳದಲ್ಲಿ ಸೌರ ವಿಕಿರಣ ಅಧ್ಯಯನ

# ಚಂದಿರನ ಪ್ರದಕ್ಷಿಣೆಗೆ ಹೊರಟ ನಾಸಾ ನೌಕೆ

**ಫ್ಲೋರಿಡಾ:** ಐದು ದಶಕಗಳ ಬಳಿಕ ಮತ್ತೊಮ್ಮೆ ಚಂದ್ರನ ಅನ್ವೇಷಣೆಗೆ ಹೊರಟಿರುವ ನಾಸಾದ ಐತಿಹಾಸಿಕ ಆರ್ಟೆಮಿಸ್-II ಮಿಷನ್ ಉಡ್ಡಯನ ಯಶಸ್ವಿಯಾಗಿದೆ. ಭಾರತೀಯ ಕಾಲಮಾನ ಗುರುವಾರ ಬೆಳಗ್ಗೆ 4:05ಕ್ಕೆ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ನಾಲ್ವರು ಗಗನಯಾತ್ರಿಗಳಿದ್ದ ಒರಾಯನ್ ಬಾಹ್ಯಾಕಾಶ ನೌಕೆಯನ್ನು ಅತ್ಯಂತ ಶಕ್ತಿಶಾಲಿ ಸ್ಪೇಸ್ ಲಾಂಚ್ ಸಿಸ್ಟಮ್ ಸಿಸ್ಟಮ್ (ಎಸ್ಎಲ್ಎಸ್) ರಾಕೆಟ್ ಮೂಲಕ ಬಾಹ್ಯಾಕಾಶಕ್ಕೆ ಕಳುಹಿಸಲಾಗಿದೆ.

ಉಡಾವಣೆಯಾದ ಸುಮಾರು 8.5 ನಿಮಿಷಗಳ ನಂತರ ರಾಕೆಟ್‌ನ ಪ್ರಮುಖ ಭಾಗ ಬೇರ್ಪಟ್ಟಿತು. ಈ ಸಮಯದಲ್ಲಿ ಒರಾಯನ್ ನೌಕೆಯು ತನ್ನ ಮೇಲಿನ ಹಂತವಾದ ಐಸಿಪಿಎಸ್ ನೊಂದಿಗೆ ಭೂಸ್ಥಿರ ಕಕ್ಷೆಯನ್ನು ತಲುಪಿತು.

→ 8

### 10 ದಿನಗಳ ತಿರುಗಾಟ, 11 ಲಕ್ಷ ಕಿ.ಮೀ ಪಯಣ

1972ರ ಅಪೊಲೊ 17 ಮಿಷನ್ ನಂತರ, ಸುಮಾರು 50 ವರ್ಷಗಳ ಬಳಿಕ ಚಂದ್ರನ ಸಮೀಪಕ್ಕೆ ಮಾನವರು ಪ್ರಯಾಣಿಸುತ್ತಿರುವುದು ಇದೇ ಮೊದಲು. ಈ ಬಾರಿ ಗಗನಯಾತ್ರಿಗಳು ಚಂದ್ರನ ಮೇಲೆ ಇಳಿಯುವುದಿಲ್ಲ, ಬದಲಾಗಿ ಮುಂದಿನ ಆರ್ಟೆಮಿಸ್ ನೌಕೆಯಲ್ಲಿ ಚಂದ್ರನ ಮೇಲೆ ಇಳಿಯಲು ಅಗತ್ಯವಿರುವ ವ್ಯವಸ್ಥೆಗಳನ್ನು ಪರೀಕ್ಷಿಸಲಿದ್ದಾರೆ. 10 ದಿನಗಳ ಸುದೀರ್ಘ ಪ್ರಯಾಣದಲ್ಲಿ ಗಗನಯಾತ್ರಿಗಳು ಚಂದ್ರನನ್ನು ಸುತ್ತುಹಾಕಿ ಅಧ್ಯಯನ ನಡೆಸಿ ಭೂಮಿಗೆ ಮರಳಲಿದ್ದಾರೆ. ಭೂಮಿಯಿಂದ ಸುಮಾರು 4 ಲಕ್ಷ ಕಿಲೋಮೀಟರ್ ದೂರದವರೆಗೆ ಈ ನೌಕೆ ಪ್ರಯಾಣಿಸಲಿದೆ. ಇದು 1970ರಲ್ಲಿ ಅಪೊಲೊ 13 ಮಿಷನ್ ನಿರ್ಮಿಸಿದ್ದ ದಾಖಲೆಯನ್ನು (4,00,171 ಕಿ.ಮೀ) ಇದು ಮೀರಿಸುವ ಸಾಧ್ಯತೆಯಿದೆ. ಗಗನಯಾತ್ರಿಗಳು ಚಂದ್ರನ ಮೇಲ್ಮೈಯಿಂದ ಸುಮಾರು 6,400ರಿಂದ 9,600 ಕಿಲೋಮೀಟರ್ ದೂರದಲ್ಲಿ ಚಂದ್ರನ ಹಿಂಬದಿಯ ಮೂಲಕ ಹಾದು ಹೋಗುತ್ತಿರು ವುದು ಈ ಮಿಷನ್‌ನ ವಿಶೇಷತೆ. 10 ದಿನಗಳ ಇಡೀ ಮಿಷನ್ ಅವಧಿಯಲ್ಲಿ ಗಗನಯಾತ್ರಿಗಳು ಒಟ್ಟು 11,02,400 ಕಿಲೋಮೀಟರ್‌ಗಳಿಗಿಂತಲೂ ಹೆಚ್ಚು ದೂರವನ್ನು ಕ್ರಮಿಸಲಿದ್ದಾರೆ.

## ಸಮಾಚಾರ ಸಣ್ಣದಲ್ಲ

### 6ನೇ ತರಗತಿ ಪ್ರವೇಶ ಪ್ರಕ್ರಿಯೆ ಆರಂಭ

**ಚಿಕ್ಕಬಳ್ಳಾಪುರ:** ಜವಾಹರ ನವೋದಯ ವಿದ್ಯಾಲಯದ 2026-27ನೇ ಶೈಕ್ಷಣಿಕ ವರ್ಷದ 6ನೇ ತರಗತಿ ಪ್ರವೇಶಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಈ ಶೈಕ್ಷಣಿಕ ವರ್ಷದ 6ನೇ ತರಗತಿ ಪ್ರವೇಶ ಪ್ರಕ್ರಿಯೆಯನ್ನು 2026ರ ಏಪ್ರಿಲ್ ತಿಂಗಳಲ್ಲಿ ಆನ್ ಲೈನ್ ಮೂಲಕವೇ ನಡೆಸಲಾಗುತ್ತದೆ ಎಂದು ಜವಹಾರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರ ಏ.10ರಿಂದ

**ತುಮಕೂರು:** ಗುಬ್ಬಿ ಪಟ್ಟಣದ ಡಾ.ಗುಬ್ಬಿ ವೀರಣ್ಣ ಟ್ರಸ್ಟ್ ವತಿಯಿಂದ ಏ.10 ರಿಂದ ಮೇ.10ರವರೆಗೆ ತುಮಕೂರು ಜಿಲ್ಲೆಯ ಗುಬ್ಬಿ ಟೌನ್‌ನಲ್ಲಿರುವ ಡಾ.ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಮಕ್ಕಳ ಬೇಸಿಗೆ ರಂಗ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಈ ಶಿಬಿರಕ್ಕೆ ಆಸಕ್ತ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯನ್ನು ಡಾ.ಗುಬ್ಬಿ ವೀರಣ್ಣ ರಂಗಮಂದಿರ, ಗುಬ್ಬಿ ಟೌನ್ ಇಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಏ.9ರೊಳಗೆ ಸಲ್ಲಿಸಬೇಕು. ತರಬೇತಿ ಶಿಬಿರವನ್ನು ಪ್ರತಿ ದಿನ ಬೆಳಗ್ಗೆ ಹಾಗೂ ಮಧ್ಯಾಹ್ನದ ಅವಧಿಯಲ್ಲಿ ಆಯೋಜಿಸಲಾಗುವುದು. ಶಿಬಿರದಲ್ಲಿ 8 ರಿಂದ 14 ವರ್ಷ ವಯೋಮಾನದ ಮಕ್ಕಳು ಭಾಗವಹಿಸಬಹುದಾಗಿದೆ. ಮಕ್ಕಳ ಜನನ ಪ್ರಮಾಣ ಪತ್ರ ಲಗತ್ತಿಸಬೇಕು. ಶಿಬಿರದಲ್ಲಿ ಭಾಗವಹಿಸಲು 1,500 ರು.ಗಳ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ಭಾಗವಹಿಸುವ ಮಕ್ಕಳು ಬೆಳಗಿನ / ಮಧ್ಯಾಹ್ನದ ತಿಂಡಿ / ಉಪಹಾರವನ್ನು ಮತ್ತು ಕುಡಿಯುವ ನೀರನ್ನು ಸ್ವಯಂ ವ್ಯವಸ್ಥೆ ಮಾಡಿಕೊಳ್ಳಬೇಕು. ಆಯ್ಕೆಯಾದ ಮಕ್ಕಳು ಟ್ರಸ್ಟ್ ಕಾಲ ಕಾಲಕ್ಕೆ ರೂಪಿಸುವ / ತಿಳಿಸುವ ನಿಯಮಗಳಿಗೆ ಬದ್ಧರಾಗಿರಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 08131-223336 / 9343535345 / 9448661266ನ್ನು ಸಂಪರ್ಕಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ಸಿಳಿಸಿದ್ದಾರೆ.

### ಏ.12ರಂದು 6ನೇ ತರಗತಿ ಪ್ರವೇಶ ಪರೀಕ್ಷೆ

**ತುಮಕೂರು:** ತುಮಕೂರು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ / ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 2026-27ನೇ ಶೈಕ್ಷಣಿಕ ಸಾಲಿಗೆ 6ನೇ ತರಗತಿ ಪ್ರವೇಶಕ್ಕೆ 5ನೇ ತರಗತಿಯಲ್ಲಿ ಉತ್ತೀರ್ಣರಾದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ನಿರ್ದೇಶನಾಲಯದ ಸೂಚನೆಯಂತೆ 6ನೇ ತರಗತಿ ಪ್ರವೇಶಕ್ಕೆ ರಾಜ್ಯ ಮಟ್ಟದ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಏ.12ರಂದು ಭಾನುವಾರ ನಡೆಸಲು ಉದ್ದೇಶಿಸಲಾಗಿದ್ದು, ಸಾಮಾನ್ಯ ಪ್ರವೇಶ ಪರೀಕ್ಷೆಯ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ್ ಭವನ, ಇಂದಿರಾ ಕಾಲೇಜು ಮುಂಭಾಗ, ಉಪ್ಪಾರಹಳ್ಳಿ, ತುಮಕೂರು ಅಥವಾ ದೂರವಾಣಿ ಸಂಖ್ಯೆ 0816-2273724ನ್ನು ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ದಿನದ ದುಡಿಮೆ ಇಲ್ಲದೆ ಆಟೋ ಡ್ರೈವರ್‌ಗಳ ಪರದಾಟ | ಬಂಕ್ ಬಳಿ ವಾಹನ ಸಮೇತ ಚಾಲಕರ ಠಿಕಾಣಿ

# ಗ್ಯಾಸ್ ಖಾಲಿ ಫಲಕ, ಚಾಲಕರ ಆತಂಕ

ಕೆ.ಎಸ್.ಮಂಜುನಾಥ ರಾವ್, ಕೋಲಾರ

ಗೃಹ ಬಳಕೆ ಗ್ಯಾಸ್ ವಿತರಣೆ ಸಮರ್ಪಕವಾಗಿದ್ದು ವಾಣಿಜ್ಯ ಸಿಲಿಂಡರ್ ವ್ಯವಸ್ಥೆ ಕುಂಟುತ್ತಾ ಸಾಗಿದೆ. ಕೆಲ ಹೋಟೆಲ್‌ಗಳು ಮೆನು ಕಡಿಮೆ ಮಾಡಿದ್ದರೆ ಉಳಿದವರು ಸೌದೆ ಮತ್ತು ಕರೆಂಟ್ ಮೂಲಕ ಪರಿಸ್ಥಿತಿಯನ್ನು ನಿಭಾಯಿಸುತ್ತಿದ್ದಾರೆ. ಆದರೆ ಗ್ಯಾಸ್ ನಂಬಿರುವ ಆಟೋಗಳ ಸ್ಥಿತಿ ಚಿಂತಾಜನಕವಾಗಿದ್ದು ಮೂರ್ನಾಲ್ಕು ದಿನಕ್ಕೊಮ್ಮೆ ಬರುತ್ತಿರುವ ಗ್ಯಾಸ್ ಟ್ಯಾಂಕರ್‌ಗಾಗಿ ಚಾಲಕರು ವಾಹನದ ಸಮೇತ ಬಂಕ್ ಬಳಿ ಠಿಕಾಣಿ ಹೂಡಿದ್ದು ಮಂಗಳವಾರ ಸಂಜೆಯಿಂದ ಸರತಿ ಸಾಲಿನಲ್ಲಿದ್ದು ಮೂರು ದಿನದಿಂದ ಸಂಪಾದನೆ ಇಲ್ಲದೆ ಕೂಳಿಗೂ ತತ್ವಾರ ಬಂದಿದೆ ಎಂದು ಚಾಲಕ ಸಾದಿಕ್ ಕಣ್ಣೀರು ಹಾಕಿದ್ದಾರೆ.

ಮಾ.31ರಂದು ಬಂದ 5 ಟನ್ ಗ್ಯಾಸನ್ನು ಸುಮಾರು 500 ಆಟೋಗಳಿಗೆ ವಿತರಿಸಲಾಗಿದ್ದು, ಉಳಿದವರು ಇನ್ನೂ ಸಾಲಿನಲ್ಲಿ ನಿಂತಿದ್ದಾರೆ. ಮನೆಗೆ ಹೋಗಿ ಟ್ಯಾಂಕರ್ ಬಂದಾಗ ಬನ್ನಿ ಎಂದರೆ ಚಾಲಕರು ಕೇಳುವುದಿಲ್ಲ. ಬಂಕ್ ಮುಂದೆ ಸಾಲುಗಟ್ಟಿ ನಿಂತಿರುವ ಆಟೋಗಳನ್ನು ಕಂಡು ಪೊಲೀಸರು ಗಲಾಟೆ ಮಾಡುತ್ತಾರೆ. ಇವರು ಕೇಳಲ್ಲ, ಅವರು ಬಿಡಲ್ಲ ನಮ್ಮ ಸ್ಥಿತಿ ಅಡಕತ್ತರಿಯಲ್ಲಿ ಸಿಲುಕಿದಂತಾಗಿದೆ ಎಂದು ಐಒಸಿ ಗ್ಯಾಸ್ ಬಂಕ್ ಮಾಲೀಕ ಸಾದಿಕ್ ಪ್ರತಿಕ್ರಿಯಿಸಿದ್ದಾರೆ.

ಬಂದ್‌ದಾಗಿರುವ ಕೋಲಾರದ ಖಾಸಗಿ ಗ್ಯಾಸ್ ಬಂಕ್.

ಬೆಲೆ ಏರಿಕೆಗೂ ನಮಗೂ ಸಂಬಂಧವಿಲ್ಲ, ಇಂಡಿಯನ್ ಆಯಿಲ್ ಕಾರ್ಪೋರೇಷನ್ ಕಂಪನಿಯಿಂದಲೇ ಬೆಲೆಯನ್ನು ನೇರವಾಗಿ ನಿರ್ವಹಣೆ ಮಾಡುವುದರಿಂದಾಗಿ ಕಂಪನಿ ಅಧಿಕಾರಿಗಳು ಡಿಸ್ ಪ್ಲೆ ಮಾಡಿದ ದರವನ್ನು ನಾವು ಕಲೆಕ್ಟ್ ಮಾಡುತ್ತಿದ್ದೇವೆಂದು ಗ್ಯಾಸ್ ಬಂಕ್ ಮಾಲೀಕ ಸಾದಿಕ್ ವಸ್ತುಸ್ಥಿತಿಯನ್ನು ಬಿಚ್ಚಿಡುತ್ತಾರೆ.

> ಯುದ್ಧ ಆರಂಭವಾದಾಗ ಒಂದು ಲೀಟರ್ ಗ್ಯಾಸ್ ಬೆಲೆ 55 ರು. ಇತ್ತಾದರೂ ದಿಢೀರ್ ಎಂದು 80 ರು.ಗೆ ಹೆಚ್ಚಿಸಿದ್ದಾರೆ. ಲೀಟರ್ ಮೇಲೆ 25 ರು. ಹೆಚ್ಚಾದರೆ ನಮ್ಮ ಗತಿ ಏನು? ನಾವು ಅನಿವಾರ್ಯವಾಗಿ ಪ್ರಯಾಣಿಕರ ಮೇಲೆ ಹೇರಬೇಕಾಗಿದೆ.
> - ರಮೇಶ್, ಆಟೋ ಚಾಲಕ

ಆದರೆ ಕೆಲ ಆಟೋ ಚಾಲಕರು ಸಿಕ್ಕಾಪಟ್ಟೆ ಪ್ರಯಾಣ ದರ ಏರಿಕೆ ಮಾಡಿದ್ದು 30 ರು. ದರಕ್ಕೆ 60 ರಿಂದ 70 ರು. ಸಂಗ್ರಹ ಮಾಡುತ್ತಿದ್ದು ಬಡಬಗ್ಗರು ಆಟೋ ಏರುವುದಾದರೂ ಹೇಗೆಂದು ಅರ್ಬನ್ ಬ್ಯಾಂಕ್ ಉದ್ಯೋಗಿ ಸುಜಾತ ಪ್ರಶ್ನೆ ಮಾಡಿದ್ದಾರೆ. ಪ್ರಯಾಣ ದರವನ್ನು ಪರಿಶೀಲನೆ ನಡೆಸಬೇಕಾದ ಆರ್‌ಟಿಒ, ಪೊಲೀಸ್, ತೂಕ ಮತ್ತು ಅಳತೆ ಇಲಾಖೆ ಅಧಿಕಾರಿಗಳು ಆಟೋ ದರ ಏರಿಕೆಗೂ ತಮಗೂ ಸಂಬಂಧವಿಲ್ಲ ಎಂಬಂತೆ ನಿರ್ಲಿಪ್ತರಾಗಿರುವ ಕಾರಣ ಕೆಲ ಪೆಟ್ರೋಲ್ ಆಟೋಗಳವರೂ ಪ್ರಯಾಣಿಕರನ್ನು ಸುಲಿಗೆ ಮಾಡುತ್ತಿದ್ದು ಕೆಲ ಎಲೆಕ್ಟ್ರಿಕ್ ಆಟೋಗಳವರೂ ಲೂಟಿಗೆ ಕೈ ಜೋಡಿಸಿರುವುದು ಪ್ರಯಾಣಿಕರನ್ನು ಸಂಕಷ್ಟಕ್ಕೆ ದೂಡಿದೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

## ಬೇಸಿಗೆಯಲ್ಲಿ ಪಾಲಿಸಬೇಕಾದ ಸುರಕ್ಷ ಮುನ್ನೆಚ್ಚರಿಕೆ ಕ್ರಮಗಳು

**ಚಿಕ್ಕಬಳ್ಳಾಪುರ:** ಪ್ರಸಕ್ತ ಸಾಲಿನಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗಿದ್ದು ಉಷ್ಣತೆ ಹೆಚ್ಚಳ ಮಾನವನ ದೇಹದ ಮೇಲೆ ಸಾಕಷ್ಟು ಪ್ರಭಾವ ಬೀರಲಿದೆ. ಈ ಸಂದರ್ಭದಲ್ಲಿ ಸಾರ್ವಜನಿಕರು ಏನೆಲ್ಲಾ ಮಾಡಬೇಕು? ಏನು ಮಾಡಬಾರದು ಎಂಬ ಮುನ್ನೆಚ್ಚರಿಕೆ ಕ್ರಮವನ್ನು ಪಾಲಿಸಿ ನಿಮ್ಮೊಂದಿಗೆ ಕುಟುಂಬದವರ ಆರೋಗ್ಯವನ್ನು ರಕ್ಷಿಸಿಕೊಳ್ಳಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ. ಏನು ಮಾಡಬೇಕು: ಸಡಿಲವಾದ ಹಾಗೂ ತಿಳಿ ಬಣ್ಣದ ಹತ್ತಿ ಬಟ್ಟೆಗಳನ್ನು ಧರಿಸಬೇಕು. ಬಾಯಾರಿಕೆ ಆಗದಿದ್ದರೂ ಆಗಾಗ್ಗೆ ನೀರು ಕುಡಿಯಬೇಕು (ಮಜ್ಜಿಗೆ, ಎಳನೀರು, ಪಾನಕ, ತಾಜಾ ಹಣ್ಣಿನ ರಸಗಳನ್ನು ಬಳಸಿ). ಮನೆಯಲ್ಲೇ ತಯಾರಿಸಿದ ಶುದ್ಧ, ತಾಜಾ, ಸುಲಭವಾಗಿ ಜೀರ್ಣವಾಗುವ ಆಹಾರ ಸೇವಿಸಬೇಕು. ಸೌತೇಕಾಯಿ, ಕಲ್ಲಂಗಡಿ, ಕಿತ್ತಳೆ ಹಣ್ಣುಗಳನ್ನು ಸೇವಿಸಬೇಕು. ಆಹಾರ ಸೇವಿಸುವ ಮುನ್ನ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ಬಿಸಿಲಿನಲ್ಲಿ ಹೋಗುವಾಗ ಛತ್ರಿ, ಟೋಪಿ ಅಥವಾ ಟವಲ್ ಬಳಸಿ ತಲೆಯನ್ನು ಮುಚ್ಚಿಕೊಳ್ಳಬೇಕು. ಕಣ್ಣಿನ ರಕ್ಷಣೆಗಾಗಿ ಸನ್ ಗ್ಲಾಸ್ ಧರಿಸಬೇಕು. ಸುಸ್ತಾದ ವ್ಯಕ್ತಿಯನ್ನು ನೆರಳಿಗೆ ಕರದೊಯ್ದು, ಒದ್ದೆ ಬಟ್ಟೆಯಿಂದ ಒರೆಸಿ ಪ್ರಾಥಮಿಕ ಆರೈಕೆ ನೀಡಬೇಕು. ಹೆಚ್ಚು ಬಿಸಿಲಿರುವ ಮಧ್ಯಾಹ್ನ 12 ರಿಂದ 4 ಗಂಟೆಯವರೆಗೆ ಸಾಧ್ಯವಾದಷ್ಟು ನೆರಳಿನಲ್ಲಿ ಅಥವಾ ಮನೆಯಲ್ಲಿ ಇರಲು ಪ್ರಯತ್ನಿಸಬೇಕು. ಏನು ಮಾಡಬಾರದು: ಬಿಗಿಯಾದ ಹಾಗೂ ಸಿಂಥೆಟಿಕ್ ಬಟ್ಟೆಗಳನ್ನು ಧರಿಸಬಾರದು. ಕಾಫಿ, ಚಹಾ, ಮದ್ಯಪಾನ ಹಾಗೂ ಅತಿಯಾದ ಸಕ್ಕರೆಯುಕ್ತ ಪಾನೀಯಗಳನ್ನು ಕುಡಿಯಬಾರದು. ರಸ್ತೆ ಬದಿ ತೆರೆದ ಆಹಾರ ಹಾಗೂ ಮಾಂಸಹಾರ ಸೇವಿಸಬಾರದು. ಅತಿಯಾದ ತಣ್ಣೀರು ಅಥವಾ ಐಸ್ ನೀರಿನಿಂದ ದೇಹವನ್ನು ಒರೆಸಬಾರದು.

## ನಿವೃತ್ತಿ ಬಳಿಕ ಕ್ರಿಯಾಶೀಲ ಬದುಕು ರೂಪಿಸಿಕೊಳ್ಳಿ



ತೋವಿನಕೆರೆಯ ಗಂಗಾಧರೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಶಿಕ್ಷಕರಾಗಿ, ಪ್ರಭಾರ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಹನುಮಂತರಾಯಪ್ಪ ಅವರಿಗೆ ಬೀಳ್ಕೊಡುಗೆ ಸಮಾರಂಭ ಆಯೋಜಿಸಲಾಯಿತು.

**ತುಮಕೂರು:** ವೃತ್ತಿಯಿಂದ ನಿವೃತ್ತರಾದವರು ಪ್ರವೃತ್ತಿ ರೂಢಿಸಿಕೊಂಡು ಕ್ರಿಯಾಶೀಲವಾಗಿ ಬದುಕಬೇಕು. ಆಗ ವಿಶ್ರಾಂತ ಜೀವನವು ಉತ್ಸಾಹದಿಂದ ಕೂಡಿರುತ್ತದೆ ಎಂದು ಗುಬ್ಬಿ ಶಾಸಕ ಎಸ್.ಆರ್. ಶ್ರೀನಿವಾಸ್ ಹೇಳಿದರು.

ತೋವಿನಕೆರೆಯ ಗಂಗಾಧರೇಶ್ವರ ಪದವಿಪೂರ್ವ ಕಾಲೇಜಿನಲ್ಲಿ ಶಿಕ್ಷಕರಾಗಿ, ಪ್ರಭಾರ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಹನುಮಂತರಾಯಪ್ಪ ಅವರಿಗೆ ಅವರ ಸ್ನೇಹ ಬಳಗ ಗುರುವಾರ ನಗರದಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಹನುಮಂತರಾಯಪ್ಪ ಅವರನ್ನು ಸನ್ಮಾನಿಸಿ ಶುಭಕೋರಿ ಮಾತನಾಡಿದರು.

ವೃತ್ತಿಯಿಂದ ನಿವೃತ್ತರಾದ ಮಾತ್ರಕ್ಕೆ ಎಲ್ಲವೂ ಮುಗಿದು ಹೋಗುವುದಿಲ್ಲ, ನಿವೃತ್ತರು ಹೊಸ ಪ್ರವೃತ್ತಿ ಆರಂಭಿಸಿ ಹೊಸ ಬದುಕು ರೂಪಿಸಿಕೊಂಡು ಸಾರ್ಥಕವಾಗಿ ಬಾಳಬೇಕು. ಅವರ ಜೀವನ ಶೈಲಿ ಇತರರಿಗೆ ಪ್ರೇರಣೆ ಆಗುವಂತಿರಬೇಕು ಎಂದು ಸಲಹೆ ಮಾಡಿದರು.

ಚಲನಚಿತ್ರ ನಟ ತೋವಿನಕೆರೆ ಹನುಮಂತಗೌಡ ಮಾತನಾಡಿ, ಶಿಕ್ಷಕ ವೃತ್ತಿ ಆರಂಭಿಸಿ ಆದರ್ಶ ಶಿಕ್ಷಕರಾಗಿ ಹೆಸರು ಮಾಡಿದ ಹನುಮಂತರಾಯಪ್ಪ ಅವರು ಬಹಳಷ್ಟು ವಿದ್ಯಾರ್ಥಿಗಳು ಉತ್ತಮ ಬದುಕು ಕಟ್ಟಿಕೊಳ್ಳು ನೆರವಾಗಿದ್ದಾರೆ. ನಿವೃತ್ತಿ ನಂತರವೂ ಅವರು ಕಿರಿಯರಿಗೆ ಮಾರ್ಗದರ್ಶನ ನೀಡುವಂತಹ ಕೆಲಸಗಳಲ್ಲಿ ತೊಡಗಿಕೊಂಡು ತಾವೂ ಕ್ರಿಯಾಶೀಲರಾಗಿ ನಿವೃತ್ತಿ ಜೀವನದಲ್ಲಿ ಶಾಂತಿ, ನೆಮ್ಮದಿಯಿಂದ ಬಾಳುವಂತಾಗಲಿ ಎಂದು ಆಶಿಸಿದರು.

ಡಿಸಿಸಿ ಬ್ಯಾಂಕ್ ನಿರ್ದೇಶಕ ಲಕ್ಷ್ಮೀನಾರಾಯಣ, ವಿವಿಧ ಸಂಘಸಂಸ್ಥೆಗಳ ಮುಖಂಡರಾದ ಜೆ. ಜಗದೀಶ್, ತೋವಿನಕೆರೆ ವಿಜಯಕುಮಾರ್, ಮಹಾಲಿಂಗಯ್ಯ, ಹೆಬ್ಬೂರು ಶ್ರೀನಿವಾಸಮೂರ್ತಿ, ಡೈರಿ ಪ್ರಕಾಶ್, ಗೋವಿಂದರಾಜು, ಸುರೇಶ್, ಸ್ವಾಮಿ, ರವಿ ರಾಥೋಡ್ ಮತ್ತಿತರರು ಭಾಗವಹಿಸಿದ್ದರು.

## ಹೇಮಾವತಿ ಹೆಗ್ಗಡೆ ಜನ್ಮದಿನ, ಹಣ್ಣು ವಿತರಣೆ

ಡಾ. ಹೇಮಾವತಿ ವೀರೇಂದ್ರ ಹೆಗ್ಗಡೆಯವರ ಹುಟ್ಟುಹಬ್ಬದ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ) ಶಿಡ್ಲಘಟ್ಟ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ ನಿರ್ಗತಿಕ ಮಾಶಾಸನ ಫಲಾನುಭವಿಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಲಾಯಿತು.

**ಶಿಡ್ಲಘಟ್ಟ:** ಡಾ. ಹೇಮಾವತಿ ವೀರೇಂದ್ರ ಹೆಗ್ಗಡೆಯವರ ಹುಟ್ಟುಹಬ್ಬದ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ (ರಿ) ಶಿಡ್ಲಘಟ್ಟ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ ನಿರ್ಗತಿಕ ಮಾಶಾಸನ ಫಲಾನುಭವಿಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ, ಅವರ ಯೋಗಕ್ಷೇಮ ವಿಚಾರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಯೋಜನಾಧಿಕಾರಿ ಪ್ರಸಾದ್, ಮಾತೃ ಹೃದಯಿ ಹೇಮಾವತಿ ಅಮ್ಮನವರು ಸಮಾಜದ ನಿರ್ಗತಿಕರು, ವೃದ್ಧರು ಹಾಗೂ ನೊಂದ ಹೆಣ್ಣು ಮಕ್ಕಳಿಗೆ ಆಸರೆಯಾಗುವಂತೆ ಹಲವು ಮಾನವೀಯ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತಿದ್ದಾರೆ ಎಂದು ಹೇಳಿದರು.

ವಾತ್ಸಲ್ಯ ಯೋಜನೆಯಡಿ ಪ್ರತಿ ತಿಂಗಳು ನಿರ್ಗತಿಕರಿಗೆ 1000ರು. ಮಾಶಾಸನ ವಿತರಣೆ, ವಾಸ್ತವ್ಯ ವ್ಯವಸ್ಥೆ ಇಲ್ಲದವರಿಗೆ ಮನೆ ನಿರ್ಮಾಣ, ಹಳೆಯ ಮನೆಗಳ ದುರಸ್ಥಿ, ಪ್ರತಿ ವರ್ಷ ಬಟ್ಟೆ ಮತ್ತು ಪಾತ್ರೆ ಕಿಟ್ ವಿತರಣೆ ಸೇರಿದಂತೆ ಅನೇಕ ಸೇವಾ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ. ಜೊತೆಗೆ, ನೊಂದ ಹೆಣ್ಣು ಮಕ್ಕಳ ಸಾಂತ್ವಾನಕ್ಕಾಗಿ 'ಗೆಳತಿ' ವಿಶೇಷ ಸಮಾಲೋಚನಾ ಕೇಂದ್ರವನ್ನು ಸ್ಥಾಪಿಸಿರುವುದು ಗಮನಾರ್ಹ ಎಂದು ತಿಳಿಸಿದರು.

ರಾಜ್ಯಾದ್ಯಂತವೂ ಇವರ ಹುಟ್ಟುಹಬ್ಬದ ಅಂಗವಾಗಿ ಹಣ್ಣು ಹಂಪಲು ವಿತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಾಲೂಕು ಸಮನ್ವಯ ಅಧಿಕಾರಿ ಅರುಣ್, ಮೇಲ್ವಿಚಾರಕರು ಹಾಗೂ ಸೇವಾ ಪ್ರತಿನಿಧಿಗಳು ಭಾಗವಹಿಸಿದ್ದರು.

## ಕೈವಾರದಲ್ಲಿ ಹುಣ್ಣಿಮೆ ಪೂಜೆ ರಥೋತ್ಸವ

**ಚಿಂತಾಮಣಿ:** ಶ್ರೀ ಕ್ಷೇತ್ರ ಕೈವಾರದ ಸದ್ಗುರು ಶ್ರೀ ಯೋಗಿ ನಾರೇಯಣ ಮಠದಲ್ಲಿ ಚೈತ್ರಮಾಸದ ಹುಣ್ಣಿಮೆಯ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು.



ಹುಣ್ಣಿಮೆ ವಿಶೇಷ ಕೈಂಕರ್ಯದಲ್ಲಿ ಶ್ರೀದೇವಿ, ಭೂದೇವಿ ಸಮೇತ ಶ್ರೀ ಅಮರನಾರೇಯಣಸ್ವಾಮಿ ಹಾಗೂ ಸದ್ಗುರು ಶ್ರೀ ಯೋಗಿ ನಾರೇಯಣ ತಾತಯ್ಯನವರ ಉತ್ಸವ ಮೂರ್ತಿಗೆ ವಿಶೇಷ ಅಭಿಷೇಕ ಮತ್ತು ಅಷ್ಟಾವ ಧಾನ ಸೇವೆಯನ್ನು ನೇರವೇರಿಸಿ, ಮಹಾ ಮಂಗಳಾರತಿಯನ್ನು ಬೆಳಗಲಾಯಿತು. ರಥೋತ್ಸವವನ್ನು ನಡೆಸಲಾಯಿತು. ಭಕ್ತಾಧಿಗಳು ಪೂಜಾ ಕೈಂಕರ್ಯಗಳಲ್ಲಿ ಭಾಗವಹಿಸಿದ್ದರು.

ಭಕ್ತಾಧಿಗಳು ಅಧಿಕ ಸಂಖ್ಯೆಯಲ್ಲಿ ಪೂಜಾ ಕೈಂಕರ್ಯಗಳಲ್ಲಿ ಭಾಗವಹಿಸಿದ್ದರು. ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆಯ ನಾದಸುಧಾರಸ ಕಲಾವಿದರಿಂದ ಸಂಕೀರ್ತನೆಯನ್ನು ಸಮರ್ಪಿಸಲಾಯಿತು. ಹುಣ್ಣಿಮೆ ಪ್ರಯುಕ್ತ ಅಖಂಡ ಸಂಕೀರ್ತನೆಯನ್ನು ಏರ್ಪಡಿಸಲಾಗಿತ್ತು. ಗರ್ಭಗುಡಿಯಲ್ಲಿ ಸದ್ಗುರು ಶ್ರೀಯೋಗಿನಾರೇಯಣ ತಾತಯ್ಯನವರ ಮೂಲ ವಿಗ್ರಹಕ್ಕೆ ವಿವಿಧ ಬಗೆಯ ಹೂಗಾಳಿಂದ ಅಲಂಕಾರವನ್ನು ಮಾಡಲಾಗಿತ್ತು.

**ಆಲಂಬಗಿರಿಯಲ್ಲಿ ಗಿರಿಪ್ರದಕ್ಷಿಣೆ :** ಆಲಂಬಗಿರಿ ದೇವಾಲಯದಿಂದ ಸುಮಾರು 1 ಕಿ.ಮೀ ದೂರದಲ್ಲಿರುವ ಆಲಂಬಗಿರಿ ಬೆಟ್ಟದ ಪ್ರಕೃತಿಯ ತಪ್ಪಲಿನಲ್ಲಿ ಹುಣ್ಣಿಮೆ ಪ್ರಯುಕ್ತ ಸಂಕೀರ್ತನಾ ಗಿರಿಪ್ರದಕ್ಷಿಣೆ ಕಾರ್ಯಕ್ರಮ ನಡೆಯಿತು.

ಹುಣ್ಣಿಮೆ ಗಿರಿಪ್ರದಕ್ಷಿಣೆಯಲ್ಲಿ ಕೈವಾರ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ಎಂ.ಆರ್.ಜಯರಾಮ್ ರವರು ಭಾಗವಹಿಸಿದ್ದರು. ಅವರೊಂದಿಗೆ ಹಲವಾರು ಭಕ್ತರು ಗಿರಿಪ್ರದಕ್ಷಿಣೆ ಮಾಡಿದರು.

ವಿದ್ಯುತ್, ಆಸ್ತಿ, ನೀರಿನ ದರ ಏರಿಕೆ | ಕರ್ನಾಟಕ ಸೇನಾ ಪಡೆ ವತಿಯಿಂದ ಧರಣಿ

## ರಾಜ್ಯ ಸರಕಾರದ ವಿರುದ್ಧ ಪ್ರತಿಭಟನೆ

**ಮೈಸೂರು:** ವಿದ್ಯುತ್, ಆಸ್ತಿ, ನೀರಿನ ದರವನ್ನು ಏರಿಸಿರುವ ರಾಜ್ಯ ಸರಕಾರದ ಕ್ರಮ ಖಂಡಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ಮಾಡಲಾಯಿತು.

ಅಡುಗೆ ಅನಿಲ ಸಂಕಷ್ಟವನ್ನು ಎದುರಿಸುತ್ತಿರುವ ಜನತೆಗೆ, ರಾಜ್ಯ ಸರಕಾರ ಹೊಸ ಆರ್ಥಿಕ ವರ್ಷದಿಂದ ರಾಜ್ಯದಲ್ಲಿ ವಿದ್ಯುತ್‌ಗೆ 40 ರಿಂದ 50 ಪೈಸೆ ಹೆಚ್ಚಳ ಮಾಡಿದ್ದು, ಜೊತೆಗೆ ನೀರಿನ ದರದ ಏರಿಕೆಯನ್ನು ಅಧಿಕೃತವಾಗಿ ಪ್ರಕಟಿಸಿ, ಆಸ್ತಿ ತೆರಿಗೆಯನ್ನು ಹೆಚ್ಚಿಸಲು ನಿರ್ಧರಿಸುವುದು ಅತ್ಯಂತ ನೋವಿನ ಸಂಗತಿಯಾಗಿದೆ ಎಂದು ವಿಷಾದಿಸಿದರು.

ರಾಜ್ಯದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದಲೂ, ಬಿಟ್ಟಿ ಭಾಗ್ಯಗಳಿಗಾಗಿ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡಿ, ದಿನೇ ದಿನೇ ಅತಿ ಅಗತ್ಯ ವಸ್ತುಗಳ ಬೆಲೆ ಸೇರಿದಂತೆ ಎಲ್ಲದರ ಬೆಲೆಗಳನ್ನು ಏರಿಸುತ್ತಿರುವುದು ಅತ್ಯಂತ ನಾಚಿಕೇಡಿನ ಸಂಗತಿಯಾಗಿದೆ. ಇವರ ಅಧಿಕಾರ ದಾಹಕ್ಕಾಗಿ ರಾಜ್ಯವನ್ನು, ರಾಜ್ಯದ ಜನರನ್ನು ಸಂಕಷ್ಟಕ್ಕೆ ದೂಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಗಾಗಲೇ ರಾಜ್ಯದ ಜನತೆ ಮಧ್ಯಪ್ರಾಚ್ಯದ ಯುದ್ಧದಿಂದಾಗಿ, ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಪೂರೈಕೆ ಕೊರತೆಯಿಂದಾಗಿ ಪರಿತಪಿಸುತ್ತಿದ್ದಾರೆ. ಮುಂದೆ ಪೆಟ್ರೋಲ್, ಡೀಸೆಲ್ ಕತೆ ಏನೋ ಎಂದು ಆತಂಕದಲ್ಲಿದ್ದಾರೆ. ಈ ಸಂಕಷ್ಟ ಸಮಯದಲ್ಲಿ ರಾಜ್ಯ ಸರಕಾರ ಬೆಲೆಗಳನ್ನು ಏಕಾಏಕಿ ಏರಿಸಿ ಜನತೆಗೆ ಶಾಕ್ ನೀಡಿದ್ದಾರೆ. ಇದರ ಜೊತೆಗೆ ಹಾಲಿನ ಬೆಲೆ ಏರಿಕೆಯ ಸುಳಿವನ್ನು ನೀಡಿರುವುದು ರಾಜ್ಯದ ಜನತೆಗೆ ನುಂಗಲಾರದ ತುತ್ತಾಗಿದೆ ಎಂದರು.

ಇವೆಲ್ಲವುಗಳ ಜೊತೆಗೆ ಪಾಲಿಕೆಯ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ಮನೆಗಳಿಗೆ ಆಸ್ತಿ ಗುರುತಿನ ಸಂಖ್ಯೆ ಆಧಾರದ ಮೇಲೆ ದ್ವಿಚಕ್ರ ವಾಹನಕ್ಕೆ 100 ರು. ತ್ರಿಚಕ್ರ ವಾಹನಗಳಿಗೆ 200 ರು. ಹಾಗೂ ನಾಲ್ಕು ಚಕ್ರದ ವಾಹನಗಳಿಗೆ 500 ರು. ಮೋಟಾರ್ ವಾಹನ ಉಪಕರ ವಿಧಿಸಲು ಹೊರಟಿರುವುದು ಅವೈಜ್ಞಾನಿಕ ಹಾಗೂ ಅತ್ಯಂತ ಖಂಡನೀಯ. ಇದನ್ನು ರಾಜ್ಯದ ಜನರೆಲ್ಲ ಖಂಡಿಸಲೇಬೇಕು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೃಷ್ಣಪ್ಪ, ಪ್ರಭುಶಂಕರ್, ಸಿಂದುವಳ್ಳಿ ಶಿವಕುಮಾರ್, ಬೋಗಾದಿ ಸಿದ್ದೇಗೌಡ, ಶಿವಲಿಂಗಯ್ಯ, ಶ್ರೀನಿವಾಸ್, ನೇಹಾ, ಮಂಜುಳಾ, ಸೌಮ್ಯ, ಸುಜಾತ, ನರಸಿಂಹೇಗೌಡ, ತಾಯೂರು ಗಣೇಶ್, ವಿಜಯೇಂದ್ರ, ಪ್ರಭಾಕರ್, ರಾಧಾಕೃಷ್ಣ, ನಾರಾಯಣಗೌಡ, ದರ್ಶನ್ ಗೌಡ, ಪ್ರದೀಪ್, ಕುಮಾರ್, ಕುಮಾರ್ ಗೌಡ, ಬಸವರಾಜು, ಪರಿಸರ ಚಂದ್ರು, ನಾಗರಾಜು, ಗಣೇಶ ಪ್ರಸಾದ್, ಶಿವರಾಮಗೌಡ, ಚಂದ್ರಶೇಖರ್, ರವಿನಾಯಕ್, ರವೀಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

> **ತೆರಿಗೆ ಹೆಸರಿನಲ್ಲಿ ಲೂಟಿ ಮಾಡುವುದನ್ನು ಬಿಡಿ**
> ರಾಜ್ಯ ಸರಕಾರ ಈ ಬೆಲೆಗಳನ್ನು ಹೆಚ್ಚಿಸುವ ಮೊದಲು, ಜನತೆಗೆ ಒಳ್ಳೆಯ ರಸ್ತೆಗಳನ್ನು ಕೊಡಿ, ರಸ್ತೆಗಳು ಹಳ್ಳ ಕೊಳ್ಳಗಳಾಗಿ ಬಿದ್ದಿವೆ. ಮೊದಲು ಗುಂಡಿಗಳನ್ನು ಮುಚ್ಚಿ, ಒಳ್ಳೆ ರಸ್ತೆಗಳನ್ನು ಮಾಡಿ, ಒಳಚರಂಡಿ ವ್ಯವಸ್ಥೆ ಕಲ್ಪಿಸಿ, ಕುಡಿಯುವ ನೀರು, ಮೂಲಭೂತ ಸೌಕರ್ಯಗಳನ್ನು ನೀಡಿ. ಅದನ್ನು ಬಿಟ್ಟು ಜನರಿಂದ ತೆರಿಗೆ ಹೆಸರಿನಲ್ಲಿ ಲೂಟಿ ಮಾಡುವುದನ್ನು ಬಿಡಬೇಕು ಹಾಗೂ ಈ ಕೂಡಲೇ ಏರಿಸಿರುವ ದರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದರು.

IN THE COURT OF THE CIVIL JUDGE AND J.M.F.C. AT KORATAGERE
C.MIS.No.93/2026
**Petitioners:- 1. Rangaiah s/o Late Rangaiah @ Hallirangaiah,** A/a 82 years. **2. Rajalakshmi. R. W/o B.G.Srinivasamurthy,** A/a 43 years. r/o 6th main road, Baddihalli, Behind S.K.Medical, Manjunathanagara, Tumakuru Town, Tumakuru. **3. Bhavya w/o Srinivas s/o Rangaiah,** A/a 39 years. r/o 2nd stage, 4th cross, Uddaneswara Road, Gokula extension, Baddihalli, Tumakuru Town, Tumakuru. **4. Sowmy.T.R. W/o Narendra.S. D/o Rangaiah,** A/a 34 years. 1&4th r/o Near 60 feet Road S.K.Medical, Gokula extension, Baddihalli, Tumakuru Town, Tumakuru.
V/S
Respondents:- The Tahasildar, the Register of birth & Death, Koratgere taluk.
PUBLIC NOTIFICATION
Whereas the petitioner have filed the above petition to obtain the death certificate of the 2nd petitioners grand-father by name **Rangaiah s/o Late Hallirangaiah @Rangaiah,** died on 03-08-1958 Grand-mother by name **Chowdamma w/o Late Rangaiah** died on 27-03-1943 and Sister-in-law by name **Rangamma w/o Beerappa** died on 17-09-1966 at at Koratagere taluk, Holavanahalli hobli, Lingapura village. It is hereby notify that whoever has interest or objection to obtain the death certificates of the petitioner grand father, grand-mother and Sister-in-law may appear in person or through your advocate on; 11-05-2026 in the above case. Failing which the matter will be herd written mined in your absence.
**By order of the court
Sd/-, shirastedar
chivil judge (jr. Dn) &
J.M.F.C. court koratage.**
**K.B.Anilkumar
Advocate for petitioner.
Koratagere.**

IN THE COURT OF THE CIVIL JUDGE AND J.M.F.C. AT KORATAGERE
C.MIS.No.92/2026
**Petitioners:- 1. Rangaiah s/o Late Rangaiah @ Hallirangaiah,** A/a 82 years. **2. Rajalakshmi. R W/o B.G.Srinivasamurthy,** A/a 43 years. r/o 6th main road, Baddihalli, Behind S.K.Medical, Manjunathanagara, Tumakuru Town, Tumakuru. **3. Bhavya w/o Srinivas s/o Rangaiah,** A/a 39 years. r/o 2nd stage, 4th cross, Uddaneswara Road, Gokula extension, Baddihalli, Tumakuru Town, Tumakuru. **4. Sowmy.T.R. W/o Narendra.S. D/o Rangaiah,** A/a 34 years. 1&4th r/o Near 60 feet Road S.K.Medical, Gokula extension, Baddihalli, Tumakuru Town, Tumakuru.
V/S
**Respondents:-** The Tahasildar, the Register of birth & Death, Koratgere taluk.
PUBLIC NOTIFICATION
Whereas the petitioner have filed the above petition to obtain the death certificate of the 2nd petitioners grand-father by name **Rangaiah s/o Late Hallirangaiah @Rangaiah,** died on 03-08-1958 Grand-mother by name **Chowdamma w/o Late Rangaiah** died on 27-03-1943 and Sister-in-law by name **Rangamma w/o Beerappa** died on 17-09-1966 at at Koratagere taluk, Holavanahalli hobli, Lingapura village. It is hereby notify that whoever has interest or objection to obtain the death certificates of the petitioner grand father, grand-mother and Sister-in-law may appear in person or through your advocate on; 11-05-2026 in the above case. Failing which the matter will be herd written mined in your absence.
**By order of the court
Sd/-, shirastedar
chivil judge (jr. Dn) &
J.M.F.C. court koratage.**
**K.B.Anilkumar
Advocate for petitioner.
Koratagere.**

IN THE COURT OF THE CIVIL JUDGE AND J.M.F.C. AT KORATAGERE
C.MIS.No.94/2026
**Petitioners:- 1. Rangaiah s/o Late Rangaiah @ Hallirangaiah,** A/a 82 years. **2. Rajalakshmi. R. W/o B.G.Srinivasamurthy,** A/a 43 years. r/o 6th main road, Baddihalli, Behind S.K.Medical, Manjunathanagara, Tumakuru Town, Tumakuru. **3. Bhavya w/o Srinivas s/o Rangaiah,** A/a 39 years. r/o 2nd stage, 4th cross, Uddaneswara Road, Gokula extension, Baddihalli, Tumakuru Town, Tumakuru. **4. Sowmy.T.R. W/o Narendra.S. D/o Rangaiah,** A/a 34 years. 1&4th r/o Near 60 feet Road S.K.Medical, Gokula extension, Baddihalli, Tumakuru Town, Tumakuru.
V/S
**Respondents:-** The Tahasildar, the Register of birth & Death, Koratgere taluk.
PUBLIC NOTIFICATION
Whereas the petitioner have filed the above petition to obtain the death certificate of the 2nd petitioners grand-father by name **Rangaiah s/o Late Hallirangaiah @Rangaiah,** died on 03-08-1958 Grand-mother by name **Chowdamma w/o Late Rangaiah** died on 27-03-1943 and Sister-in-law by name **Rangamma w/o Beerappa** died on 17-09-1966 at Koratagere taluk, Holavanahalli hobli, Lingapura village. It is hereby notify that whoever has interest or objection to obtain the death certificates of the petitioner grand father, grand-mother and Sister-in-law may appear in person or through your advocate on; 11-05-2026 in the above case. Failing which the matter will be herd written mined in your absence.
**By order of the court
Sd/-, shirastedar
chivil judge (jr. Dn)
& J.M.F.C. court koratage.**
**K.B.Anilkumar
Advocate for petitioner.
Koratagere.**

## ಹೂವಿನ ಕರಗ ಮಹೋತ್ಸವದ ಸಂಭ್ರಮ

**ಶಿಡ್ಲಘಟ್ಟ:** ನಗರದ ಮುತ್ತೂರು ಬೀದಿಯಲ್ಲಿ ನೆಲೆಸಿರುವ ಐತಿಹಾಸಿಕ ಶ್ರೀ ಕರಗತಮ್ಮ ದೇವಿ ದೇವಸ್ಥಾನದಲ್ಲಿ 66ನೇ ವರ್ಷದ ಹೂವಿನ ಕರಗ ಮಹೋತ್ಸವವನ್ನು ಭಕ್ತಿಭಾವದಿಂದ ಹಾಗೂ ಅದ್ದೂರಿಯಾಗಿ ಆಚರಿಸಲಾಯಿತು. ಮಹೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು, ಅಲಂಕಾರ ಮತ್ತು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಭಕ್ತರು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿ ದೇವಿಯ ದರ್ಶನ ಪಡೆದು ತಮ್ಮ ಭಕ್ತಿಯನ್ನು ಅರ್ಪಿಸಿದರು. ಈ ಸಂದರ್ಭದಲ್ಲಿ ಸಮಾಜ ಸೇವಕ ರಾಜೀವ್ ಗೌಡ, ಬಿಜೆಪಿ ಮುಖಂಡ ಸೀಕಲ್ ರಾಮಚಂದ್ರಗೌಡ, ಡಾ. ನಾರಾಯಣರಾವ್, ರಾಜಣ್ಣ ಸೇರಿದಂತೆ ಹಲವು ಗಣ್ಯರು ದೇವಸ್ಥಾನಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದು ಆಶೀರ್ವಾದ ಪಡೆದರು. ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸಿಪಿಐ ಆನಂದ್ ಅವರ ನೇತೃತ್ವದಲ್ಲಿ ಪಿಎಸ್‌ಐ ವೇಣುಗೋಪಾಲ್ ಸೇರಿದಂತೆ ಪೊಲೀಸ್ ಸಿಬ್ಬಂದಿ ಕಟ್ಟುನಿಟ್ಟಿನ ಬಂದೋಬಸ್ತ್ ಕೈಗೊಂಡಿದ್ದರು.

ಪೊಲೀಸ್ ಧ್ವಜ ದಿನಾಚರಣೆ | ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿ ಪ್ರದಾನ

## ಪೊಲೀಸ್ ಅಧಿಕಾರಿಗಳು ಆರೋಗ್ಯದ ಕಡೆ ಗಮನ ಹರಿಸಿ

**ಮಡಿಕೇರಿ:** ಕೊಡಗು ಜಿಲ್ಲಾ ಪೊಲೀಸ್ ಘಟಕ ವತಿಯಿಂದ ಪೊಲೀಸ್ ಧ್ವಜ ದಿನಾಚರಣೆ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿ ವಿತರಣಾ ಕಾರ್ಯಕ್ರಮವು ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಗುರುವಾರ ನಡೆಯಿತು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರ ಕಚೇರಿಯ ಕಂಪ್ಯೂಟರ್ ವಿಭಾಗದಲ್ಲಿ ಹೆಡ್ ಕಾನ್ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಎನ್.ಎಸ್.ತಿಮ್ಮಯ್ಯ ಅವರಿಗೆ ಏರ್‌ಮಾರ್ಷಲ್ (ನಿವೃತ್ತ) ಕೆ.ಸಿ.ಕಾರ್ಯಪ್ಪ ಅವರು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿಯನ್ನು ವಿತರಿಸಿದರು.

ಪೊಲೀಸ್ ಇಲಾಖೆಯ ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ ವಿಭಾಗದಲ್ಲಿ ಎಚ್‌ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಎಚ್.ಎಸ್.ಸುಧೀರ್‌ಅವರಿಗೆ ಪೊಲೀಸ್ ವಿಶೇಷ ಘಟಕಗಳ ವಿಭಾಗದಲ್ಲಿ ಉತ್ತಮ ಸೇವೆ ಸಲ್ಲಿಸಿರುವುದಕ್ಕೆ ಪೊಲೀಸ್ ಟ್ರೋಫಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ನೀಡಿದರು.

ನಿವೃತ್ತ ಪೊಲೀಸ್ ಉಪ ನಿರೀಕ್ಷಕ ಕೆ.ಬಿ.ಅಚ್ಚಮ್ಮ ಮಾತನಾಡಿ, ಕೊಡಗು ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಹಲವು ಬಾರಿ ಪರೇಡ್‌ನಲ್ಲಿ ಪಾಲ್ಗೊಂಡಿದ್ದು ಸ್ಮರಣೀಯವಾಗಿದೆ ಎಂದರು. ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪ್ರತಿ ನಿತ್ಯ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಸದಾ ಶ್ರಮಿಸುತ್ತಾರೆ. ಆದ್ದರಿಂದ ಆರೋಗ್ಯದ ಕಡೆಯೂ ಸಹ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ಅವರು ಮಾತನಾಡಿರು. ಸಭಾ ಕಾರ್ಯಕ್ರಮಕ್ಕೂ ಮೊದಲು ಮುಖ್ಯ ಅತಿಥಿಗಳಿಗೆ ಗೌರವ ವಂದನೆಯನ್ನು ಜಿಲ್ಲಾ ಪೊಲೀಸ್ ಮೀಸಲು ಪಡೆಯ ಪೊಲೀಸ್ ನಿರೀಕ್ಷಕರಾದ ಗಣೇಶ್ ಅವರು ನಿರ್ವಹಿಸಿದರು. ಪೊಲೀಸ್ 8 ತಂಡಗಳಿಂದ ಪಥಸಂಚಲನ ನಡೆಯಿತು. ಪೊಲೀಸ್ ವಾದ್ಯಗೋಷ್ಠಿ ತಂಡದವರು ರಾಷ್ಟ್ರಗೀತೆ ನುಡಿಸಿದರು. ಬಳಿಕ ಪೊಲೀಸ್ ಧ್ವಜ ವಿತರಿಸಲಾಯಿತು.

ನಗರಸಭೆ ಅಧ್ಯಕ್ಷ ಪಿ.ಕಲಾವತಿ, ಡಿವೈಎಸ್‌ಪಿಗಳಾದ ಪಿ.ಎ.ಸೂರಜ್, ಮಹೇಶ್ ಕುಮಾರ್, ಚಂದ್ರಶೇಖರ್, ಸೈಬರ್ ಅಪರಾಧ ವಿಭಾಗದ ಡಿವೈಎಸ್‌ಪಿ ಲಕ್ಷ್ಮೀಕಾಂತ ತಳವಾರ, ಹಿರಿಯ ಪೊಲೀಸ್ ಅಧಿಕಾರಿ ಐ.ಪಿ.ಮೇದಪ್ಪ ಸೇರಿ ಅನೇಕರಿದ್ದರು.

ಎನ್.ಎಸ್.ತಿಮ್ಮಯ್ಯ ಅವರಿಗೆ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿಯನ್ನು ವಿತರಿಸಲಾಯಿತು.

## ಸಮಾಚಾರ ಸಣ್ಣದಲ್ಲ

### ಏ.5ಕ್ಕೆ ಡಾ.ಬಾಬೂಜಿ ಜಯಂತಿ ಕಾರ್ಯಕ್ರಮ

**ಚಾಮರಾಜನಗರ:** ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತಾಶ್ರಯದಲ್ಲಿ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ ರಾಮ್ರವರ 119ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಏ.5ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 9.30 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್‌ಭವನದಿಂದ ಮೆರವಣಿಗೆ ಹೊರಡಲಿದೆ. ಮಧ್ಯಾಹ್ನ 12.30 ಗಂಟೆಗೆ ನಗರದ ಪ್ರೈಮರಿ ಶಾಲೆ ಆವರಣದಲ್ಲಿ ವೇದಿಕೆ ಕಾರ್ಯಕ್ರಮವಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು. ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಘನ ಉಪಸ್ಥಿತಿ ವಹಿಸುವರು. ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ. ಗಣೇಶ್ ಪ್ರಸಾದ್, ಎಂ.ಆರ್. ಮಂಜುನಾಥ, ಡಾ. ಡಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಕೆ. ವಿವೇಕಾನಂದ, ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು , ಚೂಡಾ ಅಧ್ಯಕ್ಷರಾದ ಮಹಮದ್ ಅಸ್ಗರ್ ಅತಿಥಿಗಳಾಗಿ ಪಾಲ್ಗೊಳ್ಳುವರು. ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯ ಪ್ರಾಧ್ಯಾಪಕರಾದ ಹೆಚ್. ಆರ್. ಭೀಮಶಂಕರ್ ಮುಖ್ಯ ಭಾಷಣ ಮಾಡುವರು.

### ನೇಣಿಗೆ ಶರಣಾದ ಯುವ ಪ್ರೇಮಿಗಳು

**ಚಾಮರಾಜನಗರ:** ಯುವ ಪ್ರೇಮಿಗಳು ನೇಣಿಗೆ ಕೊರಳೊಡ್ಡಿ ಆತ್ಮಹತ್ಯೆ ಮಾಡಿಕೊಂಡ ದಾರುಣ ಘಟನೆ ಹನೂರು ತಾಲೂಕಿನ ಪೊನ್ನಾಚಿ ಗ್ರಾಮದ ಹಾಡಿಯಲ್ಲಿ ನಡೆದಿದೆ. ಮೀಣ್ಯಂ ಗ್ರಾಪಂ ವ್ಯಾಪ್ತಿಯ ನಾಗೇಂದ್ರ(21) ಪಾಲಾರ್‌ಗ್ರಾಮದ ನದಿಯಾ(19) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿಗಳು. ಪೊನ್ನಾಚಿ ಗ್ರಾಮದಲ್ಲಿ ಕಳೆದ ಮೂರು ದಿನಗಳಿಂದ ಹಬ್ಬ ನಡೆಯುತ್ತಿತ್ತು. ಈ ಹಬ್ಬಕ್ಕೆ ನಾಗೇಂದ್ರನ ತಾತಾ ಶಿವಮಾದಯ್ಯ ಎಂಬವರ ಮನೆಗೆ ನಾಗೇಂದ್ರ, ನದಿಯಾ ಕಳೆದ ಮೂರು ದಿನಗಳ ಹಿಂದೆ ಆಗಮಿಸಿ ಉಳಿದುಕೊಂಡಿದ್ದರು. ಈ ನಡುವೆ ನದಿಯಾ ತಂದೆ ಮಹಾದೇವ್ ಮಲೆ ಮಹದೇಶ್ವರ ಬೆಟ್ಟ ಠಾಣೆಗೆ ಮಗಳು ಕಾಣೆಯಾದಳೆಂದು ದೂರು ಕೂಡ ಕೊಟ್ಟಿದ್ದರು. ಸದ್ಯ, ನಿನ್ನೆ ತಡರಾತ್ರಿ ನದಿಯಾ ಮತ್ತು ನಾಗೇಂದ್ರ, ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ, ಸ್ಥಳಕ್ಕೆ ಮಲೆ ಮಹದೇಶ್ವರ ಬೆಟ್ಟ ಪೊಲೀಸರು, ವಿಧಿ ವಿಜ್ಞಾನ ತಂಡದ ಸಿಬ್ಬಂದಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

### ಪೊಲೀಸ್ ಧ್ವಜ ಕಾನೂನು ಪಾಲನೆಯ ಸಂಕೇತ

**ಚಾಮರಾಜನಗರ:** ಪೊಲೀಸ್ ಧ್ವಜ ಪೊಲೀಸರ ಬದ್ಧತೆ ಮತ್ತು ಕಾನೂನು ಪಾಲನೆಯ ಸಂಕೇತವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಹೇಳಿದರು. ನಗರದ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ನಡೆದ ಪೊಲೀಸ್ ಧ್ವಜ ದಿನಾಚರಣೆ ಸಮಾರಂಭದಲ್ಲಿ ಪೊಲೀಸ್ ಧ್ವಜ ಬಿಡುಗಡೆ ಮಾಡಿ ಮಾತನಾಡಿದರು. ಈ ದಿನ ರಾಜ್ಯಾದ್ಯಂತ ಪೊಲೀಸ ಧ್ವಜ ದಿನಾಚರಣೆ ಆಚರಿಸಲಾಗುತ್ತಿದೆ. ಇದರ ಉದ್ದೇಶ ನಿವೃತ್ತ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಕಲ್ಯಾಣ ಕಾರ್ಯಕ್ರಮದ ಒಂದು ಭಾಗ. ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತ ಹೊಂದಿದ ಅಧಿಕಾರಿಗಳು, ಸಿಬ್ಬಂದಿಗಳ ಸೇವೆಯನ್ನು ಸ್ಮರಿಸುವ ಕಾರ್ಯಕ್ರಮ ಇದಾಗಿದೆ. 1965ರಿಂದಲ್ಲೂ ಆಚರಣೆ ಮಾಡಿಕೊಂಡು ಬರಲಾಗಿದೆ ಎಂದರು. ನಿವೃತ್ತ ಆರಕ್ಷಕ ಉಪನಿರೀಕ್ಷಕ ಎಚ್.ಬಿ ಮಾದೇಗೌಡರು ಮುಖ್ಯ ಅತಿಥಿಯಾಗಿದ್ದರು. ನಿವೃತ್ತ ಪೊಲೀಸರನ್ನು ಸನ್ಮಾನಿಸಲಾಯಿತು ಪೊಲೀಸ್ ತುಕಡಿಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್.ಶಶಿಧರ್, ಡಿವೈಎಸ್ ಪಿಗಳಾದ ಸ್ನೇಹ ರಾಜು, ಧರ್ಮೇಂದ್ರ, ಪವನ್ ಕುಮಾರ್, ಡಿಆರ್ ಸೋಮಣ್ಣ ಇದ್ದರು.

### ಡೇರಿ ಅಧ್ಯಕ್ಷರಾಗಿ ತಾಯಮ್ಮ ಆಯ್ಕೆ

**ಕೆ ಆರ್‌ಪೇಟೆ:** ತಾಲೂಕು ಅಕ್ಕಿಹೆಬ್ಬಾಳು ಹೋಬಳಿ ವಡ್ಡರಗುಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನೂತನ ಆಡಳಿತ ಮಂಡಳಿಯ ನೂತನ ಅಧ್ಯಕ್ಷರಾಗಿ ತಾಯಮ್ಮರಾಜಶೆಟ್ಟಿ ಹಾಗೂ ನೂತನ ಉಪಾಧ್ಯಕ್ಷರಾಗಿ ಸವಿತಾರವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೂತನ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ನೂತನ ನಿರ್ದೇಶಕರನ್ನು ಮನ್ಮುಲ್ ನಿರ್ದೇಶಕರಾದ ಡಾಲು ರವಿ ಹಾಗೂ ಎಂ ಬಿ ಹರೀಶ್ ಅವರು ಅಭಿನಂದಿಸಿ ಮಾತನಾಡಿದರು. ಇದೇ ಸಮಯದಲ್ಲಿ ಮನ್ಮುಲ್ ನಿರ್ದೇಶಕರಾದ ಡಾಲು ರವಿ ಹಾಗೂ ಮನ್ಮುಲ್ ನಿರ್ದೇಶಕ ಎಂ ಬಿ ಹರೀಶ್ ಅವರನ್ನು ಸಂಘದ ಆಡಳಿತ ಮಂಡಳಿಯವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಕವಿತಾಸುರೇಶ್, ಯೋಗಿತಾಮಂಜುನಾಥ, ರಾಜಮ್ಮ ಮರೀಗೌಡ,, ಗೌರಮ್ಮಕೃಷ್ಣೇಗೌಡ, ಶಂಕರಮ್ಮನಾರಾಯಣ, ಲತಾಅಣ್ಣಯ್ಯ, ಜಯಮ್ಮ ಬಸವರಾಜು, ಭಾಗ್ಯಮ್ಮಚಂದ್ರಕುಮಾರ್, ಪ್ರಮೀಳಾ ಪುಟ್ಟರಾಜನಾಯಕ, ಸಂಘದ ಕಾರ್ಯದರ್ಶಿ ಅನಿತಾ ಮಂಜುನಾಥ್, ಹಾಲು ಪರೀಕ್ಷಕಿ ಲತಾನಾಗರಾಜು, ಸಹಾಯಕಿ ಪ್ರಿಯಾಂಕಾ ಉದಯಶಂಕರ್‌ಸೇರಿದಂತೆ ಗ್ರಾಮದ ಮುಖಂಡರು ಇದ್ದರು.

**ಬೇಕಾಗಿದ್ದಾರೆ**
ಮೈಸೂರಿನ ಖಾಸಗಿ ಕಂಪನಿಗೆ,
Fortuner ಮತ್ತು Automatic
ಕಾರು ಓಡಿಸುವ ಡ್ರೈವರ್ಸ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9916854618 / 7090541277

ಕಠಿಣ ಕಾನೂನು ಜಾರಿಯಾಗಲಿ | ಮೈಸೂರಿನ ಅಗ್ರಹಾರ ವೃತ್ತದಲ್ಲಿ ಎಬಿವಿಪಿ ಪ್ರತಿಭಟನೆ

# ಡ್ರಗ್ಸ್ ಮಾಫಿಯಾ ತಡೆಗೆ ಆಗ್ರಹ

**ಮೈಸೂರು:** ಮೈಸೂರು ಜಿಲ್ಲೆಯಲ್ಲಿ ಆಳವಾಗಿ ಬೇರೂರಿರುವ ಡ್ರಗ್ ಮಾಫಿಯಾ ಕೊನೆಗಾಣಿಸುವಂತೆ ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ಮೈಸೂರಿನ ಅಗ್ರಹಾರ ವೃತ್ತದಲ್ಲಿ ಪ್ರತಿಭಟನೆ ಮಾಡಿದರು.

ಈ ವೇಳೆ ಮಾತನಾಡಿದ ಎಬಿವಿಪಿ ರಾಜ್ಯ ಕಾರ್ಯಕಾರಣಿ ಸದಸ್ಯೆ ಮೇಘನಾ ಕೋಡಬಾಳ, ಡ್ರಗ್ಸ್ ಮಾಫಿಯಾ, ಮಾದಕ ವಸ್ತು ಸೇವನೆ ಹಾಗೂ ಮಾರಾಟ ನಿಯಂತ್ರಣ ಕುರಿತಂತೆ ಕಠಿಣ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

ಹುಣಸೂರು ತಾಲೂಕಿನ ದಾಸನಹಳ್ಳಿ ಗ್ರಾಮದಲ್ಲಿ ನಡೆದ ಇತ್ತೀಚಿನ ಘಟನೆಯು ಡ್ರಗ್ಸ್ ಸಮಸ್ಯೆಯ ಗಂಭೀರತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಗ್ರಾಮದಲ್ಲಿ ಪೊಲೀಸರು ನಡೆಸಿದ ದಾಳಿಯಲ್ಲಿ ಮಹತ್ವದ ಪ್ರಮಾಣದ ಅಕ್ರಮ ಡ್ರಗ್ಸ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಘಟನೆ ಗ್ರಾಮೀಣ ಪ್ರದೇಶಗಳಲ್ಲಿಯೂ ಮಾದಕ ವಸ್ತುಗಳ ಜಾಲ ವ್ಯಾಪಕವಾಗುತ್ತಿರುವುದನ್ನು ಸೂಚಿಸುತ್ತದೆ ಎಂದರು.

ಯುವಕರನ್ನು ಗುರಿಯಾಗಿಸಿಕೊಂಡು ಈ ರೀತಿಯ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಸಮಾಜದ ಭವಿಷ್ಯಕ್ಕೆ ದೊಡ್ಡ ಅಪಾಯವಾಗಿದೆ. ಈ ಹಿನ್ನೆಲೆಯಲ್ಲಿ, ಮಾದಕ ವಸ್ತುಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿದೆ.

ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಯುವಕರನ್ನು ಸರಿಯಾದ ದಾರಿಯಲ್ಲಿ ನಡೆಸುವುದು ಮತ್ತು ಇಂತಹ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಪೊಲೀಸ್ ಇಲಾಖೆ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅದರೊಂದಿಗೆ, ಸ್ಥಳೀಯ ಆಡಳಿತ ಮತ್ತು ಸಾರ್ವಜನಿಕರು ಸಹಕಾರ ನೀಡುವುದರಿಂದ ಮಾತ್ರ ಈ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಾಧ್ಯವಾಗುತ್ತದೆ. ಸಮಾಜದ ಪ್ರತಿಯೊಬ್ಬರೂ ಜವಾಬ್ದಾರಿಯನ್ನು ಅರಿತು ಮಾದಕ ವಸ್ತುಗಳ ವಿರುದ್ಧ ಒಗ್ಗಟ್ಟಿನಿಂದ ಹೋರಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಂದಾರ ಬಾಳುಗೋಡು, ಸಂಜಿತ್, ಗೌರವ್, ತುಷಾರ್, ಸೂರ್ಯ ನಾರಾಯಣ, ನಮ್ರತಾ, ಶ್ರೀದತ್ತ, ಪ್ರಜ್ವಲ್ ಬಿ.ಎಸ್, ಶಿವಾನಂದ್, ಪಟೇಲ್ ನಾರಾಯಣ್ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯಲ್ಲಿ ಆಳವಾಗಿ ಬೇರೂರಿರುವ ಡ್ರಗ್ ಮಾಫಿಯಾ ಕೊನೆಗಾಣಿಸುವಂತೆ ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ಮೈಸೂರಿನ ಅಗ್ರಹಾರ ವೃತ್ತದಲ್ಲಿ ಪ್ರತಿಭಟನೆ ಮಾಡಿದರು.

> **ಹುಣಸೂರು ತಾಲೂಕಿನ ದಾಸನಹಳ್ಳಿ ಗ್ರಾಮದಲ್ಲಿ ನಡೆದ ಇತ್ತೀಚಿನ ಘಟನೆಯು ಡ್ರಗ್ಸ್ ಸಮಸ್ಯೆಯ ಗಂಭೀರತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಗ್ರಾಮದಲ್ಲಿ ಪೊಲೀಸರು ನಡೆಸಿದ ದಾಳಿಯಲ್ಲಿ ಮಹತ್ವದ ಪ್ರಮಾಣದ ಅಕ್ರಮ ಡ್ರಗ್ಸ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಘಟನೆ ಗ್ರಾಮೀಣ ಪ್ರದೇಶಗಳಲ್ಲಿಯೂ ಮಾದಕ ವಸ್ತುಗಳ ಜಾಲ ವ್ಯಾಪಕವಾಗುತ್ತಿರುವುದನ್ನು ಸೂಚಿಸುತ್ತದೆ.**
> **-ಮೇಘನಾ ಕೋಡಬಾಳ,** ಎಬಿವಿಪಿ ರಾಜ್ಯ ಕಾರ್ಯಕಾರಣಿ ಸದಸ್ಯೆ

# ಸೊಸೈಟಿಗೆ 3 ಲಕ್ಷ ಅನುದಾನ

**ಕೆ ಆರ್‌ಪೇಟೆ:** ರಾಜ್ಯ ಸಹಕಾರ ಮಾರಾಟ ಮಹಾಮಂಡಳ ವತಿಯಿಂದ ಮುರುಕನಹಳ್ಳಿ ಸೊಸೈಟಿ ಗೆ 3ಲಕ್ಷ ಅನುದಾನ ತಾಲೂಕಿನ ಶೀಳನೆರೆ ಹೋಬಳಿ ಮುರುಕನಹಳ್ಳಿ ಸೊಸೈಟಿಗೆ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ವತಿಯಿಂದ ನಿರ್ದೇಶಕರಾದ ಶೀಳನೆರೆ ಮೋಹನ್ ಅವರಿಂದ 3ಲಕ್ಷ ರು.ಗಳ ಅನುದಾನವನ್ನು ಚೆಕ್ ಮೂಲಕ ಸಂಘದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಹಾಗೂ ನಿರ್ದೇಶಕರ ಕೈಗೆ ಚೆಕ್ ವಿತರಣೆ ಮಾಡಲಾಯಿತು.

ಬಳಿಕ ಮಾತನಾಡಿದ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿರ್ದೇಶಕ ಶೀಳನೆರೆ ಮೋಹನ್ ಸಹಕಾರ ಸಂಘಗಳು ದೇಶದ ಆರ್ಥಿಕ ಪ್ರಗತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ.ರೈತರು, ಮಹಿಳೆಯರ ಜೀವನಾಡಿಯಾಗಿ ಸಹಕಾರ ಸಂಘಗಳು ಕೆಲಸವನ್ನು ನಿರ್ವಹಿಸುತ್ತವೆ.ವಾಣಿಜ್ಯ ಬ್ಯಾಂಕ್ ಗಳಿಗಿಂತ ಹೆಚ್ಚು ರೈತರಿಗೆ ಸಹಕಾರ ಬ್ಯಾಂಕ್ಗಳು ಮಿತ್ರನಂತೆ ಸಹಾಯಕಾರಿಯಾಗಿವೆ. ಸ್ತ್ರೀ ಶಕ್ತಿ ಗುಂಪುಗಳಿಗೆ ಶೂನ್ಯ ಬಡ್ಡಿ ದರದಲ್ಲಿ ಐದು ಲಕ್ಷಗಳ ರೂಗಳವರೆಗೆ ಸಾಲವನ್ನು ನೀಡುತ್ತಿವೆ.ತಾಲ್ಲೂಕಿನ ಹಲವಾರು ಸೊಸೈಟಿಗಳಿಗೆ ನನ್ನ ಕೈಲಿಂದ ಆಗುವ ಅನುದಾನವನ್ನು ನೀಡುತ್ತಿದ್ದೇನೆ. ಅದಕ್ಕೆ ನಿಮ್ಮೆಲ್ಲರ ಸಲಹೆ ಸಹಕಾರದಿಂದ ಆಗಿದೆ ಎಂದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಎಂ ಬಿ ರಮೇಶ್, ಉಪಾಧ್ಯಕ್ಷ ನಂಜಪ್ಪಚಾರಿ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಶಿವಕುಮಾರ್, ಜಗದೀಶ್, ಮುಖಂಡ ಜಗದೀಶ್, ಸೊಸೈಟಿ ಮಾಜಿ ಅಧ್ಯಕ್ಷ ರಾಜೇಗೌಡ, ಸಂಘದ ನಿರ್ದೇಶಕರಾದ ಕೃಷ್ಣೇಗೌಡ, ಬಲರಾಮು(ಬಾಬು), ನಂಜುಂಡಪ್ಪ, ರಾಜು, ಗೋವಿಂದರಾಜು, ಪಿ ಜಯರಾಂ, ಶಿವಸಾಗರ್, ಸರಸ್ವತಿ, ನಾಗಮ್ಮ, ಲಲಿತಮ್ಮ, ಸಂಘದ ಕಾರ್ಯದರ್ಶಿ ಚೇತನ್ ಸೇರಿದಂತೆ ಇತರರು ಹಾಜರಿದ್ದರು.

ರಾಜ್ಯ ಸಹಕಾರ ಮಾರಾಟ ಮಹಾಮಂಡಳ ವತಿಯಿಂದ ಮುರುಕನಹಳ್ಳಿ ಸೊಸೈಟಿ ಗೆ 3ಲಕ್ಷ ಅನುದಾನವನ್ನು ವಿತರಿಸಲಾಯಿತು.

# ಶ್ರೀ ಗಣಪತಿ ಆಶ್ರಮದಲ್ಲಿ ಹನುಮ ಜಯಂತಿ

**ಮೈಸೂರು:** ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಚೈತ್ರ ಶುದ್ಧ ಹುಣ್ಣಿಮೆ ಅಂಗವಾಗಿ ಹನುಮ ಜಯಂತಿಯನ್ನು ಸಡಗರ-ಸಂಭ್ರಮದಿಂದ ಆಚರಿಸಲಾಯಿತು.

ಈ ಪವಿತ್ರ ದಿನದಂದು ಆಶ್ರಮದ ಕಿರಿಯ ಪೀಠಾಧಿಪತಿಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಭಕ್ತಾದಿಗಳಿಗೆ ವಿಶೇಷ ಸಂದೇಶ ನೀಡಿದರು. ಹನುಮ ಜಯಂತಿ ಪ್ರಯುಕ್ತ ಕಾರ್ಯಸಿದ್ಧಿ ಹನುಮಂತನಿಗೆ ವಿಶೇಷ ''ವಜ್ರಾಲಂಕಾರ'' ಮಾಡಲಾಗಿತ್ತು. ಬಜರಂಗಿ ಎಂದರೆ ವಜ್ರಾಂಗಿ ಎಂದರ್ಥ. ಸ್ವಾಮಿಯು ಭಕ್ತರಿಗೆ ವಜ್ರದಂತಹ ದೈಹಿಕ ಸಾಮರ್ಥ್ಯವನ್ನು ಮತ್ತು ಹೂವಿನಂತಹ ಮೃದುವಾದ ಮನಸ್ಸನ್ನು ಕರುಣಿಸಲಿ ಎಂದು ಸ್ವಾಮೀಜಿ ಹಾರೈಸಿದರು.

ಈ ಸಂದರ್ಭದಲ್ಲಿ ಹನುಮಂತನಿಗೆ ಪಂಚಾಮೃತ ಅಭಿಷೇಕ ಹಾಗೂ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು.

ಭಕ್ತಾದಿಗಳಿಗೆ ವೀಳ್ಯದೆಲೆ ಅರ್ಚನೆಯ ವಿಶೇಷತೆಯನ್ನು ವಿವರಿಸಿದ ಸ್ವಾಮೀಜಿ, 'ವೀಳ್ಯದೆಲೆಯು ನಮ್ಮ ಹೃದಯದ ಸಂಕೇತ. ನಮ್ಮ ಮನಸ್ಸು ಮತ್ತು ಹೃದಯವನ್ನು ಸ್ವಾಮಿಗೆ ಅರ್ಪಿಸು ವುದೇ ಈ ಅರ್ಚನೆಯ ಮೂಲ ಉದ್ದೇಶ ಎಂದು ತಿಳಿಸಿಕೊಟ್ಟರು. ಸೀತಾಮಾತೆಯು ಅಶೋಕವನದಲ್ಲಿದ್ದಾಗ ಹನುಮಂತನಿಗೆ ವೀಳ್ಯದೆಲೆಯಿಂದ ಆಶೀರ್ವದಿಸಿದ ನೆನಪಿಗಾಗಿ ಈ ಪದ್ಧತಿ ಬೆಳೆದುಬಂದಿದೆ. ಇದು ಭಕ್ತರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ವೃದ್ಧಿಸುತ್ತದೆ ಎಂದು ತಿಳಿಸಿದರು.

ಸೇವಾರ್ಥಿಗಳಿಗೆ 13 ಗಂಟುಗಳಿರುವ ವಿಶೇಷ ''ಕಾರ್ಯಸಿದ್ಧಿ ರಕ್ಷೆ''ಯನ್ನು ವಿತರಿಸಲಾಯಿತು. ಈ ಬಗ್ಗೆ ಮಾತನಾಡಿದ ಶ್ರೀಗಳು, '13 ಎಂಬ ಸಂಖ್ಯೆಯು ''ಶ್ರೀರಾಮ ಜಯರಾಮ ಜಯ ಜಯ ರಾಮ'' ಎಂಬ ಮಂತ್ರದ ಸಂಕೇತ. ಸೀತಾಮಾತೆಯು ಸುಂದರಕಾಂಡದಲ್ಲಿ ಹೇಳಿರುವ ಮಂತ್ರವನ್ನೇ ಜಪಿಸುತ್ತಾ, ಈ ರಕ್ಷೆಯನ್ನು ಧರಿಸಿ 16 ದಿನಗಳ ಕಾಲ ಸ್ವಾಮಿಗೆ ಪ್ರದಕ್ಷಿಣೆ ಹಾಕುವುದರಿಂದ ಸಕಲ ಕಷ್ಟಗಳು ನಿವಾರಣೆಯಾಗಿ ಕಾರ್ಯಸಿದ್ಧಿಯಾಗುವುದು ಖಂಡಿತ ಎಂದರು.

ಆಶ್ರಮದ ಹಿರಿಯ ಪೀಠಾಧಿಪತಿಗಳಾದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ವರ್ಷದಲ್ಲಿ ಆರು ಹನುಮಜ್ಜಯಂತಿಗಳನ್ನು ಆಚರಿಸಲಾಗುತ್ತದೆ. ಈ ಬಾರಿಯ ಚೈತ್ರ ಪೂರ್ಣಿಮೆಯಂದು ನಡೆದ ಹನುಮಜಯಂತಿ ಆಚರಣೆಯಲ್ಲಿ ಭಕ್ತರು ಪಾಲ್ಗೊಂಡು ಸ್ವಾಮಿಯ ದರ್ಶನ ಪಡೆದು ಪುನೀತರಾದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ಸನ್ನಿಧಿಯಲ್ಲಿ ಚೈತ್ರ ಶುದ್ಧ ಹುಣ್ಣಿಮೆ ಅಂಗವಾಗಿ ಹನುಮ ಜಯಂತಿಯನ್ನು ಸಡಗರ-ಸಂಭ್ರಮದಿಂದ ಆಚರಿಸಲಾಯಿತು.

# ಹನುಮ ಜಯಂತಿ: ಗೋಶಾಲೆಗೆ ಚಾಲನೆ

**ಮದ್ದೂರು:** ಮದ್ದೂರು ಪಟ್ಟಣ ಸೇರಿದಂತೆ ತಾಲೂಕಿನ ವಿವಿಧೆಡೆ ಹನುಮ ಜಯಂತಿಯ ಪೂಜಾ ಕೈಂಕರ್ಯಗಳು ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿದವು.

ತಾಲೂಕಿನ ಕೊಪ್ಪ, ಬೆಸಗರಹಳ್ಳಿ, ಕೆಸ್ತೂರು, ತೊಪ್ಪನಹಳ್ಳಿ ಗ್ರಾಮದ ಮುತ್ತುರಾಯಸ್ವಾಮಿ ದೇವಾಲಯ, ತಿಪ್ಪೂರು ಹನುಮಂತರಾಯಸ್ವಾಮಿ, ಅರೆತಿಪ್ಪೂರು ಗ್ರಾಮದ ಪಂಚಮುಖಿ ಆಂಜನೇಯ ಹಾಗೂ ಉಗ್ರನರಸಿಂಹಸ್ವಾಮಿ ದೇವಾಲಯ ಮತ್ತು ಹೊಳೆ ಆಂಜನೇಯಸ್ವಾಮಿ ದೇವಾಲಯದಲ್ಲಿ ವಿವಿಧ ಪೂಜಾ ದಿಗಳು ಜರುಗಿದವು.

ಹೊಳೆ ಆಂಜನೇಯಸ್ವಾಮಿ ದೇವಾಲಯದಲ್ಲಿ ಮೂಲ ವಿಗ್ರಹಕ್ಕೆ ಅಭಿಷೇಕ, ಪುಷ್ಪಲಂಕಾರ, ತೀರ್ಥಪ್ರಸಾದ ವಿನಿಯೋಗ ನೆರವೇರಿತಲ್ಲದೆ ದೇವಾಲಯಕ್ಕೆಭಕ್ತರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

**ಗೋಶಾಲೆ ಉದ್ಘಾಟನೆ:** ಪಟ್ಟಣದ ಹೊಳೆ ಆಂಜನೇಸ್ವಾಮಿ ದೇವಾಲಯದ ಆವರಣದಲ್ಲಿ ನೂತನ ಶ್ರೀ ಗೋವರ್ಧನ ಗೋಶಾಲೆಯನ್ನು ಶಾಸಕ ಕೆ.ಎಂ.ಉದಯ ದಂಪತಿ ಅನಾವರಣಗೊಳಿಸಿದರು. ಗೋಮಾತೆಗೆ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.

ಬಳಿಕ ಮಾತನಾಡಿದ ಶಾಸಕ ಕೆ.ಎಂ.ಉದಯ, ಇತ್ತೀಚಿನ ದಿನಗಳಲ್ಲಿ ಗೋ ಸಂಪತ್ತು ಕಡಿಮೆಯಾಗುತ್ತಿರುವುದು ಆತಂಕಕಾರಿ ವಿಚಾರವಾಗಿದ್ದು ರೈತರು ಗೋವುಗಳನ್ನು ಪೂಜಿಸಿ ಆರೈಕೆ ಮಾಡುತ್ತಿದ್ದ ಕಾಲವೊಂದಿತ್ತು. ಇತ್ತೀಚೆಗೆ ಯುವಜನ ಪಶುಗಳನ್ನು ಸಾಕಣೆ ಮಾಡಲು ಹಿಂಜರಿಯುತ್ತಿರುವುದು ಬೇಸರದ ಸಂಗತಿಯೆಂದರು.

ಈ ವೇಳೆ ನಗರಸಭೆ ಮಾಜಿ ಸದಸ್ಯೆ ಬಿ.ಸಿ.ಸರ್ವಮಂಗಳ, ಪ್ರಧಾನ ಅರ್ಚಕ ಪ್ರದೀಪ್ ಆಚಾರ್ಯ, ಭಾರತೀನಗರ ಬ್ಲಾಕ್ ಅಧ್ಯಕ್ಷ ರಾಜೀವ್ ಇತರರಿದ್ದರು.


ಮದ್ದೂರು ಪಟ್ಟಣದ ಹೊಳೆ ಆಂಜನೇಯಸ್ವಾಮಿ ದೇವಾಲಯದಲ್ಲಿ ನೂತನ ಶ್ರೀ ಗೋವರ್ಧನ ಗೋಶಾಲೆಯನ್ನು ಶಾಸಕ ಕೆ.ಎಂ.ಉದಯ ದಂಪತಿ ಉದ್ಘಾಟಿಸಿದರು.

# ಭೌಗೋಳಿಕ ದತ್ತಾಂಶಕ್ಕೆ ಸಹಕಾರಿ

**ಚಾಮರಾಜನಗರ:** ಭೌಗೋಳಿಕ ದತ್ತಾಂಶ ಸಂಗ್ರಹಣೆ ಮೂಲಕ ಸ್ಥಳೀಯ ಆಡಳಿತ ಸಮಸ್ಯೆಗಳನ್ನು ಕೇಂದ್ರಿಕರಿಸಿ ಪರಿಹರಿಸಲು ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ (ಕೆ-ಜಿಐಎಸ್ 2.0) ಸಹಕಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

ನಗರದ ಹಳೇ ಕೆ.ಡಿ.ಪಿ ಸಭಾಂಗಣದಲ್ಲಿಂದು ಸಿಬ್ಬಂದಿ ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆಯ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಸ್ಥಳೀಯ ಆಡಳಿತಕ್ಕಾಗಿ ಜಿ.ಐ.ಎಸ್ ಆಧಾರಿತ ಮಾಹಿತಿ ತಲುಪಿಸುವ ಕೆ-ಜಿಐಎಸ್ 2.0 ಅನುಷ್ಠಾನ ಕುರಿತ ತಾಂತ್ರಿಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ, ತಾಲೂಕು, ಗ್ರಾಮ ಪಂಚಾಯಿತಿಗಳ ಸ್ಥಳೀಯ ಸಮಸ್ಯೆಗಳನ್ನು ಜಿಐಎಸ್ ಮೂಲಕ ತಾಂತ್ರಿಕವಾಗಿ ಪರಿಹರಿಸಲು ಜಿಲ್ಲಾಮಟ್ಟದ ವಿವಿಧ ಇಲಾಖೆಗಳಲ್ಲಿ ಜಿಐಎಸ್ ತಂತ್ರಾಂಶ ಮತ್ತು ದತ್ತಾಂಶಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ. ಭೌಗೋಳಿಕವಾಗಿ ಸಾಕಷ್ಟು ಕ್ಷೇತ್ರವಿಸ್ತಾರ ಹೊಂದಿರುವ ಶಿಕ್ಷಣ, ಆರೋಗ್ಯ, ಅರಣ್ಯ, ಕೃಷಿ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಪಾರದರ್ಶಕ ಆಡಳಿತ, ಸಮಗ್ರ ದತ್ತಾಂಶಗಳ ಸಂಗ್ರಹಣೆ, ಕಾರ್ಯಕ್ಷಮತೆ ಹೆಚ್ಚಿಸಲು ಕೆ-ಜಿಐಎಸ್ ಸುಧಾರಿತ ತಂತ್ರಜ್ಞಾನ ನೆರವಾಗಲಿದೆ. ತಂತ್ರಜ್ಞಾನ ಅಳವಡಿಕೆಗೆ ಅಧಿಕಾರಿಗಳು ಮುಂದಾಗಬೇಕು ಎಂದರು.

ಎಲ್ಲಾ ಇಲಾಖೆಗಳು ಪ್ರತಿದಿನದ ಕಾರ್ಯವೈಖರಿಗಳನ್ನು ದಾಖಲಿಕರಣದೊಂದಿಗೆ ಜಿಯೋಟ್ಯಾಗ್ ಮಾಡಬೇಕು. ಆರೋಗ್ಯ ಕೇಂದ್ರಗಳು, ಹಾಸ್ಟಲ್, ಅಂಗನವಾಡಿಗಳಲ್ಲಿ ಯಾರು, ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದನ್ನು ಕುಳಿತಲ್ಲಿಯೇ ವೀಕ್ಷಿಸಬಹುದಾಗಿದೆ. ಜಿಲ್ಲೆಯಲ್ಲಿ ನೋಟಿಫೈ ಅರಣ್ಯ ಪ್ರದೇಶ ವಿಸ್ತಾರ ಎಷ್ಟಿದೆ ಎಂಬುದನ್ನು ತಾಂತ್ರಿಕವಾಗಿ ಅರಿಯಲು ಕೆ-ಜಿಐಎಸ್ 2.0 ತಂತ್ರಜ್ಞಾನ ಮಾಹಿತಿ ಒದಗಿಸಲಿದೆ. ನಮ್ಮ ಮುಂದಿನ ಪೀಳಿಗೆಗೂ ಇದು ಸದುಪಯೋಗವಾಗಲಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು. ಚಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಕೆ-ಜಿಐಎಸ್ 2.0 ತಂತ್ರಜ್ಞಾನ ನಮ್ಮ ಜಿಲ್ಲೆಗೆ ತುಂಬಾ ಉಪಯುಕ್ತವಾಗಲಿದೆ.

ಎಲ್ಲಾ ಅಂಗನವಾಡಿ, ಪ್ರೌಢಶಾಲೆ, ವಿದ್ಯಾರ್ಥಿನಿಲಯಗಳಲ್ಲಿನ ಮೂಲಸೌಕರ್ಯಗಳ ಸಮಗ್ರ ಮಾಹಿತಿ ಲಭ್ಯವಾಗಲಿದೆ. ತಾಂತ್ರಿಕತೆಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದ್ದು, ಜಿಲ್ಲೆಯು ಮುಂಚೂಣಿಗೆ ಬರಬೇಕಾಗಿದೆ. ಕಾರ್ಯಾಗಾರದಲ್ಲಿ ಕೆ-ಜಿಐಎಸ್ 2.0 ತಂತ್ರಜ್ಞಾನದ ಕುರಿತು ಯಾವುದೇ ಅನುಮಾನಗಳಿದ್ದರೂ ಪರಿಹರಿಸಿಕೊಳ್ಳುವಂತೆ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ನಿರ್ದೇಶಕರಾದ ಎನ್.ಎಲ್. ರಾಜೇಶ್ ಮಾತನಾಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ತಾಂತ್ರಿಕ ಅಧಿಕಾರಿಗಳು ಕಾರ್ಯಾಗಾರದಲ್ಲಿ ಉಪಸ್ಥಿತರಿದ್ದರು.

> **ಎಲ್ಲಾ ಇಲಾಖೆಗಳು ಪ್ರತಿದಿನದ ಕಾರ್ಯ ವೈಖರಿಗಳನ್ನು ದಾಖಲಿಕರಣದೊಂದಿಗೆ ಜಿಯೋಟ್ಯಾಗ್ ಮಾಡಬೇಕು. ಆರೋಗ್ಯ ಕೇಂದ್ರಗಳು, ಹಾಸ್ಟಲ್, ಅಂಗನವಾಡಿಗಳಲ್ಲಿ ಯಾರು, ಹೇಗೆ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಕುಳಿತಲ್ಲಿಯೇ ವೀಕ್ಷಿಸಬಹುದಾಗಿದೆ.**
> **-ಶ್ರೀರೂಪ, ಜಿಲ್ಲಾಧಿಕಾರಿ**

# ಪೊಲೀಸ್ ಇಲಾಖೆ ಕರ್ತವ್ಯ ಸವಾಲಿನ ಕೆಲಸ

## ಸಚಿವರಿಂದ ಬೆಟ್ಟದಪುರದಲ್ಲಿ ಪೊಲೀಸ್ ವಸತಿ ಗೃಹಗಳ ಲೋಕಾರ್ಪಣೆ

**ಪಿರಿಯಾಪಟ್ಟಣ:** ನಾಗರಿಕರ ಮಾನ, ಪ್ರಾಣ ರಕ್ಷಣೆಯಲ್ಲಿ ತೊಡಗಿರುವ ಪೊಲೀಸರು ತಮ್ಮ ಕುಟುಂಬದ ರಕ್ಷಣೆಗೂ ಆದ್ಯತೆ ನೀಡಬೇಕು ಎಂದು ಪಶು ಸಂಗೋಪನೆ ಹಾಗೂ ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಬೆಟ್ಟದಪುರದಲ್ಲಿ ಪೊಲೀಸ್ ಇಲಾಖೆ ಮತ್ತು ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ನಿರ್ಮಿಸಿರುವ ವಸತಿ ಗೃಹದ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು.

ಅತ್ಯಂತ ಜವಾಬ್ದಾರಿಯಿಂದ ಕೆಲಸ ಮಾಡುವ ಪೊಲೀಸರು ಸಾರ್ವಜನಿಕರ ಜೊತೆಗೆ ಸ್ನೇಹದಿಂದ ಇರಬೇಕು ಅಪರಾಧಿಗಳಿಗೆ ಕರುಣೆ ತೋರಬೇಕಿಲ್ಲ, ನಿರಪರಾಧಿಗಳಿಗೆ ಕರುಣೆ ತೋರಬೇಕು. ಪೊಲೀಸ್ ಸೇವೆಯಲ್ಲಿ ಶಿಸ್ತು, ಸಂಯಮ, ಪ್ರಾಮಾಣಿಕತೆ, ಮಾನವೀಯತೆ ಬಹಳ ಮುಖ್ಯ. ನ್ಯಾಯವನ್ನು ಎತ್ತಿಹಿಡಿಯುವ ಕೆಲಸದಲ್ಲಿ ಪೊಲೀಸರು ಯಾವುದೇ ಕಾರಣಕ್ಕೂ ರಾಜಿಯಾಗಬಾರದು ಎಂದರು.

ಪೊಲೀಸ್ ಸಿಬ್ಬಂದಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸುವುದು ಯಾವುದೇ ಸರ್ಕಾರದ ಆದ್ಯತೆಯಾಗಿದೆ. ಇತ್ತೀಚೆಗೆ ಹುಣಸೂರಿನಲ್ಲಿ 12 ಕೋಟಿಗೂ ಹೆಚ್ಚು ಬೆಲೆ ಬಾಳುವ ಡ್ರಗ್ಸ್ ತಯಾರಿಸುವ ಜಾಲವನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿರುವ ಇವರ ಜವಾಬ್ದಾರಿಯೂ ಹೆಚ್ಚಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಜಮೀನಿನ ವ್ಯಾಜ್ಯ ಹೊರತು ಪಡಿಸಿದರೆ ಪೊಲೀಸ್ ಠಾಣೆಗೆ ಬರುವ ದೂರುಗಳು ಕಡಿಮೆಯಾಗುತ್ತಿವೆ ಎಂದರು.

ಈಗ ಬೆಟ್ಟದಪುರ ಪೊಲೀಸ್ ಠಾಣೆ ಪೊಲೀಸರಿಗೂ ಅನುಕೂಲವಾಗುವಂತೆ 12 ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಹೆಚ್ಚುವರಿ ಕಟ್ಟಡ ಬೇಕಿದ್ದರೆ ಪ್ರಸ್ತಾವನೆ ಸಲ್ಲಿಸಲಾಗುವುದು. ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿವೆ. ರಸ್ತೆ, ಕುಡಿಯುವ ನೀರು, ಒಳಚರಂಡಿ ಕಾಮಗಾರಿಗಳು ಭರದಿಂದ ಸಾಗುತ್ತಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಮಾತನಾಡಿ, ಪೊಲೀಸರು ಠಾಣೆಯ ಬಳಿ ವಾಸವಿದ್ದರೆ ಹೆಚ್ಚು ಸಹಕಾರ ಸಿಗುತ್ತದೆ, ಬೈಲು ಕುಪ್ಪೆ ಮತ್ತು ಬೆಟ್ಟದಪುರ ಪೊಲೀಸ್ ಸಿಬ್ಬಂದಿಗಳಿಗೆ ಈ ವಸತಿ ಗೃಹ ಅನುಕೂಲವಾಗಲಿದೆ. ಪೊಲೀಸ್ ಇಲಾಖೆ ಜನ ಸ್ನೇಹಿಯಾಗಿ ನಾಗರಿಕರ ಸುರಕ್ಷತೆ ಖಾತ್ರಿಪಡಿಸುವ ಕೆಲಸ ಮಾಡುತ್ತಿದೆ. ಇತ್ತೀಚಿನ ದಿನಗಳಲ್ಲಿ ಒಂಟಿಯಾಗಿ ವಾಸಿಸುವ ಹಿರಿಯರು ಮತ್ತು ಮಹಿಳೆಯರ ಮೇಲೆ ನಡೆಯುವ ಅಪರಾಧ ತಡೆಯುವ ಉದ್ದೇಶದಿಂದ ಪೊಲೀಸ್ ಇಲಾಖೆ ಒತ್ತು ನೀಡುತ್ತಿದೆ ಎಂದರು.

ಮರದೂರು, ಅರಳಿಮರದ ಕೊಪ್ಪಲು, ವಡ್ಡರಹಳ್ಳಿ, ಕೊತ್ತವಳ್ಳಿ ಕೊಪ್ಪಲು, ಕಗ್ಗಳಿಕೊಪ್ಪಲು, ಬೆಟ್ಟದತುಂಗ ಡಿ.ಜಿ ಕೊಪ್ಪಲು ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು. ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್, ಎಎಸ್ಪಿ ಮಲ್ಲಿಕ್, ನಾಗೇಶ್, ಡಿವೈಎಸ್ಪಿ ರವಿ, ಸರ್ಕಲ್ ಇನ್ಸ್‌ಪೆಕ್ಟರ್ ದೀಪಕ್, ಸಬ್ ಇನ್ಸ್‌ಪೆಕ್ಟರ್‌ಅಜಯ್ ಕುಮಾರ್ ,ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಹೊಲದಪ್ಪ, ಎಂ ಡಿ ಸಿ ಸಿ ಬ್ಯಾಂಕ್ ನಿರ್ದೇಶಕ ಲೋಕೇಶ್, ಮೈಮುಲ್ ನಿರ್ದೇಶಕ ಪ್ರಕಾಶ್, ಮುಖಂಡರಾದ ಡಿ.ಟಿ ಸ್ವಾಮಿ, ಪುಟ್ಟರಾಜು, ಗಂಗಾಧರ್, ರಾಮಚಂದ್ರ, ಸಣ್ಣಸ್ವಾಮಿಗೌಡ, ಚಿಕ್ಕೇಗೌಡ, ಕೃಷ್ಣೇಗೌಡ, ಕುಮಾರ್, ಅಯ್ಯರ್‌ಗಿರಿ, ರವಿಕುಮಾರ್ ಉಪಸ್ಥಿತರಿದ್ದರು.

ಚೆಟ್ಟಳ್ಳಿ ಜೋಮಾಲೆ ಕೊಡವ ಪೊಮ್ಮಕ್ಕಡ ಕೂಟದಿಂದ ಆಯೋಜನೆ | ಪೊನ್ನಂಪೇಟೆಯ ಕೊಡವ ರೈಡರ್ಸ್ ಕ್ಲಬ್ ತಂಡಕ್ಕೆ ದ್ವಿತೀಯ ಸ್ಥಾನ

# ಪೊಮ್ಮಕ್ಕಡ ಕೂಟಕ್ಕೆ ಜೋಮಾಲೆ ಥ್ರೋಬಾಲ್ ಚಾಂಪಿಯನ್ ಟ್ರೋಫಿ

**ಮಡಿಕೇರಿ:** ಚೆಟ್ಟಳ್ಳಿಯ ಜೋಮಾಲೆ ಕೊಡವ ಪೊಮ್ಮಕ್ಕಡ ಕೂಟದ ವತಿಯಿಂದ ಆಯೋಜಿತ ಪ್ರಥಮ ವರ್ಷದ ಥ್ರೋಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಕೊಡವ ಪೊಮ್ಮಕ್ಕಡ ಕೂಟ ತಂಡವು ಚಾಂಪಿಯನ್ ಟ್ರೋಫಿ ತನ್ನದಾಗಿಸಿಕೊಂಡಿದೆ. ಪೊನ್ನಂಪೇಟೆಯ ಕೊಡವ ರೈಡರ್ಸ್ ಕ್ಲಬ್ ತಂಡವು ದ್ವಿತೀಯ ಸ್ಥಾನ ಪಡೆಯಿತು.

ಚೆಟ್ಟಳ್ಳಿ ಪ್ರೌಢಶಾಲಾ ಮೈದಾನದಲ್ಲಿ ಚೆಟ್ಟಳ್ಳಿ ಕೊಡವ ಸಮಾಜದ ಅಧೀನದಲ್ಲಿರುವ ಜೋಮಾಲೆ ಕೊಡವ ಪೊಮ್ಮಕ್ಕಡ ಕೂಟದ ವತಿಯಿಂದ ಆಯೋಜಿಸಲಾಗಿದ್ದ ಪ್ರಥಮ ವರ್ಷದ ಅಂತರ ಕೊಡವ ಪೊಮ್ಮಕ್ಕಡ ಥ್ರೋಬಾಲ್ ಪಂದ್ಯಾವಳಿಯ ಆಕರ್ಷಕ ಫೈನಲ್ ಪಂದ್ಯಾವಳಿಯಲ್ಲಿ ಮೈಸೂರಿನ ಕೊಡವ ಪೊಮ್ಮಕ್ಕಡ ಕೂಟ ತಂಡವು . ಪೊನ್ನಂಪೇಟೆಯ ಕೊಡವ ರೈಡರ್ಸ್ ಕ್ಲಬ್ ತಂಡದ ವಿರುದ್ಧ ಗೆಲುವು ಸಾಧಿಸಿತು. ಮೈಸೂರು ಹೂಟಗಳ್ಳಿಯ ಶ್ರೀ ತಲಕಾವೇರಿ ಪೊಮ್ಮಕ್ಕಡ ಕೂಟ ತಂಡವು ತೃತೀಯ ಸ್ಥಾನ ಮತ್ತು ಮಡಿಕೇರಿ ಕೊಡವ ಪೊಮ್ಮಕ್ಕಡ ಕೂಟದ ಬಿ ಟೀಮ್ ನಾಲ್ಕನೇ ಸ್ಥಾನ ತನ್ನದಾಗಿಸಿಕೊಂಡಿತು.

ಬೆಂಗಳೂರು ದಾಸರಹಳ್ಳಿಯ ಪೊಮ್ಮಕ್ಕಡ ಕೂಟ ತಂಡವು ಶಿಸ್ತಿನ ತಂಡವಾಗಿ, ಪೊನ್ನಂಪೇಟೆ ಗುಂಬಳಮಾಡು ಪೊಮ್ಮಕ್ಕಡ ಕೂಟ ತಂಡವು ಉತ್ತಮ ವರ್ಣ ತಂಡವಾಗಿ, ಮತ್ತು ಮೈಸೂರು ಪೊಮ್ಮಕ್ಕಡ ಕೂಟದ ಆಟಗಾರ್ತಿ ಶಹೇನಾ ಅತ್ಯುತ್ತಮ ಆಟಗಾರ್ತಿಯಾಗಿ ಹೊರಹೊಮ್ಮಿದರು. ಬಹುಮಾನ ವಿತರಸಿ ಮಾತನಾಡಿದ ಚೆಟ್ಟಳ್ಳಿ ಕೊಡವ ಸಮಾಜದ ಅಧ್ಯಕ್ಷ ಮುಳ್ಳಂಡ ರತ್ತು ಚಂಗಪ್ಪ, .ಚೆಟ್ಟಳ್ಳಿಯ ಜೋಮಾಲೆ ಪೊಮ್ಮಕ್ಕಡ ಕೂಟವನ್ನು ಚೆಟ್ಟಳ್ಳಿ ಕೊಡವ ಸಮಾಜ ಎಲ್ಲಾ ರೀತಿಯ ಬೆಂಬಲ ನೀಡಿದ್ದು, ಅತ್ಯುತ್ತಮ ಕಾರ್ಯ ನಿರ್ವಹಿಸುತ್ತಾ ಬಂದಿದೆ. ಮನೆಯಲ್ಲಿ ಬೆಳಗ್ಗಿನಿಂದ ರಾತ್ರಿವರೆಗೂ ಕುಟುಂಬ ಸದಸ್ಯರ ಕಾಳಜಿ ವಹಿಸುತ್ತಾ ಎಲ್ಲಾ ಕೆಲಸ ಕಾರ್ಯ ಗಳಲ್ಲಿಯೂ ಸಕ್ರಿಯರಾಗಿರುವ ಮಹಿಳೆಯರಿಲ್ಲದ ಮನೆಯನ್ನು ಯೋಚಿಸಲು ಸಾಧ್ಯವಿಲ್ಲ ಹೀಗಿರುವಾಗ ಇಂಥ ಮಹಿಳೆಯರು ತಮ್ಮ ಮನಸ್ಸಿನ ಸಂತೋಷಕ್ಕಾಗಿ ಪೊಮ್ಮಕ್ಕಡ ಕೂಟದಂಥ ಸಂಘ ಸ್ಥಾಪಿಸಿಕೊಂಡು ಕ್ರೀಡೆ, ಆರೋಗ್ಯ, ಮನರಂಜನಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ. ಇಂಥ ಉತ್ಸಾಹಿ ಮಹಿಳೆಯರಿಗೆ ಸಮಾಜಬಾಂಧವರು ಸದಾ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಚೆಟ್ಟಳ್ಳಿ ಜೋಮಾಲೆ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಮುಳ್ಳಂಡ ಶೋಭಾ ಚಂಗಪ್ಪ, ಇದೇ ಮೊದಲ ಬಾರಿಗೆ ಚೆಟ್ಟಳ್ಳಿಯಲ್ಲಿ ಅಂತರ ಕೊಡವ ಪೊಮ್ಮಕ್ಕಡ ಕೂಟಗಳ ತಂಡದ ನಡುವೇ ಥ್ರೋಬಾಲ್ ಪಂದ್ಯ ಆಯೋಜಿಸಲಾಗಿತ್ತು. ರಾಜ್ಯದ ವಿವಿಧೆಡೆಗಳ 16 ತಂಡಗಳು ಉತ್ಸಾಹದಿಂದ ಪಾಲ್ಗೊಂಡಿದ್ದವು. ಮೊದಲ ಪ್ರಯತ್ನಕ್ಕೇ ಉತ್ತಮ ಸ್ಪಂದನ ದೊರಕಿದ್ದು ಸಂತೋಷ ತಂದಿದೆ ಎಂದರು.

ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ದಾನಿಗಳಾದ ಬದಲೇರ ಕೌಶಿಕ್, , ಮುಳ್ಳಂಡ ರತ್ತು ಚಂಗಪ್ಪ, ಮುಳ್ಳಂಡ ಪ್ರೇಮ ಅಯ್ಯಪ್ಪ, ವಿಂಧ್ಯಾ ರಂಜನ್, ಸುಶೀಲ ತಮ್ಮಯ್ಯ, ಐಚೆಟ್ಟೀರ ಚೋಂದಮ್ಮ, ಮತ್ತು ಜೋಮಾಲೆ ಪೊಮ್ಮಕ್ಕಡ ಕೂಟದ ಉಪಾಧ್ಯಕ್ಷೆ ಚೋಳಂಡ ಜ್ಯೋತಿ ನಾಣಯ್ಯ, ಕಾರ್ಯದರ್ಶಿ ಅಡಿಕೆರ ಶಾಂತಿ ಮುತ್ತಪ್ಪ, ಖಜಾಂಚಿ ಪುತ್ತರಿರ ಗಂಗು ಅಚ್ಚಯ್ಯ, ಸಹ ಕಾರ್ಯದರ್ಶಿ ಕೆಚ್ಚೆಟ್ಟಿರ ರತಿ ಕಾರ್ಯಪ್ಪ ಸರ್ವ ಸದಸ್ಯೆಯರು ಇದ್ದರು. ಪಂದ್ಯದ ತೀರ್ಪುಗಾರರಾಗಿ ಮಡಿಕೇರಿಯ ಬೊಳ್ಳಿಯಂಡ ವಿಕ್ರಂ ,ಅಪಾಡಂಡ ಗೀತ ಅಯ್ಯಪ್ಪ, ಕಾರ್ಯನಿರ್ವಹಿಸಿದ್ದರು.

ಪ್ರಥಮ ವರ್ಷದ ಥ್ರೋಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಕೊಡವ ಪೊಮ್ಮಕ್ಕಡ ಕೂಟ ತಂಡವು ಚಾಂಪಿಯನ್ ಟ್ರೋಫಿ ತನ್ನದಾಗಿಸಿಕೊಂಡಿದೆ.

### ಶಹೇನಾ ಅತ್ಯುತ್ತಮ ಆಟಗಾರ್ತಿ

**ಬೆಂಗಳೂರು ದಾಸರಹಳ್ಳಿಯ ಪೊಮ್ಮಕ್ಕಡ ಕೂಟ ತಂಡವು ಶಿಸ್ತಿನ ತಂಡವಾಗಿ, ಪೊನ್ನಂಪೇಟೆ ಗುಂಬಳಮಾಡು ಪೊಮ್ಮಕ್ಕಡ ಕೂಟ ತಂಡವು ಉತ್ತಮ ವರ್ಣ ತಂಡವಾಗಿ, ಮತ್ತು ಮೈಸೂರು ಪೊಮ್ಮಕ್ಕಡ ಕೂಟದ ಆಟಗಾರ್ತಿ ಶಹೇನಾ ಅತ್ಯುತ್ತಮ ಆಟಗಾರ್ತಿಯಾಗಿ ಹೊರಹೊಮ್ಮಿದರು.**

## ಕರ್ನಾಟಕ ಗೃಹ ಮಂಡಳಿ

Karnataka Housing Board Building Communities

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

**ಟೆಂಡರ್ ಪ್ರಕಟಣೆ**

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

| ಕ್ರ.ಸಂ. | ಕಾಮಗಾರಿಯ ಹೆಸರು |
|---|---|
| 1 | "ಬೆಂಗಳೂರು ತುಮಕೂರು ರಸ್ತೆಯ ದಾಸರಹಳ್ಳಿ ಹೋಬಳಿ, ಮಾದನಾಯಕನಹಳ್ಳಿ ಗ್ರಾಮದಲ್ಲಿ ಉಪ ನೋಂದಣಾಧಿಕಾರಿ ಕಛೇರಿ ನಿರ್ಮಾಣ" ಕಾಮಗಾರಿ. **Work Indent No.:** KHB/2025-26/BD/WORK_INDENT 734 & IFT No.178/2025-26 Date: 27.03.2026. **ಟೆಂಡರ್‌ಗಿಟ್ಟ ಮೊತ್ತ:** ರೂ.1,88,60,386/-. |
| | **ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 16.04.2026 ಸಂಜೆ 4.00 ಗಂಟೆಗೆ** |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಹೊಸಕೋಟೆ ತಾಲ್ಲೂಕು ಆಡಳಿತ ಕೇಂದ್ರ "ಪ್ರಜಾಸೌಧ" ನಿರ್ಮಾಣ ಕಾಮಗಾರಿ. **Work Indent No.:** KHB/2025-26/BD/WORK_INDENT 733 & IFT No.177/2025-26 Date: 27.03.2026. **ಟೆಂಡರ್‌ಗಿಟ್ಟ ಮೊತ್ತ:** ರೂ.11,96,23,607/-. |
| | **ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 27.04.2026 ಸಂಜೆ 4.00 ಗಂಟೆಗೆ** |

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/ 080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/25/ಆಕಾರ್/2026-27

## ಲೋಕೋಪಯೋಗಿ ಇಲಾಖೆ, ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುಮ.ಸಇಂ-2: ಟೆಂಡರ್ 64:2025-26, ದಿನಾಂಕ: 31-03-2026

**ಟೆಂಡರ್ ಪ್ರಕಟಣೆ ಸಂ. 64/2025-26 ದಿನಾಂಕ 31-03-2026**

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: **64/2025-26** ದಿನಾಂಕ **31-03-2026** ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ **5054-04-337-0-01-154 ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ** ಅಡಿಯಲ್ಲಿ **ಲೆಕ್ಕ ಶೀರ್ಷಿಕೆ 01 ಕಾಮಗಾರಿಗೆ ಹಾಗೂ 5054-03-337-0-17-154 ರಾಜ್ಯ ಹೆದ್ದಾರಿ ರಸ್ತೆಗಳ ಸುಧಾರಣೆ ಲೆಕ್ಕ ಶೀರ್ಷಿಕೆ** ಅಡಿಯಲ್ಲಿ **02 ಕಾಮಗಾರಿಗಳಿಗೆ** KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ. 159.69 ಲಕ್ಷಗಳು** ಮತ್ತು ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ. 79.84 ಲಕ್ಷಗಳು** ಇ.ಎಂ.ಡಿ ಗರಿಷ್ಠ ಮೊತ್ತ **ರೂ. 2,39,546/-** ಮತ್ತು ಇ.ಎಂ.ಡಿ ಕನಿಷ್ಠ ಮೊತ್ತ ರೂ. **1,59,683/-**, ಅರ್ಹ ಗುತ್ತಿಗೆದಾರರು 3ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ: 06 ತಿಂಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ **ಕೊನೆ ದಿನಾಂಕ ಮತ್ತು ವೇಳೆ: 13-04-2026 ರ 17-30 ಗಂಟೆಗೆ,** KPPP-Portal ಮೂಲಕ ಟೆಂಡರ್ ಅನ್ನು **ದಿನಾಂಕ 31-03-2026 ರಿಂದ 15-04-2026 ರ 16.00 ಗಂಟೆವರೆಗೆ** ಪಡೆಯಬಹುದಾಗಿದೆ. ಟೆಂಡರ್ ಅನ್ನು ಸ್ವೀಕರಿಸಲು **ಕೊನೆಯ ದಿನಾಂಕ ಮತ್ತು ವೇಳೆ: 15-04-2026 ರ 16-00 ಗಂಟೆವರೆಗೆ,** ತಾಂತ್ರಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 16-04-2026 ರ 16-30 ಗಂಟೆಗೆ,** ಆರ್ಥಿಕ ಬಿಡ್‌ಅನ್ನು ತೆರೆಯುವ **ದಿನಾಂಕ ಮತ್ತು ವೇಳೆ: 17-04-2026 ರ 17-00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

**ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು**

**ಸಹಿ/- ಕಾರ್ಯಪಾಲಕ ಇಂಜಿನಿಯರ್**
ಲೋಕೋಪಯೋಗಿ ಇಲಾಖೆ ವಿಭಾಗ
ತುಮಕೂರು.

DIPR/TUM/RO-03/26-27/Oysters

ಕರ್ನಾಟಕ ಸರ್ಕಾರ

## (ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ

EE/RWSS/Dvn/SMG/TE/SBM/Kppp-Proc/2025-26,/2563

Date: 31.03.2026

**ಟೆಂಡರ್ ಪ್ರಕಟಣೆ (ಕೆಪಿಪಿಪಿ - ಪ್ರೊಕ್ಯೂರ್‌ಮೆಂಟ್ ಮೂಲಕ)**

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯ ಸ್ವಚ್ಛ ಭರತ್ ಮಿಷನ್ ಹಾಗೂ ಜೆಜೆಎಂ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿದೆ.

**ಇಂಡೆಂಟ್ ಸಂಖ್ಯೆ :** 1) RWSSD/2025-26/OW/WORK_INDENT9947
2) RWSSD/2025-26/OW/WORK_INDENT9979
3)RWSSD/2025-26/OW/WORK_INDENT9952
4) RWSSD/2025-26/OW/WORK_INDENT9980
5) RWSSD/2024-25/WS/WORK_INDENT8822/CALL-2

ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು https://www.Kppp.karnataka.gov.in ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ದುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು.

**ಟೆಂಡರ್‌ನ ಕೆಲವು ಷರತ್ತುಗಳು : ಇಂಡೆಂಟ್ ಸಂಖ್ಯೆ:01 ಮತ್ತು 02**

**1**. ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 24.04.2026 ರ ಸಂಜೆ 5.30 **2.** ಪ್ರೀ ಬಿಡ್ಡಿಂಗ್ ಮೀಟಿಂಗ್ ದಿನಾಂಕ: 16.04.2026 ಬೆಳಿಗ್ಗೆ 11.30 **3.** ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27.04.2026 ಬೆಳಿಗ್ಗೆ 11.30 **4.** ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 29.04.2026 ಬೆಳಿಗ್ಗೆ 11.30 **5.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ: 6 ತಿಂಗಳು (180 ದಿನಗಳು)

**ಟೆಂಡರ್‌ನ ಕೆಲವು ಷರತ್ತುಗಳು : ಇಂಡೆಂಟ್ ಸಂಖ್ಯೆ:03 ರಿಂದ 05**

**1**. ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 13.04.2026 ರ ಸಂಜೆ 5.30 **2.** ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 15.04.2026 ಬೆಳಿಗ್ಗೆ 11.30 **3.** ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ: 17.04.2026 ಬೆಳಿಗ್ಗೆ 11.30 **4.** ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ: 6 ತಿಂಗಳು (180 ದಿನಗಳು)

**ಸಹಿ/- ಕಾರ್ಯಪಾಲಕ ಅಭಿಯಂತರರು.**
**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ,**

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26-27/17/03/19

ಕರ್ನಾಟಕ ಸರ್ಕಾರ - ಜಿಲ್ಲಾ ಪಂಚಾಯತ್ ಶಿವಮೊಗ್ಗ

## ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಾಗರ

ನಂ.ಕಾಇಂ/ಪಂರಾಇಂ/ವಿಸಾ/ಸೊರಬ/ಸಾಗರಹೊಸನಗರ/KW-1,2&3/ಎಇ/ಜೆಇ/2026-27/01 ದಿನಾಂಕ: 02.04.2026

**ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)**

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಸಾಗರ ಇವರು KW-1,2&3 (Standard Tender Document) ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಕೆ.ಪಿ.ಪಿ.ಪಿ ಈ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2025-26ನೇ ಸಾಲಿನ ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ (ಸಿ.ಎಂ.ಐ.ಡಿ.ಪಿ), 4202-01-201-1-08-139,2059-00-101-0-26(051) ಹಾಗೂ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಅಡಿಯಲ್ಲಿನ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ.

**1)** ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 02.04.2026 ರಿಂದ 10.04.2026 ರವರೆಗೆ **2)** ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 10.04.2026 ಸಮಯ 17:00:00 **3)** ಬಿಡ್ ತೆರೆಯುವ ದಿನಾಂಕ: 13.04.2026 ಸಮಯ 17:01:00.

**1. GENERAL Category Works**: 24266/CALL-2, 24960, 25175, 23220, 3681 **2. ST Category Work:** 24227/CALL-2

ಕೆ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ ವೆಬ್ ಸೈಟ್ (www.kppp.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183-226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ helpdesk ದೂರವಾಣಿ ಸಂಖ್ಯೆ: 080-25501216, 25501227 ಇವರನ್ನು ಸಂಪರ್ಕಿಸುವುದು.

**ಸಹಿ/- ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಸಾಗರ,**

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/26-27/27/04/26

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ: ಬಿಡಿಎ/2025-26/ಎಸ್‌ಇ0095 ದಿನಾಂಕ:02.04.2026

**ಟೆಂಡರ್ ಪ್ರಕಟಣೆ**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), **'ರಿಯಲ್-ಟೈಮ್ ಬಿಡ್ಡಿಂಗ್ ಎಂಜಿನ್, ವಂಚನೆ ಪತ್ತೆ ಹಚ್ಚುವಿಕೆ, ಸಂಯೋಜಿತ ಪಾವತಿ ಮತ್ತು ಮರುಪಾವತಿ ನಿರ್ವಹಣೆ ಹಾಗೂ ಟ್ಯಾಂಪರ್ ಪ್ರೂಫ್ ಆಡಿಟ್ ಫ್ರೇಮ್ ವರ್ಕ್ ಹೊಂದಿರುವ ಎಂಡ್-ಟು-ಎಂಡ್ ಇ-ಹರಾಜು ನಿರ್ವಹಣಾ ವ್ಯವಸ್ಥೆಯ ವಿನ್ಯಾಸ, ಅಭಿವೃದ್ಧಿ ಮತ್ತು ಅನುಷ್ಠಾನ'** ಕಾಮಗಾರಿಗಾಗಿ ಟೆಂಡರ್ ಆಹ್ವಾನಿಸಿದೆ.

ಟೆಂಡರ್ ದಾಖಲೆಗಳು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ **ದಿನಾಂಕ: 02.04.2026 ರಿಂದ ಲಭ್ಯವಿರುತ್ತದೆ** ಮತ್ತು ಬಿಡ್‌ಗಳನ್ನು ಸಲ್ಲಿಸಲು **ದಿನಾಂಕ: 13.04.2026 ಸಂಜೆ 5.30 ಗಂಟೆವರೆಗೆ ಅವಕಾಶವಿದ್ದು,** ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 15.04.2026 ಬೆಳಗ್ಗೆ 11.30ಕ್ಕೆ** ತೆರೆಯಲಾಗುವುದು ಹಾಗೂ ಆಸಕ್ತ ಬಿಡ್‌ದಾರರು ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in** ಗೆ ಭೇಟಿ ನೀಡಬಹುದು ಅಥವಾ ಇಡಿಪಿ ಸೆಲ್, ಬಿಡಿಎ, ಪ್ರಧಾನ ಕಚೇರಿ, ಬೆಂಗಳೂರು-560 020 ಇಲ್ಲಿಗೆ ಸಂಪರ್ಕಿಸಬಹುದು ಮತ್ತು ಯಾವುದೇ ಬದಲಾವಣೆ ಅಥವಾ ನವೀಕರಣಗಳನ್ನು ಕೇವಲ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದರಿಂದ ಬಿಡ್‌ದಾರರು ನಿಯಮಿತವಾಗಿ ಪೋರ್ಟಲ್ ಅನ್ನು ಪರಿಶೀಲಿಸಲು ಕೋರಲಾಗಿದೆ. ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/- ವಿಭಾಗ ಮುಖ್ಯಸ್ಥರು, ಇಡಿಪಿ ಸೆಲ್, ಬಿಡಿಎ, ಬೆಂಗಳೂರು

## ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು - 560083

ದೂರವಾಣಿ: 080-29755405, ಇ-ಮೇಲ್ ಐಡಿ: acfbnp83@gmail.com

ಸಂಖ್ಯೆ:ಸಅಸಂ/ಬರಾಉ/ಸಿಆರ್-13/2025-26 ದಿನಾಂಕ:01.04.2026

**ಟೆಂಡರ್ ಪ್ರಕಟಣೆ**

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2026-27ನೇ ಸಾಲಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ವಿವಿಧ ವಲಯಗಳಲ್ಲಿ ಕಳ್ಳಬೇಟೆ ತಡೆ ಶಿಬಿರದಲ್ಲಿ ಕಾರ್ಯನಿರ್ವಹಿಸುವ ನೌಕರರುಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಟೆಂಡರ್ ಅನ್ನು ಅಧಿಕೃತ ಮಾರಾಟಗಾರರಿಂದ/ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ವಿವಿಧ ಟೆಂಡರ್‌ಗಳನ್ನು ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ:16.04.2026ರ ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು

ಡಿಐಪಿಆರ್/ಸಿಪಿ/33/ಸಿಸಿಎಲ್/2026-27

ಕರ್ನಾಟಕ ಸರ್ಕಾರ

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ,
ಬಿ4/3 ವಿವೇಕ ನಗರ ಪಶ್ಚಿಮ,ವಿಜಯಪುರ-586103
ಕಛೇರಿ ವಿಳಾಸ: ದೂರವಾಣಿ ಸಂಖ್ಯೆ:- 08352-276354
ಇ-ಮೇಲ್ ವಿಳಾಸ:- dcpobijapur@gmail.com

**ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

ವಿಜಯಪುರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಉಪಯೋಗಕ್ಕಾಗಿ 2026-27 ನೇ ಸಾಲಿಗೆ ಹಳದಿ ಬೋರ್ಡ ಹೊಂದಿದ ಉತ್ತಮ ಗುಣಮಟ್ಟದ/ ಸುಸ್ಥಿತಿಯಲ್ಲಿ ಇರುವ ಸ್ವಿಫ್ಟ್ ಡಿಜೈರ್, ಸ್ಕಾರಪಿಯೋ, ಇಂಡಿಕಾ ಬೋಲ್ಟ್, ಇಂಡಿಕಾ (ವಿಸ್ಟಾ), ಎರಟಿಗಾ, ಐ 20, ಟಾಟಾ ಇಂಡಿಗೊ, ಟಾಟಾ ಸುಮೋ ಅಥವಾ ಬೊಲೆರೋ ವಾಹನವುಳ್ಳ ಟ್ರಾವೆಲ್ಸ್ ಸಂಸ್ಥೆಯವರಿಂದ ಬಾಡಿಗೆ ಆಧಾರದ ಮೇಲೆ ಒಂದು ಬಾಡಿಗೆ ವಾಹನವನ್ನು ಪಡೆಯಲು ದರಪಟ್ಟಿ (ಆಫ್‌ಲೈನ್) ಮೂಲಕ ಟೆಂಡರ್ ಕರೆಯಲಾಗಿದೆ. ಸದರ ದರಪಟ್ಟಿಯನ್ನು ದಿನಾಂಕ: 10.04.2026 ರ ಮದ್ಯಾಹ್ನ 1.30 ಘಂಟೆಯೊಳಗಾಗಿ ಈ ಕಛೇರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು **ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿವೇಕ ನಗರ ಪಶ್ಚಿಮ, ವಿಜಯಪುರ ಮೋಬೈಲ್ ಸಂಖ್ಯೆ: 9886122292** ಕಛೇರಿ ವಿಳಾಸದಲ್ಲಿ ಪಡೆದು ಪರಿಶೀಲಿಸುವುದು.

**ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,**
**ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಜಯಪುರ**

ವಾಸಾಸಂಇ/ವಿಜಯಪುರ/008/ಕೆಎಸ್‌ಎಂಸಿಎ/2025-26




ಐತಿಹಾಸಿಕ ಹಂಪಿಯ ಶ್ರೀವಿರೂಪಾಕ್ಷೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಿಮಿತ್ತ ಗುರುವಾರ ನಡೆದ ಅದ್ದೂರಿ ರಥೋತ್ಸವಕ್ಕೆ ಸಾವಿರಾರು ಜನ ಸಾಕ್ಷಿಯಾದರು.

ಪ್ರಸಕ್ತ ವರ್ಷವೂ 1560.76 ಕೋಟಿ ರು. ಸಂಗ್ರಹ

# ಏರುಗತಿಯಲ್ಲಿ 5943 ಗ್ರಾಮ ಪಂಚಾಯಿತಿಗಳ ತೆರಿಗೆ ಸಂಗ್ರಹ

**ಬೆಂಗಳೂರು:** ರಾಜ್ಯದಲ್ಲಿರುವ 5943 ಗ್ರಾಮ ಪಂಚಾಯಿತಿಗಳ ತೆರಿಗೆ ಸಂಗ್ರಹ ವರ್ಷದಿಂದ ವರ್ಷಕ್ಕೆ ಏರುತ್ತಿದ್ದು, ಕಂದಾಯ ಕ್ರೋಡೀಕರಣದಲ್ಲಿ ಉತ್ತಮ ಸಾಧನೆ ಮಾಡಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ತೆರಿಗೆ ಸಂಗ್ರಹ ಮತ್ತು ಕಂದಾಯ ಕ್ರೋಡೀಕರಣದಲ್ಲಿ ಕರ್ನಾಟಕ ಕಳೆದ ವರ್ಷ ಅತ್ಯುತ್ತಮ ಸಾಧನೆ ಮಾಡುವ ಮೂಲಕ ರಾಷ್ಟ್ರ ಮಟ್ಟದಲ್ಲಿ ಮೊದಲ ಸ್ಥಾನವನ್ನು ಪಡೆದಿತ್ತು. ವರ್ಷದಿಂದ ವರ್ಷಕ್ಕೆ ತೆರಿಗೆ ಸಂಗ್ರಹಣೆಯಲ್ಲಿ ಉಂಟಾಗಿರುವ ಪ್ರಗತಿಯು ದಕ್ಷ ಆಡಳಿತ, ನಿಯಮಾವಳಿಗಳ ಕಟ್ಟುನಿಟ್ಟಿನ ಜಾರಿ ಮತ್ತು ಸುಧಾರಿತ ತೆರಿಗೆ ಸಂಗ್ರಹಣಾ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. 2024-25ನೇ ಆರ್ಥಿಕ ವರ್ಷದಲ್ಲಿ ಇಲಾಖೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಗ್ರಾಮ ಪಂಚಾಯತಿಗಳು 1272.54 ಕೋಟಿ ರು. ತೆರಿಗೆ ಸಂಗ್ರಹ ಮಾಡುವ ಮೂಲಕ ಚಾಲ್ತಿ ಬೇಡಿಕೆಯ ಶೇ 80ರಷ್ಟು ತೆರಿಗೆ ವಸೂಲಿ ಮಾಡಿ ದಾಖಲೆ ಮಾಡಿತ್ತು, 2025-26ನೇ ಸಾಲಿನಲ್ಲಿ 1382.57 ಕೋಟಿ ರು. ತೆರಿಗೆ ಸಂಗ್ರಹ ಮಾಡಲಾಗಿದ್ದು, 2024-25ನೇ ಸಾಲಿಗಿಂತ 110.04 ಕೋಟಿ ಅಧಿಕ ತೆರಿಗೆ ವಸೂಲಿ ಮಾಡಿದಂತಾಗಿದೆ. ಮೂಲಕ ಚಾಲ್ತಿ ಸಾಲಿನ ಬೇಡಿಕೆಯ ಶೇ.89ರಷ್ಟು ದಾಖಲೆಯ ತೆರಿಗೆ ಸಂಗ್ರಹಿಸಲಾಗಿದೆ ಎಂದು ವಿವರಿಸಿದ್ದಾರೆ.

> ರಾಯಚೂರು ಜಿಲ್ಲೆ ಶೇ.129ರಷ್ಟು ತೆರಿಗೆ ಸಂಗ್ರಹಿಸುವ ಮೂಲಕ ಅದ್ಭುತ ಸಾಧನೆ ಮಾಡಿದೆ. ರಾಜ್ಯದ 11 ಜಿಲ್ಲೆಗಳು ಶೇಕಡ 100ಕ್ಕಿಂತಲೂ ಹೆಚ್ಚು ಕರ ಸಂಗ್ರಹಿಸುವ ಮೂಲಕ ತೆರಿಗೆ ಸಂಗ್ರಹಣೆಯಲ್ಲಿ ಮುನ್ನಡೆ ಸಾಧಿಸಿದೆ.
> - ಪ್ರಿಯಾಂಕ್ ಖರ್ಗೆ, ಸಚಿವ

ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ಸಂಗ್ರಹ ಕುರಿತು ವ್ಯಾಪಕ ಪ್ರಚಾರ ಕಾರ್ಯಕ್ರಮಗಳು, ತೆರಿಗೆ ವಸೂಲಾತಿ ಅಭಿಯಾನಗಳ ಮೂಲಕ ನಿರಂತರ ಶ್ರಮ ವಹಿಸುವ ಮೂಲಕ ತೆರಿಗೆ ಸಂಗ್ರಹದಲ್ಲಿ ದಾಖಲೆ ಮಾಡಲಾಗಿರುತ್ತದೆ. ಗ್ರಾಮ ಪಂಚಾಯತಿ ಬಿಲ್ ಕಲೆಕ್ಟರ್‌ಗಳಿಂದ ಆರಂಭಿಸಿ ಎಲ್ಲಾ ಅಧಿಕಾರಿಗಳ ಶ್ರಮದಿಂದ ಈ ಫಲಿತಾಂಶ ಸಾಧ್ಯವಾಗಿದೆ. ನಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ಕಳೆದ ಮೂರು ವರ್ಷಗಳಿಂದ ಕರ ಸಂಗ್ರಹಣೆಯಲ್ಲಿ ಏರುಮುಖ ಕಾಣಬಹುದಾಗಿದೆ. ಸಂಗ್ರಹವಾದ ಪ್ರತಿಯೊಂದು ರೂಪಾಯಿಯೂ ಹಳ್ಳಿಗಳಲ್ಲಿನ ಸಾರ್ವಜನಿಕ ಕಾಮಗಾರಿಗಳು, ಉತ್ತಮ ಸೇವೆಗಳು ಮತ್ತು ಸ್ಥಳೀಯ ಅಭಿವೃದ್ಧಿಗಾಗಿ ಮರಳಿ ವಿನಿಯೋಗ ವಾಗುತ್ತಿದೆ. ಇದು ಗ್ರಾಮೀಣ ಭಾಗದ ಸರ್ವತೋಮುಖ ಪ್ರಗತಿಗೆ ನಾಂದಿಯಾಗಿದೆ ಎಂದು ಹೇಳಿದ್ದಾರೆ.

| ವರ್ಷ | ಚಾಲ್ತಿ ಬೇಡಿಕೆ (ಕೋಟಿ ರು.) | ವಸೂಲಾತಿ (ಕೋಟಿ ರು.ಗಳಲ್ಲಿ) | ಚಾಲ್ತಿ ಬೇಡಿಕೆಯ ಶೇ. ವಸೂಲಾತಿ |
|---|---|---|---|
| 2017-18 | 507.28 | 322.77 | 64 |
| 2018-19 | 623.24 | 483.49 | 78 |
| 2019-20 | 662.24 | 633.55 | 96 |
| 2020-21 | 711.12 | 683.92 | 96 |
| 2021-22 | 766.08 | 749.3 | 98 |
| 2022-23 | 786.5 | 571.94 | 73 |
| 2023-24 | 1290.14 | 767.87 | 60 |
| 2024-25 | 1590.76 | 1272.54 | 80 |
| 2025-26 | 1560.76 | 1382.57 | 89 |

# ಮುಸ್ಲಿಮರನ್ನು ಅಲ್ಪಸಂಖ್ಯಾತ ಪಟ್ಟಿಯಿಂದ ಹೊರಹಾಕುತ್ತೇನೆ

**ವಿಜಯಪುರ:** ನಾನು ಸಿಎಂ ಆಗಿ ಮೊದಲ ಕ್ಯಾಬಿನೆಟ್‌ನಲ್ಲೇ ಮುಸ್ಲಿಮರನ್ನು ಅಲ್ಪಸಂಖ್ಯಾತ ಪಟ್ಟಿಯಿಂದ ಹೊರಾಹಾಕುತ್ತೇನೆ. ರಾಜ್ಯದಲ್ಲಿ ಯೋಗಿ ಆದಿತ್ಯನಾಥ ಆಡಳಿತ ನಡೆಸುತ್ತೇನೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ.ಸುದ್ದಿಗಾರರ ಜತೆ ಮಾತನಾಡಿದ ಅವರು, ಇಂದು ಹನುಮ ಜಯಂತಿ. ಆಂಜನೇಯನ ಸನ್ನಿಧಾನದಲ್ಲಿ ನಿಂತು ಹೇಳುತ್ತೇನೆ. ನಾನು ಯಾವುದೇ ಕಾರಣಕ್ಕೂ ಬಿಜೆಪಿಗೆ ಸೇರಿಸಿಕೊಳ್ಳಿ ಅಂತ ಹೇಳಲ್ಲ. ಅವರಾಗಿಯೇ ಮಗನ ಕೈ ಬಿಟ್ಟು ನನ್ನನ್ನು ಬಿಜೆಪಿಗೆ ಬನ್ನಿ ಅಂತಾ ಕರೆಯುತ್ತಾರೆ. ಬಳಿಕ ಸಿಎಂ ಆಗಿ ರಾಜ್ಯದಲ್ಲಿ ಯೋಗಿ ಆದಿತ್ಯನಾಥ್ ತರಹ ರಾಜ್ಯಭಾರ ಮಾಡುತ್ತೇನೆ. ಸಿಎಂ ಆದ ಮೊದಲ ಕ್ಯಾಬಿನೆಟ್ ಸಭೆಯಲ್ಲೇ ಅಲ್ಪಸಂಖ್ಯಾತ ಪಟ್ಟಿಯಿಂದ ಮುಸ್ಲಿಮರನ್ನು ಹೊರಹಾಕುತ್ತೇನೆ. ಇವರ ಹೊರತಾಗಿ ಮರಾಠರು, ಬ್ರಾಹ್ಮಣರು, ಕ್ಷತ್ರಿಯರು ಸೇರಿದಂತೆ ಅನೇಕರು ಅಲ್ಪಸಂಖ್ಯಾತರು ಇದ್ದಾರೆ ಎಂದರು.


## ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು-560009.

**ತಗಾದೆ ಸೂಚನೆ**

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

| ಕ್ರ. ಸಂ | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ | ನೋಟೀಸ್ ದಿನಾಂಕ | ಬರಬೇಕಾದ ಬಾಕಿ (ರೂ.ಗಳಲ್ಲಿ) |
|---|---|---|---|---|
| 1. | **(1) ಶ್ರೀ ಸರವಣನ್ ನಟರಾಜನ್** ಬಿನ್ ಶ್ರೀ ಸಲೋಮಿ ಬ್ಯೂಲಾ **(2) ಶ್ರೀಮತಿ ಸಲೋಮಿ ಬ್ಯೂಲಾ** ಕೋಂ ಶ್ರೀ ಸರವಣನ್ ನಟರಾಜನ್, **ಇವರಿಬ್ಬರ ವಿಳಾಸ:** ನಂ.40, ಸಪ್ಪ ರಾಮಸ್ವಾಮಿ ಸೇಂಟ್ ಸೌತ್ ಸ್ಟ್ರೀಟ್ ಅರುಪ್ಪು ಕೊಟ್ಟಿ ವಿರುದುನಗರ ಜಿಲ್ಲೆ- 626101. **ಮತ್ತೊಂದು ವಿಳಾಸ :** ಫ್ಲಾಟ್ ನಂ.62, ನೆಲ ಮಹಡಿ, ಸರ್ವೆ ನಂ.56, ಹೊಸ ನಂ.56/2, ಮುನೆಕೊಳಲು ಗ್ರಾಮ, ವೀರೂರು ಹೋಬಳಿ, ಬೆಂಗಳೂರು-560037. **ಮತ್ತೊಂದು ವಿಳಾಸ : ಶ್ರೀಮತಿ ಸಲೋಮಿ ಬ್ಯೂಲಾ** ಕೋಂ ಶ್ರೀ ಸರವಣನ್ ನಟರಾಜನ್, ಶ್ರೀನಿವಾಸ ರೆಡ್ಡಿ ಬಿಲ್ಡಿಂಗ್, ನಂ.763, ಬಿಇಎಂಎಲ್ ಮುಖ್ಯ ರಸ್ತೆ ಹೊಸ ತಿಪ್ಪಸಂದ್ರ ಹಾಲ್ 3ನೇ ಹಂತ, ಬೆಂಗಳೂರು-560075. | **ಶ್ರೀ.ಸರವಣನ್ ನಟರಾಜನ್ ಇದನ್ನು ಪ್ರತಿನಿಧಿಸುವ ಜಿಪಿಎ ಹೋಲ್ಡರ್ ಶ್ರೀಮತಿ ಸಲೋಮಿ ಬ್ಯೂಲಾ ಸರವಣನ್ ಅವರಿಗೆ ಸೇರಿದ ಆಸ್ತಿಯ ವಿವರ** **ಎ ಷೆಡ್ಯೂಲ್ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪ್ರಸ್ತುತ ಬಿಬಿಎಂಪಿ ಖಾತಾ ನಂ.2394, (2394/ಸರ್ವೆ/56/2), ಪರಿವರ್ತಿತ ಸರ್ವೆ ನಂ.56, ಹೊಸ ನಂ.56/2, (ದಿನಾಂಕ 26.11.2008ರಂದು ವಿಶೇಷ ಜಿಲ್ಲಾಧಿಕಾರಿ ಬೆಂಗಳೂರು ಜಿಲ್ಲೆ, ಬೆಂಗಳೂರು ಅವರು ಅಂಗೀಕರಿಸಿರುವ ಪರಿವರ್ತಿತ ವೈಡ್ ಅಧಿಕೃತ ಮೆಮೋರಂಡಮ್ ಆದೇಶ ನಂ.ALN (EVH) SR: 73/2008-09 ರ ಪ್ರಕಾರ ಇದನ್ನು ಪರಿವರ್ತಿಸಲಾಗಿದೆ ಅಂದರೆ ವಿಸ್ತೀರ್ಣ 04.08 ಗುಂಟೆಗಳು ಕಮರ್ಷಿಯಲ್ ಉದ್ದೇಶಕ್ಕಾಗಿ ಮತ್ತು 17.08 ಗುಂಟೆಗಳು ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ), ಈ ಆಸ್ತಿಯು ಮುನೆಕೊಳಲು ಗ್ರಾಮ, ವರ್ತೂರು ಹೋಬಳಿ, ಹಿಂದಿನ ಬೆಂಗಳೂರು ದಕ್ಷಿಣ ತಾಲ್ಲೂಕು, ಪ್ರಸ್ತುತ ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿದೆ, ಒಟ್ಟು ವಿಸ್ತೀರ್ಣ 23 ಗುಂಟೆಗಳು, ಜೊತೆಗೆ ಎಲ್ಲಾ ಹಕ್ಕು ಬಾಧ್ಯತೆಗಳನ್ನೊಳಗೊಂಡಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ಎಂ. ಆರ್. ಕೃಷ್ಣ ರೆಡ್ಡಿ ಅವರಿಗೆ ಸೇರಿದ ಖಾಸಗಿ ಆಸ್ತಿ, ಪಶ್ಚಿಮಕ್ಕೆ: 40 ಅಡಿ ಅಗಲದ ರಸ್ತೆ, ಉತ್ತರಕ್ಕೆ: ಸರ್ವೆ ನಂ.56ರ ಉಳಿಕೆ ಭಾಗ, ದಕ್ಷಿಣಕ್ಕೆ: ಸರ್ವೆ ನಂ.60ರ ಆಸ್ತಿ. **ಬಿ ಷೆಡ್ಯೂಲ್ :** 301.62 ಚದರ ಅಡಿ ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನೊಳಗೊಂಡಿರುವ ಸ್ಥಿರಾಸ್ತಿಯನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದೆ. **ಸಿ ಷೆಡ್ಯೂಲ್ :** ಫ್ಲಾಟ್ ನಂ.ಜಿ2, ನೆಲ ಮಹಡಿಯನ್ನೊಳಗೊಂಡಿದ್ದು, ವಿಸ್ತೀರ್ಣ 1070 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶ, ಎರಡು ಬೆಡ್ ರೂಮ್‌ಗಳು, ಜೊತೆಗೆ ಆರ್‌ಸಿಸಿ ರೂಫಿಂಗ್, ವೆಟ್ರಿಫೈಡ್ ಟೈಲ್ಸ್ ಫ್ಲೋರಿಂಗ್ ಹಾಗೂ ಒಂದು ಕಾರು ನಿಲ್ಲಿಸುವ ಸ್ಥಳ, ಜೊತೆಗೆ ಸಾಮಾನ್ಯ ಪ್ರದೇಶದಲ್ಲಿ ಪ್ಯಾಸೇಜ್‌ಗಳು, ಲಾಬಿಗಳು, ಸ್ಟೇರ್‌ಕೇಸ್‌ಗಳು, ಇತ್ಯಾದಿಗಳನ್ನು "Saroj Habitat" ಎಂದು ಕರೆಯಲ್ಪಡುವ ಬಹುಮಹಡಿಯ ವಾಸಯೋಗ್ಯ ಕಟ್ಟಡದಲ್ಲಿದ್ದು, ಷೆಡ್ಯೂಲ್ 'ಎ' ಆಸ್ತಿಯಲ್ಲಿ ನಿರ್ಮಿಸಲಾಗಿದೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ.8880041234ನ್ನು ಸಂಪರ್ಕಿಸಿ.** | 13.03.2026 ಎನ್‌ಪಿಎ ದಿನಾಂಕ: 05.03.2026 | POWER HOME Loan A/c No. PHR000900593471 Amount : Rs.33,60,000/- ಒಟ್ಟು ಬಾಕಿ ಮೊತ್ತ : ರೂ. 8,21,711/- ದಿನಾಂಕ : 11.03.2026 ರಂದು ಇದ್ದಂತೆ. |
| 2. | **(1) ಶ್ರೀ ರಾಘವೇಂದ್ರ** ಬಿನ್ ಶ್ರೀ ಮಲ್ಲಪ್ಪ **(2) ಶ್ರೀಮತಿ ಮಲ್ಲಮ್ಮ** ಕೋಂ ಶ್ರೀ ಮಲ್ಲಪ್ಪ **ಇವರಿಬ್ಬರ ವಿಳಾಸ :** ಮನೆ ನಂ.5-2-42/1, ದೇವದುರ್ಗ ಬಾಪೂಜಿ ಓಣಿ ಆಂಜನೇಯ ದೇವಸ್ಥಾನ ಹತ್ತಿರ, ರಾಯಚೂರು-584111. **ಮತ್ತೊಂದು ವಿಳಾಸ :** ಪ್ಲಾಟ್ ನಂ.8-1-571, ಸರ್ವೆ ನಂ.278/1ಡಿ, ದೇವದುರ್ಗ ರಾಯಚೂರು-584111. | **ಶ್ರೀ ರಾಘವೇಂದ್ರ ಅವರಿಗೆ ಸೇರಿದ ಆಸ್ತಿಯ ವಿವರ** ಪ್ಲಾಟ್ ನಂ.8-1-571, ವಿಸ್ತೀರ್ಣ 12.192024 X 9.144018=111.4836 ಚದರ ಮೀಟರ್‌ಗಳು, ಈ ಆಸ್ತಿಯು ಸರ್ವೆ ನಂ.278/1ಡಿ, ದೇವದುರ್ಗ, ಜಿಲ್ಲೆ: ರಾಯಚೂರಿನಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: ಇತರರ ಆಸ್ತಿ, ಪಶ್ಚಿಮಕ್ಕೆ: 9 ಮೀಟರ್‌ಗಳ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.23, ದಕ್ಷಿಣಕ್ಕೆ: ಪ್ಲಾಟ್ ನಂ.25. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್‌ಪ್ರಸಾದ್, ಮೊಬೈಲ್ ನಂ.9916566630ನ್ನು ಸಂಪರ್ಕಿಸಿ.** | 13.03.2026 ಎನ್‌ಪಿಎ ದಿನಾಂಕ: 05.03.2026 | POWER HOME IMGC BRE Loan A/c No. PHR034207008092 Amount : Rs.8,66,007/- ಒಟ್ಟು ಬಾಕಿ ಮೊತ್ತ: ರೂ. 8,48,879/- ದಿನಾಂಕ : 11.03.2026 ರಂದು ಇದ್ದಂತೆ. |
| 3. | **(1) ಶ್ರೀ ಚಂದ್ರಶೇಖರ ಇಪ್ಪಾಡಿ ಗಂಗಾಧರಯ್ಯ** ಬಿನ್ ಶ್ರೀ ಗಂಗಾಧರಯ್ಯ **(2) ಶ್ರೀಮತಿ ನೇತ್ರಾ ವಿ ಟಿ,** ಕೋಂ ಶ್ರೀ. ಚಂದ್ರಶೇಖರ್ ಇಪ್ಪಾಡಿ ಗಂಗಾಧರಯ್ಯ, **ಇವರಿಬ್ಬರ ವಿಳಾಸ:** 745, 1ನೇ ಮಹಡಿ, ಸಿ-ಬ್ಲಾಕ್, 10ನೇ ಮೇನ್, 3ನೇ ಹಂತ ವಿಜಯನಗರ, ಸಿಲ್ವರ್ OAK ಹೋಟೆಲ್ ಹತ್ತಿರ, ಮೈಸೂರು-576017. **ಮತ್ತೊಂದು ವಿಳಾಸ** : 200, ವಿಜಯನಗರ, 3ನೇ ಹಂತ ಎ ಬ್ಲಾಕ್, ಮೈಸೂರು-576017. **ಮತ್ತೊಂದು ವಿಳಾಸ : ಶ್ರೀ.ಚಂದ್ರಶೇಖರ ಇಪ್ಪಾಡಿ ಗಂಗಾಧರಯ್ಯ** ಬಿನ್ ಶ್ರೀ ಗಂಗಾಧರಯ್ಯ, 52-ಎ, ಎ ಬ್ಲಾಕ್ ಆನಂದ ನಗರ, ಶಾರದಾದೇವಿನಗರ ಮೈಸೂರು ಸಿಟಿ ಆನಂದ ನಗರ, ಮೈಸೂರು-570006. **ಮತ್ತೊಂದು ವಿಳಾಸ : ಶ್ರೀಮತಿ ನೇತ್ರಾ ವಿ ಟಿ** ಕೋಂ ಶ್ರೀ ಚಂದ್ರಶೇಖರ್ ಇಪ್ಪಾಡಿ ಗಂಗಾಧರಯ್ಯ, 000 ಹಾರೋಹಳ್ಳಿ ಮೈಸೂರು, ಹಾರೋಹಳ್ಳಿ ಹತ್ತಿರ, ಮೈಸೂರು-570008. | **ಶ್ರೀ ಚಂದ್ರಶೇಖರ್ ಐ ಜಿ ಮತ್ತು ಶ್ರೀಮತಿ ನೇತ್ರಾ ವಿ ಟಿ ಅವರಿಗೆ ಸೇರಿದ ಆಸ್ತಿಯ ವಿವರ** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.200, ಈ ಆಸ್ತಿಯು 'ಎ' ಬ್ಲಾಕ್, 3ನೇ ಹಂತ, ವಿಜಯನಗರ, ದೇವರಾಜ ಮೊಹಲ್ಲಾ, ಮೈಸೂರಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: (10+10.20)/2 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 18.80 ಮೀಟರ್‌ಗಳು. ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.201/ಎ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಆಸ್ತಿ ನಂ.199, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ.8880041234ನ್ನು ಸಂಪರ್ಕಿಸಿ.** | 13.03.2026 ಎನ್‌ಪಿಎ ದಿನಾಂಕ: 07.03.2026 | POWER HOME VANILLA BRE Loan A/c No. PHR015104705814 Amount : Rs. 41,17,782/- ಒಟ್ಟು ಬಾಕಿ ಮೊತ್ತ : ರೂ. 30,86,439/- ದಿನಾಂಕ : 11.03.2026 ರಂದು ಇದ್ದಂತೆ. |

**ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್-13 ರ ಉಪ-ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.**

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ-ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

**ದಿನಾಂಕ : 02.04.2026** **ಸ್ಥಳ : ಬೆಂಗಳೂರು**

**ಸಹಿ/- ಅಧಿಕೃತ ಅಧಿಕಾರಿ ಎಕ್ಸಿಸ್ ಬ್ಯಾಂಕ್ ಲಿಮಿಟೆಡ್**

## ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ (ಒಂದು ಷೆಡ್ಯೂಲ್ ವಾಣಿಜ್ಯ ಬ್ಯಾಂಕ್)

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು-560071

**ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ**

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **21.04.2026 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

| ಕ್ರ. ಸಂ. | ಸಾಲದ ಖಾತಾ ಸಂ. | ಸಾಲಗಾರರ / ಸಹ-ಸಾಲಗಾರರ ಹೆಸರು | ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ |
|---|---|---|---|
| 1 | 31138730030238 | ಶಿವಾನಂದ್ ಹಿರೇಮಠ್ | 5 |
| | ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಶಹಾಪೇಟೆ, ಬಿಜಾಪುರ-586101 | | |
| 2 | 45358730017352 | ವಿನೋದ್ ಕುಮಾರ್ ವಿ | 9.6 |
| 3 | 45358730017470 | ವರಲಕ್ಷ್ಮಿ ವಿ | 12.9 |
| 4 | 45350670000074 | ಭಾನು ಪ್ರಕಾಶ್ ಎ | 89.8 |
| | ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ನೆಲ ಮಹಡಿ, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ಬೆಂಗಳೂರು-560060, ಭಾರತ, | | |
| 5 | 45488730021180 | ನಾಗಪ್ಪ ಎಸ್ | 3.9 |
| 6 | 45488730021269 | ಹಾಜಿ ಮಲಂಗ್ | 4.6 |
| 7 | 45488730021361 | ಲಲಿತ ದದು | 6.4 |
| 8 | 45488730021000 | ಈರಣ್ಣ ಎನ್ | 5.8 |
| 9 | 45488730021319 | ಶರಣಪ್ಪ ಇ | 11.7 |
| 10 | 45488730021052 | ಲಕ್ಷ್ಮಿಕಾಂತ್ | 10 |
| 11 | 45488730021272 | ಶಫಿ | 30 |
| | ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1-4-380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು-584101, ಭಾರತ | | |
| 12 | 45398730009466 | ಲಗಮಪ್ಪ ಭೀಮಪ್ಪ ಕೊನಕೇರಿ | 13.6 |
| | ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಯುನಿಕ್ ಟವರ್ ಬಿಗ್ ಬಜಾರ್ ಹತ್ತಿರ, ಎಕ್ಸಿಸ್ ಬ್ಯಾಂಕ್ ಎದುರು, ಖಾನಾಪುರ ರಸ್ತೆ, ಅಂಗೋಳ್ ಎಕ್ಸ್‌ಟೆನ್ಶನ್ ಬೆಳಗಾವಿ, ಕರ್ನಾಟಕ-590003 | | |
| 13 | 45448730007861 | ಸಾದತ್‌ಹುಸೇನ್ ಮಣಿಯಾರ್ | 3.3 |
| 14 | 45448730008472 | ರಾಮಚಂದ್ರ ಭುದೇತಿ | 5.67 |
| | ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮೆಝ್ಝನೈನ್ ಮತ್ತು 1ನೇ ಮಹಡಿ, ಡೋರ್ ನಂ.#00 ಉಣಕಲ್ ಗ್ರಾಮ, ವಿದ್ಯಾನಗರ, ಹುಬ್ಬಳ್ಳಿ ತಾಲೂಕು, ಧಾರವಾಡ ಕರ್ನಾಟಕ-580021 | | |
| 15 | 46658160004553 | ನಾಗರಾಜಪ್ಪ ಪಿ | 48.8 |
| | ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735 /5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು-562110. | | |

ಸ್ಥಳ: ಕರ್ನಾಟಕ
ದಿನಾಂಕ: 03.04.2026

ಸಹಿ/-ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕ ಸರ್ಕಾರ ಕರ್ನಾಟಕ ಅರಣ್ಯ ಇಲಾಖೆ

## ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಜಿಲ್ಲಾ ಪಂಚಾಯತ, ಕಾರವಾರ-581303

ದೂರವಾಣಿ: 08382-296176 ಇ-ಮೇಲ್: dcfsfkwr@gmail.com

ಕ್ರ.ಸಂ: ಎ4/ವಾಹನ/ಟೆಂಡರ/ಸಿಆರ್/2026-27/02 ದಿನಾಂಕ: 02-04-2026

**ಪತ್ರಿಕಾ ಪ್ರಕಟಣೆ**

**2026-27ನೇ ಸಾಲಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಜಿ.ಪಂ. ಕಾರವಾರ ಇವರ ಕಛೇರಿ ಉಪಯೋಗಕ್ಕೆ 2026-27ನೇ ಸಾಲಿನಲ್ಲಿ 11 ತಿಂಗಳ ಅವಧಿಗೆ ಮಾತ್ರ ವಾಹನದ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಖಾಸಗಿ ಏಜೆನ್ಸಿಯಿಂದ ಪಡೆಯುವ ಕುರಿತು ಟೆಂಡರ ಕರೆಯಲಾಗಿರುತ್ತದೆ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 17-04-2026 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ವಿಭಾಗ, ಜಿಲ್ಲಾ ಪಂಚಾಯತ, ಕಾರವಾರ ರವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು. (ದೂರವಾಣಿ ಸಂಖ್ಯೆ: 08382-296176 ಮತ್ತು ಇ-ಮೇಲ್ ವಿಳಾಸ: dcfsfkwr@gmail.com)**

DIPR/KWR/KSMCA/08/26-27 Dt.02.04.2026

## ಸಮಾಚಾರ ಸಣ್ಣದಲ್ಲ

### ಅಪಪ್ರಚಾರ: ವೈದ್ಯ ವಿದ್ಯಾರ್ಥಿನಿ ಆತ್ಮಹತ್ಯೆ

**ಚಿತ್ರದುರ್ಗ:** ಅಧ್ಯಾಪಕನ ಜತೆ ಸಂಬಂಧ ಕಲ್ಪಿಸಿ ಅಪಪ್ರಚಾರ ಹಿನ್ನೆಲೆ ಮನನೊಂದು ಬಿಎಎಂಎಸ್ ವಿದ್ಯಾರ್ಥಿನಿ ನೇಣಿಗೆ ಶರಣಾಗಿರುವ ಘಟನೆ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ನಗರದ ಬಸವ ಲೇಔಟ್‌ನಲ್ಲಿ ನಡೆದಿದೆ.

ನಿಖಿತಾ (23) ನೇಣಿಗೆ ಶರಣಾಗಿರುವ ವಿದ್ಯಾರ್ಥಿನಿ. ಡೆತ್‌ನೋಟ್ ಬರೆದಿಟ್ಟು ನಿಖಿತಾ ನೇಣಿಗೆ ಶರಣಾಗಿದ್ದಾಳೆ. ಅಧ್ಯಾಪಕ ಡಾ.ರಾಜು ಜತೆ ಸಂಬಂಧ ಕಲ್ಪಿಸಿ ಅಪಪ್ರಚಾರ ಮಾಡುತ್ತಿದ್ದ ಹಿನ್ನೆಲೆ ಡೆತ್‌ನೋಟ್‌ನಲ್ಲಿ ಡಾ.ರಾಜು, ಪತ್ನಿ ನಿಶಾ ಹಾಗೂ ಕೆಲ ವಿದ್ಯಾರ್ಥಿನಿಯರ ಹೆಸರು ಬರೆದಿಟ್ಟು ನಿಖಿತಾ ಆತ್ಮಹತ್ಯೆಗೆ ಶರಣಾಗಿದ್ದಾಳೆ. ಸದ್ಯ ಅಧ್ಯಾಪಕ ರಾಜು, ಪತ್ನಿ ನಿಶಾ ಹಾಗೂ ಕೆಲ ವಿದ್ಯಾರ್ಥಿಗಳ ವಿರುದ್ಧ ಕೇಸ್ ದಾಖಲಾಗಿದೆ. ಘಟನೆ ಸಂಬಂಧ ಹೊಳಲ್ಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಲೋಕಾ ಬಲೆಗೆ ಇಬ್ಬರು ಎಂಜಿನಿಯರ್‌ಗಳು

**ಯಾದಗಿರಿ:** ಪೂರ್ಣಗೊಂಡ ಕಾಮಗಾರಿಗೆ ಬಿಲ್ ಪಾಸ್ ಮಾಡಲು ಲಂಚದ ಬೇಡಿಕೆ ಇಟ್ಟು,ಫೋನ್ ಪೇ ಮೂಲಕ ಹಣ ಪಡೆದ ಇಬ್ಬರು ಇಂಜಿನಿಯರ್‌ಗಳನ್ನು ಲೋಕಾಯುಕ್ತರು ತಮ್ಮ ಖೆಡ್ಡಾಕ್ಕೆ ಬೀಳಿಸಿಕೊಂಡ ಘಟನೆ ಗುರುವಾರ ನಡೆದಿದೆ. ಜಿಲ್ಲೆಯ ಶಹಾಪುರ ತಾಲೂಕಿನ ಭೀಗುಡಿಯಲ್ಲಿರುವ ಕೆಬಿಜೆಎನ್‌ಎಲ್‌ನ ಎಇಇ ಮಧುಸೂದನ ಮತ್ತು ಜೆಇ ಮಂಜುನಾಥ ಎಂಬುವ ಇಬ್ಬರು ಎಂಜಿನಿಯರ್‌ಗಳು 35 ಸಾವಿರ ರು. ಲಂಚ ಪಡೆದ ಹಿನ್ನೆಲೆ ಲೋಕಾಯುಕ್ತರ ಟ್ರ್ಯಾಪಿಗೆ ಬಲಿಯಾಗಿದ್ದಾರೆ. ಲಂಚದ ಹಣ ಎಇಇ ಮಧುಸೂದನ ಎಂಬುವವರು ಫೋನ್ ಪೇ ಮಾಡಿಸಿಕೊಂಡಿದ್ದಾರೆ. ವಡಗೇರಾ ತಾಲೂಕಿನ ಗಡ್ಡೆಸೂಗುರಿನ ಖಾಸಿಂ ಸಾಬ್ ಜಲಾಲ್ ಸಾಬ್ ಎಂಬುವವರು ನೀಡಿದ ದೂರಿನ ಮೇರೆಗೆ ಈ ದಾಳಿ ನಡೆದಿದೆ. ಲೋಕಾಯುಕ್ತ ಎಸ್ ಪಿ ಮಾರ್ಗದರ್ಶನದಲ್ಲಿ ಡಿವೈಎಸ್ ಪಿ ಜೆ.ಎಚ್.ಇನಾಂದಾರ್ ಮತ್ತು ಸಿಬ್ಬಂದಿ ಹೊಂಚು ಹಾಕಿ ರೆಡ್‌ಹ್ಯಾಂಡ್ ಹಿಡಿದಿದ್ದಾರೆ. ಈ ಇಬ್ಬರ ವಿರುದ್ಧ ದೂರು ದಾಖಲಿಸಿಕೊಂಡ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

### ಏ.9ಕ್ಕೆ ಕೋರ್ಟ್‌ನಲ್ಲಿ ವಿನಯ್ ಭವಿಷ್ಯ

**ಧಾರವಾಡ:** ಜಿಲ್ಲಾ ಪಂಚಾಯಿತಿ ಮಾಜಿ ಜಿಲ್ಲಾ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣದ ತೀರ್ಪನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಏ.9ಕ್ಕೆ ಕಾಯ್ದಿರಿಸಿದೆ. ಕಳೆದ 6 ತಿಂಗಳಿಂದ ಪ್ರಕರಣದ ವಿಚಾರಣೆ ನಡೆಸುತ್ತಿದ್ದ ನ್ಯಾಯಾಲಯ ಸಂಪೂರ್ಣ ವಾದ-ಪ್ರತಿವಾದ ಆಲಿಸಿತ್ತು. ಜತೆಗೆ ಮಾರ್ಚ್ ಕೊನೆಯ ವಾರದಲ್ಲಿ ಪ್ರಾಸಿಕ್ಯೂಷನ್ ಮತ್ತು ಆರೋಪಿಗಳ ಪರ ವಕೀಲರಿಗೆ ಹೆಚ್ಚುವರಿ ಲಿಖಿತ ವಾದ ಸಲ್ಲಿಕೆ ಮಾಡಲು ಅವಕಾಶ ನೀಡಿತ್ತು. ಗುರುವಾರ ಎಲ್ಲರೂ ಲಿಖಿತ ವಾದ ಸಲ್ಲಿಸಿದ ಬಳಿಕ ಏ.9ಕ್ಕೆ ತೀರ್ಪು ಪ್ರಕಟ ಮಾಡುವುದಾಗಿ ಹೇಳಿದೆ.

**ಏನಿದು ಪ್ರಕರಣ?:** ರಾಜಕೀಯ ವೈಷಮ್ಯದಿಂದ ಧಾರವಾಡದಲ್ಲಿ 2016ರ ಜೂ.16ರಂದು ಯೋಗೇಶ್ ಗೌಡ ಹತ್ಯೆ ಮಾಡಲಾಗಿತ್ತು. ಶಾಸಕ ವಿನಯ್ ಕುಲಕರ್ಣಿ ಮೇಲೆ ಅಪರಾಧಿಕ ಒಳಸಂಚು ಮಾಡಿದ ಆರೋಪವಿದೆ. 2019ರಲ್ಲಿ ರಾಜ್ಯ ಸರಕಾರವು ಈ ಪ್ರಕರಣವನ್ನು ಸಿಬಿಐಗೆ ವರ್ಗಾವಣೆ ಮಾಡಿತ್ತು. 2021ರಲ್ಲಿ ಶಾಸಕ ವಿನಯ್ ಕುಲಕರ್ಣಿ ಸುಪ್ರೀಂಕೋರ್ಟ್‌ನಿಂದ ಜಾಮೀನು ಪಡೆದು ಹೊರ ಬಂದಿದ್ದರು.

ವಿಶ್ವವಾಣಿ ಕ್ಲಬ್ ಹೌಸ್
03.04.2026
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ

ಶ್ರೀ. ನಂದೀಶ್ ಪಿ ಕೆ
ವಿಷಯ
ಅರವಿಂದರ ಸಾವಿತ್ರಿ 19

vishwavani.news

### ದಿನ ವಿಶೇಷ

03 ಏಪ್ರಿಲ್ 2026 ಶುಕ್ರವಾರ

| | |
|---|---|
| » ಸೂರ್ಯೋದಯ | : 6-20 |
| » ಸೂರ್ಯಾಸ್ತ | : 6-41 |
| » ತಿಥಿ | : ಪ್ರಥಮ |
| » ನಕ್ಷತ್ರ | : ಚಿತ್ತ |
| » ಸಂವತ್ಸರ | : ಪರಾಭವ |
| » ಅಯನ | : ಉತ್ತರಾಯನ |
| » ಋತು | : ವಸಂತ |
| » ಮಾಸ | : ಚೈತ್ರ |
| » ಪಕ್ಷ | : ಕೃಷ್ಣಪಕ್ಷ |

ಉಮೇಶ್ ಮೇಟಿ ಗೆಲುವಿಗೆ ಕಾಂಗ್ರೆಸ್ ಪಣ | ಸ್ಥಳೀಯ ನಾಯಕರಲ್ಲಿನ ಒಡಕು ಬಿಜೆಪಿಗೆ ಲಾಭ ಆಗುವ ಸಾಧ್ಯತೆ

# ಬಾಗಲಕೋಟೆಯಲ್ಲಿ ಕಾಂಗ್ರೆಸ್‌ಗೆ ಒಳೇಟಿನ ಭೀತಿ

**ವಿನಾಯಕ ಮಠಪತಿ** ಬಾಗಲಕೋಟೆ

ರಾಜ್ಯ ಕಾಂಗ್ರೆಸ್‌ಗೆ ದಾವಣಗೆರೆ ದಕ್ಷಿಣ, ಬಾಗಲಕೋಟೆ ಕ್ಷೇತ್ರಗಳ ಬೈ ಎಲೆಕ್ಷನ್ ಗೆಲುವು ಪ್ರತಿಷ್ಠೆ ಆಗಿದೆ. ಬಾಗಲಕೋಟೆ ಶತಾಯಗತಾಯ ಗೆಲುವಿಗೆ ರಾಜ್ಯ ಕಾಂಗ್ರೆಸ್ ನಾಯಕರೆಲ್ಲ ಟೊಂಕ ಕಟ್ಟಿ ನಿಂತಿದ್ದಾರೆ. ಎಂಟಕ್ಕೂ ಅಧಿಕ ಸಚಿವರು ಹಾಗೂ ಶಾಸಕರು ಪ್ರಚಾರದಲ್ಲಿ ನಿರತರಾಗಿದ್ದಾರೆ. ಇನ್ನೊಂದು ಕಡೆ ಕಾಂಗ್ರೆಸ್‌ಗೆ ಒಳೇಟಿನ ಭೀತಿ ಶುರುವಾಗಿದ್ದು, ಅಸಮಾಧಾನಿತ ಮುಖಂಡರನ್ನು ಮನ ವೊಲಿಸಲು ನಾಯಕರು ಹರಸಾಹಸ ಪಡುತ್ತಿದ್ದಾರೆ. ಈ ನಡುವೆ ಬಿಜೆಪಿ ಝಳಪ ಜೋರಾಗಿದ್ದು, ಒಳ ಹೊಡೆತ ನೀಡುವಲ್ಲಿ ರಣತಂತ್ರ ಹೆಣೆದಿದ್ದು ಕ್ಷೇತ್ರದಲ್ಲಿ ತಮ್ಮ ಪರವಾಗಿ ಅಲೆ ಹೆಚ್ಚಿಸಲು ಸರ್ವ ಪ್ರಯತ್ನ ಮಾಡುತ್ತಿದೆ.

ಎಚ್.ವೈ ಮೇಟಿಯವರ ನಿಧನದಿಂದ ತೆರವಾದ ಸ್ಥಾನಕ್ಕೆ ಪುತ್ರ ಉಮೇಶ್ ಮೇಟಿ ಸ್ಪರ್ಧಿಸಿದ್ದಾರೆ. ಆದರೆ ಕೇವಲ ಅನುಕಂಪದ ಅಲೆಯನ್ನೇ ಮೆಚ್ಚಿಕೊಂಡಿರುವ ಕಾಂಗ್ರೆಸ್ ಪಕ್ಷಕ್ಕೆ ಮತದಾರರನ್ನು ಸೆಳೆಯುವುದೇ ಸವಾಲಿನ ಕೆಲಸವಾಗಿದೆ. ಇಡೀ ಸರಕಾರವೇ ಮೇಟಿ ಪರ ಪ್ರಚಾರದಲ್ಲಿ ತೊಡಗಿದರು ಸಮನ್ವಯ ಕೊರತೆ ಎದ್ದು ಕಾಣುತ್ತಿದೆ. ಅಹಿಂದ ಮತ ಸೆಳೆಯಲು ಸಚಿವರಾದ ಸತೀಶ್ ಜಾರಕಿಹೊಳಿ ಹಾಗೂ ಆರ್.ಬಿ ತಿಮ್ಮಾಪುರ ಬಣ ಒಂದುಗೂಡಿ ಕೆಲಸ ಮಾಡುತ್ತಿಲ್ಲ ಎಂಬ ಆರೋಪ ಸ್ಥಳೀಯ ಮುಖಂಡರಲ್ಲಿದೆ.

ಅಷ್ಟೇ ಅಲ್ಲದೆ ಎಚ್.ವೈ ಮೇಟಿ ಜತೆಗಿದ್ದ ಸ್ಥಳೀಯ ಮುಖಂಡರನ್ನು ಹೊರಭಾಗದಿಂದ ಬಂದ ಕಾಂಗ್ರೆಸ್ ನಾಯಕರು ಮೂಲೆಗುಂಪು ಮಾಡಿದ್ದಾರೆ ಎಂಬ ಆರೋಪ ಕ್ಷೇತ್ರದಲ್ಲಿ ಬಲವಾಗಿದ್ದು, ಇದರಿಂದ ಮೇಟಿ ಜತೆಗಿದ್ದ ಹಲವು ಮುಖಂಡರು ಪ್ರಚಾರದಿಂದ ದೂರ ಉಳಿದಿದ್ದಾರೆ. ಇನ್ನೂ ಬಿಜೆಪಿ ಪಕ್ಷದಿಂದ ದೂರ ಹೋಗಿದ್ದ ಸ್ಥಳೀಯ ಮುಖಂಡರು ಮರಳಿ ಪಕ್ಷಕ್ಕೆ ಸೇರಿಸುವುದರ ಜತೆಗೆ ಅವರಿಗೆ ಜವಾಬ್ದಾರಿ ನೀಡಿದ್ದರ ಪರಿಣಾಮ ಬಿಜೆಪಿ ಪಪಾಳೆಯದಲ್ಲಿ ಉತ್ಸಾಹ ಹೆಚ್ಚಿಸಿದ್ದು, ಫಲಿತಾಂಶದ ಮೇಲೆ ಪ್ರಭಾವ ಬೀರುವ ಸಾಧ್ಯತೆ ದಟ್ಟವಾಗಿದೆ.

ಹಿಂದುಳಿದ ವರ್ಗಗಳ ಮತಗಳ ಮೇಲೆ ಕಣ್ಣಿಟ್ಟಿರುವ ಬಿಜೆಪಿ ಲಿಂಗಾಯತ ಮತಗಳ ಜತೆಗೆ, ಬಂಜಾರ, ನೇಕಾರ, ಎಸ್ಟಿ ಮತಗಳನ್ನು ಸೆಳೆಯಲು ಸರ್ವಪ್ರಯತ್ನ ನಡೆಸಿದೆ. ಮುಖಂಡರಾದ ಅರವಿಂದ ಲಿಂಬಾವಳಿ, ಗೋವಿಂದ ಕಾರಜೋಳ, ಶ್ರೀರಾಮಲು, ಪಿ. ರಾಜೀವ್, ಪ್ರತಾಪ್ ಸಿಂಹ ಸೇರಿದಂತೆ ಹಲವು ನಾಯಕರು ತಮ್ಮದೇ ತಂಡ ಕಟ್ಟಿಕೊಂಡು ಕ್ಷೇತ್ರದ ತುಂಬಾ ಓಡಾಟ ನಡೆಸಿದ್ದು ಬಿಜೆಪಿ ಸಂಘಟಿತ ಪ್ರಯತ್ನ ಯಶಸ್ಸು ನೀಡುತ್ತದೆ ಎಂಬ ವಿಶ್ವಾಸದಲ್ಲಿ ಬಿಜೆಪಿ ಇದೆ.

**ಕೈ ನಾಯಕರ ವಿರುದ್ಧ ಸ್ಥಳೀಯ ಮುಖಂಡರ ಅಸಮಾಧಾನ:** ಬಾಗಲಕೋಟೆ ಉಪ ಚುನಾವಣಾ ಪ್ರಚಾರ ಹಾಗೂ ಮುಂದಾಳತ್ವದ ವಿಚಾರವಾಗಿ ಹೊರಗಿನಿಂದ ಆಗಮಿಸಿರುವ ಕೈ ನಾಯಕರ ವಿರುದ್ಧ ಸ್ಥಳೀಯ ಕಾಂಗ್ರೆಸ್ ಮುಖಂಡರನ್ನು ಕಡೆಗಣಿಸಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಎಚ್.ವೈ ಮೇಟಿ ಜತೆಗೆ ಸುದೀರ್ಘ ಅವಧಿಗೆ ರಾಜಕಾರಣ ಮಾಡಿರುವ ಮುಖಂಡರನ್ನು ಕೈ ನಾಯಕರು ಜತೆಗೂಡಿಸಿಕೊಂಡು ಹೋಗುವಲ್ಲಿ ವಿಫಲರಾದ ಕಾರಣಕ್ಕೆ ಉಂಟಾದ ಅಸಮಾಧಾನ ಚುನಾವಣೆಯಲ್ಲಿ ಹೊಡೆತ ಬೀಳುವ ಸಾಧ್ಯತೆ ಹೆಚ್ಚು ಎಂಬ ವಾತಾವರಣ ನಿರ್ಮಾಣವಾಗಿದೆ.

**ಒಳ ಮೀಸಲಾತಿ ಗೊಂದಲ ಎತ್ತಿ ತೋರಿಸುತ್ತಿರುವ ಬಿಜೆಪಿ:** ಪರಿಶಿಷ್ಟ ಜಾತಿಗೆ ಸೇರಿರುವ ಮೀಸಲಾತಿ ಹಂಚಿಕೆ ವಿಚಾರವಾಗಿ ಎದ್ದಿರುವ ಗೊಂದಲಕ್ಕೆ ಸಂಬಂಧಿಸಿದಂತೆ ಸರಕಾರದ ವೈಫಲ್ಯತೆ ಜನರ ಮುಂದಿಡಲು ಉಪ ಚುನಾವಣೆಯನ್ನು ವೇದಿಕೆಯಾಗಿ ಮಾಡಿಕೊಂಡಿರುವ ಬಿಜೆಪಿ ನಾಯಕರು ಪ್ರಚಾರದಲ್ಲಿ ಉಲ್ಲೇಖ ಮಾಡುತ್ತಿದ್ದಾರೆ. ಸಂಸದ ಗೋವಿಂದ ಕಾರಜೋಳ ಹಾಗೂ ಮಾಜಿ ಸಚಿವ ಅರವಿಂದ ಲಿಂಬಾವಳಿ ತಂಡ ಒಳ ಮೀಸಲಾತಿ ಗೊಂದಲವನ್ನು ಜನರ ಮುಂದಿಡುವ ಕೆಲಸ ಮಾಡುತ್ತಿದ್ದಾರೆ.ಇದರಿಂದ ಅಹಿಂದ ಮತದಾರರನ್ನು ಬಿಜೆಪಿಯತ್ತ ಸೆಳೆಯುವ ಕೆಲಸ ಭರ್ಜರಿಯಾಗಿ ಸಾಗಿದೆ. ಇನ್ನೂ ಮೂಲತಃ ಬಾಗಲಕೋಟೆ ಜಿಲ್ಲೆಯವರಾದ ಅರವಿಂದ ಲಿಂಬಾವಳಿ ಹಾಗೂ ಅವರ ಸಹೋದರ ಅಶೋಕ್ ಲಿಂಬಾವಳಿ ಅವರು ಪ್ರಚಾರದ ಮುಖ್ಯ ವೇದಿಕೆಯಲ್ಲಿ ಗುರುತಿಸಿಕೊಂಡಿದ್ದು ಸಂಘಟನೆಗೆ ಮತ್ತಷ್ಟು ಬಲ ಸಿಕ್ಕಂತಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಪರ ಸಿಎಂ ಸಿದ್ದರಾಮಯ್ಯ ಮತಯಾಚಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮತಯಾಚಿಸಿದರು.

### ಕಲ್ಲು ತೂರಾಟದ ಲಾಭ ಸಿಗಲಿದೆಯೇ ಬಿಜೆಪಿಗೆ?

ಶಿವಾಜಿ ಜಯಂತಿ ಮೆರವಣಿಗೆ ವೇಳೆ ಮುಸ್ಲಿಂ ಸಮುದಾಯದ ಯುವಕರು ನಡೆಸಿದ್ದ ಕಲ್ಲು ತೂರಾಟ ಪ್ರಕರಣ ರಾಜ್ಯಾದ್ಯಂತ ಸಾಕಷ್ಟು ಚರ್ಚೆಯಾಗಿತ್ತು. ಅಷ್ಟೇ ಅಲ್ಲದೆ ಕಾಂಗ್ರೆಸ್ ಸರಕಾರದ ವಿರುದ್ಧ ಜನಾಭಿಪ್ರಾಯ ಮೂಡಿಸುವಲ್ಲಿ ಬಿಜೆಪಿ ಯಶಸ್ವಿಯಾಗಿತ್ತು. ಘಟನೆ ನಂತರದಲ್ಲಿ ಪೊಲೀಸ್ ಇಲಾಖೆ ನಡೆದುಕೊಂಡ ರೀತಿಯ ವಿರುದ್ಧ ಸಾಕಷ್ಟು ಆಕ್ರೋಶ ವ್ಯಕ್ತವಾಗಿತ್ತು. ಒಟ್ಟು ಘಟನೆ ಲಾಭ ಪಡೆಯಲು ಬಿಜೆಪಿ ಚುನಾವಣಾ ಪ್ರಚಾರದ ವೇದಿಕೆ ಬಳಸಿಕೊಳ್ಳಲು ತಯಾರಿ ನಡೆಸಿದೆ. ಆದರೆ ಈ ಘಟನೆಯನ್ನು ಜನ ಹೇಗೆ ತಗೆದುಕೊಂಡು ಮತ ನೀಡುತ್ತಾರೆ ಎಂಬುದನ್ನು ಕಾಲವೇ ನಿರ್ಧರಿಸಬೇಕು.

### ಸ್ವಪಕ್ಷದ ಮುಖಂಡರ ವಿರುದ್ಧ ಹರಿಹಾಯ್ದ ಡಿಕೆಶಿ

ಬಾಗಲಕೋಟೆ ಉಪ ಚುನಾವಣಾ ಅಖಾಡಕ್ಕೆ ಇಳಿದಿರುವ ಡಿ.ಕೆ ಶಿವಕುಮಾರ ಬುಧವಾರ ಜಿಲ್ಲಾ ಕಾಂಗ್ರೆಸ್ ಮುಖಂಡರು, ಚುನಾವಣಾ ಪ್ರಚಾರ ಹೊಣೆ ಹೊತ್ತ ನಾಯಕರ ಸಭೆಯನ್ನು ನವನಗರ ದ ಹೊರವಲಯದ ರೆಸಾರ್ಟ್‌ನಲ್ಲಿ ನಡೆಸಿದರು. ಈ ವೇಳೆ, ಪಕ್ಷದ ಮುಖಂಡರು ಕೇವಲ ಬಾಗಲಕೋಟೆ ಗ್ರಾಮೀಣದಲ್ಲಿ ಪ್ರಚಾರದ ಒತ್ತು ನೀಡಿದ್ದು ನಗರ ಭಾಗದಲ್ಲಿ ಮತದಾರರನ್ನು ಸೆಳೆಯಲು ಈವರೆಗೂ ಪ್ರಯತ್ನ ನಡೆಸದಿದ್ದಕ್ಕೆ ಆಕ್ರೋಶ ಹೊರಹಾಕಿದರು. ಪ್ರಚಾರ ಹೊಣೆ ಹೊತ್ತ ಉಸ್ತುವಾರಿಗಳ ಕಾರ್ಯವೈಖರಿ ಬದಲಿಸಿಕೊಳ್ಳುವಂತೆ ಖಡಕ್ ಎಚ್ಚರಿಕೆಯನ್ನು ಸಭೆಯಲ್ಲಿ ತಿಳಿಸಿದ್ದಾರೆ. ಗುಪ್ತಚರ ಮಾಹಿತಿ ಪ್ರಕಾರ ಈ ಕ್ಷಣದವರೆಗೂ ಬಾಗಲಕೋಟೆ ನಗರ ಪ್ರದೇಶದಲ್ಲಿ ಬಿಜೆಪಿ ಮುಂದೆ ಇರುವುದು ಕಾಂಗ್ರೆಸ್ ಪಕ್ಷಕ್ಕೆ ನಿದ್ದೆಗೆಡಿಸಿದೆ ಎಂದು ಮೂಲಗಳಿಂದ ತಿಳಿದುಬಂದಿದೆ.

### ಬಿಜೆಪಿಗೆ ಬಸನಗೌಡ ಯತ್ನಾಳ್ ಪ್ರಚಾರದ ಬಲ

ಬಿಜೆಪಿಯಿಂದ ಉಚ್ಚಾಟನೆಗೊಂಡ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆಪ್ತ ಸ್ನೇಹಿತ ವೀರಣ್ಣ ಚರಂತಿ ಮಠ ಪರ ಪ್ರಚಾರಕ್ಕೆ ಧುಮುಕಿದ್ದು ಕಾರ್ಯ ಕರ್ತರಲ್ಲಿ ಸಾಕಷ್ಟು ಹುಮ್ಮಸ್ಸು ಮೂಡಿಸಿದೆ. ಹಿಂದೂ ಮತಗಳನ್ನು ಕೇಂದ್ರೀಕರಿಸುವತ್ತ ಗಮನ ಹರಿಸಿದ್ದಾರೆ. ಯತ್ನಾಳ್ ಆಗಮನದಿಂದ ಕಾಂಗ್ರೆಸ್ ವಲಯದಲ್ಲಿ ಸಾಕಷ್ಟು ಸಂಚಲನ ಮೂಡಿಸಿದ್ದು ಬಿಜೆಪಿ ಕಟ್ಟಿಹಾಕಲು ನಿರಂತರ ಪ್ರಯತ್ನ ನಡೆಸಿದೆ. ಈಗಾಗಲೇ ಮೊದಲ ಸುತ್ತಿ ನಲ್ಲಿ ಪಂಚಮಸಾಲಿ ಸಮುದಾಯದ ಸಭೆ ನಡೆಸಿ ರುವ ಯತ್ನಾಳ್ ಅವರು ಬಾಗಲಕೋಟೆ ಗ್ರಾಮೀ ಣ ಪ್ರದೇಶದಲ್ಲಿ ಪ್ರಚಾರ ಕೈಗೊಂಡಿದ್ದಾರೆ.

ಬಿಜೆಪಿ ಅಭ್ಯರ್ಥಿ ಗೆಲವು ನಿಶ್ಚಿತ: ಲಿಂಬಾವಳಿ

## ಕಾಂಗ್ರೆಸ್ ದುರಾಡಳಿತಕ್ಕೆ ಜನರಿಂದಲೇ ತಕ್ಕಪಾಠ

ದಾವಣಗೆರೆ ದಕ್ಷಿಣ ಬಿಜೆಪಿ ಅಭ್ಯರ್ಥಿ ಶ್ರೀನಿವಾಸದಾಸ ಕರಿಯಪ್ಪ ಪರ ಮಾಜಿ ಸಚಿವ ಅರವಿಂದ ಲಿಂಬಾವಳಿ ಮತಯಾಚಿಸಿದರು.

**ದಾವಣಗೆರೆ:** ಪ್ರಸ್ತುತ ರಾಜ್ಯ ಸರಕಾರದ ಜನವಿರೋಧಿ ನೀತಿಗೆ ರಾಜ್ಯದ ಜನತೆ ಬೇಸತ್ತಿದ್ದು, ಉಪಚುನಾವಣೆಯಲ್ಲಿ ತಕ್ಕಪಾಠ ಕಲಿಸಲಿದ್ದಾರೆ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಹಿನ್ನೆಲೆ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸ ಕರಿಯಪ್ಪ ಪರವಾಗಿ ಕುಕ್ಕವಾಡ ಗ್ರಾಮದಲ್ಲಿ ಗುರುವಾರ ರೋಡ್ ಶೋ ಮೂಲಕ ಸಾರ್ವಜನಿಕವಾಗಿ ಮತಯಾಚನೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರದ ಜನವಿರೋಧಿ ಆಡಳಿತಕ್ಕೆ ರಾಜ್ಯದ ಜನತೆ ಬೇಸತ್ತಿದ್ದು, ಬದಲಾವಣೆ ಅವಶ್ಯ ಎಂಬುದು ಜನಾಭಿಪ್ರಾಯ. ಪ್ರಚಾರ ಸಭೆಯಲ್ಲಿ ಅಪಾರ ಸಂಖ್ಯೆಯಲ್ಲಿ ಸಾರ್ವಜನಿಕರು ಸೇರಿದ್ದು, ಬಿಜೆಪಿ ಅಭ್ಯರ್ಥಿಯ ಗೆಲುವಿನ ನಿರೀಕ್ಷೆಯಲ್ಲಿ ಜನರಿದ್ದಾರೆ ಎಂಬುದು ಸ್ಪಷ್ಟವಾಗಿದೆ ಎಂದರು. ಅಹಿಂದ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಅವರನ್ನು ಹತ್ತಿಕ್ಕುವ ಕಾರ್ಯ ಮಾಡುತ್ತಿದೆ. ಪ.ಜಾತಿಗಳಿಗೆ ಸೇರಬೇಕಿದ್ದ ಅನುದಾನವನ್ನು ಗ್ಯಾರಂಟಿ ಯೋಜನೆಗೆ ಬಳಸುವ ಮೂಲಕ ದ್ರೋಹ ಎಸಗಿದೆ. ಇಂತಹ ಸರ್ಕಾರದ ವಿರುದ್ಧ ಜನರು ಬೇಸತ್ತಿದ್ದು, ಈ ಉಪಚುನಾವಣೆಯಲ್ಲಿ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ವಿಪಕ್ಷ ನಾಯಕ ಆರ್. ಅಶೋಕ್, ಅಭ್ಯರ್ಥಿ ಶ್ರೀನಿವಾಸ್ ದಾಸ ಕರಿಯಪ್ಪ, ಮುಖಂಡರಾದ ಬಿ.ಎಸ್.ಜಗದೀಶ್ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ದಾವಣಗೆರೆ ಪ್ರಚಾರದಲ್ಲಿ ಸಿಎಂ ವಿಶ್ವಾಸ

## ಜನ ಸ್ಪಂದನೆ: ಗೆಲುವು ಖಚಿತ

**ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ನಿರೀಕ್ಷೆಗೂ ಮೀರಿ ಜನಸ್ಪಂದನೆ ದೊರೆಯುತ್ತಿದ್ದು, ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗುತ್ತಿದ್ದು, ಬಿಜೆಪಿಯವರ ಸುಳ್ಳುಗಳ ನಡುವೆಯೂ ಜನ ನಮ್ಮನ್ನು ನಂಬಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ನಿರೀಕ್ಷೆಗೂ ಮೀರಿ ಜನಸ್ಪಂದನೆ ದೊರೆಯುತ್ತಿದೆ. ಬಿಜೆಪಿಯವರು ನಾಲ್ಕು ವರ್ಷದಲ್ಲಿ ಯಾವ ಅಭಿವೃದ್ಧಿ ಮಾಡದೇ, ರಾಜ್ಯ ಲೂಟಿ ಮಾಡಿದ್ದಾರೆ ಎಂಬ ಸತ್ಯ ಜನರು ಅರಿತಿದ್ದಾರೆ. ಹಾಗಾಗಿ, ಕಾಂಗ್ರೆಸ್ ಕೈ ಹಿಡಿಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕಾಂಗ್ರೆಸ್ ಸರಕಾರದ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗುತ್ತಿದ್ದು, ಬಿಜೆಪಿಯವರ ಸುಳ್ಳುಗಳ ನಡುವೆಯೂ ಜನ ನಮ್ಮನ್ನು ನಂಬಿದ್ದಾರೆ. ರಾಜ್ಯದಲ್ಲಿ ಯಾವುದೇ ಚುನಾವಣೆಯ ನಂತರ ಗ್ಯಾರಂಟಿ ಸ್ಥಗಿತಗೊಳಿಸಲಾಗುವುದು ಎಂದು ಬಿಜೆಪಿ ಅಪಪ್ರಚಾರ ಮಾಡಿದರೂ, ನಮ್ಮ ಗ್ಯಾರಂಟಿಗಳು ನಿರಂತರವಾಗಿ ಮುಂದುವರಿದಿದೆ. ಇದಕ್ಕಾಗಿ 52000 ಕೋಟಿ ರು.ಮೀಸಲಿಟ್ಟಿದ್ದು, ಇದುವರೆಗೆ 1,31,000 ಕೋಟಿ ರು.ವೆಚ್ಚ ಮಾಡಲಾಗಿದೆ ಎಂದು ವಿವರಿಸಿದರು. ಈ ವೇಳೆ ಸಚಿವರಾದ ಈಶ್ವರ್ ಖಂಡ್ರೆ, ಎಸ್.ಎಸ್. ಮಲ್ಲಿಕಾರ್ಜುನ್, ವಿಪ ಸದಸ್ಯ ಗೋವಿಂದರಾಜು ಉಪಸ್ಥಿತರಿದ್ದರು.

> ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೊಳಿಸಲು ನಮ್ಮ ಸರಕಾರ ಬದ್ಧವಾಗಿದೆ. ಬಿಜೆಪಿಯವರಿಗೆ ಅಹಿಂದ ವರ್ಗಗಳ ಮೇಲೆ ಕಾಳಜಿಯಿಲ್ಲ. ಅವರು ಎಂದಿಗೂ ಶ್ರೀಮಂತರ ಪರ. ನಮ್ಮ ಸರಕಾರ ಯೂನಿವರ್ಸಲ್ ಬೇಸಿಕ್ ಆದಾಯ ತತ್ವದಂತೆ ನಡೆದು, ತಳಸಮುದಾಯದವರಿಗೆ ಅನುಕೂಲ ಕಲ್ಪಿಸುತ್ತಿದೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಮರ್ಥ್ ಶಾಮನೂರು ಪರ ದಾವಣಗೆರೆಯಲ್ಲಿ ಸಿಎಂ ಸಿದ್ದರಾಮಯ್ಯ ಪ್ರಚಾರ ನಡೆಸಿದರು.




### ಮುಸ್ಲಿಮರ ಮತ ಬಿಜೆಪಿಗೆ ಹಾಕಿಸಿಕೊಳ್ಳಲಿ

**ದಾವಣಗೆರೆ:** ಸೂಟ್ ಕೇಸ್ ವಿಚಾರವಾಗಿ ಮಾತಾಡಿರುವ ಮಾಜಿ ಸಿಎಂ ಸದಾನಂದ ಗೌಡ ಅವರು ಇನ್ನು ಯಾಕೆ ದೂರು ನೀಡಿಲ್ಲ ಎಂ ದು ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ಸದಾನಂದ ಗೌಡರು ಪ್ರಚಾರಕ್ಕೆ ಬಂದಿದ್ದಾರಾ ಅವರು ಸೂಟ್ ಕೇಸ್ ಎಷ್ಟು ದಪ್ಪ ಇದೆ, ಎಷ್ಟು ಅಗಲವಿದೆ ಎಂದು ಲೆಕ್ಕಾಚಾರ ಹಾಕಿದ್ದಾರಾ? ಅವರು ಈ ಬಗ್ಗೆ ದೂರು ನೀಡಲಿ ಎಂದು ತಿರುಗೇಟು ನೀಡಿದರು.

ಅಲ್ಪಸಂಖ್ಯಾತರ ಮತಗಳನ್ನು ಬಿಜೆಪಿಗೆ ಹೆಚ್ಚು ಸೆಳೆಯಿರಿ, ಶೇ. 45 ರಷ್ಟು ಸೆಳೆಯಿರಿ ಎಂಬ ಸದಾನಂದಗೌಡರ ಹೇಳಿಕೆ ಬಗ್ಗೆ ಕೇಳಿದಾಗ, ಬಹಳ ಸಂತೋಷ, ಅವರು ಎಲ್ಲರನ್ನೂ ಕರೆದುಕೊಳ್ಳಲಿ. ಇರುವ ಎಲ್ಲ 2.30 ಲಕ್ಷ ಮತಗಳನ್ನು ಅವರೇ ಹಾಕಿಸಿಕೊಳ್ಳಲಿ, ಬಹಳ ಸಂತೋಷ ಎಂದು ತಿಳಿಸಿದರು.

ಪೊಲೀಸರಿಗೆ ಮುಖ್ಯಮಂತ್ರಿ ಪದಕ ವಿತರಣೆ | ದೇಶದಲ್ಲಿಯೇ ಮೊದಲ ನಕ್ಸಲ್ ಮುಕ್ತ ರಾಜ್ಯ ಕರ್ನಾಟಕ: ಗೃಹ ಸಚಿವ ಪರಮೇಶ್ವರ

# ರಾಜ್ಯದಲ್ಲಿ ಸೈಬರ್ ವಂಚನೆ ಹೆಚ್ಚಳ: ಸಿಎಂ ಸಿದ್ದರಾಮಯ್ಯ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ದೇಶದ ಸರಾಸರಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಸೈಬರ್ ಹಾಗೂ ಮಾದಕ ದ್ರವ್ಯಕ್ಕೆ ಸಂಬಂಧಿಸಿದ ಪ್ರಕರಣ ಸಂಖ್ಯೆ ಹೆಚ್ಚಾಗಿದ್ದು, ಇವುಗಳನ್ನು ಮಟ್ಟಹಾಕುವ ನಿಟ್ಟಿನಲ್ಲಿ ಪೊಲೀಸರು ಕಟ್ಟುನಿಟ್ಟಿನ ಕ್ರಮವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕೋರಮಂಗಲದ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ 158 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಿ ಮಾತನಾಡಿದ ಅವರು, ಯಾವುದೇ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆಯಾ ಠಾಣಾಧಿಕಾರಿಯ ಗಮನಕ್ಕೆ ಬರದಂತೆ ಯಾವುದೇ ಅಪರಾಧಗಳು, ಕೆಟ್ಟ ವ್ಯವಹಾರಗಳು ನಡೆಯಲು ಸಾಧ್ಯವಿಲ್ಲ ಎನ್ನುವುದು ನನ್ನ ನಂಬಿಕೆ. ಆಯಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್‌ಗಳು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅನೇಕ ಅಪರಾಧಗಳನ್ನು ತಡೆಗಟ್ಟಬಹುದು ಎಂದರು.

ಅನೇಕ ಬಾರಿ ಸೂಚನೆ ನೀಡಿದರೂ, ಆಯಾ ಠಾಣೆ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಪ್ರಯತ್ನಿಸದಿದ್ದರೆ ಪೊಲೀಸ್ ಇನ್‌ಸ್ಪೆಕ್ಟರ್‌ಗಳು ಅವರನ್ನು ಜವಾಬ್ದಾರರನ್ನಾಗಿ ಮಾಡಬೇಕು. ಅಂಥವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕು. ತಂತ್ರಜ್ಞಾನ ಬಳಸಿ ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಬೆಂ.ದಕ್ಷಿಣ ಸಂಚಾರಿ ವಿಭಾಗದ ಉಪ ಪೊಲೀಸ್ ಆಯುಕ್ತ ಡಾ.ಗೋಪಾಲ್ ಎಂ.ಬ್ಯಾಕೋಡ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿಎಂ ಪದಕವನ್ನು ತೊಡಿಸಿದರು.

ಸೈಬರ್ ಅಪರಾಧಗಳು, ಮಾದಕದ್ರವ್ಯ ಅಪರಾಧಗಳು ಕಡಿಮೆ ಮಾಡಬೇಕು. ಯುವಕರು ಜೀವನ ಹಾಳು ಮಾಡಿಕೊಳ್ಳುವುದನ್ನು ತಪ್ಪಿಸಲು ಮಾದಕದ್ರವ್ಯ ಬಳಕೆ ತಪ್ಪಿಸಬೇಕು. ಮಾದಕದ್ರವ್ಯ ಅಪರಾಧಗಳ ತಡೆಗೆ ಎರಡು ವಿಶೇಷ ಕಾರ್ಯಾಚರಣೆಗಳನ್ನು ರಚನೆ ಮಾಡಲಾಗಿದೆ. ರಾಜ್ಯವನ್ನು ಮಾದಕದ್ರವ್ಯ ವ್ಯಸನಮುಕ್ತ ಮಾಡಲು ಉದ್ದೇಶಿಸಿದ್ದು, ಇದು ಪೊಲೀಸ್ ಇಲಾಖೆಯ ಗುರಿಯೂ ಆಗಬೇಕಿದೆ ಎಂದರು.

ಹಲವು ರೀತಿಯ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಿ ಶಿಕ್ಷೆ ಪ್ರಮಾಣದಲ್ಲಿ ಕರ್ನಾಟಕ ರಾಜ್ಯ ಮುಂದಿದೆ. ಇದಕ್ಕಾಗಿ ಪೊಲೀಸ್ ಇಲಾಖೆಯನ್ನು ಅಭಿನಂದಿಸುವ ಜತೆಗೆ ಪ್ರಮಾಣ ಹೆಚ್ಚಾಗಿರುವ ಅಪರಾಧಗಳ ನಿಯಂತ್ರಣದಲ್ಲೂ ನಾವು ಶ್ರಮ ಹಾಕಬೇಕಿದೆ ಎಂದು ಸೂಚಿಸಿದರು. ಸಮಯದ ಮಿತಿ ಇಲ್ಲದಂತೆ ದಿನದ 24 ಗಂಟೆಯೂ ಕರ್ತವ್ಯ ಪ್ರಜ್ಞೆ ಇಟ್ಟುಕೊಂಡು ಪೊಲೀಸರು ಕೆಲಸ ಮಾಡುವುದರಿಂದ ಸಮಾಜದಲ್ಲಿ ನೆಮ್ಮದಿ ಮತ್ತು ಸೌಹಾರ್ದತೆ ನೆಲೆಸಿದೆ ಎಂದರು. ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ, ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಸೇರಿದಂತೆ ಹಿರಿಯ-ಕಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಪೊಲೀಸರಿಂದ ಸಿಎಂ ಸಿದ್ದರಾಮಯ್ಯ ಗೌರವ ಸ್ವೀಕರಿಸಿದರು.

> ರಾಜ್ಯದ ಆರ್ಥಿಕ ಬೆಳವಣಿಗೆಗೂ, ಜಿಡಿಪಿ ಪ್ರಗತಿಗೂ ರಾಜ್ಯದ ಕಾನೂನು ಸುವ್ಯವಸ್ಥೆಗೂ ನೇರಾ ನೇರಾ ಸಂಬಂಧ ಇರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಪೊಲೀಸ್ ಇಲಾಖೆ ಕಾರ್ಯನಿರ್ವಹಿಸಿದರೆ ಆರ್ಥಿಕತೆಗೂ ದೊಡ್ಡ ಕೊಡುಗೆ ಕೊಟ್ಟಂತಾಗುತ್ತದೆ. ಕರ್ನಾಟಕ ಡ್ರಗ್ಸ್ ಮುಕ್ತ ರಾಜ್ಯ ಆಗಬೇಕು ಎನ್ನುವ ಗುರಿ ನಮ್ಮ ಸರಕಾರದ್ದಾಗಿದೆ. ಇದು ಪೊಲೀಸ್ ಇಲಾಖೆಯ ಗುರಿಯೂ ಆಗಬೇಕಿದೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

### ಕವಿತಾಳ ಠಾಣೆಯಂತೆ ಮಾದರಿಯಾಗಲಿ

ಬಹಳ ವರ್ಷಗಳ ಹಿಂದೆಯೇ ನಕ್ಸಲ್ ನಿಗ್ರಹ ದಳವನ್ನು ಸ್ಥಾಪಿಸುವ ಮೂಲಕ ದೇಶದಲಿಯೇ ನಕ್ಸಲ್ ಮುಕ್ತ ರಾಜ್ಯವನ್ನಾಗಿ ಮೊದಲಿಗೆ ಮಾಡಿದ್ದೇವೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು. ರಾಜ್ಯದಲ್ಲಿ ಶಾಂತಿ, ನೆಮ್ಮದಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಇಂಡಿಯಾ ಜಸ್ಟಿಸ್ ವರದಿ ಪ್ರಕಾರ ದೇಶದಲ್ಲಿ ನೊಂದವರಿಗೆ ನ್ಯಾಯ ನೀಡುವುದರಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂಬುದು ಗೊತ್ತಾಗಿದೆ. ವಿಶೇಷವಾಗಿ ನ್ಯಾಯ ಒದಗಿಸುವುದರಲ್ಲಿ ಪೊಲೀಸ್ ಇಲಾಖೆ ಉತ್ತಮ ಕೆಲಸ ಮಾಡಿದೆ. ಕೇಂದ್ರ ಗೃಹ ಇಲಾಖೆಯು ರಾಯಚೂರು ಜಿಲ್ಲೆಯ ಕವಿತಾಳ ಪೊಲೀಸ್ ಠಾಣೆ ದೇಶದ 3ನೇ ಅತ್ಯುತ್ತಮ ಠಾಣೆ ಎಂದು ಗುರುತಿಸಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ಪೊಲೀಸ್ ಠಾಣೆಗಳು, ಕವಿತಾಳ ಪೊಲೀಸ್ ಠಾಣೆಯಂತೆಯೇ ಅತ್ಯುತ್ತಮ ಪೊಲೀಸ್ ಠಾಣೆಗಳಾಗಬೇಕೆಂದು ಸರಕಾರ ಬಯಸುತ್ತದೆ ಎಂದರು. ಪೊಲೀಸ್ ಇಲಾಖೆಯು ಪ್ರತಿನಿತ್ಯ ಸವಾಲುಗಳನ್ನು ಎದುರಿಸುತ್ತದೆ. ಸವಾಲುಗಳ ಮಧ್ಯೆ ಕಳೆದ ಮೂರು ವರ್ಷಗಳಿಂದ ನಮ ಸರ್ಕಾರ, ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯದಲ್ಲಿ ಶಾಂತಿ ಕಾಪಾಡುವುದರಲ್ಲಿ ಯಶಸ್ವಿಯಾಗಿದೆ. ರಾಜ್ಯಕ್ಕೆ ಬಂಡಾವಾಳ ಹೂಡಿಕೆಗೆ ಬರುವ ಜನ ಶಾಂತಿ-ನೆಮದಿ ಬಯಸುತ್ತಾರೆ. ರಾಜ್ಯದಲ್ಲಿ ಸೌಹಾರ್ದಯುತ ವಾತಾವರಣ ಸೃಷ್ಟಿ ಮಾಡುವುದರಲ್ಲಿ ಪೊಲೀಸ್ ಇಲಾಖೆ ಯಶಸ್ವಿಯಾಗಿದೆ ಎಂದು ಅವರು ಹೇಳಿದರು.

## ಸಂಪಾದಕೀಯ

# ಎಐನಿಂದ ಉದ್ಯೋಗ ನಷ್ಟ ಪಿಡುಗಾಗದಿರಲಿ

ಭಾರತದ ಮಧ್ಯಮ ವರ್ಗದ ಕನಸುಗಳಿಗೆ ರೆಕ್ಕೆ ನೀಡಿದ್ದ ಐಟಿ (ಮಾಹಿತಿ ತಂತ್ರಜ್ಞಾನ) ವಲಯ ಇಂದು ಮೌನವಾಗಿ ಅಳುತ್ತಿದೆ. ಅಂತಾರಾಷ್ಟ್ರೀಯ ಟೆಕ್ ದೈತ್ಯ ಒರಾಕಲ್ ಜಾಗತಿಕವಾಗಿ ಸುಮಾರು 30,000 ಉದ್ಯೋಗಿಗಳನ್ನು ವಜಾಗೊಳಿಸಲು ನಿರ್ಧರಿಸಿರುವುದು ಕೇವಲ ಒಂದು ಕಂಪನಿಯ ಆರ್ಥಿಕ ಶಿಸ್ತಿನ ಕ್ರಮವಲ್ಲ; ಬದಲಾಗಿ ಇದು ಮುಂಬರುವ ಆರ್ಥಿಕ ಸುನಾಮಿಯ ಮುನ್ಸೂಚನೆ. ಈ ಪೈಕಿ ಭಾರತವೊಂದರಲ್ಲೇ 12,000 ಮಂದಿ ಬೀದಿಗೆ ಬೀಳುತ್ತಿರುವುದು ಆತಂಕಕಾರಿ ಬೆಳವಣಿಗೆ. 2026ರ ಆರಂಭಿಕ ವರದಿಗಳು ನೀಡುತ್ತಿರುವ ಅಂಕಿ-ಅಂಶಗಳು ಬೆಚ್ಚಿಬೀಳಿಸುವಂತಿವೆ. ಈ ವರ್ಷದ ಅಂಕಿ-ಅಂಶಗಳನ್ನು ಗಮನಿಸಿದರೆ, 2026ರ ಮೂರು ತಿಂಗಳಲ್ಲಿ ಸುಮಾರು 85,156 ಟೆಕ್ಕಿಗಳು ಕೆಲಸ ಕಳೆದುಕೊಂಡಿದ್ದಾರೆ. ಅಂದರೆ ಪ್ರತಿದಿನ ಸರಾಸರಿ 936 ಮಂದಿ ತಮ್ಮ ಉದ್ಯೋಗದ ಗುರುತಿನ ಚೀಟಿಯನ್ನು ಕಚೇರಿಯಲ್ಲೇ ಬಿಟ್ಟು ಹೊರಬ ರುತ್ತಿದ್ದಾರೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಭಾರತಕ್ಕೆ ಇದು ಆಘಾತಕಾರಿ ಸುದ್ದಿ. ಈಗಾಗಲೇ ಕೊಲ್ಲಿ ಯುದ್ಧದ ಕಾರಣಕ್ಕೆ ಅಲ್ಲಿ ಬದುಕಿನ ಬುತ್ತಿ ಅರಸಿದ್ದ ಲಕ್ಷಾಂತರ ಭಾರತೀಯರು ಎಲ್ಲವನ್ನೂ ಬಿಟ್ಟು ಸ್ವದೇಶಕ್ಕೆ ಮರಳಿದ್ದಾರೆ. ತಿಂಗಳೊಂದಕ್ಕೆ ಲಕ್ಷಗಟ್ಟಲೆ ವೇತನ ಪಡೆಯುತ್ತಿದ್ದ ಯುವಕ/ ಯುವತಿಯರು ಒಮ್ಮಿಂದೊಮ್ಮೆಲೆ ತಮ್ಮ ಉದ್ಯೋಗ ಕಳೆದುಕೊಂಡರೆ ಆಗುವ ಆಘಾತ, ಮಾನಸಿಕ ತುಮುಲ ಊಹೆಗೆ ನಿಲುಕದ್ದು. ಬೆಂಗಳೂರಿನ ಕೊತ್ತನೂರು ಠಾಣಾ ವ್ಯಾಪ್ತಿಯಲ್ಲಿ ಅಂತರ್ ಧರ್ಮಿಯ ವಿವಾಹವಾಗಿದ್ದ ದಂಪತಿ ಉದ್ಯೋಗ ಕಳೆದುಕೊಂಡ ನೋವಿನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದು ಇದಕ್ಕೊಂದು ಉದಾಹರಣೆ. ಐಟಿ ವಲಯದಲ್ಲಿನ ಈ ನಿರುದ್ಯೋಗ ಕೇವಲ ಅಂಕಿ-ಅಂಶಗಳಿಗೆ ಸೀಮಿತವಾಗಿಲ್ಲ. ಭಾರತದಂತಹ ಜನ ನಿಬಿಡ ದೇಶದಲ್ಲಿ ಇದು 'ಸಾಮಾಜಿಕ ಪಿಡುಗಾಗಿ' ರೂಪಾಂತರಗೊಳ್ಳುವ ಎಲ್ಲ ಲಕ್ಷಣಗಳೂ ಕಾಣಿಸುತ್ತಿವೆ. ಕೃತಕ ಬುದ್ಧಿಮತ್ತೆ ಮತ್ತು ಆಟೊಮೇಷನ್‌ನ ಅಬ್ಬರದ ನಡುವೆ ಮಾನವ ಸಂಪನ್ಮೂಲವನ್ನು ಕೇವಲ 'ವೆಚ್ಚ' ಎಂದು ಪರಿಗಣಿಸುವ ಕಂಪನಿಗಳ ಧೋರಣೆ ಬದಲಾಗಬೇಕಿದೆ. ಸರಕಾರಗಳು ಕೇವಲ ಹೂಡಿಕೆಯನ್ನು ಆಕರ್ಷಿಸುವುದಷ್ಟೇ ಅಲ್ಲದೆ, ಕೆಲಸ ಕಳೆದುಕೊಂಡ ನುರಿತ ಉದ್ಯೋಗಿಗಳಿಗೆ ಮರು-ತರಬೇತಿ ನೀಡುವ ಮತ್ತು ಅವರ ಹಿತರಕ್ಷಣೆ ಮಾಡುವ ಬಲವಾದ ನೀತಿಗಳನ್ನು ರೂಪಿಸಬೇಕಿದೆ. ಭಾರತ ಸುಶಿಕ್ಷಿತ ನಿರುದ್ಯೋಗಿಗಳ ತಾಣವಾಗದಂತೆ ಎಚ್ಚರಿಕೆ ವಹಿಸಬೇಕಿದೆ.

## ಸೊಂಪಾದಕೀಯ

# ಪೋಸ್ಟರ್ ಬಾಯ್‌ಗೆ ಪ್ಲಾಸ್ಟರ್

ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಮುಗಿಯಿತು ಎಂಬಂತೆ ರಾಘವ ಚಡ್ಡಾ ಅವರ ಕತೆಯಾಗಿದೆ. ರಾಜ್ಯಸಭೆಯಲ್ಲಿ ಚೆನ್ನಾಗಿ ಮಾತನಾಡುವುದೇ ಅವರಿಗೆ ಮುಳುವಾಗಿದೆ ಎಂಬ ಸುದ್ದಿ ಬಂದಿದೆ. ಆಮ್ ಆದ್ಮಿ ಪಕ್ಷದ 'ಪೋಸ್ಟರ್ ಬಾಯ್' ಮತ್ತು ಅರವಿಂದ್ ಕೇಜ್ರಿವಾಲ್ ಅವರ 'ಬಲಗೈ ಬಂಟ' ಎಂದೇ ಖ್ಯಾತರಾಗಿದ್ದ ರಾಘವ್ ಚಡ್ಡಾ ಅವರ ರಾಜಕೀಯ ಗ್ಲಾಮರ್‌ಗೆ ಪಕ್ಷವೇ ಬ್ರೇಕ್ ಹಾಕಿದೆ. ರಾಜ್ಯಸಭೆಯ ಉಪನಾಯಕನ ಕುರ್ಚಿಯಿಂದ ಚಡ್ಡಾ ಅವರನ್ನು ಕೆಳಗಿಳಿಸಿರುವ ಎಎಪಿ, ಆ ಸ್ಥಾನಕ್ಕೆ ಪಂಜಾಬ್‌ನ ಶಿಕ್ಷಣ ಸಂಸ್ಥೆಗಳ ಒಡೆಯ ಅಶೋಕ್ ಮಿತ್ತಲ್ ಅವರಿಗೆ ಮಣೆ ಹಾಕಿದೆ. ಈ ಮೂಲಕ ಪಕ್ಷದಲ್ಲಿ 'ಚಾರ್ಟರ್ಡ್ ಅಕೌಂಟೆಂಟ್' ಆಟ ಮುಗಿದು 'ಕುಲಪತಿ'ಗಳ ಕಾಲವನ್ನು ಆರಂಭಿಸಿದೆ. ವಿಶೇಷವೆಂದರೆ, ಚಡ್ಡಾ ಅವರು ಸದನದಲ್ಲಿ ಬಾಯಿ ಬಿಡದಂತೆ ನೋಡಿಕೊಳ್ಳಿ ಎಂದು ಪಕ್ಷವು ರಾಜ್ಯಸಭಾ ಸಚಿವಾಲಯಕ್ಕೆ ತಾಕೀತು ಮಾಡಿದೆ. ಅಂದರೆ, ಇನ್ಮುಂದೆ ಚಡ್ಡಾ ಅವರು ಸಂಸತ್ತಿನಲ್ಲಿ ಕೇವಲ ಆಕರ್ಷಕವಾಗಿ ಕಾಣಿಸಿಕೊಳ್ಳಲು ಮಾತ್ರ ಸೀಮಿತವಾಗಬೇಕಿದೆ. ಲಂಡನ್‌ನಲ್ಲಿ ಓದಿದ ಚತುರತೆ ಮತ್ತು ದೆಹಲಿಯ ಮಾಡರ್ನ್ ಸ್ಕೂಲ್‌ನ ಪ್ರಭಾವ ಇಲ್ಲಿ ಕೆಲಸಕ್ಕೆ ಬಂದಂತಿಲ್ಲ. ಭ್ರಷ್ಟಾಚಾರ ವಿರೋಧಿ ಆಂದೋಲನದ ಕಾಲದಲ್ಲಿ ಕೇಜ್ರಿವಾಲ್ ಅವರ ಪಕ್ಕದಲ್ಲೇ ಕುಳಿತು 'ಪಕ್ಷ ಕಟ್ಟೋಣ' ಎಂದು ಪ್ಲಾನ್ ಹಾಕಿದ್ದ ಇದೇ ಚಡ್ಡಾ, ಇಂದು ಅದೇ ಪಕ್ಷದಲ್ಲಿ ಮೂಲೆ ಗುಂಪಾಗಿರುವುದು ರಾಜಕೀಯದ ವಿಪರ್ಯಾಸ.

## ಸಂಪಾದಕರ ಸದ್ಯಶೋಧನೆ

# ಕಾರಿನ ಬಣ್ಣವೂ, ದೇಶದ ಆರ್ಥಿಕತೆಯೂ

ಕಾರಿನ ಬಣ್ಣಗಳು ಕೇವಲ ವೈಯಕ್ತಿಕ ಆಯ್ಕೆಯಲ್ಲ, ಅವು ಒಂದು ದೇಶದ ಆರ್ಥಿಕ ಸ್ಥಿತಿ, ಜನರ ಮಾನಸಿಕ ಸ್ಥಿತಿ ಮತ್ತು ಸಾಮಾಜಿಕ ಬದಲಾವಣೆಗಳ ಪ್ರತಿಬಿಂಬವಾಗಿರುತ್ತವೆ ಎಂದರೆ ನಂಬುತ್ತೀರಾ? ಆದರೆ ಇದು ನಿಜ. ಬ್ರಿಟನ್‌ನ ಇತಿಹಾಸವನ್ನು ಗಮನಿಸಿದರೆ, ಅಲ್ಲಿನ ರಸ್ತೆಗಳಲ್ಲಿ ಓಡಾಡುವ ಕಾರುಗಳ ಬಣ್ಣವು ಆಯಾ ಕಾಲಘಟ್ಟದ 'ರಾಷ್ಟ್ರೀಯ ಮನಸ್ಥಿತಿ'ಯನ್ನು ಹೇಗೆ ಬಿಂಬಿಸುತ್ತವೆ ಎಂಬುದು ಅತ್ಯಂತ ಕುತೂಹಲಕಾರಿ ವಿಷಯ. ಇಪ್ಪತ್ತನೇ ಶತಮಾನದ ಆರಂಭದಲ್ಲಿ, ಬ್ರಿಟನ್ ತನ್ನ ರಾಷ್ಟ್ರೀಯ ಹೆಮ್ಮೆಯನ್ನು 'ಬ್ರಿಟಿಷ್ ರೇಸಿಂಗ್ ಗ್ರೀನ್' ಮೂಲಕ ವ್ಯಕ್ತಪಡಿಸುತ್ತಿತ್ತು. ಅಂತಾರಾಷ್ಟ್ರೀಯ ರೇಸಿಂಗ್ ಪಂದ್ಯಗಳಲ್ಲಿ ಪ್ರತಿ ದೇಶಕ್ಕೂ ಒಂದು ಬಣ್ಣವಿತ್ತು. ಬ್ರಿಟನ್ ಗಾಢ ಹಸಿರು ಬಣ್ಣವನ್ನು ಆರಿಸಿಕೊಂಡಿತು. ಆ ಸಮಯದಲ್ಲಿ ಹಸಿರು ಬಣ್ಣವು ಬ್ರಿಟನ್‌ನ ವಿಶ್ವಾಸ, ಸಂಪ್ರದಾಯ ಮತ್ತು ಜಗತ್ತಿನ ಮೇಲೆ ತನಗಿದ್ದ ಪ್ರಭಾವದ ಸಂಕೇತವಾಗಿತ್ತು. ಇದು ಬ್ರಿಟಿಷ್ ಎಂಜಿನಿಯರಿಂಗ್ ಚಾತುರ್ಯದ ಹೆಮ್ಮೆಯನ್ನು ಬಿಂಬಿಸುತ್ತಿತ್ತು. ಇತ್ತೀಚಿನ ದಶಕಗಳಲ್ಲಿ ಬ್ರಿಟನ್‌ನ ರಸ್ತೆಗಳಲ್ಲಿ ಬೂದು (Grey), ಕಪ್ಪು ಮತ್ತು ಬಿಳಿ ಬಣ್ಣದ ಕಾರುಗಳೇ ಹೆಚ್ಚಾಗಿ ಕಾಣ ಸಿಗುತ್ತವೆ. ಬ್ರಿಟನ್ ಆರ್ಥಿಕ ಹಿಂಜರಿತ ಅಥವಾ ಅನಿಶ್ಚಿತತೆಯನ್ನು ಎದುರಿಸುವಾಗ, ಜನರು ಗಾಢವಾದ ಅಥವಾ ಆಕರ್ಷಕ ಬಣ್ಣಗಳ ಬದಲಿಗೆ 'ಬೂದು' ಬಣ್ಣವನ್ನು ಆರಿಸಿಕೊಳ್ಳುತ್ತಾರೆ. ಯಾಕೆಂದರೆ, ಬೂದು ಬಣ್ಣದ ಕಾರುಗಳಿಗೆ ಮರುಮಾರಾಟ ಮೌಲ್ಯ (Resale Value) ಹೆಚ್ಚು. ಜನರು ಪ್ರಯೋಗಾತ್ಮಕವಾಗಿರಲು ಬಯಸದೇ, ಸುರಕ್ಷಿತವಾಗಿರಲು (Play it safe) ಬಯಸುತ್ತಾರೆ ಎಂಬುದನ್ನು ಇದು ತೋರಿಸುತ್ತದೆ. ಪ್ರಸ್ತುತ ಬ್ರಿಟನ್‌ನಲ್ಲಿ 'ಗ್ರೇ' ಅತ್ಯಂತ ಜನಪ್ರಿಯ ಬಣ್ಣವಾಗಿರುವುದು ಅಲ್ಲಿನ ಜನರ ಸಂಪ್ರದಾಯಬದ್ಧ ಮತ್ತು ಜಾಗರೂಕ ಮನಸ್ಥಿತಿಯನ್ನು ಸೂಚಿಸುತ್ತದೆ. 1960 ಮತ್ತು 70ರ ದಶಕಗಳಲ್ಲಿ ಬ್ರಿಟನ್‌ನಲ್ಲಿ ಕೆಂಪು ಮತ್ತು ನೀಲಿ ಬಣ್ಣದ ಕಾರುಗಳು ರಸ್ತೆಗಳಲ್ಲಿ ರಾರಾಜಿಸುತ್ತಿದ್ದವು. ಇದು 'ಸ್ವಿಂಗಿಂಗ್ ಸಿಕ್ಸ್ಟೀಸ್' ಕಾಲ. ಸಂಗೀತ, ಫ್ಯಾಷನ್ ಮತ್ತು ಕಲೆಗಳಲ್ಲಿ ಬ್ರಿಟನ್ ಹೊಸ ಎತ್ತರಕ್ಕೇರುತ್ತಿತ್ತು. ಜನರ ಜೀವನದಲ್ಲಿ ಉತ್ಸಾಹವಿತ್ತು, ಅವರು ಎದ್ದು ಕಾಣಲು ಬಯಸುತ್ತಿದ್ದರು. ಹಳದಿ ಅಥವಾ ಗಾಢ ಕೆಂಪು ಬಣ್ಣದ ಕಾರುಗಳು ಅಂದಿನ ಜನರ ಆಶಾವಾದಿ ಮತ್ತು ಬಂಡಾಯದ ಮನಸ್ಥಿತಿಯನ್ನು ಪ್ರತಿನಿಧಿಸುತ್ತಿದ್ದವು. 2010ರ ನಂತರ ಬಿಳಿ ಬಣ್ಣದ ಕಾರುಗಳ ಸಂಖ್ಯೆ ಹಠಾತ್ ಏರಿಕೆಯಾಯಿತು. ಐಫೋನ್ ಮತ್ತು ಆಧುನಿಕ ಗೆಜೆಟ್‌ಗಳ ಪ್ರಭಾವದಿಂದ 'ಬಿಳಿ' ಬಣ್ಣವು ಸ್ವಚ್ಛತೆ, ತಂತ್ರಜ್ಞಾನ ಮತ್ತು ನಾವೀನ್ಯದ ಸಂಕೇತವಾಯಿತು. ಬ್ರಿಟಿಷರು ತಂತ್ರಜ್ಞಾನದ ಕಡೆಗೆ ಹೆಚ್ಚು ಒಲವು ತೋರುತ್ತಿರುವುದನ್ನು ಮತ್ತು ಸರಳತೆಯತ್ತ ಸಾಗುತ್ತಿರುವುದನ್ನು ಇದು ಬಿಂಬಿಸುತ್ತದೆ. ಪ್ರಸ್ತುತ ಬ್ರಿಟನ್‌ನಲ್ಲಿ ಪರಿಸರ ಮಾಲಿನ್ಯದ ಬಗ್ಗೆ ಜಾಗೃತಿ ಹೆಚ್ಚುತ್ತಿದೆ. ಈ 'ಹಸಿರು ಮನಸ್ಥಿತಿ' ಕಾರುಗಳ ಆಯ್ಕೆಯಲ್ಲೂ ಬದಲಾವಣೆ ತರುತ್ತಿದೆ. ಜನರು ಈಗ ಪರಿಸರಸ್ನೇಹಿ ವಾಹನಗಳನ್ನು ಪ್ರದರ್ಶಿಸಲು 'ಅರ್ಥಿ ಟೋನ್ಸ್' (Earthier tones) ಅಥವಾ ಪ್ರಕೃತಿಗೆ ಹತ್ತಿರವಾದ ಬಣ್ಣಗಳನ್ನು ಇಷ್ಟಪಡುತ್ತಿದ್ದಾರೆ. ಇದು ಹವಾಮಾನ ಬದಲಾವಣೆಯ ಬಗ್ಗೆ ಬ್ರಿಟನ್ ಹೊಂದಿರುವ ಕಳಕಳಿಯನ್ನು ತೋರಿಸುತ್ತದೆ. ಬ್ರಿಟನ್ನ ಕಾರುಗಳ ಬಣ್ಣದ ಇತಿಹಾಸವನ್ನು ಗಮನಿಸಿದರೆ, ದೇಶವು ಆರ್ಥಿಕವಾಗಿ ಸದೃಢವಾಗಿದ್ದಾಗ ಮತ್ತು ಜನರು ಸಂತೋಷವಾಗಿದ್ದಾಗ ರಸ್ತೆಗಳು ಬಣ್ಣಬಣ್ಣವಾಗಿರುತ್ತವೆ. ಆದರೆ ಆರ್ಥಿಕ ಒತ್ತಡ ಅಥವಾ ಸಾಮಾಜಿಕ ಗೊಂದಲಗಳಿದ್ದಾಗ ಜನರು ಬೂದು ಅಥವಾ ಕಪ್ಪು ಬಣ್ಣದಂಥ 'ಗಂಭೀರ' ಬಣ್ಣಗಳಿಗೆ ಮೊರೆ ಹೋಗುತ್ತಾರೆ. ಹೀಗೆ, ಕಾರಿನ ಬಣ್ಣಗಳು ಬ್ರಿಟಿಷ್ ಸಮಾಜದ ಒಂದು ಅನಧಿಕೃತ 'ಮನಸ್ಥಿತಿ ಮಾಪಕ'ವಾಗಿ ಕೆಲಸ ಮಾಡುತ್ತವೆ. ಬ್ರಿಟನ್ ಮತ್ತು ಭಾರತ-ಎರಡೂ ದೇಶಗಳ ಕಾರು ಮಾರುಕಟ್ಟೆಯಲ್ಲಿ ಕೆಲವು ಸಾಮ್ಯತೆಗಳಿದ್ದರೂ, ಬಣ್ಣಗಳ ಆಯ್ಕೆಯ ಹಿಂದಿರುವ ಕಾರಣಗಳು ಸಂಪೂರ್ಣವಾಗಿ ಭಿನ್ನವಾಗಿವೆ. ಬ್ರಿಟನ್‌ನಲ್ಲಿ ಬಣ್ಣವು 'ರಾಷ್ಟ್ರೀಯ ಮನಸ್ಥಿತಿ' ಮತ್ತು 'ಆರ್ಥಿಕ ಭದ್ರತೆ'ಯನ್ನು ಬಿಂಬಿಸಿದರೆ, ಭಾರತದಲ್ಲಿ ಅದು 'ಹವಾಮಾನ', 'ಧಾರ್ಮಿಕ ನಂಬಿಕೆ' ಮತ್ತು 'ಪ್ರಾಯೋಗಿಕತೆ'ಯನ್ನು ಅವಲಂಬಿಸಿದೆ. ಬ್ರಿಟನ್‌ನಲ್ಲಿ ಕಾರಿನ ಬಣ್ಣಗಳು ಕಾಲಕಾಲಕ್ಕೆ ಬದಲಾಗುವ ದೇಶದ 'ಮೂಡ್' ಅನ್ನು ಬಿಂಬಿಸಿದರೆ, ಭಾರತದಲ್ಲಿ 'ಬಿಳಿ ಬಣ್ಣ' ಎಂಬುದು ಒಂದು ಕಾಲಾತೀತ ಆಯ್ಕೆಯಾಗಿದೆ. ಬ್ರಿಟಿಷರು ತಮ್ಮ ಭಾವನೆಗಳನ್ನು ಬಣ್ಣಗಳ ಮೂಲಕ ವ್ಯಕ್ತಪಡಿಸಲು ಇಷ್ಟಪಟ್ಟರೆ, ಭಾರತೀಯರು ತಮ್ಮ ಬದ್ಧತೆ, ಆರ್ಥಿಕ ಜಾಣ್ಮೆ ಮತ್ತು ಹವಾಮಾನಕ್ಕೆ ತಕ್ಕ ಬದುಕನ್ನು ಬಿಳಿ ಬಣ್ಣದ ಮೂಲಕ ಕಂಡುಕೊಳ್ಳುತ್ತಾರೆ.

# ಜ್ಞಾನದಿಂದ ವಿಜ್ಞಾನದೆಡೆಗೆ ಹೊರಳುತ್ತಿದೆಯೇ ಸೈನ್ಸ್?

ಶಿಶಿರಕಾಲ

ಶಿಶಿರ್ ಹೆಗಡೆ
vveditoped@gmail.com

ದ ಸೈಂಟಿಸ್ಟ್, ಪಾಪ್ಯುಲರ್ ಸೈನ್ಸ್, ಸ್ಮಿತ್ಸೋನಿಯನ್, ನ್ಯಾಷನಲ್ ಜಿಯೋಗ್ರಾಫಿಕ್ ಮತ್ತು ಡಿಸ್ಕವರ್ ಮ್ಯಾಗಜಿನ್. ಇವು ಇಂದಿನ ವಿಜ್ಞಾನ ಜಗತ್ತಿನ ಪ್ರತಿಷ್ಠಿತ ಪತ್ರಿಕೆಗಳು. ಪಂಚರತ್ನಗಳು. ವಿಜ್ಞಾನಿಗಳು, ವಿಜ್ಞಾನಿಯಾಗ ಬಯಸುವವರು, ವಿಜ್ಞಾನ ಕುತೂಹಲಿಗಳು ಈ ಪತ್ರಿಕೆಗಳ ಮೇಲೆ ಕಣ್ಣಿಟ್ಟಿರುತ್ತಾರೆ. ಇವುಗಳಿಂದ ಹೊಸ ಆವಿಷ್ಕಾರ, ಇತರೆ ವಿಜ್ಞಾನಕ್ಕೆ ಸಂಬಂಧಿಸಿದ ಸುದ್ದಿಗಳು ತಿಳಿಯುತ್ತವೆ. ಅಷ್ಟೇ ಅಲ್ಲದೆ, ಆಧುನಿಕ ವಿಜ್ಞಾನ ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎನ್ನುವುದರ ದೊಡ್ಡ ಹೊಡೆತದ ಅಂದಾಜು ಸಾಧ್ಯವಾಗುತ್ತದೆ. ಹೇಗೆ ಫ್ಯಾಷನ್, ಕ್ರೀಡೆ, ರಾಜಕೀಯ ಮೊದಲಾದ ವಿಷಯಗಳ ಪತ್ರಿಕೆಗಳು ಅವುಗಳ ದಿಶೆಯನ್ನು ಹೇಳುತ್ತವೆಯೋ ಹಾಗೆಯೇ ವಿಜ್ಞಾನಕ್ಕೆ ಈ ಪತ್ರಿಕೆಗಳು.

ವಿಜ್ಞಾನ ನಿಂತ ನೀರಾಗುವಂತಿಲ್ಲ, ಕಳೆದ, ಅದರಲ್ಲೂ ಹತ್ತು ವರ್ಷದಿಂದೀಚೆ ಆಧುನಿಕ ವಿಜ್ಞಾನ ಬಹಳಷ್ಟು ಬದಲಾಗಿದೆ. ಕೆಲವು ವಿಷಗಳನ್ನು ಇಂದಿನ ವಿಜ್ಞಾನ ಯೋಚಿಸುವ ರೀತಿಯೇ ಬದಲಾಗಿದೆ. ವಿಸ್ತಾರಗೊಂಡಿದೆ. ಮೊದಲು ಹೇಗಿತ್ತು? ಕಳೆದ ಒಂದು ಶತಮಾನದಲ್ಲಿ ಬೆಳೆದು ಬಂದ ವಿಜ್ಞಾನ – ವೆಸ್ಟರ್ನ್ ಸೈನ್ಸ್ – ಯಾವುದು ಕಾಣಿಸುತ್ತದೆಯೋ ಅಥವಾ ಲೆಕ್ಕ ಮಾಡಲು ಸಾಧ್ಯವೋ ಅದನ್ನಷ್ಟೇ ನಂಬುತ್ತಿತ್ತು, ಒಪ್ಪುತ್ತಿತ್ತು. ಆಧುನಿಕ ವಿಜ್ಞಾನ ಇಷ್ಟು ಕಾಲ ಕೆಲವು ಉತ್ತರಿಸಲಾಗದ ಪ್ರಶ್ನೆಗಳನ್ನು "Big Questions' ಎಂದು ಪಕ್ಕಕ್ಕಿಟ್ಟುಬಿಟ್ಟಿತ್ತು. ಆದರೆ ಅವೆಲ್ಲ ಇತ್ತೀಚೆ ಬದಲಾಗಿದೆ, ವಿಜ್ಞಾನದ ಕೆಲವು ವಿಷಯಗಳಲ್ಲಿ ದಿಕ್ಕನ್ನೇ ಬದಲಿಸಿಬಿಟ್ಟಿದೆ.

ಆಧುನಿಕ ವಿಜ್ಞಾನ ಬಗೆಹರಿಯದೆ ಬದಿಗಿಟ್ಟಿದ್ದ ಅಂತಹ ದೊಡ್ಡ ಪ್ರಶ್ನೆಗಳಲ್ಲಿ consciousness – ಪ್ರಜ್ಞೆ, ಚೇತನ ಕೂಡ ಒಂದು. ನೀವು ಈ ಲೇಖನವನ್ನು ಈಗ ಓದುತ್ತಿದ್ದೀರಿ. ಇಲ್ಲಿನ ಶಬ್ದಗಳನ್ನು , ಅದು ಮೂಡಿದ ಹಿನ್ನೆಲೆಯಿಂದ ಪ್ರತ್ಯೇಕಿಸಿ, ನೆನಪುಗಳಿಂದ ಇಂತಿಂಥ ಅಕ್ಷರ, ಅದೋ ಜೋಡಿಸಿ ಇಂತಿಂತಹ ಶಬ್ದಕ್ಕೆ ಇಂತಿಂತಹ ಅರ್ಥ ಎಂದು ತಲೆಯಲ್ಲಿ ಇವೆಲ್ಲ ಪ್ರೋಸೆಸ್ – ವಿಷಯ ಸಂಸ್ಕರಣೆ ನಡೆಯುತ್ತಿದೆ. ಇದರ ನಡುವೆ ಒಂದು ಕ್ಷಣ ಗಮನ ಇನ್ನೆಲ್ಲಿಗೋ ಹೋಗಿಬಂದಿರುತ್ತದೆ. ಇನ್ಯಾವುದೋ ಆಲೋಚನೆ ಫಕ್ಕನೆ ಸರಿದುಹೋಗುತ್ತದೆ. ಓಹ್ ಈ ಲೇಖನದ ವಿಷಯ ಇದು' ಎಂದು ನಿಮಗೆ ತಿಳಿದಿದ್ದೇನೋ ಊಹೆ, ನೆನಪಾಗುತ್ತದೆ. ಅದೇ ಸಮಯದಲ್ಲಿ ಕೈಯಲ್ಲಿ ಕಾಫಿ ತಟ್ಟೆಯಿದ್ದರೆ ಅದರ ಬಿಸಿ, ಫ್ಯಾನಿನ ಗಾಳಿ, ಅಲ್ಲೆಲ್ಲಿಯೂ ಯಾರದೋ ಧ್ವನಿ. ಹೀಗೆ. ಈ ಎಲ್ಲಾ ಗ್ರಹಿಕೆಯ ಪ್ರಕ್ರಿಯೆ – ನೋಡುವುದು, ಅರ್ಥೈಸುವುದು, ವಿಚಾರ ಪಲ್ಲಟಗಳು, ಮತ್ತೆ ಗಮನ ಈ ಲೇಖನದ ವಿಚಾರಕ್ಕೆ ಮರಳುವುದು. ಈ ಎಲ್ಲದರ ಸಂಯೋಗ ಒಂದು ಅನುಭವವಾಗುವ – ನಿರಂತರ ಜೀವ ಪ್ರಜ್ಞೆ. ಇಲ್ಲಿ ಪ್ರಜ್ಞೆ ಎಂದರೆ ವಿಚಾರ ಅಲ್ಲ, ಸಮಸ್ಯೆ, ಲೆಕ್ಕ ಬಗೆಹರಿಸುವ ಬುದ್ಧಿವಂತಿಕೆ ಅಲ್ಲ – ಅದನ್ನು ಕಂಪ್ಯೂಟರ್ ಕೂಡ ಮಾಡುತ್ತದೆ. ಏಕಾಗ್ರತೆಯೂ ಅಲ್ಲ, ನೆನಪು ಕೂಡ ಅಲ್ಲ. ಅವೆಲ್ಲವೂ ಪ್ರಜ್ಞೆಯ ಮೂಲಕ ನಮ್ಮ ಅನುಭವಕ್ಕೆ ಬರುವವು. ಹಾಗಾದರೆ ಪ್ರಜ್ಞಾಹೀನ 'ಸ್ಥಿತಿ' ಎಂದರೆ? ಅದನ್ನು ಇಲ್ಲಿ ನಿಮ್ಮ ಯೋಚನೆಗೆ ಬಿಡುತ್ತೇನೆ.

ಇಷ್ಟು ಕಾಲದ ವಿಜ್ಞಾನಕ್ಕೆ, fMRI ಮೊದಲಾದ ತಂತ್ರಜ್ಞಾನಗಳ ಸಹಾಯದಿಂದ ಯಾವ ಕ್ರಿಯೆ ಮಿದುಳಿನ ಯಾವ ಭಾಗದಲ್ಲಾಗುತ್ತದೆ ಎಂಬುದಷ್ಟೇ ತಿಳಿದಿತ್ತು. ಇದು ಹೇಗೆಂದರೆ – ವ್ಯಕ್ತಿಯನ್ನು ಕಗ್ಗತ್ತಲೆಯಲ್ಲಿ ಕೂರಿಸುವುದು, ನಂತರ ಕಣ್ಣಿಗೆ ಬೆಳಕು ಬಿಡುವುದು. ಆಗ ಮೆದುಳಿನ ಯಾವ ಭಾಗದಲ್ಲಿ ರಾಸಾಯನಿಕ ಮತ್ತು ವಿದ್ಯುತ್ ಪ್ರಕ್ರಿಯೆಗಳು ನಡೆಯುತ್ತವೆ ಎನ್ನುವುದನ್ನು ಸ್ಕ್ಯಾನಿಂಗ್ ಮೂಲಕ ಗ್ರಹಿಸುವುದು. ದೃಷ್ಟಿ ಈ ಭಾಗದಲ್ಲಿ, ಶ್ರಾವಣ ಇಲ್ಲಿ, ಹೆದರಿಕೆ ಅಲ್ಲಿ – ಹೀಗೆ. ಬೆಂಗಳೂರಿನ ಬಾನೆತ್ತರದಲ್ಲಿ ಡ್ರೋನ್ ಹಾರಿಸಿ ಯಾವ ಬಿಲ್ಡಿಂಗ್ ಲೈಟ್ ಹಾಕಿದೆ, ಯಾವುದು ಹಾಕಿಲ್ಲ ಎಂದು ನೋಡಿದಂತೆ. ಇವು ತಂತ್ರಜ್ಞಾನ ಬಳಸಿ ಗ್ರಹಿಸಬಹುದಾದ ಕ್ರಿಯೆಗಳು. ಆದರೆ ಇವೆಲ್ಲವೂ ಭೌತಿಕ ಕ್ರಿಯೆಗಳು. ಅವು ನಮ್ಮ ಜೀವ ಅನುಭವವಾಗುವುದು ಹೇಗೆ? ಪ್ರಜ್ಞೆ ಮೆದುಳಿನ ಸಮಗ್ರ ಗ್ರಹಿಕೆಯೇ? ಹಾಗಾದರೆ ಆ ನಿಯಮಗಳು ಇರುವುದು ಎಲ್ಲಿ? ಅದು ಸಂಭವಿಸುವುದು ಎಲ್ಲಿ? ಇಷ್ಟು ಕಾಲ ವಿಜ್ಞಾನ ತನಗಿದ್ದ ತಾಂತ್ರಿಕ ಕೊರತೆಗಳಿಂದಾಗಿ ಪ್ರಜ್ಞೆ ಎನ್ನುವುದು ನಮ್ಮ ಭ್ರಮೆ ಎಂದು ಸುಮ್ಮನಾಗಿತ್ತು.

ಈಗ, ಅದರಲ್ಲೂ ಕಳೆದ ದಶಕದಲ್ಲಿ ಮೆದುಳಿನ ಸ್ಕ್ಯಾನಿಂಗ್ & fMRI, PET, MEG, TMS ಎಂಬಿತ್ಯಾದಿ ಏನೇನೋ ತಂತ್ರಜ್ಞಾನಗಳು ಅಸಾಮಾನ್ಯ ಪ್ರಗತಿಹೊಂದಿವೆ. ಇದರಿಂದಾಗಿ ಏನಾಯ್ತು? ಇಷ್ಟು ಕಾಲ ಮೆದುಳಿನ ಬಿಡಿಭಾಗಗಳ ಅಭ್ಯಾಸವಷ್ಟೇ ಸಾಧ್ಯವಾಗಿತ್ತು. ಈ ಮೆದುಳಿನ ಬಿಡಿಭಾಗಗಳು ಭಾಗಗಳು ಹೇಗೆ ಒಂದು ವ್ಯವಸ್ಥೆಯಾಗಿ ಕೆಲಸ ಮಾಡುತ್ತವೆ ಎನ್ನುವುದನ್ನು ತಿಳಿಯುವುದು ಸಾಧ್ಯವಾಗಿದೆ. ಇದನ್ನು ವಿಜ್ಞಾನಿಗಳು ಕರೆಯುವುದು default network. ಕನ್ನಡದಲ್ಲಿ ಮೆದುಳಿನ ನಿಯೋಜಿತ ಜಾಲ ಅನ್ನಬಹುದು. ಮೆದುಳಿನ ಬಿಡಿಭಾಗಗಳನ್ನು ಜೋಡಿಸುವ ವ್ಯವಸ್ಥೆ. ಜೋಡಿಸುವ ತಂತಿ – ವೈರ್‌ಗಳ ಮಾರ್ಗವನ್ನು ಪರೋಕ್ಷವಾಗಿ ಗ್ರಹಿಸುವುದು ಸಾಧ್ಯವಾಗಿದೆ. ಈ ಸಂಪರ್ಕ ವ್ಯವಸ್ಥೆಯಿಂದಲೇ ಸ್ವಪ್ರಜ್ಞೆ ಅಥವಾ ಆತ್ಮಪ್ರಜ್ಞೆ ಎನ್ನುವುದು ಸಾಧ್ಯವಾಗಿದೆ, ಪ್ರಜ್ಞೆ ಒಂದು ಭ್ರಮೆ ಅಲ್ಲ ಎನ್ನುವುದು ವೈಜ್ಞಾನಿಕವಾಗಿ ದೃಢಪಟ್ಟಿದೆ.

ಆದರೆ ಈ ಎಲ್ಲಾ ಕಥೆಯ ಹಣೆ – ಟ್ವಿಸ್ಟ್ ಇರುವುದೇ ಇಲ್ಲಿ. ಈ ಸಂಪರ್ಕ ವ್ಯವಸ್ಥೆ ಇದೆಯಲ್ಲ, ಅದು ವಿದ್ಯುತ್ ಇಲಾಖೆಯವರು ಎಳೆದಿಟ್ಟ ತಂತಿಯಂತಲ್ಲ. ಈ ಸಂಪರ್ಕಗಳು ಬದಲಾಗುತ್ತವೆ ! Neuroplasticity ಬಗ್ಗೆ ಕೇಳಿರಬಹುದು. ನಮಗಾದ ಅನುಭವಗಳಿಂದಾಗಿ, ಯೋಚನಾ ರೀತಿಯಿಂದಾಗಿ ಮೆದುಳಿಗೆ ಬದಲಾಗುವ, ಹೊಂದಿಕೊಳ್ಳುವ ಮತ್ತು ಬಿಡಿಭಾಗಗಳ ನಡುವಿನ ಸಂಪರ್ಕವನ್ನು ಬದಲಾಯಿಸಿಕೊಳ್ಳುವ ಸ್ವಸಾಮರ್ಥ್ಯ ಇದೆ. ಪ್ರತಿ ಬಾರಿ ಏನೋ ಒಂದು ಹೊಸತನ್ನು ಕಲಿತಾಗ, ಅಭ್ಯಾಸ ಮಾಡಿಕೊಂಡಾಗ, ಅಥವಾ ಒಂದೇ ರೀತಿ ಪುನಃಪುನಹ ಯೋಚಿಸುವುದರಿಂದ ಮೆದುಳಿನ ಕೋಶಗಳ ನಡುವಿನ ಸಂಪರ್ಕ ಬದಲಾಗುತ್ತದೆ. ಪುನಃ ಪುನಃ ಬಳಸಿದ ಮೆದುಳಿನ ಸಂಪರ್ಕಗಳು ಗಟ್ಟಿಗೊಳ್ಳುತ್ತ ಹೋಗುತ್ತವೆ. ಮತ್ತು ಬಳಸದ ಸಂಪರ್ಕಗಳು ಕ್ರಮೇಣ ಅಳಿಸಿಹೋಗುತ್ತವೆ. ಮನುಷ್ಯನ ಸ್ವಭಾವ, ಗುಣ, ಅಭ್ಯಾಸ, ಚಟ, ದುಶ್ಚಟ ಎಲ್ಲವಕ್ಕೂ ಇದು ತಾಳೆಯಾಗುತ್ತವೆ ನೋಡಿ. ಜತೆಯಲ್ಲಿ ಯಾರು ಬೇಕಾದರೂ ಪ್ರಯತ್ನಿಸಿದರೆ ಬದಲಾಗಬಹುದು, ನಮ್ಮ ಮೆದುಳು ಪ್ರತಿಕ್ರಿಯಿಸುವ, ಗ್ರಹಿಸುವ ರೀತಿಯನ್ನೇ ಬದಲಿಸಿಕೊಳ್ಳಬಹುದು ಎನ್ನುವುದು ವೈಜ್ಞಾನಿಕವಾಗಿ ಸಿದ್ಧವಾದ ಹಾಗೆ ಆಯಿತು. ಮಾನಸಿಕ ಬದಲಾಗುವುದು ಕೆಲವರಿಗಷ್ಟೇ ಸಿದ್ಧಿಸುವ ಕಲೆಯಲ್ಲ, ಬದಲಿಗೆ ಎಲ್ಲರ ಸಾಧ್ಯತೆ ಎನ್ನುವುದು ಕೂಡ ವಿಜ್ಞಾನಿಕವಾಗಿ, ಭೌತಿಕವಾಗಿ, ಸಿದ್ಧವಾದಂತಾಗಿದೆ.

ವಿಜ್ಞಾನ ಇಷ್ಟಕ್ಕೇ ಸುಮ್ಮನಾಗುವ ಜಾಯಮಾನದ್ದಲ್ಲವಲ್ಲ ! ಗುಂಡು ಹಾಕಿದವರ, ಪ್ರಜ್ಞೆ ತಪ್ಪಿದವರ, ಅನಸ್ತೇಷಿಯಾ ಕೊಟ್ಟವರ ಇತ್ಯಾದಿ ಬೇರೆ ಬೇರೆ ಮೆದುಳಿನ ಸ್ಥಿತಿಗಳನ್ನು ಅಭ್ಯಾಸಮಾಡಲಾಯಿತು. ಇವೆಲ್ಲವೂ ಮೆದುಳನ್ನು ಬಂದ್ ಮಾಡುತ್ತಿರಲಿಲ್ಲ. ಬದಲಿಗೆ ಮೆದುಳಿನ ಭಾಗಗಳು ಹಾಗೆಯೇ ಪ್ರತಿಕ್ರಿಯಿಸುತ್ತಿದ್ದವು, ಆದರೆ ಈ ಅಂತರ್ ಸಂಪರ್ಕ ಏರುಪೇರಾಗುವುದು ಕಾಣಿಸಿತು. ಅದುವೆ ನಶೆಯ ಅನುಭವ. ಹಾಗೆ ಎಡವಟ್ಟಾಗುವ ಸಂಪರ್ಕಗಳು ನಶೆ ಇಳಿದಂತೆ ಪುನಃ ಸ್ಥಾಪನೆಯಾಗಿ ಸಹಜಕ್ಕೆ ಮರಳಿದವು.

ಈಗ ವಿಜ್ಞಾನ ಇನ್ನೊಂದರ ಪ್ರಯೋಗದಲ್ಲಿ ತೊಡಗಿದೆ. ಸೈಕಾಡೆಲಿಕ್ಸ್ – Psychedelics. ಕೆಲವು ಅಣಬೆಗಳಲ್ಲಿ, ಗಿಡಮೂಲಿಕೆಗಳಲ್ಲಿನ ಪ್ರಕೃತಿ ಸಹಜ ರಾಸಾಯನಿಕಗಳಿಗೆ ಈ ಮೆದುಳಿನ ಸಂಪರ್ಕ ವ್ಯವಸ್ಥೆಯನ್ನೇ ಬದಲಿಸುವ ಶಕ್ತಿಯಿದೆ ಎನ್ನುವುದು ಇತ್ತೀಚಿನ ಗ್ರಹಿಕೆ . ಇದರರ್ಥ ನಮ್ಮ ಪ್ರಜ್ಞೆಯನ್ನೇ ಬದಲಿಸುವ ಶಕ್ತಿ ಅವಕ್ಕಿವೆ. ಬದಲಿಸುವುದು ಎಂದರೆ ಹೀಗೆ ವಿಚಾರ ಮಾಡುವವರು ಹಾಗೆ ವಿಚಾರ ಮಾಡುವುದು ಎನ್ನುವುದಕ್ಕೆ ಇದು ಸೀಮಿತವಲ್ಲ. ಕೆಲವೊಂದು ಸೈಕಾಡೆಲಿಕ್ ರಾಸಾಯನಿಕಗಳಿಗೆ ನಮ್ಮ ಪ್ರಜ್ಞೆಯ ವಿಸ್ತಾರವನ್ನು ಹೆಚ್ಚಿಸುವ, ಹೊಸ ನಮೂನೆಯ ಅಂತರ ಸಂಪರ್ಕ ಕೃತಕವಾಗಿ ಕಲ್ಪಿಸುವ & rewire ಮಾಡುವ ಶಕ್ತಿಯಿದೆ ಎನ್ನುವುದು ಇತ್ತೀಚಿನ ಆವಿಷ್ಕಾರ. ಆದರೆ ಇದೆಲ್ಲ ಕೇವಲ ಆವಿಷ್ಕರಿಸಿ ಬಿಟ್ಟರೆ ವಿಜ್ಞಾನ ವ್ಯರ್ಥವಾಗುತ್ತದೆಯಲ್ಲ! ಈಗ ಇಂತಹ ಕೆಲವು ವಸ್ತುಗಳನ್ನು, ರಾಸಾಯನಿಕವನ್ನು ಹೇಗೆ ಬಳಸಿಕೊಳ್ಳಬಹುದು ಎಂಬಿತ್ಯಾದಿ ಪ್ರಯೋಗಗಳು ಅಮೆರಿಕಾದ ಜಾನ್ ಹಾಪ್ಕಿನ್ಸ್, ಲಂಡನ್‌ನ ಇಂಪೀರಿಯಲ್ ಕಾಲೇಜ್ ಮೊದಲಾದ ಪ್ರತಿಷ್ಠಿತ ಪ್ರಯೋಗಶಾಲೆಗಳಲ್ಲಿ ಭರದಿಂದ ಸಾಗಿವೆ.

ಇದೆಲ್ಲ ಬೆಳವಣಿಗೆಗಳು ಪರಿಹರಿಸುವ ಉತ್ತರಗಳಿಗಿಂತ ಇನ್ನಷ್ಟು ಪ್ರಶ್ನೆಗಳನ್ನು ಮುಂದೆ ತಂದಿವೆ. ಪ್ರಾಣಿಗಳಲ್ಲೂ ಪ್ರಜ್ಞೆ ಇದೆ ಎಂದಾದರೆ ಅದು ಏಕೆ ಮತ್ತು ಹೇಗೆ ನಮಗಿಂತ ವಿಭಿನ್ನ? ಸಸ್ಯಗಳಿಗೂ ಪ್ರಜ್ಞೆ ಇದೆ. ಪ್ರಜ್ಞೆ ಮೆದುಳಿನಲ್ಲಿಯೇ ಇರುವುದೆಂದಾದರೆ ಸಸ್ಯಗಳಲ್ಲಿ ಅದು ಎಲ್ಲಿದೆ? ಇವೆಲ್ಲ ವಿತಂಡವಾದಗಳಲ್ಲ, ಆಧುನಿಕ ವಿಜ್ಞಾನ ಈ ಪ್ರಶ್ನೆಗಳ ಮೂಲಕ ನಿಧಾನವಾಗಿ ತನ್ನ ಪರಿಧಿಯನ್ನು ಇನ್ನಷ್ಟು ವಿಸ್ತರಿಸಿಕೊಳ್ಳುತ್ತಿದೆ. ವಿಜ್ಞಾನ ಆಧುನಿಕವಾಗಬೇಕಾದ ಅನಿವಾರ್ಯತೆಯಲ್ಲಿ ತನ್ನ ಕೆಲವು ಪೂರ್ವಾಗ್ರಹಗಳನ್ನು ಬಿಡಲೇಬೇಕಾದ ರಸ್ತೆ ತಿರುವಿನಲ್ಲಿ ನಿಂತಿದೆ.

ಪ್ರಜ್ಞೆ, ಮೆದುಳು ಈ ವಿಚಾರಗಳಲ್ಲಿ ಪಾಶ್ಚಾತ್ಯ ವಿಜ್ಞಾನ, ವಿಜ್ಞಾನಿಗಳು ಇಷ್ಟು ಕಾಲ ಕೆಲವೊಂದನ್ನು ಊಹಿಸಿ ಇದು ಹೀಗೆಯೇ ಎಂದು ಪ್ರತಿಪಾದಿಸಿಕೊಂಡು ನಿರ್ಲಕ್ಷಿಸಿದ್ದರು. ಜೀವ

ಚೇತನ, ಪ್ರಜ್ಞೆ ಎನ್ನುವುದನ್ನು ಮೊದಲು ಭ್ರಮೆ ಎಂದರು. ಆನಂತರ ಅದು ಭ್ರಮೆಯಾಗಲು ಸಾಧ್ಯವಿಲ್ಲ ಎಂದಾಕ್ಷಣ, ಮೆದುಳು ಉತ್ಪಾದಿಸುವ ಫಲಿತಾಂಶ ಎಂದರು. ಹೇಗೆ ಬೆಂಕಿಯಿಂದ ಶಾಖ ಬರುತ್ತದೆಯೋ ಹಾಗೆ ಎಂದೆಲ್ಲ ಸಮಜಾಯಿಷಿ ಕೊಟ್ಟರು. ಮೆದುಳಿನ ಸಂಪರ್ಕ ನಕ್ಷೆ ತಿಳಿದುಕೊಂಡುಬಿಟ್ಟರೆ ಪ್ರಜ್ಞೆಯ ರಹಸ್ಯವೂ ತಿಳಿದುಬಿಡುತ್ತದೆ ಎನ್ನುವುದು ವಾದ, ಪ್ರಯತ್ನವಾಗಿತ್ತು. ಇಲ್ಲಿ ಮಾಡಿದ್ದೆಲ್ಲ ತಪ್ಪು ಎನ್ನುತ್ತಿಲ್ಲ, ಅವರ ಮುಂದಿದ್ದ ಸಾಧ್ಯತೆಗಳಲ್ಲಿ ಇದೆಲ್ಲ ಹೀಗೆಯೇ ಗ್ರಹಿಸಬೇಕಾದ ಅನಿವಾರ್ಯತೆ ವಿಜ್ಞಾನಕ್ಕೆ ಇತ್ತು. ಈಗ ಈ ನ್ಯೂರೋ ಪ್ಲಾಸ್ಟಿಸಿಟಿ – ಬದಲಾಗುವ ಸಂಪರ್ಕ ವ್ಯವಸ್ಥೆ, ಮೆದುಳಿನ ಚಿತ್ರಣ ತಂತ್ರಜ್ಞಾನ, ಅನಸ್ತೇಷಿಯಾ, ಸೈಕಾಡೆಲಿಕ್ಸ್ ಮೊದಲಾದ ಸಂಶೋಧನೆಗಳಿಂದ ಹಿಂದೆ ನಂಬಿ ನಿಂತಿದ್ದ ಸಿದ್ಧಾಂತಗಳೆಲ್ಲ ತಲೆಕೆಳಗಾಗಿವೆ. ಹಿಂದಿನ ನಂಬಿಕೆಯ ಪ್ರಕಾರ ಎಲ್ಲರೂ ಹುಟ್ಟುವಾಗಲೇ ಪೂರ್ವನಿಯೋಜಿತ ಮೆದುಳಿನ ಅಂತರ್ ಸಂಪರ್ಕ ಹೊಂದಿ ಹುಟ್ಟುತ್ತಾರೆ ಎಂಬ ದೃಷ್ಟಿಕೋನವೇ ಈಗ ಬದಲಾಗಿದೆ.

ಸಾಮಾನ್ಯವಾಗಿ ವಿಜ್ಞಾನ ಜಗತ್ತಿನಲ್ಲಿ ಈ ರೀತಿ ದೃಷ್ಟಿಕೋನವೇ ಬದಲಾಗುವುದು ವಿರಳಾತಿ ವಿರಳ. ಯಾವುದೇ ಆವಿಷ್ಕಾರವನ್ನೇ ತೆಗೆದುಕೊಳ್ಳಿ, ಯಾವುದೇ ವಿಜ್ಞಾನದ ಗ್ರಹಿಕೆಯನ್ನೇ ತೆಗೆದುಕೊಳ್ಳಿ, ಅವೆಲ್ಲವೂ ಕಾಲ ಕಳೆದಂತೆ ಇನ್ನಷ್ಟು ಬೆಳೆಯುತ್ತ, ಅಭಿವೃದ್ಧಿ ಹೊಂದುತ್ತ ಸಾಗಿವೆ. ಆದರೆ ಮೆದುಳು ಮತ್ತು ಪ್ರಜ್ಞೆಯ ವಿಷಯದಲ್ಲಿ ಮಾತ್ರ ಹಾಗಾಗಿಲ್ಲ, ಇಲ್ಲಿ ಪೂರ್ಣ ದೃಷ್ಟಿಕೋನವೇ ಬದಲಾಗಿದೆ. ಹಿಂದಿನ ಮೆದುಳು ಮತ್ತು ಪ್ರಜ್ಞೆಯ ವಾದವನ್ನು ಮಾಡಿದ ವಿಜ್ಞಾನಿಗಳು ಈಗ ಮಾತಿಲ್ಲದೆ ಮೌನವಾಗಿದ್ದಾರೆ. ಹೊಸ ತಲೆಮಾರಿನ ವಿಜ್ಞಾನಿಗಳು ಹಿಂದಿನವರಂತೆ ಅಜ್ಜ ನೆಟ್ಟ ಆಲದಮರಕ್ಕೆ ಜೋತುಬೀಳುತ್ತಿಲ್ಲ. ವಿಜ್ಞಾನ ತನ್ನದೇ ಕೆಲವು ಮೂಢನಂಬಿಕೆಗಳಿಂದ ಹೊರಬರುತ್ತಿರುವುದು ತಡವಾದರೂ ಒಳ್ಳೆಯದು.

ನಮ್ಮ ಸನಾತನ ವಿಚಾರಗಳಲ್ಲಿ, ಸಾಂಪ್ರದಾಯಿಕ ಹಿಂದೂ ತತ್ತ್ವಶಾಸ್ತ್ರದಲ್ಲಿ, ವೇದ – ಗ್ರಂಥಗಳಲ್ಲಿ 'ಜ್ಞಾನ' ಮತ್ತು 'ವಿಜ್ಞಾನ' ಈ ಎರಡು ಶಬ್ದವನ್ನು ಬಹಳ ಜಾಗರೂಕತೆಯಿಂದ ಪ್ರತ್ಯೇಕಿಸಿ ಬಳಸುವುದನ್ನು ಕಾಣಬಹುದು. ಅಲ್ಲಿ ಜ್ಞಾನವೇ ಬೆಳೆದು, ವಿಶೇಷವಾಗಿ ವಿಜ್ಞಾನವಾಗುವುದಲ್ಲ, ವಿಜ್ಞಾನ ಎನ್ನುವುದು ವಿಶೇಷ ಜ್ಞಾನ ಹೌದು – ಆದರೆ ನಮ್ಮ ಇಂದಿನ ಕಲ್ಪನೆಯ ಮಾಡರ್ನ್ ಸೈನ್ಸ್ ಅಲ್ಲ, ಅಲ್ಲಿ 'ವಿಜ್ಞಾನ' ಶಬ್ದದ ಅರ್ಥವೇ ಬೇರೆ – ನಾವು ವಿಜ್ಞಾನ ಶಬ್ದವನ್ನು ಇಂದು ಪರಿಭಾವಿಸುವ ರೀತಿಯೇ ಬೇರೆ. ಅಲ್ಲಿ 'ಜ್ಞಾನ' ಎಂದರೆ ಒಂದು ವಿಷಯದ ಬಗ್ಗೆ ತಿಳಿದುಕೊಳ್ಳುವುದು. ಉದಾಹರಣೆಗೆ, ಬೆಂಕಿಯ ಬಗ್ಗೆ ಓದಿ, ಅದರ ಗುಣಗಳನ್ನು ಅರ್ಥಮಾಡಿಕೊಂಡು, ಇತರರಿಗೆ ಹೇಳಬಹುದು–ಅದು ಜ್ಞಾನ. ಆದರೆ ಅದರ ತಾಪವನ್ನು ನೇರವಾಗಿ ಅನುಭವಿಸುವುದು ಅಲ್ಲಿ ಹೇಳಿದ ವಿಜ್ಞಾನ'. ಉಪನಿಷತ್ತುಗಳು ಇದನ್ನು ಬಹಳ ಮಜವಾಗಿ, ಮತ್ತು ಅಷ್ಟೇ ನೇರವಾಗಿ ಹೇಳುತ್ತವೆ. ಅತಿ ಆಳವಾದ ಸತ್ಯವನ್ನು ಕೇವಲ ಚಿಂತನೆಯ ಮೂಲಕ ಅರಿತುಕೊಳ್ಳಲು ಸಾಧ್ಯವಿಲ್ಲ, ಏಕೆಂದರೆ ಆತ್ಮ (ಆತ್ಮನ್) ಎಂಬುದು ನಾವು ಅಧ್ಯಯನ ಮಾಡುವ ವಸ್ತುವಲ್ಲ–ಅದು ಅಧ್ಯಯನ ಮಾಡುವವನೇ. ಇಲ್ಲಿ ಆತ್ಮ ಎನ್ನುವ ವಿವರಣೆ ಪಶ್ಚಿಮದ ಸೋಲ್ (soul) ಅಲ್ಲ, ಆತ್ಮನ್ ಎಂದರೆ ಪ್ರಜ್ಞೆ – ವಿಜ್ಞಾನ ಈಗ ಹೇಳುತ್ತಿರುವ consciousness. ಆದ್ದರಿಂದ ನಾವು ಅದರಿಂದ ಹೊರಗೆ ನಿಂತು ಅದನ್ನು ಪರೀಕ್ಷಿಸಲು ಸಾಧ್ಯವಿಲ್ಲ ! ಭಗವದ್ಗೀತೆಯಲ್ಲಿ ಕೃಷ್ಣ ಈ ವ್ಯತ್ಯಾಸವನ್ನು ಸ್ಪಷ್ಟವಾಗಿ ಹೇಳುತ್ತಾನೆ. ಅರ್ಜುನನಿಗೆ ಅನುಭವಸಹಿತ ಜ್ಞಾನವನ್ನು (ಜ್ಞಾನಂ ಸ ವಿಜ್ಞಾನಂ) ನೀಡುವುದಾಗಿ ಹೇಳುತ್ತಾನೆ. ಅರ್ಥ ಸ್ಪಷ್ಟ: ಬೌದ್ಧಿಕ ಅರಿವು ಪೂರ್ಣವಾಗುವುದಿಲ್ಲ, ಅದು ನೇರ ಅನುಭವವಾಗಿ ರೂಪಾಂತರಗೊಂಡಾಗ ಮಾತ್ರ ಅದು ಸಂಪೂರ್ಣವಾಗುತ್ತದೆ. ತಲೆ, ಮಿದುಳು ಹೇಗೆ ಕೆಲಸಮಾಡುತ್ತದೆ ಎನ್ನುವುದು ಜ್ಞಾನ'. ಮನಸ್ಸಿನ ಆಚೆ ನಿಂತು ಅದರ ಮಂಗಾಟಗಳನ್ನು ಗ್ರಹಿಸುವುದು ವಿಜ್ಞಾನ' ! ನಮ್ಮ ಪುರಾಣ ಗ್ರಂಥಗಳಲ್ಲಿ ಎಲ್ಲೆಲ್ಲಿ ವಿಜ್ಞಾನ' ಶಬ್ದ ಬಳಕೆಯಿದೆಯೋ ಅಲ್ಲೆಲ್ಲ ಮನಸ್ಸು, ಧ್ಯಾನ, ಪ್ರಜ್ಞೆ ಇತ್ಯಾದಿಗಳಿಗೆ ಸಂಬಂಧಿಸಿದ್ದು ಎಂದು ತಿಳಿಯಬಹುದು. ಉದಾಹರಣೆಗೆ – ಕಾಶ್ಮೀರಿ ಶೈವ ಪರಂಪರೆಯ 112 ಧ್ಯಾನ ರೀತಿಯ ಹೆಸರು – ವಿಜ್ಞಾನ ಭೈರವ ತಂತ್ರ'. ಪ್ರಜ್ಞೆ – (consciousness) ಅನ್ನು ಗ್ರಹಿಸುವ ಭೈರವ ಹೇಳಿದ ತಂತ್ರಗಳು.

ಇವೆಲ್ಲ ಹೇಳಿದ್ದು, ಇದೆಲ್ಲ ಭಾರತದಲ್ಲಿ ಯಾವತ್ತೋ ಇತ್ತು, ಇಂದಿನ ಆಧುನಿಕ ವಿಜ್ಞಾನ' ಹೇಳುವ ಇದೆಲ್ಲ ನಮಗೆ ಯಾವತ್ತೋ ಗೊತ್ತಿತ್ತು ಎಂದು ಹೇಳಲಿಕ್ಕಲ್ಲ. ಅದೆಲ್ಲದರಿಂದ ಕವಡೆ ಕಾಸಿನ ಲಾಭ ನಮಗೆ ಇಲ್ಲ. ಆಧುನಿಕ ವಿಜ್ಞಾನವನ್ನು ಸಣ್ಣದಾಗಿ ಕಾಣುವುದು ಇಲ್ಲಿಯ ಉದ್ದೇಶವೇ ಅಲ್ಲ. ಮನುಷ್ಯನ ಯಾವ ಕಾಲದ, ಯಾವ ಜಾಗದ ಆವಿಷ್ಕಾರಗಳೂ ಸಣ್ಣ ಸಾಮಾನ್ಯದವಲ್ಲ. ಮೆದುಳೇ ಸೂಕ್ಷ್ಮ, ಇನ್ನು ಅದರ ನರಗಳು, ಅವುಗಳು ಮಿಡಿಯುವ ಎಲೆಕ್ಟ್ರಿಕ್ ಸಂಹವನಗಳು ಇವನ್ನೆಲ್ಲ ಅಭ್ಯಾಸ ಮಾಡುವುದು ಸಣ್ಣ ವಿಷಯವೇನ್ರಿ? ಅಲ್ಲವೇ ಅಲ್ಲ. ಇಲ್ಲಿ ಗ್ರಹಿಸಬೇಕಾದದ್ದು ಇಷ್ಟೆ – ಈ ವಿಷಯದಲ್ಲಿ ಆಧುನಿಕ ವಿಜ್ಞಾನ ತನ್ನ ನಿಲುವನ್ನು ಬದಲಿಸಿಕೊಂಡಿದೆ, ಇನ್ನಷ್ಟು ತೆರೆದುಕೊಳ್ಳುತ್ತಿದೆ. ಪಾಶ್ಚಾತ್ಯ ವಿಜ್ಞಾನಿಗಳು ಹಿಮಾಲಯ, ಟಿಬೆಟ್ ಅಲ್ಲಿಂದೆಲ್ಲ ಸನ್ಯಾಸಿಗಳನ್ನು, ಬುದ್ಧ ಬಿಕ್ಕುಗಳ ಮೆದುಳನ್ನು ಈ ಹೊಸ ತಂತ್ರಜ್ಞಾನದ ಅಡಿಯಲ್ಲಿ ಅಭ್ಯಾಸ ಮಾಡಲು ವಿಮಾನ ಟಿಕೆಟ್ ಕಳಿಸಿಕೊಳ್ಳುತ್ತಿದ್ದಾರೆ. ಇತ್ತೀಚೆ ಸನ್ಯಾಸಿ ಮಿಂಗ್ಯುರ್ ರಿಂಪೋಚೆ (Mingyur Rinpoche), ಶ್ರೀ. ಓಂ ಸ್ವಾಮಿ ಮೊದಲಾದ ಈ ತಲೆಮಾರಿನ ಸಾಧಕರು ಧ್ಯಾನದ ಮೂಲಕ ಮೆದುಳಿನ ಚಟುವಟಿಕೆಯನ್ನು ಮತ್ತು ಸಂಪರ್ಕಗಳನ್ನು ಬಯಸಿದಂತೆ ಬದಲಿಸಬಲ್ಲರು ಎನ್ನುವುದು ಈಗ ಪ್ರಾಯೋಗಿಕವಾಗಿ ದೃಢವಾಗಿದೆ.

ನಾವೆಲ್ಲರೂ ಆಧುನಿಕ ವಿಜ್ಞಾನವನ್ನು ಪಠ್ಯವಾಗಿ ಕಲಿತು ಬೆಳೆದವರು. ಹಾಗಾಗಿ ಆ ಸೈನ್ಸ್‌ನ ಜೊತೆಯಲ್ಲಿ ಕೆಲವು ನಂಬಿಕೆಗಳು ಸಹಜವಾಗಿ ಬಂದಿವೆ. ಈಗ ಆ ನಂಬಿಕೆಗಳನ್ನು ವಿಜ್ಞಾನ ಬದಲಿಸಿಕೊಂಡಿದೆ. ನಾವು ನಮ್ಮ ವಿಜ್ಞಾನವನ್ನು ಸರಿಮಾಡಿಕೊಳ್ಳದಿದ್ದಲ್ಲಿ ನಾವು ವಿಜ್ಞಾನದ ಹಿಂದಿನ ಮೂಢನಂಬಿಕೆಯಲ್ಲಿಯೇ ಉಳಿದುಹೋಗುತ್ತೇವೆ.

# ಇರಾನ್ ಯುದ್ಧದ ಪರಿಣಾಮಗಳನ್ನು ಭಾರತ ಹೇಗೆ ಎದುರಿಸುತ್ತಿದೆ?

ಮನಿಮೈಂಡೆಡ್

ಕೇಶವ ಪ್ರಸಾದ್ ಬಿ.
vveditoped@gmail.com

ಅಮೆರಿಕದಲ್ಲಿ ಪೆಟ್ರೋಲ್ ಅನ್ನು 'ಗ್ಯಾಸೊಲಿನ್' ಎಂದು ಕರೆಯುತ್ತಾರೆ. ಆದ್ದರಿಂದ ನಮ್ಮಲ್ಲಿ ಅನೇಕ ಮಂದಿಗೆ ಅಮೆರಿಕದಲ್ಲಿ ಗ್ಯಾಸೋಲಿನ್ ದರ ಏರಿದೆಯಂತೆ ಎಂದರೆ ಏನೆಂದು ಅರ್ಥವಾಗಲಿಕ್ಕಿಲ್ಲ. ನಾಲ್ಕು ವರ್ಷಗಳ ಬಳಿಕ ಟ್ರಂಪ್ ಆಳ್ವಿಕೆಯಲ್ಲಿ ಅಮೆರಿಕದಲ್ಲೂ ಪೆಟ್ರೋಲ್ ದರದಲ್ಲಿ 4 ಡಾಲರ್ ಏರಿಕೆಯಾಗಿದೆ. ಡೀಸೆಲ್ ದರವೂ ಅಲ್ಲಿ 1.70 ಡಾಲರ್ ಹೆಚ್ಚಳವಾಗಿದೆ ಎಂದು ಬಿಬಿಸಿ ವರದಿ ತಿಳಿಸಿದೆ. ಜಗತ್ತಿನಲ್ಲೇ ಹೆಚ್ಚು ಕಚ್ಚಾ ತೈಲವನ್ನು ಉತ್ಪಾದಿಸುವ ಅಮೆರಿಕದಲ್ಲಿಯೇ 2022ರ ಬಳಿಕ ಮೊದಲ ಬಾರಿಗೆ ಈಗ ದರ ಏರಿಕೆಯಾಗಿದೆ!

2026ರ ಫೆಬ್ರವರಿ 28ಕ್ಕೆ ಇರಾನ್ ವಿರುದ್ಧ ಅಮೆರಿಕ- ಇಸ್ರೇಲ್ ಸೇನಾಪಡೆ ಯುದ್ಧ ಆರಂಭಿಸಿ ಒಂದು ತಿಂಗಳೇ ಆಯಿತು. ಈಗಲೂ ಸಮರ ಅಂತ್ಯವಾಗಿಲ್ಲ. ಇದರ ಪರಿಣಾಮವಾಗಿ ಈ ಸಂಘರ್ಷದಲ್ಲಿ ನೇರವಾಗಿ ಭಾಗವಹಿಸದಿದ್ದರೂ, ತೈಲ ಮತ್ತು ಅನಿಲ ಆಮದು ಮಾಡಿಕೊಳ್ಳುವ ಎಲ್ಲ ದೇಶಗಳ ಮೇಲೆಯೂ ನಕಾರಾತ್ಮಕ ಪ್ರಭಾವ ಬೀರಿದೆ. ಭಾರತವಂತೂ ಮೂರನೇ ಅತಿ ದೊಡ್ಡ ತೈಲ ಆಮದು ರಾಷ್ಟ್ರ ಅಷ್ಟೊಂದು ಅವಲಂಬನೆ ಇದೆ.

ಗಮನಿಸಿ, ಜಗತ್ತಿನ ಕನಿಷ್ಠ 85 ದೇಶಗಳು ಈ ವರ್ಷ ಫೆಬ್ರವರಿಯಿಂದೀಚೆಗೆ ಪೆಟ್ರೋಲ್–ಡೀಸೆಲ್ ದರ ಏರಿಸಿವೆ. ಅಮೆರಿಕ–ಯುರೋಪ್, ವಿಯೆಟ್ನಾಂ, ನೈಜೀರಿಯಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಇವುಗಳಲ್ಲಿ ಸೇರಿವೆ. ವಿಯೆಟ್ನಾಂನಲ್ಲಿ ತೈಲ ದರ ಶೇಕಡ 50 ಹೆಚ್ಚಳವಾಗಿದೆ. ಕಾಂಬೋಡಿಯಾದಲ್ಲಿ ಶೇಕಡ 68, ಲಾವೋಸ್‌ನಲ್ಲಿ ಶೇಕಡ 33, ಸಿಂಗಾಪುರದಲ್ಲಿ ಶೇಕಡ 16.3 ಹೆಚ್ಚಳವಾಗಿದೆ. ಜರ್ಮನಿಯಲ್ಲಿ ಶೇಕಡ 17, ಬ್ರಿಟನ್ ನಲ್ಲಿ ಶೇಕಡ 152 ಜಿಗಿದಿದೆ. ಟರ್ಕಿ, ಬ್ರೆಜಿಲ್, ಪಾಕಿಸ್ತಾನ, ಬಾಂಗ್ಲಾದೇಶದಲ್ಲೂ ದರ ಏರಿದೆ. ಆದರೂ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಭಾರತ ಸರಕಾರ ಜನ ಸಾಮಾನ್ಯರಿಗೆ ತೊಂದರೆ ಆಗಬಾರದು ಎಂದು ಪೆಟ್ರೋಲ್–ಡೀಸೆಲ್ ದರವನ್ನು ಏರಿಸಿಲ್ಲ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಯುದ್ಧ 2–3 ವಾರಗಳಲ್ಲಿ ಅಂತ್ಯವಾಗಲಿದೆ ಎಂದು ಘೋಷಿಸಿದ್ದಾರೆ.

ಅಮೆರಿಕದ ಮಿಲಿಟರಿ ಕಾರ್ಯಾಚರಣೆಗಳ ಉದ್ದೇಶ ಬಹುತೇಕ ಪೂರ್ಣವಾಗಿದೆ. ಮುಂದಿನ 2–3 ವಾರಗಳ ಕಾಲ ಇರಾನಿಗೆ ಬಲವಾದ ಹೊಡೆತ ನೀಡಲಿದ್ದೇವೆ. ಬಳಿಕ ಸಮರ ಸಮಾಪ್ತಿಯಾಗಲಿದೆ ಎಂದು ಹೇಳಿದ್ದಾರೆ. ಇರಾನ್ ನಲ್ಲಿ ಆಡಳಿತವನ್ನು ಬದಲಾವಣೆ ಮಾಡುವುದು ನಮ್ಮ ಉದ್ದೇಶವಾಗಿರಲಿಲ್ಲ. ಅದರ ಅಣ್ವಸ್ತ್ರ ಕಾರ್ಯಕ್ರಮಗಳನ್ನು ನಾಶಪಡಿಸುವುದು ಉದ್ದೇಶವಾಗಿತ್ತು. ಆದರೆ, ಇರಾನಿನ ಪ್ರಮುಖ ನಾಯಕರೆಲ್ಲ ಹತರಾಗಿರುವುದರಿಂದ ಆಡಳಿತದಲ್ಲಿ ಬದಲಾವಣೆ ತಾನಾಗಿಯೇ ಆಗಿದೆ. ಈಗಿನ ನಾಯಕರು ಹಳಬರಷ್ಟು ಕಟ್ಟರ್ ಮೂಲಭೂತವಾದಿಗಳು ಅಲ್ಲ ಎಂದು ಟ್ರಂಪ್ ಹೇಳಿದ್ದಾರೆ.

ಈ ಯುದ್ಧ ಮಾಡದಿರುತ್ತಿದ್ದರೆ ಇರಾನಿನ ಕ್ಷಿಪಣಿಗಳು ಶೀಘ್ರದಲ್ಲೇ ಅಮೆರಿಕಕ್ಕೆ ಅಪ್ಪಳಿಸುತ್ತಿದ್ದವು. ಇರಾನ್ ಅದಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನು ನಡೆಸಿತ್ತು ಎಂದು ಟ್ರಂಪ್ ಹೇಳಿದ್ದಾರೆ. ಈಗ ಇರಾನ್ ನ ನೌಕಾ ಪಡೆ, ವಾಯುಪಡೆ ನಿಷ್ಕ್ರಿಯವಾಗಿದೆ. ರೆವೆಲ್ಯೂಷನರಿ ಗಾರ್ಡ್ ವಿರುದ್ಧ ಹಿಂದೆಂದೂ ಕಂಡರಿಯದಷ್ಟು ಯುದ್ಧ ನಡೆದಿದೆ. ಯಾವ ಕಾರಣಕ್ಕೂ ಅದು ಅಣ್ವಸ್ತ್ರಗಳನ್ನು ಹೊಂದಬಾರದು. ಅದೇ ನಮ್ಮ ಗುರಿಯಾಗಿದೆ ಎಂದು ಹೇಳಿದ್ದಾರೆ.

ಇದೆಲ್ಲ ಸರಿ, ಆದರೆ ಯುದ್ಧದ ಪರಿಣಾಮಗಳು ಇದೀಗ ಇಡೀ ಜಗತ್ತನ್ನೇ ಕಾಡುತ್ತಿದೆ. ಸ್ಟಾಕ್ ಮಾರ್ಕೆಟ್‌ನಿಂದ ಆಟೊ ರಿಕ್ಷಾ ಗ್ಯಾಸ್ ತನಕ ಅಲ್ಲೋಲಕಲ್ಲೋಲವಾಗಿದೆ. ರಾಜರಾಜೇಶ್ವರಿ ನಗರದ ಮೆಟ್ರೊ ರೈಲ್ವೆ ಸ್ಟೇಷನ್‌ನಲ್ಲಿ ಯುದ್ಧಕ್ಕೂ ಮುನ್ನ ಏನಿಲ್ಲದಿದ್ದರೂ 30–40 ಆಟೋ ರಿಕ್ಷಾಗಳು ಸಾಲಾಗಿ ಸಿಗುತ್ತಿದ್ದವು. ಈಗ ಆಟೋ ಸ್ಟ್ಯಾಂಡ್ ನಲ್ಲಿ ಬೆರಳೆಣಿಕೆಯ ಆಟೋಗಳು ಮಾತ್ರ ಇವೆ. ಕೇಳಿದ್ರೆ, ಮೂರು ದಿನಗಳಿಂದ ಗ್ಯಾಸ್ ಸಿಗುತ್ತಿಲ್ಲ ಎನ್ನುತ್ತಾರೆ. ಇದೊಂದು ಪುಟ್ಟ ಉದಾಹರಣೆ ಮಾತ್ರ. ಯುದ್ಧ ಇನ್ನೂ ನಾಲ್ಕು ವಾರ ನಡೆದರೆ

ಪರಿಸ್ಥಿತಿ ಏನಾಗಬಹುದಪ್ಪಾ ಎಂಬ ಚಿಂತೆಯ ಗೆರೆಗಳು ಈಗ ಎಲ್ಲರ ಮುಖದಲ್ಲೂ ಮೂಡಿದೆ. ಟ್ರಾವೆಲ್ಸ್ ಮಾಲೀಕರು ಕಾರುಗಳು ಧೂಳು ತಿನ್ನುತ್ತಿವೆ ಎನ್ನುತ್ತಿದ್ದಾರೆ. ಹೋಟೆಲ್, ದರ್ಶಿನಿ ಮಾಲೀಕರು ಸೌದೆ ಒಲೆಯನ್ನು ಬಳಸಲು ಕಲಿಯುತ್ತಿದ್ದಾರೆ. ಹೊಸ ಸೌದೆ ಒಲೆಗಳಿಗೆ ಬೇಡಿಕೆ ಸೃಷ್ಟಿಯಾಗಿದೆ. ಎಲೆಕ್ಟ್ರಿಕ್ ಕಾರುಗಳ ಮಾರಾಟ ದಿನೇದಿನೇ ಹೆಚ್ಚುತ್ತಿದೆ. ಸೂಕ್ಷ್ಮವಾಗಿ ನೋಡಿದ್ರೆ, ಭಾರತೀಯರು ಇನ್ನು ಮುಂದೆ ಪೆಟ್ರೋಲಿಯಂ ಉತ್ಪನ್ನಗಳಿಗೆ ಪರ್ಯಾಯ ಯಾವುದು ಎಂಬುದರ ಬಗ್ಗೆ ಗಂಭೀರವಾಗಿ ಆಲೋಚಿಸಲು ಶುರು ಮಾಡಿದ್ದಾರೆ. ಸೌದೆ ಒಲೆಯಿಂದ ಹಿಡಿದು, ಗೋಬರ್ ಗ್ಯಾಸ್, ಸೋಲಾರ್, ಇಂಡಕ್ಷನ್ ಸ್ಟೌವ್, ಎಲೆಕ್ಟ್ರಿಕ್ ಕಾರು ಹೀಗೆ ಪಟ್ಟಿ ಮುಂದುವರಿದಿದೆ.

ಈಗಿನ ಸನ್ನಿವೇಶದಲ್ಲಿ ತಾತ್ಕಾಲಿಕ ಪರಿಹಾರ ಮತ್ತು ಶಾಶ್ವತ ಪರಿಹಾರ ಎರಡೂ ಅಗತ್ಯ. ಅದೇ ರೀತಿ ಇಂಧನ ಬಿಕ್ಕಟ್ಟಿನ ಬಗ್ಗೆ ಜನರ ಮಟ್ಟದಲ್ಲಿ ಜಾಗೃತಿಯ ಜತೆಗೆ ಸರಕಾರದ ಮಟ್ಟದಲ್ಲಿ ಕಾರ್ಯತಂತ್ರಗಳು ನಡೆಯಬೇಕಾಗಿದೆ.

ಭಾರತವು ತಾತ್ಕಾಲಿಕ ಪರಿಹಾರವಾಗಿ ರಷ್ಯಾ ಸೇರಿದಂತೆ 40 ಮೂಲಗಳಿಂದ ಕಚ್ಚಾ ತೈಲ ಮತ್ತು ಅನಿಲವನ್ನು ಆಮದು ಮಾಡಿಕೊಳ್ಳುತ್ತಿದೆ. ಕೊಲ್ಲಿ ರಾಷ್ಟ್ರಗಳ ಮೇಲಿನ ಅವಲಂಬನೆಯನ್ನು ಕ್ರಮೇಣ ಕಡಿಮೆ ಮಾಡುತ್ತಿದೆ. 2026ರ ಮಾರ್ಚ್‌ನಲ್ಲಿ ರಷ್ಯಾದಿಂದ ಅತಿ ಹೆಚ್ಚು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲಾಗಿದೆ. ರಷ್ಯಾದಿಂದ ದಿನಕ್ಕೆ 15 ಲಕ್ಷ ಬ್ಯಾರೆಲ್‌ಗೂ ಹೆಚ್ಚು ಕಚ್ಚಾ ತೈಲವನ್ನು ತರಿಸಿಕೊಳ್ಳಲಾಗಿದೆ. ಇರಾಕ್, ಸೌದಿ ಅರೇಬಿಯಾ, ಯುಎಇಯಿಂದ ಮಾರ್ಚ್‌ನಲ್ಲಿ ತೈಲ ಆಮದು 17 ಪರ್ಸೆಂಟ್ ತನಕ ಇಳಿಕೆಯಾಗಿದೆ. ಆದರೆ ಅಮೆರಿಕದಿಂದ 67 ಪರ್ಸೆಂಟ್ ಮತ್ತು ನೈಜೀರಿಯಾದಿಂದ 180 ಪರ್ಸೆಂಟ್ ಹೆಚ್ಚಳವಾಗಿದೆ. ಗಲ್ಫ್‌ನಿಂದ ತರಬಾರದು ಎಂದಲ್ಲ, ಈಗ ಹಾರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಮೂಲಕ ಪೂರೈಕೆ ಕುಸಿದಿದೆ. ಯಾವಾಗ ಸರಿ ಹೋಗಲಿದೆ ಎಂಬುದೂ ಅನಿಶ್ಚಿಯವಾಗಿದೆ. ಮೂರ್ನಾಲ್ಕು ವಾರಗಳಲ್ಲಿ ಸಮರ ಅಂತ್ಯವಾದರೂ, ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಲು ಮತ್ತಷ್ಟು ಕಾಲಾವಕಾಶ ಬೇಕಾದೀತು. ಅಲ್ಲಿಯವರೆಗೆ ವ್ಯವಸ್ಥೆ ಏನು? ಹೀಗಾಗಿ ಕೊಲ್ಲಿಯೇತರ ರಾಷ್ಟ್ರಗಳಿಂದ ಆಮದು ಹೆಚ್ಚಳವಾಗಿದೆ.

ಸ್ವಾರಸ್ಯವೇನೆಂದರೆ ಏಳು ವರ್ಷಗಳ ಬಳಿಕ ಭಾರತವು ಇರಾನ್ ನಿಂದ ಕಚ್ಚಾ ತೈಲ ಹೊತ್ತ ಟ್ಯಾಂಕರ್ ಅನ್ನು ತರಿಸಿಕೊಳ್ಳುತ್ತಿದೆ. ಅಮೆರಿಕದ ನಿರ್ಬಂಧದ ಪರಿಣಾಮ 2019ರ ಮೇ ನಂತರ ಇರಾನ್ ತೈಲ ಆಮದು ಬಂದ್ ಆಗಿತ್ತು. ಸುಮಾರು 6 ಲಕ್ಷ ಬ್ಯಾರಲ್ ಆಯಿಲ್ ಗುಜರಾತಿಗೆ ಬರುತ್ತಿದೆ.

ಪಶ್ಚಿಮ ಏಷ್ಯಾ ಸಂಘರ್ಷದ ಹೊರತಾಗಿಯೂ ಭಾರತವು ಪೆಟ್ರೋಲ್–ಡೀಸೆಲ್ ದರಗಳನ್ನು ಸ್ಥಿರವಾಗಿಟ್ಟಿದೆ. ಇದರ ಹಿಂದೆ ಸರಕಾರದ ನೀತಿಗಳು ಬೆಂಬಲವೂ ಇದೆ. ಕೇಂದ್ರ ಸರಕಾರವು ಸಾರ್ವಜನಿಕ ತೈಲ ಕಂಪನಿಗಳಿಗೆ ಅಬಕಾರಿ ಸುಂಕದಲ್ಲಿ ಪ್ರತಿ ಲೀಟರ್‌ಗೆ 10 ರುಪಾಯಿ ಕಡಿತಗೊಳಿಸಿದೆ. ಈ ಕಂಪನಿಗಳಿಗೆ (ಒಎಂಸಿ) ಭಾರಿ ಆಮದು ವೆಚ್ಚದ ಪರಿಣಾಮವಾಗಿ ದಿನಕ್ಕೆ 2,400 ಕೋಟಿ ರುಪಾಯಿ ನಷ್ಟವಾಗುತ್ತಿದೆ. ಆದರೆ ಇದರ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಲು ಸರಕಾರ ಆಸ್ಪದ ನೀಡಿಲ್ಲ. ಭಾರತದ ಬಳಿ ಎರಡು ತಿಂಗಳಿನ ಖರ್ಚಿಗೆ ಸಾಕಾಗುವಷ್ಟು ಕಚ್ಚಾ ತೈಲ ದಾಸ್ತಾನು ಇದೆ. ರಸಗೊಬ್ಬರ ಉತ್ಪಾದನೆಗೆ 70 ಪರ್ಸೆಂಟ್ ಅನಿಲ ಪೂರೈಸಲು ಸರಕಾರ ಆದ್ಯತೆ ನೀಡಿದೆ.

ನಿಜ, ಜಪಾನ್ ಬಳಿ 254 ದಿನಗಳ ಖರ್ಚಿಗೆ ಆಗುವಷ್ಟು ತೈಲ ದಾಸ್ತಾನು ಇದೆ. ಚೀನಾದ ಹತ್ತಿರ 3–4 ತಿಂಗಳಾಗುವಷ್ಟು ಇದೆ ಎಂದು ಕೆಲವರು ವಾದಿಸುತ್ತಾರೆ. ಆದರೆ ಜಪಾನ್ ಸಣ್ಣ ದೇಶ. ಅದರ ಜನಸಂಖ್ಯೆ ಕಡಿಮೆ. ಅದನ್ನು ಭಾರತದ ಜತೆಗೆ ತುಲನೆ ಮಾಡಲಾಗದು. ಚೀನಾದ ಬಳಿಯೂ ಭಾರತಕ್ಕಿಂತ ಒಂದೆರಡು ತಿಂಗಳು ಹೆಚ್ಚು ಮಿಗುವಷ್ಟು ದಾಸ್ತಾನಿದೆ. ವಿಶಾಖಪಟ್ಟಣಂ, ಮಂಗಳೂರು, ಪಾದೂರಿನಲ್ಲಿರುವ ತೈಲ ಸಂಗ್ರಹಣಾಗಾರಗಳು 2015ರಿಂದೀಚೆಗೆ ಪೂರ್ಣಗೊಂಡಿವೆ. ಒಂದು ವೇಳೆ ಇವುಗಳೂ ರೆಡಿಯಾಗದಿರುತ್ತಿದ್ದರೆ ಈಗ ಪರಿಸ್ಥಿತಿ ಚಿಂತಾಜನಕವಾಗಿರುತ್ತಿತ್ತು.

ಯುದ್ಧದ ಸಂದರ್ಭ ಹಲವು ತಂತ್ರಗಾರಿಕೆಯನ್ನು ಮಾಡಬೇಕಾಗುತ್ತದೆ. ಹಾರ್ಮುಜ್ ಜಲಸಂಧಿಯ ಬದಲಿಗೆ ರೆಡ್ ಸೀ ಮೂಲಕ ತರಿಸಿಕೊಳ್ಳಬಹುದು. ರಷ್ಯಾ, ಅಮೆರಿಕದಿಂದ ಮತ್ತಷ್ಟು ತೈಲ ಆಮದು ಮಾಡಿಕೊಳ್ಳಬಹುದು. ಇವೆಲ್ಲವೂ ತಾತ್ಕಾಲಿಕ ಉಪಕ್ರಮಗಳು. ಇವುಗಳ ಜತೆಗೆ ಬೃಹತ್ ತೈಲಸಂಗ್ರಹಗಾರಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಎಲೆಕ್ಟ್ರಾನಿಕ್ ವಾಹನಗಳ ಉತ್ಪಾದನೆಗೆ ಹೆಚ್ಚಿನ ಉತ್ತೇಜನ ಕೊಡಬೇಕು. ಗೋಬರ್ ಗ್ಯಾಸ್, ಸೋಲಾರ್ ಬಳಕೆಗೆ ನೆರವನ್ನು ಹೆಚ್ಚಿಸಬೇಕು.

ಭಾರತವು ಇತರ ಹಲವಾರು ಆರ್ಥಿಕತೆಗಳಿಗಿಂತಲೂ ಹೆಚ್ಚು ಚೆನ್ನಾಗಿ ಇರಾನ್ ಯುದ್ಧದ ಪರಿಣಾಮಗಳನ್ನು ನಿರ್ವಹಿಸುತ್ತಿದೆ ಎಂದು ಬಹುರಾಷ್ಟ್ರೀಯ ಸ್ಟ್ಯಾಂಡರ್ಡ್ ಆಂಡ್ ಚಾರ್ಟರ್ಡ್ ಬ್ಯಾಂಕ್‌ನ ಭಾರತೀಯ ವಿಭಾಗದ ಸಿಇಒ ಆಗಿರುವ ಪಿಡಿ ಸಿಂಗ್ ವಿಶ್ವಾಸದಿಂದ ಹೇಳುತ್ತಾರೆ. ಒಂದು ಸಲ ಯುದ್ಧ ಮುಗಿದು ಜಾಗತಿಕ ಆರ್ಥಿಕತೆ ಚೇತರಿಸುತ್ತಿದ್ದಂತೆ ಭಾರತ ಚಾಲಕ ಶಕ್ತಿಯಾಗಲಿದೆ ಎನ್ನುತ್ತಾರೆ ಸಿಂಗ್.

ಭಾರತದ ಆರ್ಥಿಕ ಬೆಳವಣಿಗೆ ಮತ್ತು ಸಾಧ್ಯತೆಗಳ ಬಗ್ಗೆ ರಿಟೇಲ್ ಹೂಡಿಕೆದಾರರಿಗೆ ಅಪಾರ ವಿಶ್ವಾಸ ಇದೆ ಎಂಬುದಕ್ಕೆ ಷೇರು ಮಾರುಕಟ್ಟೆಯ ಅಂಕಿ ಅಂಶಗಳೇ ನಿದರ್ಶನ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು 2025–26ರಲ್ಲಿ 1.6 ಲಕ್ಷ ಕೋಟಿ ರುಪಾಯಿಗಳನ್ನು ಹಿಂತೆಗೆದುಕೊಂಡಿದ್ದರೆ, ದೇಶೀಯ ಸಾಂಸ್ಥಿಕ ಹೂಡಿಕೆದಾರರು 8.5 ಲಕ್ಷ ಕೋಟಿ ರುಪಾಯಿಗಳ ಹೂಡಿಕೆ ಮಾಡಿದ್ದಾರೆ.ಭಾರತವು ತನ್ನ ವಿದೇಶಾಂಗ ನೀತಿಗಳಲ್ಲಿ ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳುವ ಸಾಮರ್ಥ್ಯ ಗಳಿಸಿದೆ. ಇದು ಸಕಾರಾತ್ಮಕ ಪ್ರಭಾವ ಬೀರಿದೆ. ಯಾವುದೇ ಸೂಪರ್ ಪವರ್ ಅಥವಾ ಒಕ್ಕೂಟಗಳಿಗೆ ಭಾರತ ಸೇರಿಲ್ಲ, ತನ್ನ ಹಿತಕ್ಕೆ ಬೇಕಾಗುವ ನಿರ್ಣಯಗಳನ್ನು ದೇಶ ಕೈಗೊಂಡಿದೆ. ಹಾಗಂತ ತನಗೂ ಲೋಕದ ವಿದ್ಯಮಾನಗಳಿಗೂ ಸಂಬಂಧವೇ ಇಲ್ಲ ಎಂಬಂತೆ ದೂರ ಸರಿದೂ ನಿಂತಿಲ್ಲ. ಒಂದಿಲ್ಲೊಂದು ವಿಧದಲ್ಲಿ ವಿಶ್ವಸಮುದಾಯದ ಆಗುಹೋಗುಗಳಲ್ಲಿ ತೊಡಗಿಸಿಕೊಂಡು ಕ್ರಿಯಾಶೀಲವಾಗಿದೆ. ನೆರೆಯ ಶ್ರೀಲಂಕಾ, ಬಾಂಗ್ಲದೇಶಕ್ಕೂ ತುರ್ತು ಸಂದರ್ಭದಲ್ಲಿ ತೈಲ ಕೊಟ್ಟು ಸಹಕರಿಸಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಆದ್ಯತೆಯ ಮೇರೆಗೆ ಈಗ ದೇಶದಲ್ಲಿ ನಡೆಯುತ್ತಿರುವ ಎಲ್‌ಪಿಜಿ ವಿತರಣೆ. ಮನೆಮನೆಗಳಲ್ಲಿ ಅಡುಗೆ ಅನಿಲವನ್ನು ಅವಲಂಬಿಸಲಾಗುತ್ತಿದೆ. ಇದಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲು ಎಲ್ಲ ರಿಫೈನರಿಗಳು ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ. ಡೀಸೆಲ್ ಮತ್ತು ವೈಮಾನಿಕ ಇಂಧನ ಎಟಿಎಫ್ ರಫ್ತಿನ ಮೇಲೆ ರಫ್ತು ಸುಂಕ ವಿಧಿಸಲಾಗಿದೆ. ಹೀಗಾಗಿ ಅಡುಗೆ ಅನಿಲ ವಿತರಣೆ ಸ್ಥಿರವಾಗಿದೆ.

2025–26ರಲ್ಲಿ 2.29 ಲಕ್ಷ ಎಲೆಕ್ಟ್ರಾನಿಕ್ ವಾಹನಗಳು ಮಾರಾಟವಾಗಿದೆ. ಜನ ಪೆಟ್ರೋಲಿಯಂ ಇಂಧನಕ್ಕೆ ಪರ್ಯಾಯವಿದ್ದರೆ, ಅದು ಯುಕ್ತವಾಗಿದ್ದರೆ ಬೆಂಬಲಿಸುತ್ತಾರೆ. ಇರಾನ್ ಯುದ್ಧದ ಮೊದಲ ತಿಂಗಳಿನಲ್ಲಿಯೇ ವಿದ್ಯುತ್ ಚಾಲಿನ ಇಂಡಕ್ಷನ್ ಸ್ಟೌವ್ ಗಳಿಗೆ ಬೇಡಿಕೆ ಹೆಚ್ಚಿದೆ. ನವನವೀನ ಸೌದೆ ಒಲೆಗಳ ಮಾರಾಟದ ಭರಾಟೆ ಹೆಚ್ಚಿದೆ. ಮಾರ್ಚ್‌ನಲ್ಲಿ ಜಿಎಸ್‌ಟಿ ಸಂಗ್ರಹ ಕೂಡ 8 ಪರ್ಸೆಂಟ್ ವೃದ್ಧಿಸಿದೆ. 22.6 ಶತಕೋಟಿ ಯುಪಿಐ ವರ್ಗಾವಣೆಗಳು ನಡೆದಿವೆ. 23.5 ಪರ್ಸೆಂಟ್ ಹೆಚ್ಚಳವಾಗಿದೆ. ಇದೆಲ್ಲವೂ ಗಲ್ಫ್ ಬಿಕ್ಕಟ್ಟನ್ನು ಎದುರಿಸಬಲ್ಲ ಆಂತರಿಕ ಸಾಮರ್ಥ್ಯ ಭಾರತದ ಅರ್ಥವ್ಯವಸ್ಥೆಗೆ ಇದೆ ಎಂಬುದಕ್ಕೆ ತಾಜಾ ಸಾಕ್ಷಿಯಾಗಿದೆ.

## ಭಟ್ಟರ್ ಸ್ಕಾಚ್

- **ಪ್ರದೀಪ ಹೆಗ್ರೆ, ಕುಶಾಲನಗರ**
  ಭಟ್ರೇ, ಅತಿ ಬುದ್ಧಿವಂತರಿಗೂ, ಅತಿ ದಡ್ಡರಿಗೂ ಇರುವ ವ್ಯತ್ಯಾಸವೇನು?
- **ಬುದ್ಧಿವಂತರು ತಪ್ಪು ಮಾಡಿ ತಿದ್ದಿಕೊಳ್ಳುತ್ತಾರೆ, ದಡ್ಡರು ಆ ತಪ್ಪನ್ನು 'ನವೀನ ಸಂಶೋಧನೆ' ಅಂತ ವಾದಿಸುತ್ತಾರೆ!**

- **ಶರತ್, ಧಾರವಾಡ**
  ಭಟ್ರೇ, ರಾಜಕಾರಣಿಗಳು ಕೈ ಮುಗಿಯುವುದು ಯಾಕೆ?
- **ನಿಮ್ಮ ಜೇಬಿಗೆ ಕೈ ಹಾಕುವ ಮೊದಲು ಪರ್ಮಿಷನ್ ಕೇಳುವ ಸಂಪ್ರದಾಯ ಅದು!**

- **ರಾಮಚಂದ್ರ ಶೆಟ್ಟಿ, ಉಡುಪಿ**
  ಭಟ್ರೇ, ಜನರು ಯಾಕೆ ಸೋಮಯಾಜಿಗಳ ಬಳಿ ಹೋಗುತ್ತಾರೆ?
- **ಸ್ವಂತ ಬುದ್ಧಿ ಕೆಲಸ ಮಾಡದಿದ್ದಾಗ, ಅವರ ಬುದ್ಧಿ ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ತಿಳಿಯಲು !**

- **ಹರೀಶ ಸಾಲುಮನೆ, ಸಾಗರ**
  ಭಟ್ರೇ, ಪ್ರೀತಿ ಕುರುಡು ಅಂತಾರಲ್ಲ, ಯಾಕೆ?
- **ಕಣ್ಣು ತೆರೆದಿದ್ದರೆ ಬ್ಯಾಂಕ್ ಬ್ಯಾಲೆನ್ಸ್ ಕಾಣಿಸಿಬಿಡುತ್ತೆ ಅಂತ!**

- **ಅರುಣ ಬಡಶೆಟ್ಟಿ, ಗದಗ**
  ಭಟ್ರೇ, ಹೆಲ್ಮೆಟ್ ಹಾಕಿಕೊಳ್ಳುವುದು ಯಾಕೆ ಮುಖ್ಯ?
- **ಒಳಗಿರುವ ಖಾಲಿ ಜಾಗಕ್ಕೆ ಪೆಟ್ಟಾದರೆ ರಿಪೇರಿ ಮಾಡೋಕೆ ಮೆಕ್ಯಾನಿಕ್ ಸಿಗಲ್ಲ ಅಂತ!**

- **ಪಿ.ಮನೋಹರ, ಬೆಂಗಳೂರು**
  ಭಟ್ರೇ, ಆಫೀಸ್‌ನಲ್ಲಿ ಬಾಸ್ ಯಾಕೆ ಯಾವತ್ತೂ ಕೋಪದಲ್ಲೇ ಇರುತ್ತಾರೆ?
- **ಅವರು ಮನೆಯಲ್ಲಿ ಪತ್ನಿಯ ಮುಂದೆ ತೋರಿಸಲಾಗದ ಪರಾಕ್ರಮವನ್ನು ಇಲ್ಲಿ ತೀರಿಸಿಕೊಳ್ಳುತ್ತಾರೆ!**

- **ಮಮತಾ, ಗುಬ್ಬಿ**
  ಭಟ್ರೇ, ಜಾಹೀರಾತುಗಳು ಯಾಕೆ ಇಷ್ಟು ಆಕರ್ಷಕವಾಗಿರುತ್ತವೆ?
- **ಇಲ್ಲದ ಅಗತ್ಯವನ್ನು ಹುಟ್ಟುಹಾಕಿ, ಜನರ ದುಡ್ಡನ್ನು ಖರ್ಚು ಮಾಡಿಸಲು!**

- **ಜೆ.ಥಾಮಸ್, ಶಿವಮೊಗ್ಗ**
  ಭಟ್ರೇ, ಸಾಮಾಜಿಕ ಜಾಲತಾಣ ಎಲ್ಲರಿಗೂ ಆಪ್ತ ಏಕೆ?
- **ಸತ್ತರೆ ಓಂ ಶಾಂತಿ, ಗೆದ್ದರೆ ಅಭಿನಂದನೆ ಹೇಳಿದರೆ ಕೆಲಸವೇ ಮುಗಿಯಿತಲ್ಲ?!**

- **ಶಾಲಿನಿ, (ಇಮೇಲ್ ಮೂಲಕ)**
  ಭಟ್ರೇ, ಅನುಭವ ಅಂದ್ರೆ ಏನು?
- **ಹಳೆ ತಪ್ಪುಗಳನ್ನು ಹೊಸ ರೀತಿಯಲ್ಲಿ ಮಾಡಬಾರದು ಎಂದು ಕಲಿಸುವ ಪಾಠ!**

- **ಜಿತೇಂದ್ರ ಸಾಲಿಯಾನ್, ಮಂಗಳೂರು**
  ಭಟ್ರೇ, ಜನರು ಯಾಕೆ ಉಚಿತ ಸಲಹೆಗಳನ್ನು ಅಷ್ಟೊಂದು ಧಾರಾಳವಾಗಿ ಕೊಡುತ್ತಾರೆ?
- **ಯಾಕಂದ್ರೆ ಆ ಸಲಹೆಯನ್ನು ಸ್ವತಃ ಪಾಲಿಸುವ ಕಷ್ಟ ಅವರಿಗಿರುವುದಿಲ್ಲ!**

- **ಲೀಲಾ ಪಿ.ಶೆಟ್ಟಿ, (ಇಮೇಲ್ ಮೂಲಕ)**
  ಭಟ್ರೇ, ಹೊಸದಾಗಿ ಮದುವೆಯಾದವಳು ಅಡುಗೆ ಮಾಡುವುದನ್ನು ಯಾವುದಕ್ಕೆ ಹೋಲಿಸಬಹುದು?
- **ಯಾವುದೋ ಒಂದು ಪ್ರಯೋಗಾಲಯದಲ್ಲಿ ನಡೆಯುವ 'ರಾಸಾಯನಿಕ ಅನಿಲ' ಸ್ಫೋಟಕ್ಕೆ!**

# ಘಮಘಮಿಸುವ ಆ ವ್ಯಂಜನವನ್ನು ತಯಾರಿಸುವ ಕಾಲ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ನಮ್ಮ ರಾಜ್ಯದಲ್ಲಿ ಸ್ವತಂತ್ರ ಪೂರ್ವದಲ್ಲಿ ಹೆಚ್ಚಿನ ಎಲ್ಲಾ ಊರುಗಳಲ್ಲೂ 'ತೋಪು' ಅಥವಾ 'ಮಾವಿನ ತೋಪು' ಇರುತ್ತಿತ್ತಂತೆ; ಹಿರಿಯ ತಲೆಮಾರಿನ ಕಾದಂಬರಿಕಾರರು, ಹಳ್ಳಿಯ ಪರಿಸರವನ್ನು ವರ್ಣಿಸುವಾಗ, ಊರಿನಿಂದಾಚೆ ಇರುವ ತೋಪು, ಅದರಲ್ಲಿನ ಮರಗಳು, ಅವುಗಳನ್ನು ಊರಿನವರು ಕಾಪಾಡುವ ರೀತಿ, ಆ ಮರಗಳಿಂದ ಸಿಗುವ ಕಾಯಿಗಳು, ಹಣ್ಣುಗಳ ಕುರಿತು ಬರೆಯುತ್ತಿದ್ದುದುಂಟು. ಸ್ವಾತಂತ್ರ್ಯ ಬಂದ ನಂತರ, ಹಳ್ಳಿ ಮಟ್ಟದ ಪುಡಿ ರಾಜಕಾರಣಿಗಳು, ಗೂಂಡಾ ಮನಸ್ಥಿತಿಯ ಜನರು ಮೊದಲು ಕೈ ಹಾಕಿದ್ದೇ ಈ ತೋಪುಗಳಿಗೆ! ಅಂದರೆ, ಸಾಮೂಹಿಕ ಒಡೆತನದ, ದಾಖಲೆಗಳಲ್ಲಿ ಸರಕಾರಕ್ಕೆ ಸೇರಿದ ಜಾಗಗಳಲ್ಲಿದ್ದ ಮರಗಳನ್ನು ಅನಧಿಕೃತವಾಗಿ ಕಡಿತಲೆ ಮಾಡಿ, ಕಳ್ಳ ಸಾಗಾಣಿಕೆ ಮಾಡಿ ಮಾರುವುದು! ಅದರಿಂದ ಬಂದ ದುಡ್ಡನ್ನು ಸ್ವಂತಕ್ಕೆ ಅಥವಾ ರಾಜಕೀಯಕ್ಕೆ ಬೆಳೆಸಿಕೊಂಡು, ಹಂತ ಹಂತವಾಗಿ ಮೇಲ್ಮಟ್ಟಕ್ಕೆ ಏರುವುದು – ಇದು ಕೆಲವು ಪುಡಿ ರಾಜಕಾರಣಿಗಳ, ಸ್ಥಳೀಯ ನಾಯಕರ 'ಹವ್ಯಾಸ'ವೇ ಆಗಿತ್ತು.

ಜತೆಗೆ, ಊರಿನ ಹೊರವಲಯದಲ್ಲಿದ್ದಿರಬಹುದಾದ ಇಂತಹ ತೋಪುಗಳ ನಾಶಕ್ಕೆ, ಊರಿನಲ್ಲಿ ಸಡಿಲಗೊಂಡ ಪರಸ್ಪರ ವಿಶ್ವಾಸ, ಸಾಮೂಹಿಕ ಕಟ್ಟಲೆಗಳೂ ಕಾರಣವಿರಬಹುದು. ಹಲವು ದಶಕಗಳಿಂದ ರಕ್ಷಿಸಿಕೊಂಡು ಬಂದಿದ್ದ ಪುರಾತನ ಮರಗಳನ್ನು ಯಾವ್ಯಾವುದೋ ಉದ್ದೇಶಕ್ಕೆ ಕಡಿಯುವುದು, ಅಂತಹ ಜಾಗಗಳಲ್ಲಿ ಮತ್ತೆ ಮರಗಿಡಗಳನ್ನು ಬೆಳೆಸದೇ ಇರುವುದು, ಮೇಕೆಗಳಿಗೆ ಆ ಮರಗಳ ಕೊಂಬೆಗಳನ್ನು ಕಡಿದು ತಿನ್ನಿಸುವುದು, ಹಳ್ಳಿಯ ಸಾರ್ವಜನಿಕ ಉದ್ದೇಶಕ್ಕೆ ಅಧಿಕೃತವಾಗಿಯೇ ತೋಪುಗಳಿದ್ದ ಜಾಗಗಳನ್ನು ಬಳಸುವುದು – ಇಂತಹ ಚಟುವಟಿಕೆಗಳಿಂದಲೂ ಹಲವು ಊರುಗಳಲ್ಲಿದ್ದ ತೋಪುಗಳು ನಾಶವಾಗಿ ಹೋಗಿವೆ.

ತುಸು ಜರ್ಜರಿತವಾಗಿದ್ದರೂ, ತನ್ನ ಮೂಲ ಸ್ವರೂಪವನ್ನು ಸ್ವಲ್ಪಮಟ್ಟಿಗೆ ಉಳಿಸಿಕೊಂಡು, ಇಂದಿಗೂ ಜೀವ ಹಿಡಿದುಕೊಂಡಿರುವ ಒಂದು ಮಾವಿನ ತೋಪನ್ನು ನೋಡುವ ಅವಕಾಶ ಕಳೆದ ವಾರ ದೊರಕಿತು. ಟಿ.ನರಸೀಪುರಕ್ಕೆ ಹೋಗುವ ದಾರಿಯಲ್ಲಿ, ರಸ್ತೆಯಿಂದ ತುಸು ದೂರದಲ್ಲಿರುವ ಈ ಮಾವಿನ ತೋಪನ್ನ ಕಂಡು, ನಿಜಕ್ಕೂ ಆಶ್ಚರ್ಯವಾಯಿತು! ಇಪ್ಪತ್ತೊಂದನೆಯ ಶತಮಾನದ ಎರಡು ದಶಕಗಳ ಕಳೆದ ನಂತರವೂ, ಅಭಿವೃದ್ಧಿಯ ಕಾಮಗಾರಿಗಳಿಗಾಗಿ ಬಲಿಯಾಗದೇ, ಕಳ್ಳತನದಿಂದ ಮರಕಡಿತಕ್ಕೆ ಒಳಗಾಗದೇ ಇಂತಹದೊಂದು ತೋಪು ಮತ್ತು ಅದರಲ್ಲಿನ ಮರಗಳು ಇಂದಿಗೂ ಉಳಿದು ಬಂದಿರುವುದು, ನಿಜಕ್ಕೂ ವಿಶೇಷ. ಹತ್ತಾರು ಪುರಾತನ ಮರಗಳನ್ನು, ಅವುಗಳಲ್ಲಿ ಕೆಲವು ಮಾವಿನ ಮರಗಳನ್ನೂ ರಕ್ಷಿಸಿ, ಊರಿನ ಸಮಸ್ತ ಜನರ ಸಾಮೂಹಿಕ ಒಡೆತನದ ಆ ತೋಪನ್ನು ಉಳಿಸಿಕೊಂಡು ಬಂದಿರುವುದಕ್ಕಾಗಿ, ಆ ಹಳ್ಳಿಯವರನ್ನು ಅಭಿನಂದಿಸಲೇಬೇಕು. ಅಲ್ಲಿರುವ ಭಾರೀಗಾತ್ರದ ಮರಗಳನ್ನು ರಕ್ಷಿಸುವ ಮೂಲಕ, ಹಕ್ಕಿಗಳಿಗೆ, ಇತರ ಜೀವಿಗಳಿಗೆ ಆಶ್ರಯ ನೀಡಿವುರ ಮೂಲಕ ಅವರು ಸಣ್ಣಮಟ್ಟದ ಪರಿಸರ ರಕ್ಷಣೆಯನ್ನೇ ಮಾಡುತ್ತಿದ್ದಾರೆ.

ಅಪರೂಪದ ತೋಪು ಮತ್ತು ಮರಗಳನ್ನು ಉಳಿಸಿಕೊಂಡಿರುವ ಆ ಹಳ್ಳಿಯ ಹೆಸರನ್ನು ನಾನಿಲ್ಲಿ ಹೇಳುವುದಿಲ್ಲ; ಅದಕ್ಕೊಂದು ಕಾರಣವೂ ಇದೆ. ಅಲ್ಲಿನ ಅಮೂಲ್ಯ ಎನಿಸುವ ಮರ ಇರುವ ಜಾಗವನ್ನು ಈ ಅಂಕಣದಲ್ಲಿ ಬರೆಯುವದರಿಂದಾಗಿ, ಆ ತೋಪಿನ ಮೌಲ್ಯವನ್ನು ಪರಿಚಯ ಮಾಡಿಕೊಟ್ಟಂತಾಗಿ, ಯಾರಾದರೂ ಮರಗಳ್ಳರ ಕಣ್ಣಿಗೆ ಬಿದ್ದು, ಅವರು ತಮ್ಮ ಕರಾಮತ್ತು ತೋರಿಸಿಯಾರು, ಅಲ್ಲಿರುವ ಆ ಒಂದು ಬೃಹತ್ ಮರದ ಖ್ಯಾತಿಯೇ ಅದಕ್ಕೆ ಮುಳುವಾಗಬಾರದು ಎಂಬುದೇ ಇದಕ್ಕೆ ಕಾರಣ.

ಆ ತೋಪಿನ ಹತ್ತಾರು ಮರಗಳ ಪೈಕಿ, ಅಮೂಲ್ಯ ಮತ್ತು ಅತಿ ಅಪರೂಪವೆಂದರೆ, ಅಲ್ಲಿರುವ ಒಂದು ಬೃಹತ್ ಮಾವಿನ ಮರ. ಸರಳವಾಗಿ ಹೇಳಬೇಕೆಂದರೆ, ಆ ಮಾವಿನ ಮರದಷ್ಟು ವಿಶಾಲವಾದ, ಎತ್ತರವಾದ, ದಪ್ಪವಾದ ಇನ್ನೊಂದು ಮಾವಿನ ಮರವನ್ನು ನಾನು ಇದುವರೆಗೆ ಕಂಡಿಲ್ಲ! ಸುಮಾರು ಹದಿನೈದು ಅಡಿ ಅಗಲದ ಕಾಂಡ, ಎಪ್ಪತ್ತರಿಂದ ನೂರು ಅಡಿ ಎತ್ತರದ ಆ ಮರವು, ವಿಶಾಲವಾದ ಕ್ಯಾನೊಪಿಯನ್ನೂ ಹೊಂದಿದೆ. ಅದರ ಕಾಂಡ ಎಷ್ಟು ದಪ್ಪವೆಂದರೆ, ಮೂರು ಜನರು ಅದನ್ನು ಬಳಸಿ ಹಿಡಿಯಬಹುದು!

ಈ ಬೃಹತ್ ಮಾವಿನ ಮರದ ರೆಂಬೆ ಕೊಂಬೆಗಳಲ್ಲಿವೆ, ಸಾವಿರಾರು ಮಾವಿನ ಕಾಯಿಗಳು! ರೆಂಬೆ ಕೊಂಬೆಯ ಟಿಸಿಲುಗಳಲ್ಲಿ, ಮೂಲೆಮೂಲೆಗಳಲ್ಲಿ ಪುಟ್ಟ ಪುಟ್ಟ ಸಾವಿರಾರು ಮಾವಿನಕಾಯಿಗಳ ಗೊಂಚಲುಗಳು ನೇತಾಡುತ್ತಿವೆ. ಮಾವಿನ ಕಾಯಿಯ ಗಾತ್ರ ತುಸು ಚಿಕ್ಕದು; ಕೆಲವು ಲಿಂಬೆ ಗಾತ್ರದಲ್ಲಿದ್ದವು, ಇನ್ನು ಕೆಲವು ನೆಲ್ಲಿ ಕಾಯಿಯ ಗಾತ್ರದಲ್ಲಿದ್ದವು. ಆದರೆ ಅವುಗಳ ಸಂಖ್ಯೆ ಮಾತ್ರ ಬೆರಗು ಹುಟ್ಟಿಸುವಷ್ಟು. ಮೇಲ್ನೋಟಕ್ಕೆ ಮಲೆನಾಡಿನ ಮಾವಿನ ಮಿಡಿಯನ್ನೇ ಹೋಲುತ್ತಿದ್ದ ಆ ಮಾವಿನ ಕಾಯಿಗಳನ್ನು ಕಂಡಾಕ್ಷಣ, ಸಂಗ್ರಹಿಸಿ, ಉಪ್ಪಿನಕಾಯಿ ಮಾಡಬೇಕು ಎನಿಸಿತು!

ಆ ಬೃಹತ್ ಮಾವಿನ ಮರದ ಆಕಾರವನ್ನು ಕಂಡು ಬೆರಗಿನಿಂದ ನೋಡುತ್ತಿರುವಾಗ, ಸ್ಥಳೀಯರಾದ ಒಬ್ಬ ಹಿರಿಯ ವ್ಯಕ್ತಿ ಬೈಕ್‌ನಲ್ಲಿ ಬಂದರು : 'ಸಾರ್, ಮಾವಿನ ಕಾಯಿ ಬೇಕಿದ್ದರೆ ಕಿತ್ಕೊಳಿ ಸಾರ್' ಎಂದರು. ಸುಮಾರು ಎಪ್ಪತ್ತು ವರ್ಷ, ಪ್ಯಾಂಟು ಅಂಗಿ ಧರಿಸಿದ ದಢೂತಿ ಗ್ರಾಮೀಣ ವ್ಯಕ್ತಿ. ಬೈಕ್‌ನಲ್ಲಿ ಹೋಗುತ್ತಿದ್ದವರು, ನಮ್ಮನ್ನು ಕಂಡು ಕುತೂಹಲದಿಂದ ಮಾತನಾಡಿಸಿದ್ದರು.

'ನಿಮ್ಮ ಊರಿನ ಮರಗಳು, ನಾವು ಹೊರಗಿನಿಂದ ಬಂದವರು ಕೊಯ್ದರೆ ಯಾರೂ ಕೇಳೊಲ್ಲವಾ?' ಎಂದೆ.

ಹಾಗೇನಿಲ್ಲ ಸರ್, ನಾನೇ ಇದೀನಲ್ಲ. ನಾಲ್ಕಾರು ಮಾವಿನ ಕಾಯಿ ಕೊಯ್ಕಳಿ. ಅದಕ್ಕೇನಂತೆ. ಸಾವಿರಾರು ಮಾವಿನ ಕಾಯಿಗಳಿವೆ' ಎಂದರು ಅವರು.

'ಇಂತಹ ಎಷ್ಟು ಮರ ಇವೆ?'

'ಇದು ನಮ್ಮ ಹಳ್ಳಿಯ ಮಾವಿನ ತೋಪು. ಈಗ ಇಲ್ಲಿ ಹತ್ತು ಹನ್ನೆರಡು ಮರಗಳಿವೆ. ಹಿಂದೆ ಇನ್ನೂ ಜಾಸ್ತಿ ಮರಗಳಿದ್ದವು. ಇವುಗಳಲ್ಲಿ ಈಗ ನಾಲ್ಕಾರು ಮಾವಿನ ಮರ ಇವೆ. .' ಎಂದ ಅವರು, ಆ ಹಳ್ಳಿಯ ಮಾವಿನ ತೋಪಿನ ವಿವರಗಳನ್ನು ನೀಡುತ್ತಾ ಹೋದರು. ಇಲ್ಲಿ ಹಲವು ಮಾವಿನ ಮರಗಳಿದ್ದವಂತೆ. ಈಗ ಕೆಲವೇ ಉಳಿದಿವೆ. ಇದರ ಕಾಯಿಗಳನ್ನು ಸ್ಥಳೀಯರು ಉಪ್ಪಿನಕಾಯಿಗೆ ಬಳಸುವುದಿಲ್ಲವಂತೆ; ಏಕೆಂದರೆ, ಆ ಪುಟಾಣಿ ಮಾವಿನ ಕಾಯಿಗಳನ್ನು ಉಪ್ಪಿಗೆ ಹಾಕಿ, ಮಿಡಿ ಉಪ್ಪಿನ ಕಾಯಿ ಮಾಡುವ ಸಂಪ್ರದಾಯ ಆ ಪ್ರದೇಶದಲ್ಲಿಲ್ಲ. ಅಲ್ಲಿ ಏನಿದ್ದರೂ, ದೊಡ್ಡ ದೊಡ್ಡ ಮಾವಿನ ಕಾಯಿಗಳಿಂದ ಉಪ್ಪಿನ ಕಾಯಿ ಮಾಡುವ ಪದ್ಧತಿ. ಆದ್ದರಿಂದ, ಚಿಕ್ಕ ಗಾತ್ರದ ಈ ಮಾವಿನ ಕಾಯಿಗಳು ಹಾಗೆಯೇ ಉಳಿದಿದ್ದವು.

'ಲಿಂಬೆ ಕಾಯಿಯಷ್ಟು ಬೆಳೆದ ನಂತರ, ಹಣ್ಣಾಗಿ ಬೀಳುತ್ತವೆ. ಹುಳಿ ಹಣ್ಣು' ಎಂದರು ಆ ಹಿರಿಯರು.

ಅಷ್ಟು ದೊಡ್ಡ ಮರದಿಂದ ಕಾಯಿಗಳನ್ನು ನಾವು ಕೊಯ್ಯುವುದಾದರೂ ಹೇಗೆ ಎಂಬುದಕ್ಕೆ ಅವರಲ್ಲಿ ಉತ್ತರವಿರಲಿಲ್ಲ. ಒಂದೆರಡು ಕಲ್ಲು ಹೊಡೆದೆ; ಕಾಯಿ ಉದುರಲಿಲ್ಲ. ಆ ಮರವನ್ನು ಹತ್ತಲು ನಮ್ಮಂತಹವರಿಂದ ಖಂಡಿತಾ ಸಾಧ್ಯವಿರಲಿಲ್ಲ. ಅಷ್ಟು ದೊಡ್ಡ ಮಾವಿನ ಮರ ಈ ಬಯಲು ಸೀಮೆಯಲ್ಲಿ ಉಳಿದಿರುವುದೇ ವಿಶೇಷ, ಆಶ್ಚರ್ಯ. ಮಾತನಾಡಲು ಸಿಕ್ಕಿದ ಆ ಹಿರಿಯರು ಬಾಲಕನಾಗಿದ್ದಾಗಲೂ, ಈ ಮಾವಿನ ಮರವು ಅಷ್ಟೇ ಎತ್ತರವಾಗಿತ್ತಂತೆ! ಅಂದರೆ, ಆ ಅಪರೂಪದ ಮಾವಿನ ಮರಕ್ಕೆ ಕನಿಷ್ಟ ಇನ್ನೂರು ವರ್ಷ ಆಗಿರಲೇಬೇಕು. ಆ ಮರದ ಅಡಿ ಬಿದ್ದಿದ್ದ ಆರೆಂಟು ಪುಟಾಣಿ ಮಾವಿನ ಕಾಯಿಗಳನ್ನು ಮನೆಗೆ ತಂದು ಚಟ್ನಿ ಮಾಡಿದಾಗ, ರುಚಿಕರವಾಗಿತ್ತು.

ಬಯಲುಸೀಮೆಯ ಆ ಅಪರೂಪದ ಬೃಹತ್ ಮಾವಿನ ಮರವನ್ನು, ಮಾವಿನ ತೋಪನ್ನು ಕಂಡಾಗ, ನಮ್ಮ ಹಳ್ಳಿಯ 'ಮಾವಿನ ಮಿಡಿ' ಯ ನೆನಪು ಮಾಡಿಕೊಂಡೆ. ನಮ್ಮ ರಾಜ್ಯದ ಕರಾವಳಿ ಮತ್ತು ಮಲೆನಾಡಿನವರಿಗೆ ಮಾತ್ರ ಪರಿಚಿತವಾಗಿದ್ದ 'ಮಾವಿನ ಮಿಡಿ' ಮತ್ತು 'ಮಿಡಿ ಉಪ್ಪಿನ ಕಾಯಿ' ಈಗ, ಬಹುಪಾಲು ಎಲ್ಲರಿಗೂ ಪರಿಚಿತ. ಆನ್‌ಲೈನ್‌ನಲ್ಲೂ ಈಗ ಮಾವಿನ ಮಿಡಿ ಉಪ್ಪಿನ ಕಾಯಿಯನ್ನು ಖರೀದಿಸುವ ಅವಕಾಶವಿರುವುದರಿಂದ, ಉಪ್ಪಿನಕಾಯಿ ಪ್ರಿಯರೆಲ್ಲರೂ ಒಂದು ಬಾರಿಯಾದರೂ ಮಿಡಿ ಉಪ್ಪಿನಕಾಯಿಯ ರುಚಿಯನ್ನು ನೋಡಿರುತ್ತಾರೆ. ನಮ್ಮ ಹಳ್ಳಿಯಲ್ಲಿ ಪುರಾತನ ಕಾಲದಿಂದಲೂ ತಯಾರಿಸಿಕೊಂಡು ಬಂದಿರುವ ಮಾವಿನ ಮಿಡಿ ಉಪ್ಪಿನಕಾಯಿಯು, ಅಪರೂಪದ ಔಷಧೀಯ ಗುಣವನ್ನೂ (ಪ್ರೊಬಯೊಟಿಕ್ಸ್) ಹೊಂದಿದೆ ಎಂದು ಇತ್ತೀಚೆಗೆ ನನಗೆ ಗೊತ್ತಾದಾಗ, ಸಣ್ಣಗೆ ಅಚ್ಚರಿಯೂ ಆಯಿತು.

ನಮ್ಮ ಹಳ್ಳಿಯ ಸುತ್ತಮುತ್ತಲೂ ಮಾವಿನ ಮಿಡಿಗಳು ಕೈಗೆ ಸಿಗುವುದು ಇದೇ ಸೀಸನ್‌ನಲ್ಲಿ, ಮಾರ್ಚ್ – ಏಪ್ರಿಲ್ ಸಮಯದಲ್ಲಿ. (ಒಂದೊಂದು ವರ್ಷ ಇನ್ನೂ ಬೇಗನೆ ಮಿಡಿ ಬಿಡುವುದುಂಟು). ಗಾತ್ರದಲ್ಲಿ ಸಣ್ಣದಾದರೂ, ನಮ್ಮ ಹಳ್ಳಿಯ ಸುತ್ತ ಮುತ್ತ ಸಿಗುತ್ತಿದ್ದ ಕಾಟು ಮಾವಿನ ಮಿಡಿಗಳ ಪರಿಮಳ ಮತ್ತು ರುಚಿವೈವಿಧ್ಯಕ್ಕೆ ಸಾಟಿಯೇ ಇಲ್ಲ! ಈ ಮಿಡಿಗಳು ಎಳೆಯದಾಗಿದ್ದಾಗ, ಅವುಗಳನ್ನು ಕೊಯ್ದು ಉಪ್ಪಿನ ಕಾಯಿ ಮಾಡುವ ಪರಿಪಾಠ ಇಂದಿಗೂ ಉಳಿದುಬಂದಿದೆ. ಕೆಲವು ಮರಗಳ ಮಿಡಿಯ ಉಪ್ಪಿನಕಾಯಿ ಬಹಳ ರುಚಿ; ಅಪ್ಪೆ ಮಿಡಿ, ಜೀರಿಗೆ ಮಿಡಿ ಎಂದು ವಿವಿಧ ಹೆಸರುಗಳಿಂದ ಮಿಡಿಗಳನ್ನು ಗುರುತಿಸುವುದುಂಟು. ಜೀರಿಗೆ ಮಿಡಿ ಇನ್ನಷ್ಟು ರುಚಿಕರ. ಜತೆಗೆ, ವರ್ಷಗಟ್ಟಲೆ (ಮೂರರಿಂದ ಐದು ವರ್ಷ) ಆ ಮಿಡಿಯ ಉಪ್ಪಿನ ಕಾಯಿ ಬಾಳಿಕೆ ಬರುತ್ತದೆ ಎಂಬುದು ನಮ್ಮೂರ ಅಜ್ಜಿಯರ ಅನುಭವ. ಆರು ತಿಂಗಳೋ, ವರ್ಷವೋ ಭದ್ರವಾಗಿದ್ದ ಉಪ್ಪಿನ ಕಾಯಿಯ ಜಾಲಿಯ ಬಾಯಿಗೆ ಕಟ್ಟಿದ ಬಟ್ಟೆಯನ್ನು ಬಿಚ್ಚಿ, ಒಳಗೆ ನೋಡಿದರೆ, ಸಣ್ಣದಾದ ಒಂದು ಬೂಸ್ಟಿನಂತಹ ಪದರ ಇರುತ್ತದೆ; ಅದನ್ನು ಬದಿಗೆ ಸರಿಸಿ ಉಪ್ಪಿನ ಕಾಯಿಯನ್ನು ಸ್ವಲ್ಪ ತೆಗೆದುಕೊಂಡು, ಪುನಃ ಅದೇ ರೀತಿ ಬಟ್ಟೆ ಕಟ್ಟಿಟ್ಟು, ಜಾಲಿಯನ್ನು ಅಟ್ಟದ ಮೇಲೆ ಇಡುತ್ತಿದ್ದರು. ಆಗ ಕಾಣಿಸುವ ಬೂಸ್ಟ್‌ನಂತಹ ಪದರದಿಂದ ಆರೋಗ್ಯಕ್ಕೆ ಹಾನಿಯಿಲ್ಲ. ಹಲವು ತಿಂಗಳುಗಳ ಕಾಲ ಹೀಗೆ ಇಟ್ಟ ಉಪ್ಪಿನಕಾಯಿಯ ರಸದಲ್ಲಿ, ನಿಧಾನವಾಗಿ ನಡೆಯುವ ಜೈವಿಕ ಬದಲಾವಣೆಯಿಂದಾಗಿ, ಪ್ರೊಬಯೊಟಿಕ್ಸ್ ಎನಿಸುವ ಅಂಶ ಉತ್ಪತ್ತಿಯಾಗುತ್ತದೆ ಎಂದು ಈಚಿನ ವಿಜ್ಞಾನ ಕಂಡುಕೊಂಡಿದೆ! ಅದಿರಲಿ.

ಒಳ್ಳೆಯ ಮಿಡಿ ಮಾವಿನಕಾಯಿಯನ್ನು ಸರಿಯಾಗಿ ಉಪ್ಪು ಹಾಕಿ ನೆನೆಸಿ, ಚಿರುಟಿಸಿ, ನೀರಿನ ಪಸೆ ತಾಗದಂತೆ ನೋಡಿಕೊಂಡು, ಜಾಗ್ರತೆಯಿಂದ ಉಪ್ಪಿನ ಕಾಯಿ ಮಾಡಿ, ಜಾಲಿಯಲ್ಲಿ ಹಾಕಿಟ್ಟರೆ ಮೂರು ವರ್ಷ ಆರಾಮಾಗಿ ಬಳಸಬಹುದು. ಮೂರು ವರ್ಷ ಮಿಡಿಯನ್ನು ಜಾಲಿಯಲ್ಲಿಟ್ಟು, ತೆಗೆದು ಉಪಯೋಗಿಸಿದಾಗ, ಅದರ ರುಚಿ ಮೂಲದಲ್ಲಿದ್ದಂತೆಯೇ ಇರುವುದನ್ನು ನಮ್ಮ ಮನೆಯಲ್ಲೇ ನೋಡಿದ್ದೇನೆ. ಈ ಅನುಭವದ ಮೇಲೆ ಹೇಳುವುದಾದರೆ, ಮಿಡಿ ಉಪ್ಪಿನ ಕಾಯಿಯನ್ನು ಇನ್ನೂ ಕೆಲವು ವರ್ಷ ಇಡಬಹುದು ಎಂದು ನನ್ನ ಅನುಮಾನ.

ಒಂದೊಂದು ಮರದ ಮಿಡಿಯೂ ವಿಭಿನ್ನ ರುಚಿಯಾಗಿದ್ದರಿಂದಾಗಿ, ನಮ್ಮ ಊರಿನ ಅಜ್ಜಿಯರಿಗೆ ಪ್ರತಿ ವರ್ಷ ಹಲವು ಬಾರಿ ಉಪ್ಪಿನ ಕಾಯಿ ಮಾಡುವ ಉಮೇದು, ಉತ್ಸಾಹ. ಒಣ ಮೆಣಸಿನ ಕಾಯಿ ಮನೆಯಲ್ಲಿ ಸಾಕಷ್ಟು ಇದ್ದರೆ, ಬೇರೆ ಬೇರೆ ಮರಗಳ ಮಿಡಿಯನ್ನು ತರಿಸಿ, ಉಪ್ಪಿನಲ್ಲಿ ನೆನಸಿ, ಚಿರುಟಿಸಿ ಉಪ್ಪಿನ ಕಾಯಿ ಮಾಡಿಯಾರು ನಮ್ಮ ಹಳ್ಳಿಯ ಅಜ್ಜಿಯಂದಿರು. ನಮ್ಮ ಮನೆಯಲ್ಲಿ ಪಡಸಾಲೆಯ ತುಂಬಾ ಚಿರುಟಿಸಿದ ಮಿಡಿಯನ್ನು ಆರಲು, ಒಣಗಿಸಲು ಹರಡುವ ಪದ್ಧತಿ ಇತ್ತು.

ಆದರೆ, ಮಿಡಿ ಉಪ್ಪಿನಕಾಯಿಯ ಸಂಸ್ಕೃತಿ ನಿಧಾನವಾಗಿ ಕಣ್ಮರೆಯಾಗುತ್ತಿದೆ! ನಮ್ಮ ಹಳ್ಳಿಯ ಅನುಭವದಲ್ಲೇ ಹೇಳುವುದಾದರೆ, ಒಳ್ಳೆಯ ಮಿಡಿ ನೀಡುವ ಮಾವಿನ ಮರಗಳೇ ಕ್ರಮೇಣ ಕಣ್ಮರೆಯಾಗುತ್ತಿವೆ. ದೊಡ್ಡ ದೊಡ್ಡ ಮರಗಳೇ ಅಪರೂಪವಾಗುತ್ತಿವೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ ಇಂತಹದೊಂದು ಕಳವಳವು ಮಲೆನಾಡು ಮತ್ತು ಕರಾವಳಿಯ ಜನರಲ್ಲಿ ವ್ಯಕ್ತವಾಗಿತ್ತು – ಹಳೆಯ ಕಾಟು ಮಾವಿನ ಮರಗಳು ಸಾಯುತ್ತಿವೆ, ಕಡಿದು ಮಾರಲಾಗುತ್ತಿದೆ, ಆ ಜಾಗದಲ್ಲಿ ಹೊಸದಾಗಿ ಕಾಟು ಮಾವಿನ ಮರಗಳು ಬೆಳೆಯಲು ಅವಕಾಶವಾಗುತ್ತಿಲ್ಲ ಎಂದು. ಆ ಕಳವಳವು ಇಂದು ಪುಟ್ಟದೊಂದು ದುರಂತದ ಸ್ಥಿತಿಯನ್ನು ತಲುಪಿದೆ; ನಮ್ಮ ಸುತ್ತಲಿನ ಎಷ್ಟೋ ಹಾಡಿಗಳಲ್ಲಿ ಇಂದು ಹಳೆಯದಾದ, ಉತ್ತಮ ರುಚಿ ನೀಡುವ ಕಾಯಿ ಬಿಡುವ ಮಾವಿನ ಮರಗಳೇ ಇಲ್ಲ! ಹಿಂದೆ ಮಾವಿನಮರಗಳನ್ನೂ ಒಳಗೊಂಡಂತೆ, ನಾನಾ ಜೀವವೈವಿಧ್ಯ ಹೊಂದಿದ್ದ ಕಾಡುಗಳಿದ್ದ ಹಲವು ಪ್ರದೇಶಗಳಲ್ಲಿ ಇಂದು ಅಕೇಶಿಯಾ ಕಾಡು ಇದೆ ಅಥವಾ ಬೋಳು ಜಾಗವಿದೆ ಅಥವಾ ಸೈಟುಗಳಿವೆ.

ಈಚಿನ ಒಂದೆರಡು ದಶಕಗಳಲ್ಲಿ ಕಂಡ 'ಅಭಿವೃದ್ಧಿ'ಯ ಕಾಮಗಾರಿಗಳಿಂದಾಗಿ, ಕೆಲವು ಬಾರಿ ಜನರ ಅವಜ್ಞೆಯಿಂದಾಗಿ, ಹಣದ ಆಸೆಗಾಗಿ ಮಾವಿನ ಮರಗಳನ್ನು ಕಡಿದು ಮಾರುವಂತಹ ಅನಿವಾರ್ಯತೆಗೆ ಸಿಲುಕಿದ್ದರಿಂದಾಗಿ, ಅಪರೂಪದ ರುಚಿಕರ ಕಾಟು ಮಾವಿನ ಮರಗಳೇ ಬಹುತೇಕ ಕಣ್ಮರೆಯಾಗಿ ಹೋಗಿವೆ. ಆದ್ದರಿಂದ ವೈವಿಧ್ಯಮಯ ರುಚಿಯ ಮಿಡಿ ಉಪ್ಪಿನ ಕಾಯಿಯೂ ಕಡಿಮೆಯಾಗಿದೆ ಎನ್ನಬಹುದು. ಕಾಡಿನ ಅಂಚಿನಲ್ಲಿ ತಮ್ಮಷ್ಟಕ್ಕೇ ತಾವು ಬೆಳೆಯುವ ಕಾಟು ಮಾವಿನ ಮರಗಳು ಸಾಕಷ್ಟು ಕಡಿಮೆಯಾಗಿವೆ. ಒಂದು ಕಾಟು ಮಾವಿನ ಮರವು ಬೆಳೆದು, ವಿಶಾಲವಾದ ಕ್ಯಾನೊಪಿಯನ್ನು ರೂಪಿಸಿಕೊಂಡು, ಸಾವಿರಾರು ಮಾವಿನ ಮಿಡಿಗಳನ್ನು ಕೊಡಲು ಹತ್ತಿಪ್ಪತ್ತು ವರ್ಷ ಬೇಕು.

ಅಷ್ಟು ಕಾಲ ಕಾಯುವ ತಾಳ್ಮೆ ಈಗಿನವರಿಗೆ ಇಲ್ಲ; ಬೇಕೆನಿಸಿದರೆ, ಅಂಗಡಿಯಿಂದಲೋ, ದೂರದೂರಿನಿಂದಲೋ ದುಡ್ಡು ಕೊಟ್ಟು ಉಪ್ಪಿನ ಕಾಯಿಯನ್ನೋ, ಮಿಡಿಯನ್ನೋ ಖರೀದಿಸಿದರಾಯ್ತು ಎಂಬ ಭಾವ.

ಮೊದಲೆಲ್ಲಾ, ವರ್ಷದ ಈ ತಿಂಗಳುಗಳಲ್ಲಿ ಮಾವಿನಕಾಯಿ ಉಪ್ಪಿನಕಾಯಿ ಮಾಡುತ್ತಿದ್ದರು; ಈಗ ಪೇಟೆಯ ಸಂಪರ್ಕ ಇರುವ ಹಲವು ಕುಟುಂಬಗಳು ಮನೆಯಲ್ಲೇ ಉಪ್ಪಿನಕಾಯಿ ಮಾಡುವ ಸಂಪ್ರದಾಯವನ್ನು ಕೈಬಿಟ್ಟಿದ್ದಾರೆ. ಅದಕ್ಕೆ, ಪ್ರಾಮಾಣಿಕ ಕಾರಣಗಳೂ ಇರಬಹುದು. ನಮ್ಮ ಮನೆಯಲ್ಲಿ ಈ ವರ್ಷ 4 ಕಿಲೋ ಅಪ್ಪೆ ಮಿಡಿ ತರಿಸಿ, ಮಿಡಿ ಉಪ್ಪಿನಕಾಯಿ ಮಾಡಿದ್ದೇವೆ; ನಿಮ್ಮ ಮನೆಯಲ್ಲಿ?

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಜಲಮಂಡಳಿಯ ಅವೈಜ್ಞಾನಿಕ ದರ ಏರಿಕೆ ಖಂಡನೀಯ

ಬೆಂಗಳೂರು ಜಲಮಂಡಳಿ ನೀರಿನ ದರವನ್ನು ಶೇ.3ರಷ್ಟು ಹೆಚ್ಚಿಸಲು ಮುಂದಾಗಿರುವುದು ಜನಸಾಮಾನ್ಯರ ಮೇಲೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಈ ಏಪ್ರಿಲ್ 1ರ ಉಡು ಗೊರೆ ಅರಗಿಸಿಕೊಳ್ಳಲಾಗದ ಬಿಸಿ ತುಪ್ಪ. ಕೇವಲ ದರ ಹೆಚ್ಚಳದ ಮೂಲಕ ಆರ್ಥಿಕ ಸಂಪನ್ಮೂಲ ಕ್ರೋಡೀಕರಿಸುವುದು ಮಂಡಳಿಯ ಆಡಳಿತಾತ್ಮಕ ವೈಫಲ್ಯ ತೋರಿಸುತ್ತದೆ. ಕಾವೇರಿ 5ನೇ ಹಂತದ ಯೋಜನೆಗೆ ಹಣ ಹೊಂದಿಸಲು ಸಾರ್ವಜನಿಕರ ಜೇಬಿಗೆ ಕೈಹಾಕುವ ಬದಲು, ಶೇ.35ಕ್ಕಿಂತ ಹೆಚ್ಚಿರುವ ಸೋರಿಕೆ ಮತ್ತು ಲೆಕ್ಕವಿಲ್ಲದ ನೀರು ವ್ಯರ್ಥವಾಗುವುದನ್ನು ತಡೆಗಟ್ಟಲಿ. ಬೃಹತ್ ಅಪಾರ್ಟ್ಮೆಂಟ್ಗಳಲ್ಲಿ ಎಸ್ಟಿಪಿ ನೀರು ಮರುಬಳಕೆಯನ್ನು ಕಡ್ಡಾಯಗೊಳಿಸಿ ಹೊರೆ ಕಡಿಮೆ ಮಾಡಿ. ಬಾಕಿ ಇರುವ ವಾಣಿಜ್ಯ ತೆರಿಗೆಗಳನ್ನು ಕಠಿಣವಾಗಿ ವಸೂಲಿ ಮಾಡಲಿ. ಆಡಳಿತಾತ್ಮಕ ದುಂದುವೆಚ್ಚಕ್ಕೆ ಸಾರ್ವಜನಿಕರನ್ನು ಬಲಿಪಶು ಮಾಡುವುದು ನಿಲ್ಲಲಿ.

**-ಡಾ.ವಿಜಯಕುಮಾರ ಎಚ್.ಕೆ.ರಾಯಚೂರು**

### ಸದ್ಯಶೋಧನೆ ಬರಹ ನಮ್ಮ ಬದುಕಿನ ಕೈಗನ್ನಡಿ

'ಸಂಪಾದಕರ ಸದ್ಯಶೋಧನೆ' ಬರಹ, ನಮ್ಮ ದಿನ ನಿತ್ಯದ ಬದುಕಿನಲ್ಲಿ ಸಹಜವೆಂಬಂತೆ ನಡೆಯುತ್ತಿರುವ ಕೆಲ ಘಟನೆಗಳ ಬಗ್ಗೆ ನಮ್ಮನ್ನು ಎಚ್ಚರಿಸಿದಂತಿದೆ.ದಂತ ವೈದ್ಯರು ಹೇಳಿದ ಸಣ್ಣದೊಂದು ವಿಷಯ, ಎಷ್ಟೊಂದು ಪರಿಣಾಮ ಕಾರಿಯಾಗಿದ ಎಂದರೆ ಒಬ್ಬರ ಬದುಕನ್ನೇ ಬದಲಿಸಿತುಎಂಬುದೂ ಸತ್ಯ. ಬಾಯಲ್ಲಿ ತುಂಬ ನೀರು ತುಂಬಿಕೊಂಡಾಗ, 'ಕುಚು -ಕುಚು' ಶಬ್ದವೂ ಸರಿಯಾಗಿ ಬರದೇ, ಹಲ್ಲಿನಲ್ಲಿ ಸಿಲುಕಿದ ಕಸಗಳನ್ನು ಹೀರಿ ತೆಗೆಯಲು ಸಾಧ್ಯವಾಗದು. ಬದಲಿಗೆ, ಬಾಯಲ್ಲಿ ಸ್ವಲ್ಪ ಸ್ಥಳವಿಟ್ಟು ನೀರನ್ನು ಕುಲುಕಿದರೆ ಅವಕಾಶ ಸಿಕ್ಕು ಉದ್ದೇಶ ಪೂರ್ಣವಾಗಲು ಸಾಧ್ಯ. ಹೌದು. ನಾವೆಲ್ಲ ಉಪದೇಶ ಪ್ರವೀಣರು ! ಅವಕಾಶ ಸಿಕ್ಕಿತೆಂದರೆ, ನಮಗೆ ತಿಳಿದಿದ್ದು (ಕೆಲವೊಮ್ಮೆ ತಿಳಿಯದಿದ್ದನ್ನೂ) ಬೇರೆಯವರ ಮೇಲೆ ಹೇರುವ ಪ್ರಯತ್ನ ಮಾಡಿ, ಒಂದೇ ಕಂತಿನಲ್ಲಿ ಒಬ್ಬರನ್ನು ಸುಧಾರಿಸಿಬಿಡುವ ಮಹತ್ವಾಕಾಂಕ್ಷೆ ಹೊಂದಿರುವವರು. ಆದರೆ, ಅದರಿಂದ, ಉಪದೇಶ ಸ್ವೀಕರಿಸಿದ ವ್ಯಕ್ತಿ ಗೊಂದಲಕ್ಕೆ ಸಿಲುಕಿ, ಮೊದಲು ಯಾವುದು, ನಂತರ ಯಾವುದು ಎಂಬುದನ್ನೂ ಮರೆತು ಯಡವಟ್ಟು ಮಾಡಿಕೊಳ್ಳುವ ಸಾಧ್ಯತೆಗಳೇ ಹೆಚ್ಚು. ಹೀಗಾಗಿ, ಅಷ್ಟಷ್ಟೇ ವಿಷಯವನ್ನು ತಿಳಿಸುವತ್ತ ಮುಂದೆ ಸಾಗಿದರೆ ಎಲ್ಲವೂ ಸುಗಮ. ಅಷ್ಟೇ ಅಲ್ಲ, ಏನು, ಯಾವಾಗ ಎನ್ನುವುದನ್ನಷ್ಟೇ ಹೇಳಿ, ಹೇಗೆ ಎಂಬುದನ್ನು ಆ ವ್ಯಕ್ತಿಗೇ ಬಿಟ್ಟಾಗಲೇ ಎಲ್ಲವೂ ಸುಲಭ ಸಾಧ್ಯ.

**-ಶಂಕರನಾರಾಯಣ ಭಟ್,ಮಾಡಗೇರಿ, ಹೊನ್ನಾವರ**

### ಕನ್ನಡ ಪ್ರಸಾರ ಪುನಾರಂಭವಾಗಲಿ

ರೇಡಿಯೋ ಸಿಲೋನ್ ಇದೇ ಮಾರ್ಚ್30 ಕ್ಕೆ 75 ವಸಂತಗಳು ತುಂಬಿದ ಈ ಶುಭ ಸಂದರ್ಭದಲ್ಲಿ ಸಮಸ್ತ ಕನ್ನಡಿಗರ ಪರವಾಗಿ ಶುಭಕೋರಿ.ರೇಡಿಯೊ ಸಿಲೋನಿನ ದಕ್ಷಿಣ ಭಾರತೀಯ ವಿಭಾಗದಲ್ಲಿ ತಮಿಳು ಪ್ರಮುಖ ಭಾಷೆ ಆಗಿದ್ದು, ದಿನವೂ ಸಂಜೆ 4 ರಿಂದ 7ರ ವರೆಗೆ ಈ ಪ್ರಸಾರ ಇರುತ್ತಿತ್ತು. 60ರ ದಶಕದಲ್ಲಿ ಕನ್ನಡ, ಮಲಯಾಳಂ ಹಾಗೂ ತೆಲುಗು ಭಾಷೆಗಳ ಹಾಡುಗಳಿಗೆ ವಾರಕ್ಕೆ 15 ನಿಮಿಷದ ಅವಕಾಶ ಮಾತ್ರ ಇರುತ್ತಿತ್ತು. ಕನ್ನಡಕ್ಕೆ ಗುರುವಾರ ನಿಗದಿಯಾಗಿತ್ತು. ಹಾಡುಗಳು ಕನ್ನಡವಾದರೂ ಉದ್ಘೋಷಣೆ ತಮಿಳಲ್ಲೇ ಇರುತ್ತಿತ್ತು. 70ರ ದಶಕದಲ್ಲಿ ಜನಪ್ರಿಯತೆಯ ಉತ್ತುಂಗದಲ್ಲಿದ್ದ ರೇಡಿಯೊ ಸಿಲೋನ್ ತನ್ನ ಪ್ರಸಾರದ ಅವಧಿಯನ್ನು ಹೆಚ್ಚಿಸಿ ದಿನ ನಿತ್ಯ ಮಧ್ಯಾಹ್ನದ ಹಿಂದಿ ಪ್ರಸಾರ ಆರಂಭಿಸಿದಾಗ ದಕ್ಷಿಣ ಭಾರತೀಯ ವಿಭಾಗಕ್ಕೂ ಹೆಚ್ಚುವರಿ ಸಮಯ ದೊರೆತು ಅಪರಾಹ್ನ 2 ರಿಂದ 7ರವರಗೂ ಕಾರ್ಯಕ್ರಮ ಪ್ರಸಾರ ಇತ್ತು. ಆಗ ಹೆಚ್.ಎಂ.ವಿ ಯಲ್ಲಿ ಅಧಿಕಾರಿಯಾಗಿದ್ದ ಕನ್ನಡಿಗ ಏ.ಖ. ಮಹೇಶ್ ಅವರ ಪ್ರಯತ್ನದಿಂದ ದಿನವೂ ಅರ್ಧ ಗಂಟೆ ಕನ್ನಡ ಹಾಡುಗಳು ಪ್ರಸಾರವಾಗತೊಡಗಿದವು. ಅದುವರೆಗೆ ಸೀಮಿತ ಹಾಡುಗಳನ್ನಷ್ಟೇ ಹೊಂದಿದ್ದ ಕನ್ನಡ ಲೈಬ್ರರಿಗೆ ಇವರ ಪ್ರಯತ್ನದಿಂದ ಹೊಸ ಹೊಸ ಚಿತ್ರಗೀತೆ,ಚಿತ್ರಕಥೆ ಹಾಗೂ ಚಿತ್ರೇತರ ಹಾಡುಗಳ ಸೇರ್ಪಡೆಯಾಗತೊಡಗಿತು. ತುಳು ಚಿತ್ರಗಳ ಹಾಡುಗಳೂ ಮೊದಲು ಪ್ರಸಾರವಾದದ್ದು ರೇಡಿಯೊ ಸಿಲೋನಿನಲ್ಲಿಯೇ. 70ರ ದಶಕದ ಮಧ್ಯಭಾಗದಲ್ಲಿ ತುಳಸಿ ಸರ್ಮೀ ಮತ್ತು ಮೀನಾಕ್ಷಿ ಪೊಣ್ಣುದೊರೈ ಮುಂತಾದವರು ತಮಗೆ ಬರುತ್ತಿದ್ದ ಅರೆ ಬರೆ ಕನ್ನಡದಲ್ಲಿ ಮಾಡುತ್ತಿದ್ದ ಉದ್ಘೋಷಣೆ ಕೇಳಲು ವಿಶಿಷ್ಟವಾಗಿತ್ತು. ಅವರ ಉಚ್ಚಾರಗಳು ಹೇಗೇ ಇದ್ದಿರಲಿ, ವಿದೇಶಿ ನೆಲದಿಂದ ಕನ್ನಡ ಮಾತುಗಳನ್ನು ಆಲಿಸುವುದು ಖುಶಿ ಅಂತೂ ನೀಡುತ್ತಿತ್ತು. ಆಗ ಶಾರ್ಟ್ ವೇವ್ ಬ್ಯಾಂಡ್ನಲ್ಲಿ 11,905 ಕಿಲೋ ಹಾಟ್ಜ್ ತರಂಗಾಂತರದಲ್ಲಿ ಕಾರ್ಯಕ್ರಮ ಮೂಡಿ ಬರುತ್ತಿತ್ತು. ಆಗ ರೇಡಿಯೋ ಒಂದೇ ಮಾಹಿತಿ, ಮನರಂಜನೆ ಒದಗಿಸುವ ಮಾಧ್ಯಮವಾಗಿತ್ತು. ಸಿಲೋನ್ ಕೇಂದ್ರದಿಂದ ಮೂಡಿಬರುತ್ತಿದ್ದ ಕನ್ನಡ ಕಾರ್ಯಕ್ರಮ ನಮಗೆಲ್ಲಾ ರೋಮಾಂಚನ ಉಂಟುಮಾಡುತ್ತಿತ್ತು. ಸುಮಾರು ಮೂರು ದಶಕಗಳ ಹಿಂದೆಯೇ ಕನ್ನಡ ಕಾರ್ಯಕ್ರಮ ನಿಂತು ಹೋಗಿದೆ. ಈಗ ಶಾರ್ಟ್ ವೇವ್ ಪ್ರಸಾರವೂ ನಿಂತುಹೋಗಿ, ಅಂತರ್ಜಾಲದ ದಕ್ಷಿಣ ಭಾರತೀಯ ವಿಭಾಗದಲ್ಲಿ ಸಂಜೆ 4-45 ರಿಂದ 5-45ರ ವರೆಗೆ ತಮಿಳು/ತೆಲುಗು/ಮಲಯಾಳಂ ಹಾಡುಗಳು ಪ್ರಸಾರವಾಗುತ್ತಿದ್ದು ಕನ್ನಡ ಕಾರ್ಯಕ್ರಮ ಇಲ್ಲದಿರುವುದು ಬೇಸರ ತರಿಸಿದೆ. 75 ವಸಂತ ಪೂರೈಸಿರುವ ಈ ಶುಭ ಸಂದರ್ಭದಲ್ಲಿ ಕನ್ನಡ ಕಾರ್ಯಕ್ರಮದ ಪ್ರಸಾರವನ್ನು ಪುನರಾರಂಭಿಸಿ , ಕನ್ನಡದ ರೇಡಿಯೋ ಅಭಿಮಾನಿಗಳಿಗೆ ಗತ ವೈಭವ ಮರುಕಳಿಸುವಂತಾಗಲಿ ಎಂದು ಶುಭ ಹಾರೈಸೋಣ.

**-ಯಲುವಹಳ್ಳಿ ಸೊಣ್ಣೇಗೌಡ ಚಿಕ್ಕಬಳ್ಳಾಪುರ.**

### ಮನ ಮೆಚ್ಚುವಂತೆ ಆಚರಿಸಿದ ಜನುಮದಿನ

ಮೈಸೂರು ಕೊಡಗು ಲೋಕಸಭಾ ಸದಸ್ಯರು ಹಾಗೂ ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಜನುಮ ದಿನವನ್ನು ಅವರ ಅಭಿಮಾನಿಗಳು,ಹಿತೈಷಿಗಳು, ಬಿಜೆಪಿ ಪಕ್ಷದ ಮುಖಂಡರುಗಳು ರಕ್ತದಾನ, ನೇತ್ರದಾನ,ಉಚಿತ ಆರೋಗ್ಯ ತಪಾಸಣೆ, ಸ್ವಚ್ಛತಾ ಕಾರ್ಯಕ್ರಮ, ಹಣ್ಣು ಹಂಪಲು ವಿತರಣೆ ಸೇರಿದಂತೆ ಹಲವಾರು ಸೇವಾ ಕಾರ್ಯಗಳನ್ನು ಕೈಗೊಂಡು ಜನುಮ ದಿನ ಆಚರಿಸಿರುವುದು ತುಂಬ ಶ್ಲಾಘನೀಯ. ಅಭಿಮಾನಿಗಳಲ್ಲಿ, ಹಿತೈಷಿಗಳಲ್ಲಿ ತಮ್ಮ ಜನುಮ ದಿನದ ಆಚರಣೆಯನ್ನು ಯಾವುದೇ ರೀತಿಯ ಫ್ಲೆಕ್ಸ್ ಗಳನ್ನು ಅಳವಡಿಸದೇ ಸಾಂಸ್ಕೃತಿಕ ನಗರ ಮೈಸೂರಿನ ಅಂದವನ್ನು ಹಾಳುಗೆಡಿಸದ ರೀತಿಯಲ್ಲಿ ಆಚರಿಸಬೇಕು ಮತ್ತು ಹಲವಾರು ರೀತಿಯ ಸೇವಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಮನವಿ ಮಾಡಿದ್ದರು. ಮನವಿಯಂತೆ ಯದುವೀರ್ ಒಡೆಯರ್ ಅವರ ಜನುಮ ದಿನ ಆಚರಿಸಿದ ಎಲ್ಲರೂ ಅಭಿನಂದನಾರ್ಹರು.

**-ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.**

**ಓದುಗರ ಓಣಿಗೆ ಭೇಟಿ ಕೊಡಿ**
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

# ಭಾರತ-ನೇಪಾಳದ ಗಾಯಕ್ಕೆ ಬಾಲೇನ್ ಮುಲಾಮು ಹಚ್ಚುವರೆ?

**ನೇಪಾಳದಲ್ಲಿ ಕೆ.ಪಿ.ಶರ್ಮಾ ಓಲೀ ಮತ್ತು ರಮೇಶ್ ಲೇಖಕ್‌ರನ್ನು ಬಂಧಿಸಿರುವುದು ಚೀನಾಕ್ಕೆ ನೀಡಿರುವ ತಿರುಗೇಟು ಮತ್ತು ಭಾರತಕ್ಕೆ ಶುಭ ಶಕುನ. ಭಾರತ-ನೇಪಾಳ ಸಂಬಂಧದ ವಿಷಯದಲ್ಲಿ ಹೊಸ ಅಧ್ಯಾಯ ಬರೆಯುವ ಕ್ಷಣ ಬಂದಿದೆ. ಬಾಲೇನ್‌ರ ನಿರೀಕ್ಷೆಯನ್ನು ತಲುಪುವ ಜವಾಬ್ದಾರಿ ಭಾರತದ ಮೇಲೇ ಇದೆ.**

ಸಂಗತ
ಡಾ.ವಿಜಯ್ ದರಡಾ
vveditoped@gmail.com

ನೇಪಾಳದ ಹೊಸ ಪ್ರಧಾನಿ ಬಾಲೇನ್ ಶಾ ಅವರ ಅಕ್ಕ ಸುಜಾತಾ ಶಾ ಸೆಜೆಕನ್ ಬೆಂಗಳೂರಿನಲ್ಲಿ ವಾಸಿಸುತ್ತಾರೆ. ಬಾಲೇನ್ ಶಾ ನೇಪಾಳದ ಸಂಸತ್ ಚುನಾವಣೆಯಲ್ಲಿ ಭರ್ಜರಿ ಬಹುಮ ತದೊಂದಿಗೆ ಗೆದ್ದ ಸುದ್ದಿ ಬರುತ್ತಿದ್ದಂತೆ ಸುಜಾತಾ ಅಂತಾರಾಷ್ಟ್ರೀಯ ನ್ಯೂಸ್ ಏಜೆನ್ಸಿಯೊಂದಕ್ಕೆ ಸಂದರ್ಶನ ನೀಡಿ ದ್ದರು. ಅದರಲ್ಲಿಅವರು, 'ಭಾರತ ಹಾಗೂ ನೇಪಾಳದ ನಡುವಿನ ಸಂಬಂಧ ಶತಮಾನಕ್ಕೂ ಹಳೆಯದು. ಅದನ್ನು ಮುರಿಯಲುಯಾರಿಂದಲೂ ಸಾಧ್ಯವಿಲ್ಲ. ಇತ್ತೀಚೆಗೆ ತಲೆದೋರಿರುವ ಭಿನ್ನಾಭಿಪ್ರಾಯಗಳು ತಾತ್ಕಾಲಿಕವಷ್ಟೆ. ಭವಿಷ್ಯದಲ್ಲಿ ಮತ್ತೆ ಉಭಯ ದೇಶಗಳು ಒಂದಾಗುತ್ತವೆ ಎಂದು ಹೇಳಿದ್ದರು. ಬಾಲೇನ್ ಶಾ ಪ್ರಧಾನಿಯಾದರೆ ಮಾತ್ರ ಭಾರತ ಮತ್ತು ನೇಪಾಳದ ನಡುವಿನ ದ್ವಿಪಕ್ಷೀಯ ಸಂಬಂಧ ಸುಧಾರಿಸುತ್ತದೆ ಎಂದೂ ಆಕೆ ಸ್ಪಷ್ಟವಾಗಿ ಹೇಳಿದ್ದರು.

ಈಗ ಸುಜಾತಾ ಅವರ ಆಸೆ ಈಡೇರಿದೆ. ಆಕೆಯ ತಮ್ಮ, 35 ವರ್ಷದ ರ್‍ಯಾಪರ್ ಹಾಡುಗಾರ ಬಾಲೇನ್ ಶಾ ನೇಪಾಳದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಹಾಗಿದ್ದರೆ ನಾವೀಗ ಭಾರತ ಮತ್ತು ನೇಪಾಳದ ನಡುವಿನ ಹಳಸಿದ ಸಂಬಂಧ ಸುಧಾರಿಸುತ್ತದೆ ಎಂದು ಆಶಿಸೋಣವೇ? ಬಾಲೇನ್ ಶಾ ಅಂತಹ ಪ್ರಯತ್ನಕ್ಕೆ ಕೈ ಹಾಕುತ್ತಾರೆಯೇ?

ಕಳೆದ ಒಂದೂವರೆ ದಶಕದಲ್ಲಿ ಉಭಯ ದೇಶಗಳ ನಡುವಿನ ಸಂಬಂಧ ಹಳ್ಳ ಹಿಡಿದಿದೆ. ನೇಪಾಳದಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರವರ್ಧಮಾನಕ್ಕೆ ಬರುವುದಕ್ಕೂ ಮೊದಲು ಭಾರತದ ಜೊತೆಗೆ ಆ ದೇಶಯಾವ ರೀತಿಯ ಸೌಹಾರ್ದ ಮತ್ತು ಸ್ನೇಹಶೀಲವಾದ ಸಂಬಂಧ ಹೊಂದಿತ್ತೋ ಅಂತಹ ಪರಿಸ್ಥಿತಿ ಮರುಸ್ಥಾಪನೆಯಾಗುವಂತೆ ಬಾಲೇನ್ ಶಾ ಮಾಡುತ್ತಾರೆಯೇ? ಹಾಗೆ ಮಾಡುವುದು ಹೌದಾದರೆ ಅವರು ಚೀನಾದ ಜೊತೆಗೆ ಯಾವ ರೀತಿಯ ಸಂಬಂಧ ಇರಿಸಿಕೊಳ್ಳುತ್ತಾರೆ? ವ್ಯೂಹಾತ್ಮಕವಾಗಿ ಮತ್ತುರಾ ಜತಾಂತ್ರಿಕವಾಗಿ ನೇಪಾಳವು ಜಾಗತಿಕ ಸೂಪರ್ ಪವರ್ ರಾಷ್ಟ್ರಗಳಿಗೆ ಬಹಳ ಅಗತ್ಯವಾಗಿ ಬೇಕಾದ ದೇಶ. ಆದ್ದರಿಂದಲೇ ನೇಪಾಳದ ಕುರಿತು ಜಾಗತಿಕ ವೇದಿಕೆಯಲ್ಲಿ ಸಾಕಷ್ಟು ಪ್ರಶ್ನೆಗಳು ಬರುತ್ತಿರುತ್ತವೆ. ನೇಪಾಳದಲ್ಲೂ, ನೆರೆದೇಶಗಳಲ್ಲೂ ಇಂತಹ ಪ್ರಶ್ನೆಗಳು ಹೆಚ್ಚು ಕೇಳಿಬರುತ್ತವೆ.

ನೇಪಾಳದ ಜನರು ಬಾಲೇನ್ ಶಾ ಅವರಲ್ಲಿ ಅಪಾರವಾದ ನಂಬಿಕೆಯಿಟ್ಟಿದ್ದಾರೆ. 2008ರಿಂದ ನೇಪಾಳಿಗರು ತಮ್ಮ ದೇಶದಲ್ಲಿ ನಾನಾರೀತಿಯ ಮೈತ್ರಿ ಸರಕಾರಗಳನ್ನೂ, ಅವುಗಳ ದುರಾಡಳಿತವನ್ನೂ ನೋಡಿ ಬೇಸತ್ತಿದ್ದರು. ಆಡಳಿತದಲ್ಲಿ ಚೀನಾದ ಹಸ್ತಕ್ಷೇಪವನ್ನು ಕಂಡು ಒಳಗೊಳಗೇ ಉರಿದುಕೊಂಡಿದ್ದರು. ಅವರಿಗೊಂದು ಬಲಿಷ್ಠವಾದ ಸ್ವತಂತ್ರ ಸರಕಾರ ಬೇಕಿತ್ತು. ಅವರ ಆಶೋತ್ತರಗಳನ್ನು ಕೇಳಿಸಿಕೊಳ್ಳುವ ಗಟ್ಟಿಯಾದನಾಯಕ ಬೇಕಿತ್ತು. ಈ ಎಲ್ಲ ನಿರೀಕ್ಷೆಗಳ ಪರಿಣಾಮವಾಗಿ, ಬಹಳ ವರ್ಷಗಳ ಬಳಿಕ ನೇಪಾಳದಲ್ಲಿ ಬಾಲೇನ್ ನೇತೃತ್ವದ ರಾಷ್ಟ್ರೀಯ ಸ್ವತಂತ್ರ ಪಕ್ಷ ಉತ್ತಮ ಬಹುಮತ ಪಡೆದು ಅಧಿಕಾರಕ್ಕೆ ಏರಿದೆ. ಸ್ಪಷ್ಟವಾಗಿ ಹೇಳಬೇಕು ಅಂದರೆ, ಈಗ ಬಾಲೇನ್ ಬಳಿ ಜನಾದೇಶವಿದೆ. ನೇಪಾಳವನ್ನು ಮರುನಿರ್ಮಾಣ ಮಾಡಲು ಬೇಕಾದ ಅಧಿಕಾರ ಕೂಡ ಅವರ ಕೈಯಲ್ಲಿದೆ. ಸರಕಾರಕ್ಕೆ ಅಭದ್ರತೆಯ ಭೀತಿಯಿಲ್ಲ.

ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಬಾಲೇನ್ ಶಾ ತಮ್ಮ ಪ್ರಪ್ರಥಮ ಸಚಿವ ಸಂಪುಟ ಸಭೆಯಲ್ಲೇ ಕಠಿಣ ಆಡಳಿತಕ್ಕೆ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ. ಬಾಲೇನ್ ಪ್ರಧಾನಿಯಾಗುವುದಕ್ಕೆ ಮೂಲ ಕಾರಣ ಈ ಹಿಂದೆ ನೇಪಾಳದಲ್ಲಿ ನಡೆದಿದ್ದ ಜೆನ್‌ಝೀ ಚಳವಳಿ. ಅದರಲ್ಲಿ ಯುವಕರ ನೇತೃತ್ವವನ್ನು ಸ್ವತಃ ಬಾಲೇನ್ ಅವರೇ ವಹಿಸಿದ್ದರು. ಆ ಹೋರಾಟದಲ್ಲಿ ಸರಕಾರದ ಗುಂಡಿನ ದಾಳಿಗೆ ಅನೇಕ ಯುವಕರು ಪ್ರಾಣ ಕಳೆದುಕೊಂಡಿದ್ದಾರೆ. ಅಂತಹ ಘಟನೆಗಳ ಬಗ್ಗೆ ತನಿಖೆ ನಡೆಸಲು ಗೌರಿ ಬಹಾದೂರ್ ಕರ್ಕಿ ನೇತೃತ್ವದಲ್ಲಿ ಆಯೋಗವನ್ನು ರಚಿಸಲಾಗಿತ್ತು. ಆ ಆಯೋಗವು ಸುಶೀಲಾ ಕರ್ಕಿ ನೇತೃತ್ವದ ಮಧ್ಯಂತರ ಸರಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತ್ತು. ಆ ವರದಿಯ ಆಧಾರದಲ್ಲಿ ತಕ್ಷಣ ಕ್ರಮ ಕೈಗೊಳ್ಳುವಂತೆ ಇದೀಗ ಬಾಲೇನ್ ಶಾ ಆದೇಶ ನೀಡಿದ್ದಾರೆ. ಆ ಆದೇಶದ ಬೆನ್ನಲ್ಲೇ ಮಾಜಿ ಪ್ರಧಾನಿ ಹಾಗೂ ನೇಪಾಳ್ ಕಮ್ಯುನಿಸ್ಟ್ ಪಾರ್ಟಿ ನಾಯಕ ಕೆ.ಪಿ.ಓಲೀ ಶರ್ಮಾ ಹಾಗೂ ಅವರ ಸರಕಾರದಲ್ಲಿ ಗೃಹ ಸಚಿವರಾಗಿದ್ದ ರಮೇಶ್ ಲೇಖಕ್‌ರನ್ನು ಬಂಧಿಸಲಾಗಿದೆ. ನೇಪಾಳದಲ್ಲಿ ಕಮ್ಯುನಿಸ್ಟ್ ಸರಕಾರವಿದ್ದಾಗ ಅಂದಿನ ಪ್ರಧಾನಿ ಕೆ.ಪಿ.ಓಲೀ ಚೀನಾದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದರು. ಅಧಿಕಾರದಲ್ಲಿ ಇದ್ದಾಗಲೂ ಮತ್ತು ಅಧಿಕಾರಾವಧಿ ಮುಗಿದ ನಂತರವೂ ಚೀನಾದ ಪರ ಧೋರಣೆಗಳನ್ನು ಅವರು ಪ್ರದರ್ಶಿಸುತ್ತಿದ್ದುದು ಎಲ್ಲರಿಗೂ ಗೊತ್ತು. ಅವರು ಪ್ರಧಾನಿಯಾಗಿದ್ದಾಗ ನೇಪಾಳಕ್ಕೆ ಹೌ ಯಾಂಕಿ ಎನ್ನುವ ಹೆಣ್ಣುಮಗಳು ಚೀನಾದ ರಾಯಭಾರಿಯಾಗಿದ್ದರು. ಆಕೆ ಅತ್ಯಂತ ಸುಂದರಿ. ಓಲೀ ಮೇಲೆ ಹೌ ಯಾಂಕಿ ಪ್ರಬಲವಾದ ನಿಯಂತ್ರಣ ಹೊಂದಿದ್ದರು ಎಂಬ ಗುಸುಗುಸು ಎಲ್ಲೆಡೆ ಕೇಳಿಬರುತ್ತಿತ್ತು.

ಇನ್ನು, ರಮೇಶ್ ಲೇಖಕ್ ಕೂಡ ಚೀನಾದ ಅಜೆಂಡಾವನ್ನು ನೇಪಾಳದಲ್ಲಿ ಹರಡುತ್ತಿದ್ದ ಪ್ರಭಾವಿ ವ್ಯಕ್ತಿ. ಹೀಗಾಗಿ ಈಗ ಬಾಲೇನ್ ಶಾ ಅವರು ಕೆ.ಪಿ.ಶರ್ಮಾ ಓಲೀ ಮತ್ತು ರಮೇಶ್‌ರನ್ನು ಬಂಧಿಸಿರುವುದು ಚೀನಾಕ್ಕೆ ಕಠಿಣ ಸಂದೇಶ ರವಾನೆ ಮಾಡಿದಂತಾಗಿದೆ. 'ಎಡಪಂಥೀಯ ಸಿದ್ಧಾಂತವನ್ನು ಹರಡುವ ಉದ್ದೇಶದಿಂದ ನೇಪಾಳವನ್ನು ತನ್ನ ವಸಾಹತುವನ್ನಾಗಿ ಮಾಡಿಕೊಳ್ಳಲು ಚೀನಾ ಯತ್ನಿಸಿದರೆ ನಾವು ಒಪ್ಪುವುದಿಲ್ಲ ಎಂಬ ಸೂಚ್ಯವಾದ ಎಚ್ಚರಿಕೆಯ ಸಂದೇಶವು ಚೀನಾಕ್ಕೆ ರವಾನೆಯಾಗಿದೆ. ಓಲೀ ಮತ್ತು ರಮೇಶ್ ಬಂಧನಕ್ಕೆ ಚೀನಾ ಇನ್ನೂ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ, ಖಂಡಿತ ಅದು ಈ ಎಲ್ಲಾ ಬೆಳವಣಿಗೆಗಳನ್ನೂ ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಗಮನಾರ್ಹ ಸಂಗತಿಯೆಂದರೆ, ಬಾಲೇನ್ ಶಾ ಈ ಹಿಂದೆಯೂ ಚೀನಾದ ಹಿತಾಸಕ್ತಿಗಳನ್ನು ಕಡೆಗಣಿಸಿ ಸದ್ದು ಹೊಡೆದಿದ್ದರು. ಕೆ.ಪಿ.ಶರ್ಮಾ ಓಲೀ ಪ್ರಧಾನಿಯಾಗಿದ್ದಾಗ ಝಾಪಾ ಸಂಸದೀಯ ಕ್ಷೇತ್ರದ ವ್ಯಾಪ್ತಿಯಲ್ಲಿ ನೇಪಾಳ-ಚೀನಾ ಸ್ನೇಹಶೀಲ ಔದ್ಯೋಗಿಕ ಪಾರ್ಕ್ ಸ್ಥಾಪನೆಗೆ ಅಡಿಗಲ್ಲು ಹಾಕಲಾಗಿತ್ತು. ಆದರೆ, ಬಾಲೇನ್ ಶಾ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಈ ಯೋಜನೆಯನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿದ್ದರು. ಚೀನಾದ ಮಹತ್ವಾಕಾಂಕ್ಷಿ ಒನ್ ಬೆಲ್ಟ್ ಒನ್ ರೋಡ್ (ಬಿಆರ್‌ಐ) ಯೋಜನೆಯಲ್ಲಿ ಈ ಔದ್ಯೋಗಿಕ ಪಾರ್ಕ್ ಕೂಡ ಮಹತ್ವದ್ದಾಗಿತ್ತು. ಇದೆಲ್ಲವನ್ನೂ ನೋಡಿದರೆ ಚೀನಾದ ನಿರ್ದೇಶನದಂತೆ ಕೆಲಸ ಮಾಡುವ ವ್ಯಕ್ತಿ ತಾನಲ್ಲ ಎಂಬ ಸಂದೇಶವನ್ನು ಸರಿಯಾದ ರೀತಿಯಲ್ಲೇ ಬಾಲೇನ್ ಶಾ ರವಾನೆ ಮಾಡಿದ್ದಾರೆ.

ಹಾಗಿದ್ದರೆ ಇದು ಭಾರತಕ್ಕೆ ಧನಾತ್ಮಕ ಸುಳಿವೇ? ತಕ್ಕಮಟ್ಟಿಗೆ ಹೌದು. ಆದರೆ, ಚೀನಾದಿಂದ ಅಂತರ ಕಾಯ್ದುಕೊಳ್ಳಲು ನೇಪಾಳದ ಪ್ರಧಾನಿ ಮುಂದಾಗಿದ್ದಾರೆ ಎಂದ ಮಾತ್ರಕ್ಕೆ ಅವರು ಭಾರತವನ್ನು ಬಾಚಿ ತಬ್ಬಿಕೊಳ್ಳುತ್ತಾರೆ ಎಂದು ಕುರುಡಾಗಿ ಭಾವಿಸುವುದು ತಪ್ಪಾಗುತ್ತದೆ. ಇದಕ್ಕೆ ಈ ಹಿಂದಿನ ಎರಡು ನಿದರ್ಶನಗಳೇ ಉದಾಹರಣೆ. ಬಾಲೇನ್ ಶಾ ಕಠ್ಮಂಡು ನಗರದ ಮೇಯರ್ ಆಗಿದ್ದಾಗ ಭಾರತದ ಆದಿಪುರುಷ್ ಸಿನಿಮಾವನ್ನು ನಿಷೇಧಿಸಿದ್ದರು. ಆ ಸಿನಿಮಾದಲ್ಲಿ ಸೀತೆಯನ್ನು ಭಾರತದ ಮಗಳು ಎಂಬಂತೆ ಬಿಂಬಿಸಿದ್ದಾರೆಂಬ ಕಾರಣಕ್ಕೆ ಅವರು ಕಠಿಣ ಕ್ರಮ ಕೈಗೊಂಡಿದ್ದರು. ಸೀತೆ ಹುಟ್ಟಿದ್ದು ಜನಕಪುರದಲ್ಲಿ, ಅದು ನೇಪಾಳದಲ್ಲಿದೆ ಎಂಬುದು ಪೌರಾಣಿಕ ಸತ್ಯ. ಅದನ್ನೇ ಎಲ್ಲರೂ ನಂಬುತ್ತಾರೆ. ಆದರೆ, ಸಿನಿಮಾದಲ್ಲಿ ಬೇರೆ ರೀತಿಯಲ್ಲಿ ಬಿಂಬಿಸಿದ್ದನ್ನು ಬಾಲೇನ್ ವಿರೋಧಿಸಿದ್ದರು. ಮತ್ತೊಮ್ಮೆ, ಕೆ.ಪಿ.ಶರ್ಮಾ ಓಲೀ ಸರಕಾರ ಭಾರತದ ಉತ್ತರಾಖಂಡವನ್ನು ನೇಪಾಳದಲ್ಲಿ ಸೇರಿಸಿ ನಕ್ಷೆ ಬಿಡುಗಡೆ ಮಾಡಿತ್ತು. ಅದನ್ನು ಬಾಲೇನ್ ಶಾ ಬೆಂಬಲಿಸಿದ್ದು ಮಾತ್ರವಲ್ಲ, ತಮ್ಮ ಮೇಯರ್ ಕಚೇರಿಯಲ್ಲೂ ಆ ನಕ್ಷೆಯನ್ನೇ ದೊಡ್ಡದಾಗಿ ಹಾಕಿಕೊಂಡಿದ್ದರು. ಹೀಗಾಗಿ ಅವರಿಗೆ ಭಾರತದ ಮೇಲೆ ಕುರುಡು ಪ್ರೀತಿಯೇನೂ ಇಲ್ಲ. ನೇಪಾಳಿ ರಾಷ್ಟ್ರೀಯವಾದವನ್ನು ಮೆರೆಸುವುದಕ್ಕೆ ಏನು ಮಾಡಬೇಕೋ ಅದನ್ನೇ ಬಾಲೇನ್ ಮಾಡುತ್ತಾರೆ. ನೇಪಾಳದ ಯುವಕರಿಗೆ ಬೇಸರವಾಗುವ ಏನನ್ನೂ ಅವರು ಮಾಡಲು ಹೋಗುವುದಿಲ್ಲ. ನೇಪಾಳದ ವ್ಯೂಹಾತ್ಮಕ ಆಸಕ್ತಿಗಳ ಮೇಲೆ ಕಣ್ಣಿಟ್ಟುಕೊಂಡೇ ಅವರು ವ್ಯವಹರಿಸುತ್ತಾರೆ ಎಂಬುದರಲ್ಲಿ ಅನುಮಾನವಿಲ್ಲ.

ನೇಪಾಳ ಲ್ಯಾಂಡ್‌ಲಾಕ್ಡ್ ದೇಶ. ಅದರ ಸುತ್ತಲೂ ಬೇರೆ ದೇಶದ ಗಡಿಗಳಿವೆ. ಭಾರತದ ಜೊತೆ ನೇಪಾಳಕ್ಕೆ 1250 ಕಿ.ಮೀ. ಉದ್ದದ ಗಡಿಯಿದೆ. ಚೀನಾ ಜೊತೆ 1414 ಕಿ.ಮೀ. ಉದ್ದದ ಗಡಿಯಿದೆ. ಚೀನಾದ ಜೊತೆಗಿನ ಗಡಿಯಲ್ಲಿ ಕಡಿದಾದ ಮತ್ತು ಎತ್ತರದ ಬೆಟ್ಟಗಳು, ಹಿಮಾಲಯದ ಪರ್ವತಗಳಿವೆ. ಹೀಗಾಗಿ ಚೀನಾಕ್ಕಿಂತ ಹೆಚ್ಚಾಗಿ ಭಾರತದ ಜೊತೆಗೆ ವ್ಯಾಪಾರ ನಡೆಸುವುದೇ ನೇಪಾಳಕ್ಕೆ ಲಾಗಾಯ್ತಿನಿಂದಲೂ ಅನುಕೂಲಕರ ಸಂಗತಿ. ಅಲ್ಲದೆ, ಭಾರತೀಯ ಸಂಸ್ಕೃತಿಗೆ ನೇಪಾಳದ ಸಂಸ್ಕೃತಿ ಹತ್ತಿರದಲ್ಲಿದೆ. ನೇಪಾಳದಲ್ಲಿ ಹಿಂದೂಗಳು ಹೆಚ್ಚಿದ್ದಾರೆ. ಸ್ವತಃ ಬಾಲೇನ್ ಶಾ ಕೂಡ ಭಾರತೀಯ ಮೂಲದ ಧಾರ್ಮಿಕ ಗುಂಪಾಗಿರುವ ಮಧೇಸಿ ಸಮುದಾಯಕ್ಕೆ ಸೇರಿದವರು. ಆದರೆ ಅದನ್ನು ಅವರು ಹೆಚ್ಚಾಗಿ ತೋರಿಸಿಕೊಳ್ಳುವುದಿಲ್ಲ. ಚೀನಾದ ಜೊತೆಗೆ ನೇಪಾಳಕ್ಕೆ ಇಂತಹ ಯಾವುದೇ ಸಾಂಸ್ಕೃತಿಕ ಅಥವಾ ಸಾಮಾಜಿಕ ಸಾಮ್ಯತೆ ಇಲ್ಲ. ನನ್ನ ಪ್ರಕಾರ ಬಾಲೇನ್ ಶಾ ಖಂಡಿತವಾಗಿಯೂ ಭಾರತದ ಕುರಿತು ಆಶಾಭಾವನೆ ಹೊಂದಿದ್ದಾರೆ. ಅವರ ನಿರೀಕ್ಷೆಗಳನ್ನು ತಲುಪುವುದಕ್ಕೆ ಭಾರತ ಸರಕಾರ ಗೌರವಯುತ ಸಹಕಾರ ಸಂಬಂಧದ ನಡೆಯನ್ನು ಪ್ರದರ್ಶಿಸಿದರೆ ಆಗ ಹಳೆಯ ಗಾಯಗಳು ಮಾಯುವುದರ ಜೊತೆಗೆ ಪರ್ವತ ಪ್ರದೇಶದಲ್ಲಿ ದ್ವಿಪಕ್ಷೀಯ ಸಹಕಾರದ ಹೊಸ ಬೆಚ್ಚಗಿನ ಗಾಳಿಯೂ ಬೀಸತೊಡಗುತ್ತದೆ. ಹಳಿ ತಪ್ಪಿರುವ ಸಂಬಂಧವನ್ನು ಮತ್ತೆ ಸ್ನೇಹಪೂರ್ವಕವಾಗಿ ಕಟ್ಟಿಕೊಳ್ಳಲು ಇದು ನೇಪಾಳ ಮತ್ತು ಭಾರತ ಎರಡೂ ದೇಶಗಳಿಗೆ ಸಿಕ್ಕ ಒಳ್ಳೆಯ ಅವಕಾಶ. ಎಲ್ಲವೂ ಒಳ್ಳೆಯದಾಗಲಿದೆ, ಮತ್ತೊಮ್ಮೆ ಭಾರತದ ಸ್ನೇಹಿತ ರಾಷ್ಟ್ರವಾಗಿ ನೇಪಾಳ ಹೊರಹೊಮ್ಮಲಿದೆ ಎಂದು ಮನಸಾರೆ ಹಾರೈಸೋಣ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:77

## ಸಮಾಚಾರ ಸಣ್ಣದಲ್ಲ

### ಎವರೆಸ್ಟ್ ಆರೋಹಿಗಳಿಗೆ ವಿಷ ನೀಡಿದ ಆರೋಪ: 185 ₹ ಕೋಟಿ ಹಗರಣ

**ಕಠ್ಮಂಡು:** ವಿಶ್ವದ ಅತ್ಯುನ್ನತ ಶಿಖರವಾದ ನೇಪಾಳದ ಮೌಂಟ್ ಎವರೆಸ್ಟ್ ಪರ್ವತಾರೋಹಣದ ಹೆಸರಿನಲ್ಲಿ ಮಾರ್ಗದರ್ಶಕರೇ ಹತ್ತಿರಹತ್ತಿರ 185 ಕೋಟಿ ರು. ವಂಚಿಸಿದ ಪ್ರಕರಣವೊಂದು ಬೆಳಕಿಗೆ ಬಂದಿದೆ. ಪರ್ವತಾರೋಹಿಗಳಿಗೆ ಸುಸ್ತು ಬರಿಸುವಂತಹ, ಕುಸಿಯುವಂತಹ ಸೋಡಾಮಿಶ್ರಿತ ಆಹಾರ ನೀಡುವುದು, ನಂತರ ವೈದ್ಯಕೀಯ ತುರ್ತು ಪರಿಸ್ಥಿತಿ ಎಂದು ಹೇಳಿ ಹೆಲಿಕಾಪ್ಟರ್ ಅನ್ನು, ಆಮೇಲೆ ತಾವು ಶಾಮೀಲಾಗಿರುವ ಆಸ್ಪತ್ರೆಗೆ ವ್ಯಕ್ತಿಗಳನ್ನು ಸೇರಿಸಲಾಗುತ್ತದೆ. ಅಲ್ಲಿ ತುರ್ತು ವೈದ್ಯಕೀಯ ಸ್ಥಿತಿಯ ಕಾರಣ ನೀಡಿ ವಿಮಾ ಕಂಪನಿಗಳಿಂದ ಹಣ ಕಕ್ಕಿಸುವ ವ್ಯವಸ್ಥಿತ ಯತ್ನ ನಡೆಯುತ್ತಿತ್ತು. ಇತ್ತೀಚೆಗಿನ ಪ್ರಕರಣವೊಂದರ ಮೂಲಕ ಇಂತಹ ಆಘಾತಕಾರಿ ಸಂಗತಿ ಬೆಳಕಿಗೆ ಬಂದಿದೆ. ಮೌಂಟ್ ಎವರೆಸ್ಟ್ ಮಾರ್ಗದರ್ಶಕರು ಪರ್ವತಾರೋಹಿಗಳಿಗೆ ವಿಷದ ಆಹಾರವನ್ನು ನೀಡಿ ಅವರನ್ನು ಅನಾರೋಗ್ಯಕ್ಕೆ ಒಳಪಡಿಸಿದ್ದಾರೆ, ಹೆಲಿಕಾಪ್ಟರ್ ಮೂಲಕ ಅಲ್ಲಿಂದ ತೆರಳಲು ಈ ರೀತಿ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಒಟ್ಟಾರೆ ಇಂತಹ ವಂಚನೆ ಈ ಪ್ರಕರಣದಲ್ಲಿ ವಿಮೆಗೆ ಅರ್ಜಿ ಸಲ್ಲಿಸಿ ಇದುವರೆಗೆ ಕಠ್ಮಂಡು ಪೋಸ್ಟ್ ವರದಿಯ ಪ್ರಕಾರ, ಈ ಪ್ರಕರಣದಲ್ಲಿ 32 ವ್ಯಕ್ತಿಗಳ ಮೇಲೆ ಆರೋಪ ಹೊರಿಸಲಾಗಿದೆ. 9 ಜನರನ್ನು ಬಂಧಿಸಲಾಗಿದೆ, ಉಳಿದವರು ಪರಾರಿಯಾಗಿದ್ದಾರೆ. ವೈದ್ಯಕೀಯ ತುರ್ತು ಪರಿಸ್ಥಿತಿಯ ಸಮಯದಲ್ಲಿ ಪ್ರವಾಸಿಗರನ್ನು ಆಸ್ಪತ್ರೆಗೆ ಕರೆದೊಯ್ಯಲು ಹೆಲಿಕಾಪ್ಟರ್ ಅನ್ನು ಕರೆಸಲಾಗುತ್ತದೆ. ಇದಾದ ನಂತರ ಅನಾರೋಗ್ಯಪೀಡಿತರು ವಿಮೆಗೆ ಅರ್ಜಿ ಸಲ್ಲಿಸುತ್ತಾರೆ. ಮಾರ್ಗದರ್ಶಕರು ತಮ್ಮ ಜೊತೆಗಿದ್ದ ವಿದೇಶಿ ಪ್ರಯಾಣಿಕರು ಸಾಯುವ ಅಪಾಯವಿದೆ ಎಂದು ಬೆದರಿಸಿದರು. ಆದರೆ, ಅಂತಹ ಯಾವುದೇ ಸಮಸ್ಯೆ ಇರಲಿಲ್ಲ. ಆ ಪ್ರವಾಸಿಗರಿಗೆ ನೀಡಲಾದ ಆಹಾರದಲ್ಲಿ ವಿಷ ಇತ್ತು ಎಂದು ಕೂಡ ವರದಿಯಲ್ಲಿ ಹೇಳಲಾಗಿದೆ. ಮಾರ್ಗದರ್ಶಕರು ಪ್ರವಾಸಿಗರ ಆಹಾರಕ್ಕೆ ಡೈಮಾಕ್ಸ್ (ಅಸೆಟಾಜೋಲಾಮೈಡ್) ಮಾತ್ರೆಗಳನ್ನು ಹಾಕುತ್ತಿದ್ದರು ಎನ್ನಲಾಗಿದೆ.

### ರಾಜ್ಯಸಭಾ ಸದಸ್ಯ ಚಡ್ಡಾ ಉಪನಾಯಕ ಸ್ಥಾನಕ್ಕೆ ಆಪ್ ಕೊಕ್

**ದೆಹಲಿ:** ರಾಜ್ಯಸಭೆಯಲ್ಲಿ ಆಡಳಿತ ಪಕ್ಷದ ವಿರುದ್ಧ ಗುಡುಗುತ್ತಿದ್ದ ಆಪ್ ಸಂಸದ ರಾಘವ್ ಚಡ್ಡಾ ಅವರ ರೆಕ್ಕೆ ಕತ್ತರಿಸುವ ಕೆಲಸವನ್ನು ಆಪ್ ತಾನೇ ಮಾಡಿದೆ.

ಕೇವಲ 33ನೇ ವಯಸ್ಸಿಗೆ ರಾಜ್ಯಸಭೆ ಪ್ರವೇಶಿಸಿ ಸಂಸತ್ತಿನಲ್ಲಿ ಎಎಪಿ ಪರವಾಗಿ ಘರ್ಜಿಸುತ್ತಿದ್ದ ರಾಘವ್ ಚಡ್ಡಾ, ಈಗ ರಾಜ್ಯಸಭೆಯಲ್ಲಿ ಮಾತನಾಡುವಂತಿಲ್ಲ. ಆಮ್ ಆದ್ಮಿ ಪಾರ್ಟಿ ರಾಘವ್ ಚಡ್ಡಾ ಅವರನ್ನು ರಾಜ್ಯಸಭೆಯ ಪಕ್ಷದ ಉಪನಾಯಕ ಸ್ಥಾನದಿಂದ ದಿಢೀರ್ ಆಗಿ ಕೆಳಗಿಳಿಸಿದೆ. ಅಷ್ಟೇ ಅಲ್ಲ ಅವರಿಗೆ ಸದನದಲ್ಲಿ ಮಾತನಾಡಲು ಸಮಯವನ್ನೇ ನೀಡಬಾರದು ಎಂದು ಅಧಿಕೃತವಾಗಿ ಮನವಿ ಮಾಡಿದೆ. ಇದಕ್ಕೆ ಕಾರಣ ನಿಗೂಢವಾಗಿದೆ. ಕೇಜ್ರಿವಾಲ್ ದೋಷಮುಕ್ತರಾದಾಗ ಅವರನ್ನು ಭೇಟಿ ಮಾಡಿ, ಚಡ್ಡಾ ಶುಭ ಹಾರೈಸಿಲ್ಲ ಎಂಬುದೇ ಈ ಸ್ಥಿತಿಗೆ ಕಾರಣ ವೆನ್ನಲಾಗಿದೆ. ಮೂಲಗಳ ಪ್ರಕಾರ, ರಾಘವ್ ಚಡ್ಡಾ ಅವರನ್ನು ಉಪನಾಯಕ ಸ್ಥಾನದಿಂದ ತೆಗೆದುಹಾಕಿರುವುದರ ಹಿಂದೆ ಪಕ್ಷದ ಸಂಸದೀಯ ಕಾರ್ಯತಂತ್ರದಲ್ಲಿ ದೊಡ್ಡ ಬದಲಾವಣೆಯ ಸೂಚನೆ ಇದೆ ಎನ್ನಲಾಗುತ್ತಿದೆ.

### ರಾಜ್ಯಸಭಾ ಸದಸ್ಯರಾಗಿ ಏ.10 ನಿತೀಶ್ ಪ್ರಮಾಣ

**ದೆಹಲಿ:** ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ತಮ್ಮ ಪ್ರಸ್ತುತ ಹುದ್ದೆಯಿಂದ ಕೆಳಗಿಳಿಯುವ ಸಾಧ್ಯತೆಯಿದ್ದು, ರಾಜ್ಯಸಭೆಗೆ ಪ್ರವೇಶಿಸಲು ಸಜ್ಜಾಗಿದ್ದಾರೆ. ನಿತೀಶ್ ಕುಮಾರ್ ಏಪ್ರಿಲ್ 10ರಂದು ರಾಜ್ಯಸಭಾ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅವರು ಏಪ್ರಿಲ್ 9ರಂದು ಪಟ್ನಾದಿಂದ ದೆಹಲಿಗೆ ಪ್ರಯಾಣಿಸಿ ದೆಹಲಿಯಲ್ಲಿ ಉಳಿಯಲಿದ್ದು, ಈ ಭೇಟಿಯ ಸಮಯದಲ್ಲಿ ಅವರು ಹಿರಿಯ ಬಿಜೆಪಿ ನಾಯಕರೊಂದಿಗೆ ಸಭೆ ನಡೆಸುವ ಸಾಧ್ಯತೆಯಿದೆ. ಇತ್ತೀಚೆಗಷ್ಟೇ ಅವರು ಬಿಹಾರದಲ್ಲಿನ ತಮ್ಮ ಪರಿಷತ್ ಸ್ಥಾನಕ್ಕೆ ವಿದಾಯ ಹೇಳಿದ್ದರು.

---

ಇರಾನ್ ವಿರುದ್ಧ ಯುದ್ಧ ಸಾರದ ನ್ಯಾಟೋ ದೇಶಗಳಿಗೆ ಅಮೆರಿಕ ಅಧ್ಯಕ್ಷ ಬೆದರಿಕೆ, ಕಾಗದದ ಹುಲಿ ಎಂದು ಟೀಕೆ

# ನ್ಯಾಟೋದಿಂದಲೇ ಹೊರಬರುತ್ತೇವೆ: ಟ್ರಂಪ್

**ಲಂಡನ್:** 1949ರಲ್ಲಿ ಶುರುವಾದ ನ್ಯಾಟೋ ಮಿತ್ರಪಡೆಗಳಲ್ಲೇ ತೀವ್ರ ಬಿರುಕುಂಟಾಗಿದೆ. ಅಮೆರಿಕ ನೇತೃತ್ವದಲ್ಲಿ ಮುಂದೆ ಸಾಗುತ್ತಿರುವ ಈ ದೇಶಗಳ ಅಭಿಪ್ರಾಯ, ಇರಾನ್ ಮೇಲೆ ಅಮೆರಿಕ ದಾಳಿ ಮಾಡಿದ ನಂತರ ಬದಲಾದಂತಿದೆ. ನೇರವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮನವಿ ಮಾಡಿದ ಹೊರತಾಗಿಯೂ ನ್ಯಾಟೋ ದೇಶಗಳು ಇರಾನ್ ಮೇಲೆ ದಾಳಿಗೆ ಮುಂದಾಗಿಲ್ಲ. ಹೊರ್ಮುಜ್ ಜಲಸಂಧಿಯನ್ನು ಇರಾನ್ ಹಿಡಿತದಿಂದ ಬಿಡಿಸಲು ಯುದ್ಧನೌಕೆಗಳನ್ನು ಕಳುಹಿಸಿಲ್ಲ.

ಇದರಿಂದ ಚಿಂತೆಗೊಳಗಾಗಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನ್ಯಾಟೋದಿಂದಲೇ ಹೊರಬರುವ ಮಾತುಗಳನ್ನಾಡಿದ್ದಾರೆ.

ಈ ಹಿಂದೆಯೂ ಒಮ್ಮೆ ನ್ಯಾಟೋ ದೇಶಗಳ ಬಗ್ಗೆ ಕಿಡಿಕಾರಿದ್ದ ಟ್ರಂಪ್, ನ್ಯಾಟೋಗೆ ನೆರವು ನೀಡುವುದನ್ನು ನಿಲ್ಲಿಸುವ ಬಗ್ಗೆ ಚಿಂತಿಸುವುದಾಗಿ ಹೇಳಿದ್ದರು. ಇದೀಗ ಇರಾನ್ ವಿರುದ್ಧದ ಸೇನಾ ಕಾರ್ಯಾಚರಣೆಗೆ ನ್ಯಾಟೋ ಮಿತ್ರರಾಷ್ಟ್ರಗಳು ಅಮೆರಿಕಕ್ಕೆ ಬೆಂಬಲ ನೀಡದ ಕಾರಣ ನ್ಯಾಟೋದಿಂದ ಹೊರಬರುವ ಬಗ್ಗೆ ಚಿಂತನೆ ಮಾಡಲಾಗುತ್ತಿದೆ ಎಂದು ಟೆಲಿಗ್ರಾಫ್ ದಿನಪತ್ರಿಕೆಗೆ ನೀಡಿರುವ ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ಪರಿಣಾಮಕಾರಿ ಸೇನಾ ಮೈತ್ರಿಕೂಟ: ಟ್ರಂಪ್ ನ್ಯಾಟೋದಿಂದ ಹೊರಬರುವ ಮಾತುಗಳನ್ನಾಡಿದ ಬೆನ್ನಲ್ಲೇ, ನ್ಯಾಟೋವನ್ನು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಹೊಗಳಿದ್ದಾರೆ. ಜಗತ್ತು ಕಂಡ ಅತ್ಯಂತ ಪರಿಣಾಮಕಾರಿ ಸೇನಾ ಮೈತ್ರಿಕೂಟ ನ್ಯಾಟೋ ಎಂದಿದ್ದಾರೆ. ಹಲವು ದಶಕಗಳಿಂದ ಅದು ನಮಗೆ ಭದ್ರತೆ ನೀಡಿದೆ. ನ್ಯಾಟೋಗೆ ನಾವು ಸಂಪೂರ್ಣವಾಗಿ ಬದ್ಧರಾಗಿದ್ದೇವೆ ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಏನಿದು ನ್ಯಾಟೋ?: ಸೋವಿಯತ್ ಒಕ್ಕೂಟವಾಗಿದ್ದ ರಷ್ಯಾವನ್ನು ಎದುರಿಸಲು ಅಮೆರಿಕ, ಕೆನಡಾ ಮತ್ತು ಯೂರೋಪಿಯನ್ ರಾಷ್ಟ್ರಗಳು ಸೇರಿ 1949ರಲ್ಲಿ ಮಾಡಿಕೊಂಡ ಮೈತ್ರಿಕೂಟ ನ್ಯಾಟೋ.

ಇಲ್ಲಿ ಒಂದು ದೇಶದ ಮೇಲೆ ದಾಳಿಯಾದರೆ ಎಲ್ಲ ದೇಶಗಳ ಮೇಲಿನ ದಾಳಿ ಎಂದೇ ಪರಿಗಣಿಸಲಾಗುತ್ತದೆ. ಇತ್ತೀಚೆಗೆ ಅಮೆರಿಕವನ್ನು ಹೊರಗಿಟ್ಟು ಯೂರೋಪಿಯನ್ ರಾಷ್ಟ್ರಗಳು ತಮ್ಮ ಆರ್ಥಿಕ ಹಿತವನ್ನು ಕಾಪಾಡಿಕೊಳ್ಳಲು ಇನ್ನೊಂದು ಮೈತ್ರಿಕೂಟವನ್ನು ಮಾಡಿಕೊಂಡಿವೆ. ಅಲ್ಲಿಂದ ನ್ಯಾಟೋ ತುಸು ದುರ್ಬಲವಾದಂತೆ ಕಾಣುತ್ತಿದೆ.

### ಮಲೇಷ್ಯಾದಲ್ಲಿ ವರ್ಕ್ ಫ್ರಮ್ ಹೋಮ್

**ಮಧ್ಯಪ್ರಾಚ್ಯಗಳ ಯುದ್ಧಬಿಕ್ಕಟ್ಟಿನಿಂದ ತೈಲ ಹಾಗೂ ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಏಷ್ಯಾದ ಹಲವು ರಾಷ್ಟ್ರಗಳು ಕಂಗಾಲಾಗಿದೆ. ಭಾರತ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸುತ್ತಿದ್ದರೂ ಗ್ಯಾಸ್ ಸಮಸ್ಯೆಯಿಂದ ಹೋಟೆಲ್ ಸೇರಿದಂತೆ ಹಲವು ಉದ್ಯಮಗಳು ಸಂಕಷ್ಟಕ್ಕೆ ಸಿಲುಕಿದೆ. ಏಷ್ಯಾ ರಾಷ್ಟ್ರಗಳ ಪೈಕಿ ಮಲೇಷ್ಯಾ, ಚೀನಾ ಸೇರಿದಂತೆ ಹಲವು ರಾಷ್ಟ್ರಗಳು ಇದೀಗ ಕಠಿಣ ನಿಯಮ ಜಾರಿಗೊಳಿಸುತ್ತಿವೆ. ಮಲೇಷಿಯಾದಲ್ಲಿ ಮನೆಯಿಂದ ಕೆಲಸ (ವರ್ಕ್ ಫ್ರಮ್ ಹೋಮ್) ನಿಯಮ ಜಾರಿಗೊಳಿಸಿದೆ. ಇತ್ತ ಚೀನಾದಲ್ಲಿ ದೇಸಿ ವಿಮಾನಗಳನ್ನು ಕಡಿತಗೊಳಿಸಿದೆ. ತೈಲ ಸಮಸ್ಯೆ ತೀವ್ರಗೊಳ್ಳುತ್ತಿದ್ದಂತೆ ಮಲೇಷ್ಯಾ ಇದೀಗ ಬಳಕೆ ಕಡಿಮೆ ಮಾಡಲು ಏಪ್ರಿಲ್ 15ರಿಂದ ವರ್ಕ್ ಫ್ರಮ್ ಹೋಮ್ ಜಾರಿ ಮಾಡಲಾಗಿದೆ. ಯಾರಿಗೆಲ್ಲಾ ವರ್ಕ್ ಫ್ರಮ್ ಹೋಮ್ ಸಾಧ್ಯವೋ ಅವರೆಲ್ಲರಿಗೂ ಮನೆಯಿಂದ ಕೆಲಸ ಮಾಡಲು ಕಂಪನಿಗಳು ಅನುವು ಮಾಡಿಕೊಡಬೇಕು ಎಂದು ಸೂಚಿಸಿದೆ. ಸರ್ಕಾರಿ ಉದ್ಯೋಗಿಗಳು ಸೇರಿದಂತೆ ಅವಕಾಶ ಇರುವವರಿಗೆ ಮನೆಯಿಂದ ಕೆಲಸ ಮಾಡಲು ಅನುಮತಿ ನೀಡಲು ಸೂಚಿಸಿದೆ. ಸಂಪುಟ ಸಚಿವರಿಗೂ ಮನೆಯಿಂದಲೇ ಕೆಲಸ ಮಾಡುವಂತೆ ಸೂಚಿಸಲಾಗಿದೆ.**

### ಇಂಧನ ಉಳಿತಾಯಕ್ಕೆ 10 ಕ್ರಮಗಳು

**ಪರ್ಷಿಯನ್ ಕೊಲ್ಲಿಯಲ್ಲಿ ನಿಶ್ಚಿತತೆಯ ಮಧ್ಯೆ ಪ್ರಪಂಚದಾದ್ಯಂತ ಇಂಧನ ಬಳಕೆಯನ್ನು ಕಡಿತಗೊಳಿಸಲು ಅಂತಾರಾಷ್ಟ್ರೀಯ ಇಂಧನ ಸಂಸ್ಥೆ ಈಗಾಗಲೇ 10 ಕ್ರಮಗಳನ್ನು ರೂಪಿಸಿದೆ. ಸಾರ್ವಜನಿಕ ಸಾರಿಗೆಯ ಬಳಕೆಯನ್ನು ಉತ್ತೇಜಿಸುವುದು, ಖಾಸಗಿ ಕಾರುಗಳಿಗೆ ಪರ್ಯಾಯ ದಿನಗಳಲ್ಲಿ ಪ್ರಯಾಣಕ್ಕೆ ಅವಕಾಶ ನೀಡುವುದು, ಕಾರ್ ಪೂಲಿಂಗ್, ಸಾಧ್ಯವಾದಲೆಲ್ಲಾ ವಿಮಾನ ಪ್ರಯಾಣವನ್ನು ತಪ್ಪಿಸುವುದು ಮೊದಲಾದ ಸಲಹೆಯನ್ನು ಇಂಧನ ಸಂಸ್ಥೆ ನೀಡಿದೆ.**

### ಚೀನಾದಲ್ಲಿ ವಿಮಾನ ಬೆಲೆ ದುಬಾರಿ

**ಚೀನಾದಲ್ಲಿ ತೈಲ ಸಮಸ್ಯೆ ತೀವ್ರಗೊಳ್ಳುತ್ತಿದೆ. ಪ್ರಮುಖವಾಗಿ ದೇಸಿ ವಿಮಾನಗಳಲ್ಲಿ ಮಹತ್ವದ ಬದಲಾವಣೆ ಮಾಡಲಾಗಿದೆ. ಹಲವು ವಿಮಾನ ಸೇವೆಗಳನ್ನು ಕಡಿತಗೊಳಿಸಲಾಗಿದೆ. ಇತ್ತ ವಿಮಾನ ಟಿಕೆಟ್ ದರ ದುಬಾರಿಯಾಗಿದೆ. ಸರ್ಚಾರ್ಜ್ ಹೆಚ್ಚು ಮಾಡಲಾಗಿದ್ದು ಪ್ರಯಾಣಿಕರು ಕಂಗಾಲಾಗಿದ್ದಾರೆ.**

ನಮ್ಮಿಂದ ಯಾರಿಗೂ ಬೆದರಿಕೆಯಿಲ್ಲ, ನಿಮ್ಮನ್ನು ದ್ವೇಷಿಸುವುದಿಲ್ಲ

## ಇರಾನ್‌ನಿಂದ ಅಮೆರಿಕಕ್ಕೆ ಬಹಿರಂಗ ಪತ್ರ

ಮಧ್ಯಪ್ರಾಚ್ಯದ ಉದ್ವಿಗ್ನತೆ ನಡುವೆ ಇರಾನ್ ಯುದ್ಧದ ಕುರಿತು ದೇಶವನ್ನುದ್ದೇಶಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಡೆಸಿದ ಭಾಷಣಕ್ಕೂ ಕೆಲವೇ ಗಂಟೆಗಳ ಮುನ್ನ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಅಮೆರಿಕದ ಜನತೆಗೆ ಬಹಿರಂಗ ಪತ್ರ ಬರೆದಿದ್ದಾರೆ. ಇರಾನ್ ಅನ್ನು ಆಕ್ರಮಣಕಾರಿ ಎಂದು ಬಣ್ಣಿಸುವ ಕ್ರಮಗಳನ್ನು ತಿರಸ್ಕರಿಸಿದ್ದು, ತಮ್ಮ ಮೇಲಿನ ಯುದ್ಧಕ್ಕೆ ಟ್ರಂಪ್ ಆಡಳಿತ ಹೊಂದಿರುವ ನೈಜ ಉದ್ದೇಶದ ಕುರಿತು ಪ್ರಶ್ನಿಸಬೇಕು ಎಂದು ಕರೆ ನೀಡಿದ್ದಾರೆ. ಇರಾನ್ ಯಾವುದೇ ರಾಷ್ಟ್ರದ ವಿರುದ್ಧ ದ್ವೇಷವನ್ನು ಹೊಂದಿಲ್ಲ.



ಇರಾನ್ ಐತಿಹಾಸಿಕವಾಗಿ ಹಳೆಯ ನಾಗರಿಕತೆಗಳಲ್ಲಿ ಒಂದಾಗಿದ್ದು, ಪ್ರಾದೇಶಿಕವಾಗಿ ಹಾಗೂ ಐತಿಹಾಸಿಕವಾಗಿ ಹೊಂದಿರುವ ಶಕ್ತಿಯ ಹೊರತಾಗಿಯೂ, ತನ್ನ ಆಧುನಿಕ ಇತಿಹಾಸದಲ್ಲಿ ಯಾವುದೇ ಪ್ರದೇಶದ ಮೇಲೆ ಆಕ್ರಮಣವನ್ನಾಗಲಿ ಅಥವಾ ವಸಹಾತುಶಾಹಿ ಧೋರಣೆಯನ್ನು ತೋರಿಲ್ಲ, ಯುದ್ಧವನ್ನು ಆರಂಭಿಸಿಲ್ಲ ಎಂದಿದ್ದಾರೆ.

ತನ್ನ ಮೇಲೆ ದಾಳಿ ನಡೆದಾಗ ಧೈರ್ಯದಿಂದ ಪ್ರತಿಕ್ರಿಯೆ ನೀಡಿ ಹಿಮ್ಮೆಟ್ಟಿಸಿದ್ದೇವೆ. ಇರಾನಿನ ಜನರು ಅಮೆರಿಕ, ಯುರೋಪ್ ಅಥವಾ ನೆರೆಯ ರಾಷ್ಟ್ರಗಳ ಜನರು ಸೇರಿದಂತೆ ಇತರ ರಾಷ್ಟ್ರಗಳ ಬಗ್ಗೆ ಯಾವುದೇ ದ್ವೇಷವನ್ನು ಹೊಂದಿಲ್ಲ. ಇರಾನ್ ಅನ್ನು ಒಂದು ಬೆದರಿಕೆ ಎಂದು ಬಿಂಬಿಸಲಾಗುತ್ತಿದೆ. ಇಂತಹ ಗ್ರಹಿಕೆಗಳು ಕೇವಲ ರಾಜಕೀಯ ಮತ್ತು ಆರ್ಥಿಕ ಹಿತಾಸಕ್ತಿಗಳ ಫಲಿತಾಂಶವಾಗಿದೆ. ಇಂತಹ ವ್ಯಾಖ್ಯಾನಗಳನ್ನು ಸೃಷ್ಟಿಸುವ ಮೂಲಕ ಶತ್ರುಗಳು ತಮ್ಮ ನಡೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಸೇನಾ ಪ್ರಾಬಲ್ಯ ಸಾಧಿಸುವುದು, ಶಸ್ತ್ರಾಸ್ತ್ರ ಉದ್ಯಮವನ್ನು ಉಳಿಸಿಕೊಳ್ಳುವುದು ಮತ್ತು ಆಯಕಟ್ಟಿನ ಮಾರುಕಟ್ಟೆಗಳನ್ನು ನಿಯಂತ್ರಿಸುವುದು ಇದರ ಹಿಂದಿನ ಇತರ ಉದ್ದೇಶಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಬೆದರಿಕೆ ಇಲ್ಲದಿದ್ದರೂ ಅದನ್ನು ಸೃಷ್ಟಿಸಲಾಗುತ್ತದೆ ಎಂದು ಹೇಳಿದ್ದಾರೆ. ಅಮೆರಿಕವು ಇರಾನ್‌ನ ಸುತ್ತಲೂ ತನ್ನ ಸೇನಾನೆಲೆಗಳನ್ನು ಸ್ಥಾಪಿಸಿದೆ. ಇತ್ತೀಚೆಗೆ ಇದೇ ನೆಲೆಗಳಿಂದ ಅಮೆರಿಕ ನಡೆಸಿದ ಆಕ್ರಮಣಗಳು, ಇಂತಹ ಸೇನೆಯ ಉಪಸ್ಥಿತಿಯು ಎಷ್ಟು ಅಪಾಯಕಾರಿ ಎಂಬುದನ್ನು ತೋರಿಸಿಕೊಟ್ಟಿವೆ. ಸಹಜವಾಗಿಯೇ, ಇಂತಹ ಸ್ಥಿತಿಯನ್ನು ಎದುರಿಸುತ್ತಿರುವ ಯಾವುದೇ ದೇಶವು ತನ್ನ ರಕ್ಷಣಾ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳುವುದನ್ನು ಬಿಡುವುದಿಲ್ಲ. ಇರಾನ್ ಮಾಡುತ್ತಿರುವುದು ಕೇವಲ ಕಾನೂನುಬದ್ಧ ಆತ್ಮರಕ್ಷಣೆಗಾಗಿ ಕೈಗೊಂಡ ಪ್ರತಿಕ್ರಿಯೆಯೇ ಹೊರತು ಯುದ್ಧವಲ್ಲ.

ಪ್ರಸ್ತುತ ಯುದ್ಧದಿಂದ ಅಮೆರಿಕದ ಜನರ ಯಾವ ಹಿತಾಸಕ್ತಿಗಳು ಈಡೇರುತ್ತಿವೆ? ಇರಾನ್‌ನಿಂದ ಅಂತಹ ಯಾವುದೇ ಭೌತಿಕ ಬೆದರಿಕೆ ಇತ್ತೇ? ಮುಗ್ಧ ಮಕ್ಕಳ ಹತ್ಯೆ, ಕ್ಯಾನ್ಸರ್ ಚಿಕಿತ್ಸಾ ಕೇಂದ್ರಗಳ ನಾಶ ಅಥವಾ ಒಂದು ದೇಶವನ್ನು ಶಿಲಾಯುಗಕ್ಕೆ ತಳ್ಳುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುವುದು ಅಮೆರಿಕದ ಜಾಗತಿಕ ಘನತೆಗೆ ಧಕ್ಕೆ ತರುವುದಕ್ಕಿಂತ ಬೇರೆ ಇನ್ನೇನನ್ನು ಸಾಧಿಸುತ್ತದೆ? ಎಂದು ಪೆಜೆಶ್ಕಿಯನ್ ಪ್ರಶ್ನಿಸಿದ್ದಾರೆ.

### ಯೂರೋಪ್‌ನಲ್ಲೂ ಮನೆಯಿಂದಲೇ ಕೆಲಸ

**ಮಧ್ಯಪ್ರಾಚ್ಯದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟಿನಿಂದಾಗಿ ಈಗ ಕೋವಿಡ್ ಕಾಲದ ಕೆಲಸದ ಪ್ರವೃತ್ತಿ ಮರುಕಳಿಸುವ ಸಾಧ್ಯತೆ ಇದೆ. ಈಗಾಗಲೇ, ಜಾಗತಿಕವಾಗಿ ಬೆಲೆ ಏರಿಕೆ ಮತ್ತು ಪೂರೈಕೆ ಕೊರತೆ ಉಂಟಾಗಬಹುದೆಂಬ ಭೀತಿಯ ನಡುವೆ, ತೈಲ ಮತ್ತು ಅನಿಲ ಬಳಕೆಯನ್ನು ಕಡಿತಗೊಳಿಸುವಂತೆ ಯುರೋಪಿಯನ್ ಒಕ್ಕೂಟ ತನ್ನ ಸದಸ್ಯ ರಾಷ್ಟ್ರಗಳನ್ನು ಒತ್ತಾಯಿಸಿದ್ದು, ನಾಗರಿಕರು ಮನೆಯಿಂದಲೇ ಕೆಲಸ ಮಾಡುವಂತೆ ಮನವಿ ಮಾಡಿದೆ. ಯೂರೂಪ್ ಒಕ್ಕೂಟದ ಇಂಧನ ಆಯೋಗದ ಮುಖ್ಯಸ್ಥ ಡ್ಯಾನ್ ಜಾರ್ಗೆನ್ಸನ್ ತಮ್ಮ ಭಾಷಣವೊಂದರಲ್ಲಿ, ಯೂರೋಪ್ ಅತ್ಯಂತ ಗಂಭೀರ ಪರಿಸ್ಥಿತಿಯ ಮೂಲಕ ಸಾಗುತ್ತಿದೆ. ಇಂಧನ ಉಳಿತಾಯಕ್ಕಾಗಿ ಜನರು ವಾಹನ ಚಲಾಯಿಸುವುದನ್ನು ಮತ್ತು ವಿಮಾನ ಹಾರಾಟವನ್ನು ಕಡಿಮೆ ಮಾಡಬೇಕು ಎಂದು ಹೇಳಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಶಾಂತಿ ಸ್ಥಾಪನೆಯಾದರೂ ತಕ್ಷಣಕ್ಕೆ ಸಾಮಾನ್ಯ ಸ್ಥಿತಿಗೆ ಮರಳುವ ಸಾಧ್ಯತೆಯಿಲ್ಲ ಎಂದು ಅವರು ಹೇಳಿದ್ದಾರೆ.**

### ಹೊರ್ಮುಜ್ ತೆರವಿಗೆ ಭಾರತ, ಬ್ರಿಟನ್ ಸೇರಿ 35 ದೇಶಗಳ ಸಭೆ

**ಇರಾನ್ ವ್ಯಾಪ್ತಿಯಲ್ಲಿ ಬರುವ ಹೊರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಸಲು ಏನು ಮಾಡಬಹುದೆಂದು ಚಿಂತಿಸಲು ಬ್ರಿಟನ್ ಭಾರತಕ್ಕೂ ಆಹ್ವಾನ ನೀಡಿದೆ. ಈ ಮಾರ್ಗೋಪಾಯಕ್ಕೆ ಸಂಬಂಧಿಸಿದ ಚರ್ಚೆಗಾಗಿ ಅಂತರರಾಷ್ಟ್ರೀಯ ರಾಜತಾಂತ್ರಿಕ ಸಮಾವೇಶವನ್ನು ಬ್ರಿಟನ್ ಈ ವಾರ ಆಯೋಜಿಸಲಿದೆ ಎಂದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಬುಧವಾರ ತಿಳಿಸಿದ್ದಾರೆ. ತೈಲ ಸಾಗಣೆಯ ಪ್ರಮುಖ ಮಾರ್ಗವಾಗಿರುವ ಕರಾವಳಿಯ ಭದ್ರತೆಯನ್ನು ಪುನರ್ ಸ್ಥಾಪಿಸುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡುವುದಾಗಿ 35 ದೇಶಗಳು ಸಹಿ ಮಾಡಿವೆ ಎಂದೂ ಹೇಳಿದ್ದಾರೆ. ಭಾರತದ ವಿದೇಶಾಂಗ ಇಲಾಖೆ ಕಾರ್ಯದರ್ಶಿ ಪಾಲ್ಗೊಳ್ಳಲಿದ್ದಾರೆ ಸಚಿವಾಲಯ ತಿಳಿಸಿದೆ.**

### ಇಂಧನ ಕೊರತೆಯಾಗಲ್ಲ

**ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಭಾರತದಲ್ಲಿ ಇಂಧನ ಅಥವಾ ಅನಿಲದ ಕೊರತೆಯಾಗುವ ಯಾವುದೇ ಆತಂಕವಿಲ್ಲ. ಅತ್ಯಂತ ಸೂಕ್ಷ್ಮ ಪ್ರದೇಶವಾದ 'ಹೊರ್ಮುಜ್ ಜಲಸಂಧಿ'ಯ ಮೂಲಕ ಸಂಚರಿಸುವ ಭಾರತದ ತೈಲ ಟ್ಯಾಂಕರ್‌ಗಳಿಗೆ ಭಾರತೀಯ ನೌಕಾಪಡೆಯು ಪೂರ್ಣ ಪ್ರಮಾಣದ ರಕ್ಷಣೆ ನೀಡುತ್ತಿದೆ. ನೌಕಾಪಡೆಯ ಹಡಗುಗಳು ಈ ಟ್ಯಾಂಕರ್‌ಗಳಿಗೆ ಬೆಂಗಾವಲಾಗಿ ನಿಂತು, ಅವು ಸುರಕ್ಷಿತವಾಗಿ ಭಾರತದ ಬಂದರುಗಳನ್ನು ತಲುಪುವಂತೆ ನೋಡಿಕೊಳ್ಳುತ್ತಿವೆ. ಆ ಮೂಲಕ ದೇಶದ ಇಂಧನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಕೇಂದ್ರ ಸರ್ಕಾರವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.**

**-ರಾಜನಾಥ್ ಸಿಂಗ್, ಕೇಂದ್ರ ರಕ್ಷಣಾ ಸಚಿವ**

---

ನೇತಾಜಿ ಸುಭಾಷ್ ಗೌರವಾರ್ಥ ಸಿದ್ಧವಾಗಿರುವ ಚಿತ್ರ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದರ ಉಪಸ್ಥಿತಿ

## ಕನ್ನಡತಿ ರೂಪಾ ನಿರ್ದೇಶನದ 'ಆಜಾದ್ ಭಾರತ್' ಸಿನಿಮಾ ಸಂಸತ್ತಲ್ಲಿ ಪ್ರದರ್ಶನ

**ನವದೆಹಲಿ:** ದೇಶಭಕ್ತಿ, ರಾಷ್ಟ್ರೀಯ ಸೇವಾ ಮೌಲ್ಯಗಳಿಗೆ ಸದಾ ಪ್ರೇರಣೆಯಾಗಿರುವ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಗೌರವಾರ್ಥ ಕರ್ನಾಟಕದ ಡಾ.ರೂಪಾ ಅಯ್ಯರ್, ನಿರ್ಮಿಸಿ ನಿರ್ದೇಶಿಸಿದ ಆಜಾದ್ ಭಾರತ್ ಹಿಂದಿ ಚಲನಚಿತ್ರವನ್ನು ಸಂಸತ್ತಿನ ಜಿಎಂಸಿ ಬಾಲಯೋಗಿ ಸಭಾಂಗಣದಲ್ಲಿ ಬುಧವಾರ ಪ್ರದರ್ಶಿಸಲಾಯಿತು. ಸಂಸತ್ ಸದಸ್ಯರು ಮತ್ತು ಸಚಿವಾಲಯಗಳ ಅನೇಕ ಅಧಿಕಾರಿಗಳು ಸಿನಿಮಾ ವೀಕ್ಷಿಸಿ ನೇತಾಜಿಗೆ ನಮನ ಸಲ್ಲಿಸಿದರು. ಡಾ.ರೂಪಾ ಅಯ್ಯರ್ ನಿರ್ಮಿಸಿ, ನಿರ್ದೇಶಿಸಿ, ನಟಿಸಿದ ಈ ಚಲನ ಚಿತ್ರವನ್ನು ವಿಶೇಷವಾಗಿ ಲೋಕಸಭೆ, ರಾಜ್ಯಸಭೆ ಮತ್ತು ಸಚಿವಾಲಯದ ಅಧಿಕಾರಿಗಳು ಮತ್ತವರ ಕುಟುಂಬ ಸದಸ್ಯರಿಗಾಗಿ ಆಯೋಜಿಸಲಾಗಿತ್ತು. ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ, ನೇತಾಜಿ ಮರಿಮೊಮ್ಮಗಳಾದ ರಾಜ್ಯಶ್ರೀ ಚೌಧರಿ, ಕೇಂದ್ರದ ಮಾಜಿ ಸಚಿವೆ ಮೀನಾಕ್ಷಿ ಲೇಖಿ ಉಪಸ್ಥಿತರಿದ್ದರು. ಆಜಾದ್ ಭಾರತ್ ಚಿತ್ರಪ್ರದರ್ಶನ ಸ್ವಾತಂತ್ರ್ಯ ಹೋರಾಟ ಗಾರರಿಗೆ ನಿರಂತ ರವಾಗಿ ಅರ್ಥಪೂರ್ಣ ಗೌರವ ಸಲ್ಲಿಸುವ ಪ್ರತೀಕವಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯ ರಾಷ್ಟ್ರೀಯ ಸೇನೆಯ ಮಹಾನ್ ತ್ಯಾಗಗಳಿಗೆ ಸಲ್ಲಿಸಿದ ಹೃದಯಸ್ಪರ್ಶಿ ಗೌರವವಾಗಿದೆ ಎಂದು ಜೋಶಿ ಹೇಳಿದ್ದಾರೆ. ನೇತಾಜಿ ಸುಭಾಷ್ ಚಂದ್ರ ಬೋಸ್ ಸ್ಥಾಪಿಸಿದ ಐಎನ್‌ಎಯನ್ನು ಸೇರಿ ಗುಪ್ತಚರೆಯಂತೆ ಕಾರ್ಯನಿರ್ವಹಿಸಿದ ನೀರಾ ಆರ್ಯಾ ಎಂಬ ಮಹಿಳೆಯ ಸಾಹಸಗಾಥೆ ಆಜಾದ್ ಭಾರತ್ ಚಿತ್ರದಲ್ಲಿದೆ.

12 ವರ್ಷಗಳಲ್ಲೇ ಗರಿಷ್ಠ: ಡಾಲರ್ ಎದುರು ರು. ಮೌಲ್ಯ 95ರಿಂದ 93ಕ್ಕೆ ಹೆಚ್ಚಳ

## ಒಂದೇ ದಿನ ರು. ಮೌಲ್ಯ ಗರಿಷ್ಠ ಏರಿಕೆ

**ಮುಂಬೈ:** ರುಪಾಯಿ 12 ವರ್ಷಗಳ ಬಳಿಕ ಒಂದೇ ದಿನ ಡಾಲರ್ ವಿರುದ್ಧ ಅತಿದೊಡ್ಡ ಏರಿಕೆಯನ್ನು ದಾಖಲಿಸಿದೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ರುಪಾಯಿ ಮೌಲ್ಯದ ಮೇಲೆ ನಡೆಯುವ ಊಹಾಪೋಹದ ವಹಿವಾಟುಗಳಿಗೆ ಕಡಿವಾಣ ಹಾಕಿದೆ. ಈ ಕ್ರಮವನ್ನು ಕೈಗೊಂಡ ಬಳಿಕ ರುಪಾಯಿ ಮೌಲ್ಯವು ಒಂದೇ ದಿನದಲ್ಲಿ ಸುಮಾರು 1.8%ನಷ್ಟು ಏರಿಕೆ ಕಂಡಿದೆ. ಮಾ.31ರಂದು ಒಂದು ಡಾಲರ್‌ಗೆ 95 ರು. ದಾಟಿದ್ದ ರುಪಾಯಿ ಮೌಲ್ಯ ಏ.2ರ ಗುರುವಾರ 92.93 ರು.ಗೇರಿತ್ತು.

**ಆರ್‌ಬಿಐ ಕ್ರಮವೇನು?:** ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಬ್ಯಾಂಕ್‌ಗಳು ತಮ್ಮ ಒಟ್ಟು ಬಂಡವಾಳದ ಶೇ.25ರವರೆಗೆ ವಿದೇಶಿ ಕರೆನ್ಸಿಯನ್ನು ಹೊಂದಲು ಅವಕಾಶವಿತ್ತು. ದೊಡ್ಡ ಬ್ಯಾಂಕ್‌ಗಳಿಗೆ ಇದು 2ರಿಂದ 5 ಬಿಲಿಯನ್ ಡಾಲರ್‌ವರೆಗೆ ಅವಕಾಶ ನೀಡಲಾ ಗಿತ್ತು. ಆದರೆ ಇದನ್ನು ದಿಢೀರನೇ ಆರ್‌ಬಿಐ ತಗ್ಗಿಸಿದೆ. ದಿನದಂತ್ಯಕ್ಕೆ ಬ್ಯಾಂಕ್‌ಗಳು 100 ಮಿಲಿಯನ್ ಡಾಲರ್‌ಗಳನ್ನು ಮಾತ್ರ ಇಟ್ಟುಕೊಳ್ಳಬಹುದು. ಉಳಿದ ವಿದೇಶಿ ಕರೆನ್ಸಿಯನ್ನು ಮಾರುಕಟ್ಟೆಗೆ ಬಿಡಲೇಬೇಕು. ಆಗ ಮಾರುಕಟ್ಟೆಗೆ ಡಾಲರ್ ಹರಿವು ಹೆಚ್ಚುತ್ತದೆ. ಡಾಲರ್ ಸುಲಭವಾಗಿ ಸಿಕ್ಕಿದಂತೆಲ್ಲ ಅದಕ್ಕೆ ಬೇಡಿಕೆ ಕಡಿಮೆಯಾಗುತ್ತದೆ. ಆಗ ರುಪಾಯಿ ಮೌಲ್ಯ ಹೆಚ್ಚುತ್ತದೆ. ಇದರಿಂದ ರುಪಾಯಿ ಅಪಮೌಲ್ಯ ಹೆಚ್ಚಿಸಬಹುದೆನ್ನುವುದು ಆರ್‌ಬಿಐ ಉದ್ದೇಶ. ಇದರಲ್ಲಿ ದೊಡ್ಡ ಯಶಸ್ಸು ಸಿಕ್ಕಿದಂತಾಗಿದೆ.

## ಎಲ್‌ಪಿಜಿ ಕೊರತೆಯಿಲ್ಲ ಎಂದ ಕೈ ಮಾಜಿ ಸಿಎಂ!

**ಭೋಪಾಲ್:** ಕಾಂಗ್ರೆಸ್ ನಾಯಕರು ದೇಶದ ತೈಲ ಪರಿಸ್ಥಿತಿಯ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ, ಕೇಂದ್ರ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಇನ್ನೊಂದು ಕಡೆ, ಕಾಂಗ್ರೆಸ್‌ನ ಹಿರಿಯ ನಾಯಕ ಮತ್ತು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಇದಕ್ಕೆ ವಿರುದ್ಧವಾದ ಹೇಳಿಕೆ ನೀಡಿದ್ದಾರೆ. ದೇಶದಲ್ಲಿ ತೈಲ ಅಭಾವದಂತಹ ಯಾವುದೇ ಪರಿಸ್ಥಿತಿಯಿಲ್ಲ. ಎಲ್‌ಪಿಜಿ ಕೊರತೆಯಿದೆ ಎಂದು ನನಗನಿಸುವುದಿಲ್ಲ. ಅಭಾವವಿದೆ ಎನ್ನುವ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಕಮಲ್‌ನಾಥ್ ಹೇಳಿಕೆ, ಕಾಂಗ್ರೆಸ್‌ಗೆ ಮುಜುಗರ ತಂದಿದೆ. ಮಧ್ಯಪ್ರದೇಶದ ಛಿಂದ್ವಾರದಲ್ಲಿ ಕಮಲ್‌ನಾಥ್ ನೀಡಿದ ಹೇಳಿಕೆ ಕಾಂಗ್ರೆಸ್ ತೆಗೆದುಕೊಂಡಿರುವ ನಿಲುವಿಗೆ ವಿರುದ್ಧವಾಗಿದೆ. ಲೋಕಸಭೆಯ ಶುಕ್ರವಾರದ (ಏ. 2) ಅಧಿವೇಶನದ ಶೂನ್ಯವೇಳೆಯಲ್ಲಿ ಮಾತನಾಡುತ್ತಿದ್ದ ಕಾಂಗ್ರೆಸ್ ಸಂಸದ ವಿಜಯ್ ವಸಂತ್, ದೇಶದಲ್ಲಿ ಗಂಭೀರ ಎಲ್‌ಪಿಜಿ ಸಮಸ್ಯೆಯಿದೆ. ಕೇಂದ್ರ ಸರ್ಕಾರದ ದುರಾಡಳಿತದಿಂದಾಗಿ, ಜನತೆ ಸಮಸ್ಯೆ ಎದುರಿಸುವಂತಾಗಿದೆ. ಎಲ್‌ಪಿಜಿ, ಡೀಸೆಲ್, ಪೆಟ್ರೋಲ್ ಸಮಸ್ಯೆಯಿಂದಾಗಿ, ಚಟುವಟಿಕೆ ಸ್ತಬ್ಧಗೊಂಡಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಎಂಪಿ ಹೇಳಿದ್ದರು.

## ನ್ಯಾಯಾಂಗಕ್ಕೂ ದೀದಿ ಸಡ್ಡು 9 ಗಂಟೆ ಅಧಿಕಾರಿಗಳ ಒತ್ತೆ ಸೆರೆ

← ಮೊದಲಪುಟದಿಂದ

ಪಶ್ಚಿಮ ಬಂಗಾಳದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ಈ ಘಟನೆಯು ಕೇವಲ ಪ್ರತಿಭಟನೆಯಲ್ಲ, ಬದಲಿಗೆ ನ್ಯಾಯಾಂಗ ಅಧಿಕಾರಿಗಳ ಮನೋಬಲ ಕುಂದಿಸಲು ಮತ್ತು ಚುನಾವಣಾ ಪ್ರಕ್ರಿಯೆಯನ್ನು ಅಡ್ಡಿಪಡಿಸಲು ನಡೆಸಿದ ಪೂರ್ವಯೋಜಿತ ಮತ್ತು ಸಂಘಟಿತ ಪ್ರಯತ್ನ ಎಂದು ಪೀಠವು ಅಭಿಪ್ರಾಯಪಟ್ಟಿದೆ.

**ಕೇಂದ್ರ ಪಡೆ ನಿಯೋಜನೆಗೆ ಸಲಹೆ:** ಚುನಾವಣಾ ಕಾರ್ಯದಲ್ಲಿ ತೊಡಗಿರುವ ನ್ಯಾಯಾಂಗ ಅಧಿಕಾರಿಗಳ ಸುರಕ್ಷತೆಗಾಗಿ ತಕ್ಷಣವೇ ಕೇಂದ್ರ ಸಶಸ್ತ್ರ ಪಡೆಗಳನ್ನು ನಿಯೋಜಿಸುವಂತೆಯೂ ಚುನಾವಣಾ ಆಯೋಗಕ್ಕೆ ಸುಪ್ರೀಂಕೋರ್ಟ್ ಸೂಚನೆ ನೀಡಿದೆ. ರಾಜ್ಯ ಸರಕಾರವು ತನ್ನ ಕರ್ತವ್ಯದಿಂದ ವಿಮುಖವಾಗಿದೆ ಎಂದು ಹೇಳಿದ ಕೋರ್ಟ್ ಅಧಿಕಾರಿಗಳಿಗೆ ರಕ್ಷಣೆ ನೀಡಲು ವಿಫಲರಾಗಿದ್ದಕ್ಕೆ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಮತ್ತು ಡಿಜಿಪಿ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದೆ. ಈ ದಾಳಿಯ ಬಗ್ಗೆ ಸಿಬಿಐ ಅಥವಾ ಎನ್‌ಐಎಯಂತಹ ಸ್ವತಂತ್ರ ಸಂಸ್ಥೆಗಳಿಂದ ತನಿಖೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಮತದಾರರ ಪಟ್ಟಿಯಿಂದ ಹೆಸರು ಅಳಿಸಿ ಹಾಕಿದ್ದೇ ಈ ಪ್ರತಿಭಟನೆಗೆ ಕಾರಣವಾಗಿದೆ ಎಂಬ ಮಾಧ್ಯಮಗಳ ವರದಿಗಳನ್ನೂ ಉಲ್ಲೇಖಿಸಿರುವ ನ್ಯಾಯಾಲಯ, ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೊಲೀಸ್ ವರಿಷ್ಠಾಧಿಕಾರಿಯ ಅನುಪಸ್ಥಿತಿಯನ್ನು ಟೀಕಿಸಿದೆ. ಇದೇ ವೇಳೆ ಮುಖ್ಯ ಕಾರ್ಯದರ್ಶಿ, ಡಿಜಿಪಿ ಮತ್ತು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಕೈಗೊಂಡ ಕ್ರಮಗಳ ಕುರಿತು ವರದಿಯನ್ನು ಸಲ್ಲಿಸಲು ನ್ಯಾಯಾಲಯ ಸೂಚಿಸಿದೆ. ಇದೇ ವೇಳೆ ಮುಖ್ಯ ಕಾರ್ಯದರ್ಶಿ, ಡಿಜಿಪಿ, ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಎಸ್‌ಎಸ್‌ಪಿಗಳಿಗೆ ಸುರಕ್ಷತಾ ಕ್ರಮ ಕೈಗೊಳ್ಳದಿರಲು ಕಾರಣ ತಿಳಿಸುವಂತೆ ಸೂಚಿಸಿ ಏಪ್ರಿಲ್ 6 ರಂದು ಆನ್‌ಲೈನ್‌ನಲ್ಲಿ ಹಾಜರಿರುವಂತೆ ನಿರ್ದೇಶನ ನೀಡಿದೆ.

---

# ಟ್ರಂಪ್ ಯೂಟರ್ನ್ ಮತ್ತೆ ಯುದ್ಧೋನ್ಮಾದ

← ಮೊದಲಪುಟದಿಂದ

**ದಾಳಿಗೆ ಸಮರ್ಥನೆ:** ಇರಾನ್ ತನ್ನ ಪರಮಾಣು ಕಾರ್ಯಕ್ರಮವನ್ನು ಮತ್ತೆ ಆರಂಭಿಸಲು ಪ್ರಯತ್ನಿಸಿದ್ದರಿಂದ ದಾಳಿ ನಡೆಸುವುದು ಅನಿವಾರ್ಯ ವಾಯಿತು ಎಂದು ಅಮೆರಿಕದ ಎಪಿಕ್ ಫ್ಯೂರಿ ಕಾರ್ಯಾಚರಣೆಯನ್ನು ಟ್ರಂಪ್ ಸಮರ್ಥಿಸಿ ಕೊಂಡಿದ್ದಾರೆ. ಸುಮಾರು 18 ನಿಮಿಷಗಳ ಭಾಷಣದಲ್ಲಿ ಯುದ್ಧದ ಅನಿವಾರ್ಯತೆ, ಅಮೆರಿಕ ಮಿಲಿಟರಿಯ ಶಕ್ತಿ, ಪ್ರಾದೇಶಿಕ ಮಿತ್ರರು ಮತ್ತು ಇಸ್ರೇಲ್ ರಕ್ಷಣೆಯ ಬಗ್ಗೆ ಮಾತನಾಡಿದ್ದಾರೆ. ಇರಾನ್ ವಿರುದ್ಧದ ಯುದ್ಧದಲ್ಲಿ ನೀಡಿರುವ ಬೆಂಬಲಕ್ಕಾಗಿ ಸೌದಿ ಅರೇಬಿಯಾ, ಕತಾರ್, ಯುಎಇ, ಕುವೈತ್ ಮತ್ತು ಬಹರೇನ್ ದೇಶ ಗಳಿಗೆ ಟ್ರಂಪ್ ಕೃತಜ್ಞತೆ ಸಲ್ಲಿಸಿದರು. ಅಮೆರಿಕದ ನಿಲುವನ್ನು ಬೆಂಬಲಿಸಿದ ಕೆಲವು ಯುರೋಪಿ ಯನ್ ರಾಷ್ಟ್ರಗಳಿಗೂ ಧನ್ಯವಾದ ಸಲ್ಲಿಸಿದರು.

ಇರಾನ್ ಪರಮಾಣು ಅಸ್ತ್ರ ಹೊಂದುವುದನ್ನು ತಡೆಯುವುದು ನಮ್ಮ ಮುಖ್ಯ ಗುರಿಯಾಗಿದೆ. ಇರಾನ್ ತನ್ನ ಪರಮಾಣು ಸಾಮರ್ಥ್ಯವನ್ನು ಮರಳಿ ಪಡೆಯಲು ಪ್ರಯತ್ನಿಸುತ್ತಿರುವುದು ಇಡೀ ಜಗತ್ತಿಗೆ ಅಪಾಯಕಾರಿ. ಹಾಗಾಗಿ ಅಮೆರಿ ಕದ ಭದ್ರತೆಗಾಗಿ ಈ ದಾಳಿ ಅನಿವಾರ್ಯವಾಗಿತ್ತು ಎಂದು ಟ್ರಂಪ್ ಹೇಳಿಕೊಂಡರು. ಇರಾನ್ ತಕ್ಷಣವೇ ತನ್ನ ಪರಮಾಣು ಹಠವನ್ನು ಬಿಟ್ಟು ಶಾಂತಿ ಮಾತುಕತೆಗೆ ಬರಬೇಕು. ಇಲ್ಲದಿದ್ದರೆ ಈವರೆಗೆ ಕಂಡದ್ದಕ್ಕಿಂತ ದೊಡ್ಡ ದುರಂತವನ್ನು ಎದುರಿಸಬೇಕಾಗುತ್ತದೆ. ಅಲ್ಲಿ ಉಳಿದಿರುವ ಗುರಿಗಳ ಮೇಲೆ ನಿಖರ ದಾಳಿ ನಡೆಸಲಾಗು ವುದು. ಈ ಯುದ್ಧವನ್ನು ದೀರ್ಘಕಾಲ ಎಳೆ ಯುವ ಉದ್ದೇಶವನ್ನು ನಾವು ಹೊಂದಿಲ್ಲ. ಬದ ಲಿಗೆ ಕೆಲವೇ ವಾರಗಳಲ್ಲಿ ಇರಾನ್ ಶರಣಾಗು ವಂತೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ.

ಅಮೆರಿಕ ಈಗ ಇಂಧನಕ್ಕಾಗಿ ಮಧ್ಯಪ್ರಾಚ್ಯದ ಮೇಲೆ ಅವಲಂಬಿತವಾಗಿಲ್ಲ ನಾವು ಇಂಧನ ಸ್ವತಂತ್ರ ರಾಷ್ಟ್ರವಾಗಿದ್ದು ಅಲ್ಲಿನ ತೈಲಕ್ಕಾಗಿ ನಾವು ಯುದ್ಧ ಮಾಡುತ್ತಿಲ್ಲ. ಬದಲಾಗಿ ಕೇವಲ ಜಾಗತಿಕ ಶಾಂತಿ ಮತ್ತು ಮಿತ್ರರಾಷ್ಟ್ರಗಳ ರಕ್ಷಣೆಗಾಗಿ ಈ ಯುದ್ಧಕ್ಕೆ ಇಳಿದಿದ್ದೇವೆ. ಇರಾನ್‌ನಿಂದ ಅವರಿಗೆ ಎದುರಾಗಿರುವ ಭೀತಿಯನ್ನು ಹೋಗಲಾಡಿಸುವುದು ನಮ್ಮ ಗುರಿ. ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಅತ್ಯಂತ ಆಪ್ತ ಮಿತ್ರ ರಾಷ್ಟ್ರವಾದ ಇಸ್ರೇಲ್ ಅನ್ನು ರಕ್ಷಿಸುವುದು ಮತ್ತು ಅದರೊಂದಿಗೆ ಸೇರಿ ಕಾರ್ಯಾಚರಣೆ ನಡೆಸುವುದು ತಮ್ಮ ಆದ್ಯತೆಯಾಗಿದೆ ಎಂದು ಟ್ರಂಪ್ ತಿಳಿಸಿದರು.

## ಎತ್ತಿನ ಹೊಳೆ ಯೋಜನೆಗೆ ಕೇಂದ್ರ ಸರಕಾರ ತಾತ್ವಿಕ ಒಪ್ಪಿಗೆ

← ಮೊದಲಪುಟದಿಂದ

ಅರಣ್ಯೇತರ ಭೂಮಿಯನ್ನು ರಾಜ್ಯ ಅರಣ್ಯ ಇಲಾಖೆಯ ಹೆಸರಿಗೆ ವರ್ಗಾವಣೆ ಮತ್ತು ಮ್ಯುಟೇಷನ್ ಮಾಡಿದ ನಂತರ, ರಾಜ್ಯ ಸರಕಾರ ಅದನ್ನು ಭಾರತೀಯ ಅರಣ್ಯ ಕಾಯಿದೆ 1927ರ ಸೆಕ್ಷನ್ 29 ಅಡಿಯಲ್ಲಿ ಅಥವಾ ಸ್ಥಳೀಯ ಅರಣ್ಯ ಕಾಯಿದೆಯ ಅಡಿಯಲ್ಲಿ ಸಂರಕ್ಷಿತ ಅರಣ್ಯ ಎಂದು ಅಧಿಸೂಚಿಸಬೇಕು. ನಂತರವೇ ಅರಣ್ಯ ಭೂಮಿ ಯನ್ನು ಬಳಕೆದಾರ ಏಜೆನ್ಸಿಗೆ ಹಸ್ತಾಂತರಿಸಬೇಕು. ಬಳಕೆದಾರ ಏಜೆನ್ಸಿ ಪರಿಹಾರ ಅರಣ್ಯೀಕರಣ ವನ್ನು ಬೆಳೆಸುವ ಮತ್ತು ನಿರ್ವಹಿಸುವ ವೆಚ್ಚವನ್ನು ಅರಣ್ಯೇತರ ಭೂಮಿಯ ಸಮಾನ ಪ್ರಮಾಣಕ್ಕೆ ಪ್ರಸ್ತುತ ದಿನಗೂಲಿ ದರದಲ್ಲಿ ಕಂಪಾ ಖಾತೆಗೆ ಆನ್‌ಲೈನ್‌ನಲ್ಲಿ ಜಮಾ ಮಾಡಬೇಕು. ಈ ಯೋಜನೆಯಲ್ಲಿ ನಾಗರಿಕ ಉದ್ದೇಶ(ಸಿಎ) ಪ್ರದೇಶದ ಗಡಿ ನಿರ್ಧಾರ, ಬೇಲಿ, ನೀರುಣಿಸುವ ವ್ಯವಸ್ಥೆ, ಎಸ್‌ಎಂಸಿ ಕೆಲಸಗಳು ಮತ್ತು ಮುಂದಿನ ವರ್ಷಗಳ ವೆಚ್ಚ ಏರಿಕೆಗೆ ಸೂಕ್ತ ಬದುಕುಳಿಕೆಯ ವೆಚ್ಚವನ್ನು ಸೇರಿಸಬೇಕು, ಇದನ್ನು 10 ವರ್ಷದವರೆಗೆ ನಿರ್ವಹಿಸಬೇಕು ಎಂದು ಷರತ್ತಿನಲ್ಲಿ ತಿಳಿಸಲಾಗಿದೆ. ಮರಗಳನ್ನು ಕಡಿಯುವ ವೆಚ್ಚವನ್ನು ಬಳಕೆದಾರ ಏಜೆನ್ಸಿಯು ರಾಜ್ಯ ಅರಣ್ಯ ಇಲಾಖೆಗೆ ಜಮೆ ಮಾಡಬೇಕು.

ಅರಣ್ಯ ಭೂಮಿಯಲ್ಲಿ ಯಾವುದೇ ಕಾರ್ಮಿಕ ಶಿಬಿರ ಸ್ಥಾಪಿಸುವಂತಿಲ್ಲ. ಯೋಜನೆಯ ಕಾಮಗಾ ರಿಗಾಗಿ ಅರಣ್ಯ ಪ್ರದೇಶದ ಒಳಗೆ ಹೊಸ ರಸ್ತೆ ಅಥವಾ ಹಾದಿಗಳನ್ನು ನಿರ್ಮಿಸುವಂತಿಲ್ಲ. ಅರಣ್ಯ ಭೂಮಿಯನ್ನು ಯೋಜನೆಯಲ್ಲಿ ತಿಳಿಸಲಾದ ಉದ್ದೇಶಕ್ಕೆ ಮಾತ್ರ ಬಳಸಬೇಕು. ಬೇರೆ ಯಾವುದೇ ಉದ್ದೇಶಕ್ಕೆ ಬಳಸುವಂತಿಲ್ಲ. ಯೋಜನೆಗಾಗಿ ಬಳಸುವ ಒಟ್ಟು ಅರಣ್ಯ ಭೂಮಿಯ ಪ್ರಮಾಣ 111.0277 ಹೆಕ್ಟೇರ್ ಅನ್ನು ಮೀರಬಾರದು. ಅಕ್ಕಪಕ್ಕದ ಪ್ರದೇಶದ ಸಸ್ಯ ಮತ್ತು ಪ್ರಾಣಿ ಜೀವಿಗಳಿಗೆ ಯಾವುದೇ ಹಾನಿ ಉಂಟುಮಾಡುವಂತಿಲ್ಲ. ರಾಜ್ಯ ಸರಕಾರವು ಅರಣ್ಯ ಅನುಮೋದನೆಯ ಷರತ್ತುಗಳ ಅನುಸರಣೆಯ ಬಗ್ಗೆ ಪ್ರತಿ ವರ್ಷ ಡಿಸೆಂಬರ್ 31ರಂದು ವರದಿ ಸಲ್ಲಿಸಬೇಕು ಎಂದು ಅನುಮೋದನೆ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಮರಗಳನ್ನು ಕಡಿಯುವುದು ಅನಿವಾರ್ಯವಾಗಿದ್ದಲ್ಲಿ ಮಾತ್ರ ಮತ್ತು ರಾಜ್ಯ ಅರಣ್ಯ ಇಲಾಖೆಯ ಕಟ್ಟುನಿಟ್ಟು ಮೇಲ್ವಿಚಾ ರಣೆಯಲ್ಲಿ ಮಾತ್ರ ಮಾಡಬೇಕು. ಈ ಷರತ್ತುಗಳಲ್ಲಿ ಯಾವುದಾದರೂ ಒಂದು ಉಲ್ಲಂಘನೆಯಾದಲ್ಲಿ ಅದು ನಿಯಮ 1980 ಉಲ್ಲಂಘನೆ ಎಂದು ಪರಿಗಣಿಸಲಾಗುವುದು ಮತ್ತು ಕಾಯಿದೆ ಪ್ರಕಾರ ಕ್ರಮ ತೆಗೆಯಲಾಗುವುದು ಎಂದು ಎಚ್ಚರಿಸಿದೆ.

# ಚಂದಿರನ ಪ್ರದಕ್ಷಿಣೆಗೆ ಹೊರಟ ನಾಸಾ ನೌಕೆ

← ಮೊದಲಪುಟದಿಂದ

ನೌಕೆಯು ಭೂಮಿಯ ಸುತ್ತ ತನ್ನ ಮೊದಲ ಕಕ್ಷೆಯಲ್ಲಿ ಸಂಚರಿಸಲಾರಂಭಿಸಿದ ಬಳಿಕ 10 ರಿಂದ 40 ನಿಮಿಷಗಳವರೆಗೆ ಗಗನಯಾತ್ರಿಗಳು ಮತ್ತು ನಾಸಾ ನಿಯಂತ್ರಣ ಕೇಂದ್ರವು ನೌಕೆಯ ಸೌರಫಲಕಗಳು ಸರಿಯಾಗಿ ತೆರೆದುಕೊಂಡಿವೆಯೇ ಎಂದು ಪರೀಕ್ಷಿಸಿದರು.

ಕಕ್ಷೆಯನ್ನು ಪ್ರವೇಶಿಸಿದ ಸ್ವಲ್ಪ ಸಮಯದ ಬಳಿಕ, ಓರಿಯನ್ ಕ್ಯಾಪ್ಸುಲ್ ರಿಲೇ ಉಪಗ್ರಹಗಳ ನಡುವೆ ಬದಲಾಗುವ ಸಂದರ್ಭದಲ್ಲಿ ಅಲ್ಪಕಾಲ ಸಂವಹನ ಅಡಚಣೆ ಎದುರಿಸಿತು. ಆದರೆ, ನೆಲದ ಮೇಲಿರುವ ತಂಡಗಳು ಕ್ಷಿಪ್ರಗತಿಯಲ್ಲಿ ಕಾರ್ಯ ಪ್ರವೃತ್ತರಾಗಿ ಉಪಕರಣಗಳನ್ನು ಮರುಹೊಂದಿ ಸುವ ಮೂಲಕ ಈ ಸಮಸ್ಯೆಯನ್ನು ಸರಿಪಡಿಸಿ ದವು. ಇದಾದ ಬಳಿಕ, ಓರಿಯನ್ ಕ್ಯಾಪ್ಸುಲ್ ಯಶಸ್ವಿಯಾಗಿ ಉನ್ನತ ಕಕ್ಷೆಗೆ ಏರಿಸಲಾಯಿತು. ಈ ಹಂತದಲ್ಲಿ ಕಮಾಂಡರ್ ವೈಸ್‌ಮನ್ ಸಮಗ್ರತೆಯ ಮೇಲೆ ಸೂರ್ಯ ಉದಯಿಸುತ್ತಿದ್ದಾನೆ ಎಂಬ ಸಕಾರಾತ್ಮಕ ಸಂದೇಶವನ್ನು ಭೂಮಿಗೆ ರವಾನಿಸಿದರು.

ಉಡಾವಣೆಯಾದ ನಂತರ ಸುಮಾರು ಒಂದೂವರೆ ಗಂಟೆಯ (90 ನಿಮಿಷಗಳು) ನಂತರ ಆರ್ಟೆಮಿಸ್ 11 ಮಿಷನ್ 74 ಸಾವಿರ ಕಿ.ಮೀ ಎತ್ತರದ ಎರಡನೇ ಹಂತದ ಕಕ್ಷೆಯನ್ನು ತಲುಪಿತು. ಗನಯಾತ್ರಿಗಳು ಈ ಕಕ್ಷೆಯಲ್ಲಿ 24 ಗಂಟೆಗಳ ಕಾಲ ಇದ್ದು ಪರೀಕ್ಷೆಗಳನ್ನು ನಡೆಸಿದ ನಂತರ ಭೂಮಿಯ ಕಕ್ಷೆಯನ್ನು ತೊರೆದು ಚಂದ್ರನತ್ತ ತನ್ನ ಪ್ರಯಾಣವನ್ನು ಆರಂಭಿಸಲಿದೆ.

### ಮುಂದಿನ ಬಾರಿ ಪದಾರ್ಪಣೆ

**ಗಗನಯಾತ್ರಿಗಳೊಂದಿಗೆ ಒರಾಯನ್ ನೌಕೆಯು ಬಾಹ್ಯಾಕಾಶದಲ್ಲಿ ಹೇಗೆ ಕಾರ್ಯನಿರ್ವಹಿಸುತ್ತದೆ ಮತ್ತು ಅಲ್ಲಿನ ಸೂರ್ಯನ ವಿಕಿರಣಗಳನ್ನು ಹೇಗೆ ತಡೆದುಕೊಳ್ಳುತ್ತದೆ ಎಂಬುದನ್ನು ಪರೀಕ್ಷಿಸುವುದು ಈ ಮಿಷನ್‌ನ ಗುರಿಯಾಗಿದೆ. ಇದು ಮುಂದಿನ ದಿನಗಳಲ್ಲಿ ಚಂದ್ರನ ಮೇಲೆ ಮಾನವರನ್ನು ಇಳಿಸುವ ಆರ್ಟೆಮಿಸ್-3 ಯೋಜನೆಗೆ ಸಹಾಯವಾಗಲಿದೆ.**

### ವೈವಿಧ್ಯಮಯ ತಂಡ

**ಆರ್ಟೆಮಿಸ್-2 ತಂಡವು ಚಂದ್ರನತ್ತ ಸಾಗುತ್ತಿರುವ ಇದುವರೆಗಿನ ಅತ್ಯಂತ ವೈವಿಧ್ಯಮಯ ತಂಡವೆಂದು ಗುರುತಿಸಿಕೊಂಡಿದೆ. ಇದರಲ್ಲಿ ಪೈಲಟ್ ವಿಕ್ಟರ್ ಗ್ಲೋವರ್ (ಮೊದಲ ಕಪ್ಪು ವರ್ಣೀಯ) ಕ್ರಿಸ್ಟಿನಾ ಕೋಚ್ (ಮೊದಲ ಮಹಿಳೆ) ಮತ್ತು ಕೆನಡಾದ ಗಗನಯಾತ್ರಿ ಜೆರೆಮಿ ಹ್ಯಾನ್ಸೆನ್ (ನಾಸಾದ ಓರಿಯನ್ ನೌಕೆಯಲ್ಲಿ ಹಾರಿದ ಮೊದಲ ಅಮೆರಿಕನೇತರ ವ್ಯಕ್ತಿ) ಸೇರಿದ್ದಾರೆ.**

## ರಾಜಾ ರವಿವರ್ಮನ ಕೃತಿ 167 ಕೋಟಿ ರು.ಗೆ ಸೇಲ್

← ಮೊದಲಪುಟದಿಂದ

'ಯಶೋದಾ ಮತ್ತು ಕೃಷ್ಣ' ಮುಂಬೈನಲ್ಲಿ ನಡೆದ ಸ್ಯಾಫ್ರನ್ ಆರ್ಟ್‌ನ ಸ್ಪ್ರಿಂಗ್ ಲೈವ್ ಹರಾಜಿನಲ್ಲಿ ಭಾರಿ ಬೆಲೆಗೆ ಮಾರಾಟವಾಗಿದೆ. ಕೇವಲ ಏಳು ನಿಮಿಷಗಳ ಬಿರುಸಿನ ಬಿಡ್ಡಿಂಗ್ ಪ್ರಕ್ರಿಯೆಯ ನಂತರ, ಈ ಕಲಾಕೃತಿಯು ಬರೋಬ್ಬರಿ 167.2 ಕೋಟಿ ರೂಪಾಯಿಗೆ (ಸುಮಾರು 18 ಮಿಲಿಯನ್ ಡಾಲರ್) ಮಾರಾಟವಾಗಿದೆ. ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸ್ಥಾಪಕ ಮತ್ತು ಖ್ಯಾತ ಕೈಗಾರಿಕೋದ್ಯಮಿ ಸೈರಸ್ ಎಸ್. ಪೂನಾವಾಲಾ ಅವರು ಈ ಅಮೂಲ್ಯ ಕೃತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಆರಂಭದಲ್ಲಿ ಈ ಕೃತಿಯ ಬೆಲೆ 80 ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿತ್ತು, ಆದರೆ ಹರಾಜಿನಲ್ಲಿ ಆ ಮೊತ್ತಕ್ಕಿಂತ ಎರಡು ಪಟ್ಟು ಹೆಚ್ಚು ಬೆಲೆಗೆ ಮಾರಾಟವಾಗಿರುವುದು ಅಚ್ಚರಿ ಮೂಡಿಸಿದೆ.

### ಈ ಕಲಾಕೃತಿ ವಿಶೇಷ ಏನು?

**ಯಶೋದೆಯು ಹಸು ಹಾಲು ಕರೆಯುತ್ತಿದ್ದರೆ, ಬಾಲಕೃಷ್ಣ ಹಾಲಿಗಾಗಿ ಕೈಚಾಚುವ ದೃಶ್ಯವನ್ನು ರವಿವರ್ಮ ಚಿತ್ರಿಸಿದ್ದಾರೆ. ಪೌರಾಣಿಕ ವಿಷಯಗಳನ್ನು ಯುರೋಪಿಯನ್ ತಂತ್ರಗಾರಿಕೆಯಾದ 'ಕಿಯಾರೊಸ್ಕುರೊ' ಜತೆ ಬೆರೆಸಲು ರವಿವರ್ಮ ಸಿದ್ಧಹಸ್ತರಾಗಿದ್ದರು.**

## ಸಮಾಚಾರ ಸಣ್ಣದಲ್ಲ

### ಶಿಕ್ಷಣದ ಜತೆಗೆ ಸಂಸ್ಕಾರ ಅಗತ್ಯ

**ಶಿರಾ:** ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ಕಲಿಸುವ ಶಾಲೆ ನಮ್ಮದಾಗಿದೆ, ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕವಾಗಿ ಅನುಕೂಲವಾಗಲೆಂದು ಶಾಲೆಯ ಜಾಗದಲ್ಲಿ 1000 ಅಡಿಕೆ ಮರಗಳನ್ನು ಬೆಳೆಸಿದ್ದೇವೆ. ಆ ಮರಗಳು ಮೂರು ವರ್ಷಕ್ಕೆಲ್ಲ ಹೊಂಬಾಳೆ ಬಿಟ್ಟಿರುವುದು ಸಂತಸ ತಂದಿದೆ. ಅದರ ಪ್ರಯುಕ್ತ ಏಪ್ರಿಲ್ 5 ರಂದು ಮಧ್ಯಾಹ್ನ 1 ಗಂಟೆಗೆ ವನಭೋಜನ ಏರ್ಪಡಿಸಲಾಗಿದೆ. ಶಾಲೆಯ ಅಭಿವೃದ್ಧಿಗೆ ಶ್ರಮಿಸಿದ ಎಲ್ಲಾ ದಾನಿಗಳು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿ ಎಂದು ಶ್ರೀ ಮಾಧವ ವಿದ್ಯಾ ಮಂದಿರ ಶಾಲೆಯ ಅಧ್ಯಕ್ಷ ನಂದಿನಿ ಸೋಮ ಶೇಖರ್‌ತಿಳಿಸಿದರು. ಅವರು ಏಪ್ರಿಲ್ ಎರಡರಂದು ಶ್ರೀ ಮಾಧವ ವಿದ್ಯಾಮಂದಿರದಲ್ಲಿ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ನಮ್ಮ ಶಾಲೆಯಲ್ಲಿ ದೇಶಭಕ್ತಿ, ಹಿರಿಯರಿಗೆ ಗೌರವ ಹಾಗೂ ಮಾನವೀಯತೆ ಮೌಲ್ಯಾಧಾರಿತ ಶಿಕ್ಷಣಕ್ಕೆ ಒತ್ತು ನೀಡುತ್ತಿದ್ದೇವೆ. ಶಾಲೆಯ ಶುಲ್ಕವನ್ನು ಪಾವತಿಸಲು ಸಾಧ್ಯವಾಗದ ಸ್ಥಿತಿಯಲ್ಲಿರುವ ಪೋಷಕರು ನಮ್ಮ ಶಾಲೆಗೆ ಮಕ್ಕಳನ್ನು ಸೇರಿಸುತ್ತಾರೆ. ಅಂತಹ ಮಕ್ಕಳ ವಿದ್ಯಾಭ್ಯಾಸಕ್ಕೆ ಮುಂದಿನ ದಿನಗಳಲ್ಲಿ ಆರ್ಥಿಕವಾಗಿ ಅನುಕೂಲವಾಗಲೆಂದು ನನ್ನ ಸ್ವಂತ ಖರ್ಚಿನಿಂದ ನಮ್ಮ ತಂದೆ ತಾಯಿಯವರ ನೆನಪಿಗಾಗಿ ಅಡಿಕೆ ತೋಟವನ್ನು ಬೆಳೆಸಿದ್ದೇನೆ ಎಂದರು. ಈ ಸಂದರ್ಭದಲ್ಲಿ ಶ್ರೀ ಮಾಧವ ವಿದ್ಯಾಮಂದಿರ ಶಾಲೆಯ ಗೌರವಾಧ್ಯಕ್ಷ ಸೋಮಶೇಖರಯ್ಯ, ಅಧ್ಯಕ್ಷ ನಂದಿನಿ ಸೋಮಶೇಖರ್,ಕಾರ್ಯದರ್ಶಿ ಹೇಮಂತ್, ಹಿರಿಯ ಸಲಹೆಗಾರರಾದ ಜಯರಾಮಯ್ಯ, ನಿರ್ದೇಶಕರುಗಳಾದ ಚಿಕ್ಕಣ್ಣ, ಕವಿತಾ ಜಯ ನಾರಾಯಣ್, ಹಾಗೂ ಡಾ. ಶ್ರೀದೇವಿ ಉಪಸ್ಥಿತರಿದ್ದರು.

### ಶಿವಕುಮಾರ ಶ್ರೀಗಳ ಜನ ಸೇವೆ ಅಜರಾಮರ

**ಗೌರಿಬಿದನೂರು:** ಶಿವಕುಮಾರಸ್ವಾಮಿ ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಅವರು ಮಾಡಿದ ಜನ ಸೇವೆ ಎಂದೆಂದಿಗೂ ಅಜರಾಮರ ಎಂದು ಮುದುಗೆರೆ ರಾಜಶೇಖರ್‌ತಿಳಿಸಿದರು. ಅವರು ಇಂದು ಶಿವಕುಮಾರಸ್ವಾಮಿ ಜನ್ಮ ದಿನ ಪ್ರಯುಕ್ತ ಕೋಟಾಲದಿನ್ನೆ ಯಲ್ಲಿ ನಡೆದ ಶಿವಕುಮಾರಸ್ವಾಮಿ 119ನೇ ಜನ್ಮ ದಿನಾಚರಣೆ ಯಲ್ಲಿ ಭಾಗವಹಿಸಿ ಮಾತನಾಡಿದರು. ಶಿವಕುಮಾರಸ್ವಾಮಿ ಮಾಗಡಿ ತಾಲೂಕಿನ ವೀರಾಪುರದಲ್ಲಿ ಬಡ ಕುಟುಂಬದಲ್ಲಿ ಜನ್ಮ ತಾಳಿದರು ಮುಂದೆ ಸಿದ್ದ ಗಂಗಾಮಠದ ಅಧ್ಯಕ್ಷರಾಗಿ ಪ್ರತಿ ವರ್ಷ ಸುಮಾರು 1500 ಮಂದಿ ವಿದ್ಯಾರ್ಥಿಗಳಿಗೆ ಉಚಿತ ಊಟ,ಶಿಕ್ಷಣ,ವಸತಿಯನ್ನು ಜಾತಿ ಬೇಧವಿಲ್ಲದೇ ನೀಡಿ ದೇಶಕ್ಕೆ ಉತ್ತಮ ವಿಧ್ಯಾರ್ಥಿಗಳನ್ನು ನೀಡಿದರು. ಇಂದಿಗೂ ಈ ಶಿಕ್ಷಣಾಲಯದಲ್ಲಿ ವಿದ್ಯೆಯನ್ನು ಪಡೆದ ಅನೇಕ ಮಂದಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.ಅವರ ಮಾರ್ಗದರ್ಶನ ನಮ್ಮೆಲ್ಲರಿಗೂ ದಾರಿ ದೀಪ ಎಂದು ತಿಳಿಸಿದರು ಕಾರ್ಯಕ್ರಮದಲ್ಲಿರುದ್ರಮ್ಮ, ರಘು, ಬಾಬು, ರಾಜಣ್ಣ, ಮಂಜು, ಲಕ್ಷ್ಮಿಪತಿ, ಚಂದ್ರಶೇಖರ, ಶ್ರೀಧರ ಮುಂತಾದವರು ಭಾಗವಹಿಸಿದ್ದರು.

### ಹೇಮಾವತಿ ಹುಟ್ಟುಹಬ್ಬ: ಹಣ್ಣುಗಳ ವಿತರಣೆ

**ಬಾಗೇಪಲ್ಲಿ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ರಿ )ಬಾಗೇಪಲ್ಲಿ ತಾಲೂಕು ಯೋಜನಾ ಕಚೇರಿ ವ್ಯಾಪ್ತಿಯ ವಾತ್ಸಲ್ಯ ಮಾಶಾಸನ ಪಡೆಯುತ್ತಿರುವ 71 ಫಲಾನುಭವಿ ಕುಟುಂಬಗಳಿಗೆ ಡಾ. ಹೇಮಾವತಿ ಹೆಗ್ಗಡೆಯವರ 75 ನೇ ಹುಟ್ಟುಹಬ್ಬದ ಪ್ರಯುಕ್ತ ಹಣ್ಣು ಹಂಪಲು ವಿತರಣೆ ಮಾಡಲಾಯಿತು. ಬಾಗೇಪಲ್ಲಿ ತಾಲ್ಲೂಕು ವಲಯದಲ್ಲಿ ಮಾಶಾಸನ ಪಡೆಯುವ ವಾತ್ಸಲ್ಯ ಸದಸ್ಯರಾದ ಅಂಜನಮ್ಮ,ನಾಗ ರತ್ನಮ್ಮ,ನಜರೀನಾ ಅವರಿಗೆ ಹಣ್ಣು ಹಂಪಲು ನೀಡಿ ಯೋಗ ಕ್ಷೇಮವನ್ನು ವಿಚಾರಿಸಿದ ಗ್ರಾಮಾಭಿವೃದ್ಧಿ ಯೋಜನಾಧಿಕಾರಿಗಳಾದ ಪ್ರವೀಣ್ ಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ತದನಂತರ ಮಾತನಾಡಿ ಶ್ರೀ ಕ್ಷೇತ್ರ ಧರ್ಮಸ್ಥಳದ ಜ್ಞಾನ ವಿಕಾಸ ಯೋಜನೆಯ ಅಧ್ಯಕ್ಷೆ ಹೇಮಾವತಿ ವಿ. ಹೆಗ್ಗಡೆ 75 ನೇ ಹುಟ್ಟಿದ ಹಬ್ಬದ ಪ್ರಯುಕ್ತ ಮಾಶಾಸನ ಪಡೆಯುವ ವಾತ್ಸಲ್ಯ ಸದಸ್ಯರಾದ ಬಾಗೇಪಲ್ಲಿ ತಾಲ್ಲೂಕು ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಬಿಸಿ ಟ್ರಸ್ಟ್ ಬಾಗೇಪಲ್ಲಿ ಕ್ಷೇತ್ರದ ವ್ಯಾಪ್ತಿಯ ಸುಮಾರು 71 ಸದಸ್ಯರಿಗೆ ಹಣ್ಣು ಹಂಪಲು ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಜ್ಞಾನವಿಕಾಸ ಸಮನ್ವಯಧಿಕಾರಿ ಇಂದಿರಾ ಸೇವಾಪ್ರತಿನಿಧಿ ಲಕ್ಷಿ ್ಮನರಸಮ್ಮರವರು ಉಪಸ್ಥಿತರಿದ್ದರು.

### ಧ್ಯಾನದಿಂದ ಸಮಾಜದ ಪರಿವರ್ತನೆ ಸಾಧ್ಯ

**ಚಿಕ್ಕಬಳ್ಳಾಪುರ :** ಧ್ಯಾನದ ಮೂಲಕ ಸಮಾಜದ ಪರಿವರ್ತನೆ ಸಾಧ್ಯ ಎಂದು ಕೋಲಾರ ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್.ಜಯಶ್ರೀ ಅಭಿಪ್ರಾಯಪ ಟ್ಟರು. ತಾಲ್ಲೂಕಿನ ಕೈವಾರದಲ್ಲಿ ಗ್ರಾಂಡ್ ಮಾಸ್ಟರ್ ಪ್ರಬೋಧ್ ಅಚ್ಯುತರವರ ಗುಡಾಕೇಶ ಧ್ಯಾನ ಮಹೋತ್ಸವ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನುವಹಿಸಿ ಮಾತನಾಡಿದರು.

{ಸಿದ್ದರಾಮಯ್ಯ} ಮುಖ್ಯಮಂತ್ರಿ

**ಸಾಲದ ರಾಮಯ್ಯ ಎಂದು ಬಿಜೆಪಿ ಟೀಕೆ ಮಾಡುತ್ತಿದೆ. ಆದರೆ ನಮ್ಮ ಸರಕಾರ ಮಿತಿಯೊಳಗೆ ಸಾಲ ಮಾಡಿದೆ. ರಾಜ್ಯದ ಜಿಡಿಪಿಯ ಶೇ. 25ರ ಮಿತಿಯೊಳಗೆ ಸಾಲದ ಮೊತ್ತವಿದೆ. ಕೇಂದ್ರದಿಂದ ಬರಬೇಕಾದ ಅನುದಾನ ಬರದ ಕಾರಣ, ರೆವಿನ್ಯೂ ಸರ್‌ಪ್ಲಸ್ ಸಾಧಿಸಲು ಸಾಧ್ಯವಾಗಲಿಲ್ಲ. ಬಿಹಾರ ಚುನಾವಣೆಗೋಸ್ಕರ ಜಿಎಸ್ಟಿ ದರ ಕಡಿತಗೊಳಿಸಿದರು.**

ಭಕ್ತರು ರಥಕ್ಕೆ ಹೂವು, ದವನ, ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಣೆ | ನಾನಾ ಸಂಘಗಳಿಂದ ಮಜ್ಜಿಗೆ, ಪಾನಕ ವಿತರಣೆ

# ಶ್ರೀಕೋದಂಡ ರಾಮಸ್ವಾಮಿ ರಥೋತ್ಸವ

ವಿಶ್ವವಾಣಿ ಸುದ್ದಿಮನೆ ಚಿಕ್ಕಬಳ್ಳಾಪುರ

ನಗರದ ಬಜಾರ್‌ರಸ್ತೆಯಲ್ಲಿರುವ ಶ್ರೀಕೋದಂಡ ರಾಮಸ್ವಾಮಿ ಬ್ರಹ್ಮರಥೋತ್ಸವವು ಗುರುವಾರ ಜನಸಾಗರದ ನಡುವೆ ಶ್ರದ್ಧಾಭಕ್ತಿಯಿಂದ ರಾಮ ನಾಮದ ಜಯಘೋಷದ ನಡುವೆ ಸಂಭ್ರಮದಿಂದ ನಡೆಯಿತು.

ಪಾತಪಾಳ್ಯ ಗ್ರಾಮದ ಪಿ.ಆರ್.ರಾಧಕೃಷ್ಣ ಹಾಗೂ ಗ್ರಾಮದ ಪ್ರಮುಖರು ಹಾಗೂ ಪ್ರಧಾನ ಅರ್ಚಕರಾದ ಎಂ.ಎಸ್.ಶ್ರೀರಾಮನ್ ರಥೋತ್ಸವಕ್ಕೆ ಚಾಲನೆ ನೀಡಿದರು. ರಥಕ್ಕೆ ಹೂವು, ಧವನ, ಬಾಳೆಹಣ್ಣನ್ನು ಎಸೆಯುವ ಮೂಲಕ ಭಕ್ತಾದಿಗಳು ಹರಕೆ ತೀರಿಸುತ್ತಿದ್ದ ದೃಶ್ಯಗಳು ಕಂಡು ಬಂದವು. ಇನ್ನೂ ಕೆಲವು ಪೋಷಕರು ತಮ್ಮ ಎಳೆಯ ಮಕ್ಕಳನ್ನು ರಥದಲ್ಲಿ ವಿರಾಜಮಾನವಾಗಿದ್ದ ಸೀತಾಸಮೇತ ಶ್ರೀರಾಮಚಂದ್ರಮೂರ್ತಿಗೆ ಕೈಮುಗಿಸುವ ಮೂಲಕ ದೇವರ ಆಶೀರ್ವಾದ ಬೇಡುತ್ತಿದ್ದ ದೃಶ್ಯಗಳು ಕಂಡು ಬಂದವು.

ರಥೋತ್ಸವ ಅಂಗವಾಗಿ ಗುರುವಾರ ಬೆಳಗ್ಗೆಯಿಂದಲೇ ಕೋದಂಡ ರಾಮಸ್ವಾಮಿ ದೇವಾಲಯದಲ್ಲಿ ಸ್ವಾಮಿಗೆ ಅಭಿಷೇಕಾದಿ ವಿವಿಧ ಪೂಜಾ ಕೈಂಕರ್ಯಗಳನ್ನು ಸಾಂಗವಾಗಿ ನೆರವೇರಿಸಿದರು. ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ಹೋಮ, ಮಂತ್ರಗಳ ಘೋಷಗಳ ನಡುವೆ ಯಥಾಪ್ರಕಾರ ಧಾರ್ಮಿಕ ಪೂಜೆಯನ್ನು ಮಾಡಲಾಯಿತು.

ನಗರದ ಬಜಾರ್‌ರಸ್ತೆ ಶ್ರೀಕೋದಂಡರಾಮಸ್ವಾಮಿ ದೇವಾಲಯದ ಮುಂಭಾಗ ವಿರಾಜಮಾನವಾಗಿದ್ದ ರಥೋತ್ಸವದ ಚಿತ್ರ.

ಬ್ರಹ್ಮರಥೋತ್ಸವದ ಅಂಗವಾಗಿ ಕೋದಂಡರಾಮ ಸ್ವಾಮಿ ದೇವಾಲಯವನ್ನು ವಿವಿಧ ಹೂವುಗಳಿಂದ ಅಲಂಕಾರಗೊಳಿಸಿದ್ದು ಕೋದಂಡ ರಾಮಸ್ವಾಮಿ ಮೂರ್ತಿಯನ್ನು ರಥದಲ್ಲಿ ಕುಳ್ಳಿರಿಸಿ ರಾಜಬೀದಿಯಲ್ಲಿ ಮೆರವಣಿಗೆ ನಡೆಸಲಾಯಿತು. ಕಿಕ್ಕಿರಿದು ನೆರದಿದ್ದ ಭಕ್ತರು ಹೂವು ಹಣ್ಣು ಧವನ ಬಾಳೆ ಹಣ್ಣನ್ನು ರಥಕ್ಕೆ ಎಸೆದು ಧನ್ಯರಾದರು. ಚಿಕ್ಕಬಳ್ಳಾಪುರ ನಗರ ಸೇರಿದಂತೆ ಸುತ್ತಮುತ್ತಲ ಗ ್ರಾಮಗಳ ಜನತೆ, ಹರಕೆಹೊತ್ತ ಭಕ್ತಾಧಿಗಳು ದೇವಾಲಯಕ್ಕೆ ಭೇಟಿ ನೀಡಿ ರಥೋತ್ಸವದ ಅಂಗವಾಗಿ ನಡೆದ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುವ ಮೂಲಕ ದೇವರ ದರ್ಶನ ಪಡೆದು ಪುನೀತರಾದರು. ವಿವಿಧ ಸಂಘ–ಸಂಸ್ಥೆಗಳಿಂದ ಭಕ್ತಾದಿಗಳಿಗಾಗಿ ಕೋಸಂಬರಿ, ಮಜ್ಜಿಗೆ, ಪಾನಕ, ನೀರಿನ ಪಾಕೆಟ್, ಪ್ರಸಾದ ಹಾಗೂ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.ರಥವು ಸಾಗುತ್ತಿದ್ದ ಬೀದಿ ಬೀದಿಗಳಲ್ಲಿ ಪಾನಕ ಪನ್ನೀರು ಸೇವೆಯನ್ನು ಏರ್ಪಡಿಸುವ ಮೂಲಕ ರಥೋತ್ಸವಕ್ಕೆ ಕಳೆ ತುಂಬಿದರು. ದೇವಾಲಯ ಸಮಿತಿ ಅಧ್ಯಕ್ಷ ಕೆ.ಎಸ್.ಸುದರ್ಶನ್, ಕೆ.ಎಸ್. ಗೋಪಾಲಕೃಷ್ಣ,ಬಿಎಂಟಿಸಿ ಮಾಜಿ ಉಪಾಧ್ಯಕ್ಷ ಕೆ.ವಿ.ನವೀನ್‌ಕಿರಣ್, ವೆಂಕಟೇಶ್, ನ.ಸ.ಮಾ.ಅಧ್ಯಕ್ಷ ಕೆ.ವಿ.ಮಂಜುನಾಥ್,ಮಾಜಿ.ನಗರಸಭಾ ಅಧ್ಯಕ್ಷ ಮುನಿಕೃಷ್ಣ, ಶ್ರೀಮತಿ ಶರಣ್ಯ ಭಾಗಿಯಾಗಿದ್ದರು.

#### ಮೂಲ ದೇವರಿಗೆ ಪಂಚಾಮೃತ ಅಭಿಷೇಕ

**ರಥೋತ್ಸವ ಅಂಗವಾಗಿ ಗುರುವಾರ ಬೆಳಗ್ಗೆಯಿಂದಲೇ ಕೋದಂಡ ರಾಮಸ್ವಾಮಿ ದೇವಾಲಯದಲ್ಲಿ ಸ್ವಾಮಿಗೆ ಅಭಿಷೇಕಾದಿ ವಿವಿಧ ಪೂಜಾ ಕೈಂಕರ್ಯಗಳನ್ನು ಸಾಂಗವಾಗಿ ನೆರವೇರಿಸಿದರು. ಮೂಲ ದೇವರಿಗೆ ಪಂಚಾಮೃತ ಅಭಿಷೇಕ, ಹೋಮ, ಮಂತ್ರಗಳ ಘೋಷಗಳ ನಡುವೆ ಯಥಾಪ್ರಕಾರ ಧಾರ್ಮಿಕ ಪೂಜೆಯನ್ನು ಮಾಡಲಾಯಿತು.**

## ಪಿಡಿಒ ಸಂಘದಿಂದ ಇಒ ಮಂಜುನಾಥ್‌ಗೆ ಅಭಿನಂದನೆ

**ಕೋಲಾರ:** ಚುನಾವಣೆಯನ್ನು ಫಲಿತಾಂಶಕ್ಕೆ ಸೀಮಿತಗೊಳಿಸಿ ಎಲ್ಲ ಪಿಡಿಒಗಳು ಸಂಘಟಿತರಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನೌಕರರ ಉನ್ನತಿಗೆ ಶ್ರಮಿಸಬೇಕೆಂದು ತಾಲೂಕು ಪಂಚಾಯತಿ ಕಾರ್ಯ ನಿರ್ವಹಣಾಧಿಕಾರಿ ಮಂಜುನಾಥ್ ಹೇಳಿದರು.

ಚುನಾವಣೆಯಲ್ಲಿ ವಿಜೇತರಾದ ಪಿಡಿಒ ಸಂಘದ ಜಿಲ್ಲಾಧ್ಯಕ್ಷ ಮಹೇಶ್ ಕುಮಾರ್‌ತಂಡದವರು ಹೂಹಾರ ಹಾಕಿ ಕೃತಜ್ಞತೆ ಸಲ್ಲಿಸಿದ ಸಂದರ್ಭದಲ್ಲಿ ಮಾತನಾಡಿದ ಇಒ ಮಂಜುನಾಥ್ ಅವರು ಚುನಾವಣೆ ಯಾವುದೇ ಸಮಸ್ಯೆಯಿಲ್ಲದೆ ಶಾಂತವಾಗಿ ನಡೆದಿದ್ದು ಇದಕ್ಕೆ ಎಲ್ಲ ಪಿಡಿಒಗಳನ್ನು ಅಭಿನಂದಿಸುವುದಾಗಿ ತಿಳಿಸಿದರು.

ಪಿಡಿಒ ಸಂಘದ ನೂತನ ಅಧ್ಯಕ್ಷ ಮಹೇಶ್ ಕುಮಾರ್‌ಮಾತನಾಡಿ, ಜ್ವಲಂತ ಸಮಸ್ಯೆಗಳ ನಿವಾರಣೆ ಮೂಲಕ ಪಿಡಿಒ ಮತ್ತು ಆರ್ಡಿಪಿಆರ್ ನೌಕರರ ಶ್ರೇಯೋಭಿವೃದ್ಧಿಗೆ ಶ್ರಮಿಸಲಾಗುವುದು. ಪಿಡಿಒಗಳ ಸೀನಿಯಾರಿಟಿ ಪಟ್ಟಿ 10 ವರ್ಷದಿಂದ ನೆನೆಗುದಿಗೆ ಬಿದ್ದಿದ್ದು ಹೀಗಾಗಿ ಪ್ರಮೋಷನ್ ಕೊಡಿಸಲು ಪ್ರಯತ್ನ ಮಾಡಲಾಗುತ್ತದೆ. ಕಾರ್ಯದರ್ಶಿ,ಬಿಲ್ ಕಲೆಕ್ಟರ್,ಜಲಗಾರರು,ಕ್ಲರ್ಕ್, ಅಕೌಂಟೆಂಟ್ಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘದಲ್ಲಿ ಗಮನಾರ್ಹ ಬದಲಾವಣೆ ಮಾಡುವ ಮೂಲಕ ಎಲ್ಲರಿಗೂ ಸಾಮಾಜಿಕ ನ್ಯಾಯ ಒದಗಿಸಲಾಗುತ್ತದೆ ಎಂದು ಮಹೇಶ್ ಕುಮಾರ್ ಪ್ರತಿಕ್ರಿಯಿಸಿದರು. ಖಜಾಂಚಿ ಎನ್.ಸಂಪರಾಜ್ ಮಾತನಾಡಿ, ಪಿಡಿಒಗಳ ಜೇಷ್ಟತಾಪಟ್ಟಿಗೆ ಮುಕ್ತಿ ಕೊಡಿಸುವುದು ನಮ್ಮೆಲ್ಲರ ಗುರಿಯಾಗಿದೆ ಎಂದು ತಿಳಿಸಿದರು. ದೊಡ್ಡಹಸಾಳ ಕೆ.ಸಿ.ಮೋಹನ್ ಕುಮಾರ್(ಉಪಾಧ್ಯಕ್ಷ), ಎಸ್.ರಮೇಶ್(ಸಂಘಟನಾ ಕಾರ್ಯದರ್ಶಿ), ಎನ್.ನಾಗರಾಜ(ಕ್ರೀಡಾ ಕಾರ್ಯದರ್ಶಿ) ಐತರಾಸನಹಳ್ಳಿ ಜಿ.ಎಸ್.ಸತೀಶ್ ಕುಮಾರ್,ಮುದುವತ್ತಿ ಎಚ್.ಎಂ.ರವಿ, ನರಸಾಪುರ ಎಂ.ಮುನಿರಾಜು,ಶಾಪೂರು ಕೆ.ಸಿ.ಬಾಲಾಜಿ ಇದ್ದರು.

ಪಿಡಿಒ ಸಂಘದ ಮಹೇಶ್ ಕುಮಾರ್‌ತಂಡದವರು ಇಒ ಮಂಜುನಾಥ್ ಜತೆ ಸಂಭ್ರಮಿಸಿದರು.

## ವಿಮಾ ವ್ಯಾಪ್ತಿಗೆ ಕಾರ್ಮಿಕರು: ನಗರಸಭಾಧ್ಯಕ್ಷ

**ರಾಮನಗರ:** ನಗರಸಭೆ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಅಸಂಘಟಿತ ಕಾರ್ಮಿಕರನ್ನು ನಗರಸಭೆ ವತಿಯಿಂದ ವಿಮಾ ಯೋಜನೆ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ. ಅಸಂಘಟಿತ ಕಾರ್ಮಿಕರ ಮಾಹಿತಿ ಸಂಗ್ರಹಿಸಲು ಸಮೀಕ್ಷಾ ಕಾರ್ಯ ಆರಂಭಿಸಲಾಗುತ್ತಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.

ನಗರಸಭೆಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಕೇಂದ್ರ ಸರಕಾರದ ಪಿ.ಎಂ.ಜೆ.ಜೆ.ವೈ, ಪಿ.ಎಂ.ಎಸ್.ಬಿ.ವೈ ಹಾಗೂ ಪಿ.ಎಂ–ವೈ.ಎ ವಿಮಾ ಯೋಜನೆಗಳ ಮೊದಲ ಕಂತನ್ನು ನಗರಸಭೆ ಪಾವತಿಸುವ ಮೂಲಕ ಅಸಂಘಟಿತ ಕಾರ್ಮಿಕರು ಈ ವಿಮಾ ಯೋಜನೆಗಳ ಸವಲತ್ತುಗಳನ್ನು ಪಡೆಯಲು ಪ್ರೋತ್ಸಾಹಿಸುತ್ತಿದೆ ಎಂದರು.

2026–27ನೇ ಸಾಲಿನ ಬಜೆಟ್ನಲ್ಲಿ ಘೋಷಿಸಿರುವಂತೆ ನಗರಸಭಾ ವ್ಯಾಪ್ತಿಯಲ್ಲಿನ ಅಸಂಘಟಿತ ಕಾರ್ಮಿಕರಾದ ಆಟೋ ಚಾಲಕರು, ಇತರೆ ವಾಹನಗಳ ಚಾಲಕರು, ಗಾರೆ ಕೆಲಸ, ಕಾರ್ಪೆಂಟರ್,ಕೂಲಿ ಕೆಲಸ, ಫಿಲೇಚರ್ ,ಹೋಟೆಲ್, ಅಂಗಡಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು, ಬೀದಿ ಬದಿ ವ್ಯಾಪಾರಸ್ಥರು, ಮಡಿವಾಳರು, ಅಕ್ಕಸಾಲಿಗರು, ಪೈಂಟಿಂಗ್, ಕಟ್ಟಡ, ಪ್ಲಂಬಿಗ್, ಟೈಲರಿಂಗ್ ವೃತ್ತಿನಿರತರು ಹೀಗೆ ಜೀವನೋಪಾಯಕ್ಕಾಗಿ ಕಸಬು ಮಾಡುತ್ತಿರುವ ಅಸಂಘಟಿತ ಕಾರ್ಮಿಕರಿಗೆ ವಿಮಾ ಯೋಜನೆಯನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ಬಹುಶಃ ದೇಶದಲ್ಲೇ ಪ್ರಥಮ ಬಾರಿಗೆ ರಾಮನಗರ ನಗರಸಭೆ ಇಂತಹ ಮಹತ್ವದ ಕಾರ್ಯ ಕೈಗೊಂಡಿದೆ ಎಂದು ತಿಳಿಸಿದರು.

ಅಸಂಘಟಿತ ಕಾರ್ಮಿಕರ ಪೈಕಿ ಬಹುತೇಕರಿಗೆ ವಿಮಾ ಯೋಜನೆಗಳ ಮಹತ್ವ ತಿಳಿದಿಲ್ಲ, ಹೀಗಾಗಿ ನಗರಸಭೆ ವತಿಯಿಂದ ವಿಮಾ ಸವಲತ್ತಿನ ಮಹತ್ವವನ್ನು ತಿಳಿಸಿಕೊಡುವ ಪ್ರಯತ್ನ ಆರಂಭಿಸಿದ್ದೇವೆ. ಪ್ರಥಮ ಕಂತನ್ನು ನಗರಸಭೆಯಿಂದ ಪಾವತಿಸಲಾಗುವುದು, ಉಳಿದ ಕಂತುಗಳನ್ನು ಫಲಾನುಭವಿಗಳೇ ನೇರವಾಗಿ ತಮ್ಮ ಬ್ಯಾಂಕು ಖಾತೆಯಿಂದ ಪಾವತಿಸಿಕೊಳ್ಳುತ್ತಾರೆ ಎಂದರು.

ಈ ಕಾರ್ಮಿಕರಿಗೆ ಅವರ ಜೀವನ ಸಂಧ್ಯಾಕಾಲದಲ್ಲಿ ದುಡಿದು ತಮ್ಮನ್ನು ಪೋಷಿಸಿಕೊಳ್ಳಲು ಆರ್ಥಿಕ ಮೂಲಗಳು ಇರುವುದಿಲ್ಲ. ಇಂತಹ ಅಸಂಘಟಿತ ವಲಯದ ಕಾರ್ಮಿಕರಿಗೆ ಅವರ ವಯೋವೃದ್ದ ವೇಳೆಯಲ್ಲಿ ಸಾಮಾಜಿಕ ಭದ್ರತೆ ಕಲ್ಪಿಸಲು ಭಾರತ ಸರಕಾರವು ಪ್ರಧಾನ ಮಂತ್ರಿ ಶ್ರಮ್ಯೋಗಿ ಮಾನ್ –ಧನ್ (ಪಿಎಂ ಎಸ್ವೈಎಂ) ಎಂಬ ಮಹತ್ವಾಕಾಂಕ್ಷಿ ವಂತಿಗೆ ಆಧಾರಿ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯ ಸವಲತ್ತನ್ನು ನಗರಸಭೆ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಕಾರ್ಮಿಕರಿಗೆ ಒದಗಿಸಿಕೊಡಬೇಕಾಗಿದೆ. 60 ವರ್ಷದ ನಂತರ ಮೂರು ಸಾವಿರ ಮಾಸಿಕ ಪಿಂಚಣಿ ಪಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ನಗರಸಭೆಯ ಆಯುಕ್ತ ಡಾ.ಜಯಣ್ಣ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ನಗರಸಭಾ ಸದಸ್ಯರುಗಳಾದ ಪವಿತ್ರ ಲಕ್ಷ್ಮಿಕಾಂತ್, ಪಾರ್ವತಮ್ಮ, ನಿಜಾಮುದ್ದಿನ್, ಅಜ್ಮತ್, ಗ್ಯಾಬ್ರಿಯಲ್, ಮಂಜುನಾಥ್, ಮುನಜಿಲ್ ಆಗಾ, ಸಮದ್, ನಾಗಮ್ಮ, ಖುರೇಷಿ ಮತ್ತಿತರರು ಇದ್ದರು.

ರಾಮನಗರ ನಗರಸಭೆಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಶೇಷಾದ್ರಿ ಮಾತನಾಡಿದರು.

## ‘ಮಾವಿನ ಮರ, ಇತರೆ ಕಥೆಗಳು’ ಪುಸ್ತಕ ಬಿಡುಗಡೆ

ನಗರದ ಬಾಯರ್ಸ್ ಕ್ಯಾಂಟಿನ್ನಲ್ಲಿ ‘ಏರಿ ಮೇಲಿನ ಮಾವಿನ ಮರ ಮತ್ತು ಇತರೆ ಕಥೆಗಳು’ ಎಂಬ ಕಥಾ ಸಂಕಲನವನ್ನು ಟಿಎಂಸಿಸಿ ಅಧ್ಯಕ್ಷ ಡಾ.ಎನ್. ಎಸ್. ಜಯಕುಮಾರ್‌ಅವರು ಲೋಕಾರ್ಪಣೆ ಮಾಡಿದರು.

**ತುಮಕೂರು:** ಸಮೃದ್ಧ ಜಾನಪದ ಸಾಹಿತ್ಯ ಒಳಗೊಂಡ ನಮ್ಮ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನೇಕ ಸಾಹಿತಿಗಳು ಶ್ರೇಷ್ಠ ಕೃತಿಗಳ ಮೂಲಕ ದೊಡ್ಡ ಕೊಡುಗೆ ನೀಡಿ ಶ್ರೀಮಂತಗೊಳಿಸಿದ್ದಾರೆ. ನಮ್ಮ ನಾಡಿನ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಸಾಹಿತ್ಯವನ್ನು ಬೆಳೆಸುವ, ಕನ್ನಡ ಕೃತಿಗಳನ್ನು ಕೊಂಡು ಓದಿ ಪ್ರೋತ್ಸಾಹಿಸಲು ಎಲ್ಲರೂ ಸಹಕರಿಸಬೇಕು. ಮಕ್ಕಳಲ್ಲಿ ಸಾಹಿತ್ಯಾಸಕ್ತಿ ಬೆಳೆಸಬೇಕು ಎಂದು ಟಿಎಂಸಿಸಿ ಅಧ್ಯಕ್ಷ ಡಾ.ಎನ್. ಎಸ್. ಜಯಕುಮಾರ್ ಹೇಳಿದರು.

ನಗರದ ಬಾಯರ್ಸ್ ಕ್ಯಾಂಟಿನ್ನಲ್ಲಿ ನಿವೃತ್ತ ಪ್ರಾಚಾರ್ಯ, ಸಾಹಿತಿ ಕೆ.ಹೆಚ್. ವೆಂಕಟೇಶ್ ರಚಿಸಿರುವ, ಆನಂದ್ ಪಬ್ಲಿಕೇಷನ್ನವರು ಪ್ರಕಾಶಿಸಿರುವ ‘ಏರಿ ಮೇಲಿನ ಮಾವಿನ ಮರ ಮತ್ತು ಇತರೆ ಕಥೆಗಳು’ ಎಂಬ ಕಥಾ ಸಂಕಲನ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಕಥೆಗಾರ ವೆಂಕಟೇಶ್ ಅವರು ಗ್ರಾಮೀಣ ಸೊಗಡಿನ ಭಾಷೆಯನ್ನು ಉತ್ತಮವಾಗಿ ಬಳಸಿಕೊಂಡು ಆಕರ್ಷಕವಾಗಿ ಬರೆದಿರುವ ಕಥೆಗಳು ಓದುಗರ ಗಮನ ಸೆಳೆಯುತ್ತವೆ. ಇಂತಹ ಕೃತಿಗಳು ಹೆಚ್ಚೆಚ್ಚು ಹೊರಬರಲಿ ಎಂದು ಆಶಿಸಿದರು. ಕನ್ನಡ ಸಾಹಿತ್ಯವು ಆಯಾ ಕಾಲಘಟ್ಟದ ನಮ್ಮ ಜೀವನಶೈಲಿ ಪರಿಚಯಿಸುವ ಪ್ರಮುಖ ಆಕರಗಳಾಗಿ ರೂಪುಗೊಳ್ಳುತ್ತವೆ. ಕನ್ನಡ ಭಾಷೆಯ ಹಿರಿಮೆ, ಮಹತ್ವದ ಬಗ್ಗೆ ಮಕ್ಕಳಲ್ಲಿ ಅಭಿಮಾನ ಬೆಳೆಸಬೇಕು, ಅವರಲ್ಲಿ ಸಾಹಿತ್ಯಾಸಕ್ತಿ ಬೆಳೆಸಬೇಕು. ಆ ಮೂಲಕ ಕನ್ನಡ ಸಾಹಿತ್ಯವನ್ನು ಉಳಿಸಿಬೆಳೆಸುವ ಕೆಲಸವಾಗಬೇಕು ಎಂದು ತಿಳಿಸಿದರು.

ಕೃತಿ ಕುರಿತು ಮಾತನಾಡಿದ ಹಿರಿಯ ಸಾಹಿತಿ ಈಚನೂರು ಇಸ್ಮಾಯಿಲ್, ಯುದ್ಧಗಳ ಕಾರ್ಮೋಡಗಳ ನಡುವೆ ಇಂದು ಜಗತ್ತು ಆತಂಕ ಸ್ಥಿತಿಯಲ್ಲಿದೆ. ಯಾವುದೇ ತತ್ವ ಸಿದ್ಧಾಂತಗಳಿಂದಲೂ ಯುದ್ಧ ಶಮನ ಮಾಡಿ, ಶಾಂತಿ ಸ್ಥಾಪಿಸಲು ಸಾಧ್ಯವಾಗಿಲ್ಲ. ಆದರೆ ಸಾಹಿತ್ಯಪ್ರೇಮ ಬೆಳೆಸುವ ಮೂಲಕ ಜಗತ್ತಿನಲ್ಲಿ ಶಾಂತಿ, ಸೌಹಾರ್ದತೆ ಬೆಳೆಸಲು ಸಾಧ್ಯವಿದೆ. ಅಂತಹ ವಾತಾವರಣ ಎಲ್ಲೆಡೆ ಮೂಡಬೇಕಾಗಿದೆ ಎಂದರು. ಕಥೆಗಾರ ಕೆ.ಎಚ್. ವೆಂಕಟೇಶ್ ಮಾತನಾಡಿ, ಗ್ರಾಮೀಣ ಪ್ರದೇಶದ ಬದುಕಿನ ತಲ್ಲಣಗಳನ್ನು ಸಹಜವಾಗಿ, ಸರಳವಾಗಿ ಕಥೆಗಳಾಗಿ ಬರೆದು ಗಮನ ಸೆಳೆದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಗಳ ಪ್ರಾಕಾರ ಉನ್ನತ ಸ್ಥಾನದಲ್ಲಿದೆ. ನಮ್ಮ ಕನ್ನಡದ ಲೇಖಕಿ ಬಾನು ಮುಸ್ತಾಕ್ ಅವರ ಸಣ್ಣ ಕಥೆಗಳ ಕೃತಿಗೆ ಬೂಕರ್‌ಪ್ರಶಸ್ತಿ ದೊರಕಿರುವುದು ಕನ್ನಡಿಗರು ಹೆಮ್ಮೆ ಪಡುವ ವಿಚಾರ ಎಂದು ಹೇಳಿದರು.

ಕಥೆಗಾರ ಕೆ.ಎಚ್. ವೆಂಕಟೇಶ್, ಆನಂದ್ ಪಬ್ಲಿಕೇಷನ್ನ ಶಂಕರಾನಂದ್, ಹಿರಿಯ ಕ್ರೀಡಾಪಟು ಟಿ.ಕೆ. ಆನಂದ್, ಸಮಾಜ ಸೇವಕ ಪದ್ಮನಾಬ್ (ಮಧು) ಹಾಗೂ ವಿವಿಧ ಸಂಘಸಂಸ್ಥೆಗಳ ಪ್ರಮುಖರು ಸಮಾರಂಭದಲ್ಲಿ ಭಾಗವಹಿಸಿದ್ದರು.

## ಕ್ಯಾಂಟರ್‌ಗೆ ಕಾರು ಡಿಕ್ಕಿ: ಇಬ್ಬರ ಸಾವು

**ಚಿಕ್ಕಬಳ್ಳಾಪುರ:** ಮುಂದೆ ಚಲಿಸುತ್ತಿದ್ದ ಕ್ಯಾಂಟರ್ಗೆ ಹಿಂಬದಿಯಿಂದ ಕಾರು ಡಿಕ್ಕಿಯಾಗಿ ಇಬ್ಬರು ಸಾವನ್ನಪ್ಪಿದ್ದು ಮತ್ತೋರ್ವನ ಸ್ಥಿತಿ ಚಿಂತಾಜನಕವಾಗಿರುವ ಘಟನೆ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 44 ಶೆಟ್ಟಿಗೆರೆ ಕ್ರಾಸ್ ಬಳಿ ನಡೆದಿದೆ. ಮೃತರನ್ನು ರಕ್ಷಿತಾ ರೆಡ್ಡಿ(23), ಪವನ್ ರೆಡ್ಡಿ(30) ಮತ್ತು ಗಾಯಾಳುವನ್ನು ರಾಜಶೇಖರರೆಡ್ಡಿ(32) ಎಂದು ಗುರ್ತಿಸಲಾಗಿದೆ.

ಮೃತ ರಕ್ಷಿತಾ ರೆಡ್ಡಿ ಮತ್ತು ರಾಜಶೇಖರರೆಡ್ಡಿ ನವ ವಿವಾಹಿತರಾಗಿದ್ದು, ಪವನ್ ರೆಡ್ಡಿಯು ರಾಜಶೇಖರರೆಡ್ಡಿ ತಮ್ಮನಾಗಿದ್ದು ಇವರು ಬೆಂಗಳೂರಲ್ಲಿ ವಾಸವಾಗಿದ್ದರು. ಬಳ್ಳಾರಿ ಮೂಲದ ರಾಜಶೇಖರ್‌ರೆಡ್ಡಿ ಹಾಗೂ ಆಂದ್ರದ ಉರುವಕೊಂಡ ಮೂಲದ ರಕ್ಷಿತಾ ರೆಡ್ಡಿ ಬೆಂಗಳೂರಿನಲ್ಲಿ ಸಾಫ್ಟ್ ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದ್ದು, ಮೂವರು ಬಳ್ಳಾರಿಲ್ಲಿರುವ ರಾಜಶೇಖರರೆಡ್ಡಿಯ ದೊಡ್ಡಪ್ಪನ ಮನೆಗೆ ಹೋಗುತ್ತಿದ್ದರು ಎನ್ನಲಾಗಿದೆ.

ಮೃತ ರಕ್ಷಿತಾ ರೆಡ್ಡಿ, ರಾಜಶೇಖರರೆಡ್ಡಿ , ಪವನ್ ರೆಡ್ಡಿಯವರು ಗುರುವಾರ ಬೆಳಗ್ಗೆ ಬೆಂಗಳೂರಿನಿಂದ ಬಳ್ಳಾರಿಗೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ 8–30ರಲ್ಲಿ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 44 ಶೆಟ್ಟಿಗೆರೆ ಕ್ರಾಸ್ ಬಳಿ ಮುಂದೆ ತೆರಳುತ್ತಿದ್ದ ಕ್ಯಾಂಟರ್ ವಾಹನಕ್ಕೆ ಹಿಂಬದಿಯಿಂದ ಡಿಕ್ಕಿಯಾಗಿದೆ. ಢಿಕ್ಕಿಯ ರಭಸಕ್ಕೆ ಕಾರಿನ ಅರ್ಧಕ್ಕೂ ಹೆಚ್ಚು ಬಾಗ ಕ್ಯಾಂಟರ್‌ನಡಿ ಸಿಲುಕಿ ನುಜ್ಜು ಗುಜ್ಜಾಗಿ ಕಾರಿನಲ್ಲಿದ್ದ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅಪಘಾತದ ಸುದ್ದಿ ತಿಳಿದ ತಕ್ಷಣ ಪೇರೆಂಸಂದ್ರ ಪೊಲೀಸ್ ಠಾಣೆಯ ಪಿಎಸ್ಐ ಗುಣವತಿ ತಮ್ಮ ಸಿಬ್ಬಂದಿಯೊಂದಿಗೆ ಘಟನಾ ಸ್ಥಳಕ್ಕೆ ತಲುಪಿ ಸಾರ್ವಜನಿಕರ ಸಹಕಾರದಿಂದ ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ರವಾನಿಸಿ, ಅಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೇಂಗಳೂರಿಗೆ ರವಾನಿಸಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ರಕ್ಷಿತಾ ರೆಡ್ಡಿ, ಪವನ್ ರೆಡ್ಡಿ, ಮೃತರಾದರೆ, ರಾಜಶೇಖರರೆಡ್ಡಿ ,ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಬೆಂಗಳೂರಿನಿಂದ ಮೃತರ ಶವಗಳನ್ನು ಚಿಕ್ಕಬಳ್ಳಾಪುರ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ತರಲಾಗಿದ್ದು, ಆಸ್ಪತ್ರೆಯ ಬಳಿ ಮೃತರ ಕುಟುಂಬಸ್ಥರ ಮತ್ತು ಸಂಬಂಧಿಕರ ಅಕ್ರಂದನ ಮುಗಿಲು ಮುಟ್ಟಿತ್ತು. ಈ ಕುರಿತು ಪೆರೇಸಂದ್ರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.



ಕ್ಯಾಂಟರ್ಗೆ ಹಿಂಬದಿಯಿಂದ ಕಾರು ಡಿಕ್ಕಿಯಾಗಿರುವುದು

## ಬೇಸಿಗೆ ಶಿಬಿರ ಏ.11ರಿಂದ

**ತುಮಕೂರು:** ಸಾಣೇಹಳ್ಳಿ ನೀನಾಸಂ ರಂಗಾಯಣ ಪದವೀಧರರಿಂದ ನಿರಂಕುಶ ರಂಗ ತಂಡ 3 ನೇ ವರ್ಷದ ಆಡು ಬಾ ನನ್ನ ಕಂದ ಎನ್ನುವ ಮಕ್ಕಳ ಬೇಸಿಗೆ ರಂಗ ಶಿಬಿರವನ್ನು ನಗರದ ಅನನ್ಯ ಪಿ ಯು ಕಾಲೇಜು ಆವರಣದಲ್ಲಿ ಏ. 11ರಿಂದ ಹಮ್ಮಿಕೊಳ್ಳಲಾಗಿದೆ. 30 ದಿನಗಳ ಕಾಲ ಆಡು ಬಾ ನನ್ನ ಕಂದ ಮಕ್ಕಳ ಬೇಸಿಗೆ ಶಿಬಿರ ನಡೆಯುತ್ತಿದ್ದು ಶಿಬಿರದಲ್ಲಿ ಅಭಿನಯ ತರಗತಿ, ರಂಗ ವ್ಯಾಯಾಮ. ರಂಗಾಟಗಳು. ರಂಗಗೀತೆ. ಜಾನಪದ ಗೀತೆ. ಕೋಲಾಟ ನಾಟಕಗಳ ಗ್ರಹಿಕೆ. ಸಾಂಸ್ಕೃತಿಕ ವ್ಯಕ್ತಿತ್ವ ವಿಕಸನ. ಇಂತಹ ಎಲ್ಲಾ ಬಗೆಯ ಕಲೆಗಳ ಬಗ್ಗೆ ಮಕ್ಕಳಿಗೆ ಹೇಳಿಕೊಡಲಾಗುತ್ತದೆ.

7 ರಿಂದ 15 ವರ್ಷದೊಳಗಿನ ಮಕ್ಕಳಿಗೆ ಶಿಬಿರದಲ್ಲಿ ಕಲಿಕೆ ಅವಕಾಶ ಇರುತ್ತದೆ.ಆಸಕ್ತಿಯುಳ್ಳವರು ಏ. 5ರೊಳಗೆ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ರಂಗ ನಿರ್ದೇಶಕ ಹೇಮಂತ್ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : ದೂ: 8884211659/ 7975914796.

ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದ 3,500 ಪ್ರಕರಣಗಳು | ಜನನ, ಮರಣ ಪ್ರಮಾಣ ಪತ್ರಕ್ಕೂ ಸಾರ್ವಜನಿಕರ ಪರದಾಟ

# ಚಿಕ್ಕನಾಯಕನಹಳ್ಳಿ ಕೋರ್ಟ್‌ನಲ್ಲಿ ನ್ಯಾಯಾಧೀಶರ ಕೊರತೆ !

ಧನಂಜಯ್, ಚಿಕ್ಕನಾಯಕನಹಳ್ಳಿ

ಇಲ್ಲಿನ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಕೊರತೆಯಿಂದಾಗಿ ನ್ಯಾಯದಾನ ಪ್ರಕ್ರಿಯೆ ಕುಂಠಿತಗೊಂಡಿದ್ದು, ತಕ್ಷಣವೇ ಖಾಲಿ ಇರುವ ಹೆಚ್ಚುವರಿ ಹಾಗೂ ಪ್ರಧಾನ ನ್ಯಾಯಾಧೀಶರನ್ನು ನೇಮಕ ಮಾಡಬೇಕೆಂದು ತಾಲ್ಲೂಕಿನ ನಾಗರಿಕರು ಪ್ರಬಲವಾಗಿ ಒತ್ತಾಯಿಸಿದ್ದಾರೆ.

**ತಿಪಟೂರಿಗೆ ವರ್ಗಾವಣೆ:**

ಚಿಕ್ಕನಾಯಕನಹಳ್ಳಿ ನ್ಯಾಯಾಲಯದಲ್ಲಿ ಪ್ರಸ್ತುತ ಸೀನಿಯರ್‌ಸಿವಿಲ್ ಜಡ್ಜ್ ಇದ್ದಾರೆಯಾದರೂ, ಪ್ರಧಾನ ನ್ಯಾಯಾಧೀಶರು ತರಬೇತಿಗೆ ತೆರಳಿರುವುದು ಮತ್ತು ಹೆಚ್ಚುವರಿ ನ್ಯಾಯಾಧೀಶರ ನೇಮಕವಾಗದ ಕಾರಣ ದೈನಂದಿನ ಕರ್ಯಕಲಾಪಗಳಿಗೆ ಭಾರಿ ಅಡಚಣೆಯಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಪ್ರಮುಖ ವಿಚಾರಣೆಗಳನ್ನು ತಿಪಟೂರು ನ್ಯಾಯಾಲಯಕ್ಕೆ ಗರ್ಾಯಿಸಲಾಗಿದೆ. ಇದರಿಂದಾಗಿ ತಾಲ್ಲೂಕಿನ ಕುಗ್ರಾಮಗಳಿಂದ ಬರುವ ಬಡ ಕಕ್ಷಿದಾರರು ಹಣ ಮತ್ತು ಸಮಯ ವ್ಯಯಿಸಿ ಪ್ರತಿ ವಿಚಾರಣೆಗೂ ತಿಪಟೂರಿಗೆ ಅಲೆಯುವಂತಾಗಿದ್ದು, ಸರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**3,500 ಪ್ರಕರಣಗಳು ಬಾಕಿ:**

ಇಬ್ಬರು ನ್ಯಾಯಾಧೀಶರ ಅವಶ್ಯಕತೆ ಇರುವ ಈ ನ್ಯಾಯಾಲಯದಲ್ಲಿ ಹುದ್ದೆಗಳು ಖಾಲಿ ಇರುವುದು ಸಮಸ್ಯೆಯನ್ನು ದ್ವಿಗುಣಗೊಳಿಸಿದೆ. ಲಭ್ಯವಿರುವ ಅಂಕಿಅಂಶಗಳ ಪ್ರಕಾರ, ಸದ್ಯ ಸುಮಾರು 3,500 ಕ್ಕೂ ಹೆಚ್ಚು ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು ವಿಚಾರಣೆ ಕಾಣದೆ ಬಾಕಿ ಇವೆ. ನ್ಯಾಯಾಧೀಶರ ನೇಮಕ ವಿಳಂಬವಾಗುತ್ತಿರುವುದರಿಂದ ಈ ಸಂಖ್ಯೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ನ್ಯಾಯದಾನ ವಿಳಂಬವಾಗುತ್ತಿದೆ.

**ಜನನ-ಮರಣ ಪ್ರಮಾಣ ಪತ್ರಕ್ಕೆ ಬ್ರೇಕ್:**

ಸರ್ವಜನಿಕರಿಗೆ ಅತ್ಯಗತ್ಯವಾದ ಜನನ ಹಾಗೂ ಮರಣ ಪ್ರಮಾಣ ಪತ್ರಗಳನ್ನು ಪಡೆಯಲು ಈಗ ತೀವ್ರ ತೊಂದರೆಯಾಗುತ್ತಿದೆ. ನಿಗದಿತ ಅವಧಿಯ ನಂತರ ನೋಂದಣಿ ಮಾಡಿಸಲು ನ್ಯಾಯಾಲಯದ ಅನುಮತಿ ಬೇಕು. ಆದರೆ, ಚಿಕ್ಕನಾಯಕನಹಳ್ಳಿಯ ಪ್ರಕರಣಗಳು ಗರ್ಾವಣೆಯಾಗಿದ್ದರೂ ಸಹ, ತಿಪಟೂರು ನ್ಯಾಯಾಲಯದಲ್ಲಿ ಜನನ-ಮರಣದ ರ್ಜಿಗಳನ್ನು ವಿಲೇವಾರಿ ಮಾಡುತ್ತಿಲ್ಲ. ಇದರಿಂದಾಗಿ ಶಾಲಾ ದಾಖಲಾತಿ, ಆಸ್ತಿ ಹಕ್ಕು ಬದಲಾವಣೆ ಹಾಗೂ ವಿಮಾ ಸೌಲಭ್ಯ ಪಡೆಯಲು ಜನರು ಕಚೇರಿಯಿಂದ ಕಚೇರಿಗೆ ಅಲೆಯುತ್ತಿದ್ದಾರೆ.

ಒಟ್ಟಾರೆಯಾಗಿ ಚಿಕ್ಕನಾಯಕನಹಳ್ಳಿಯ ನ್ಯಾಯಾಂಗ ವ್ಯವಸ್ಥೆ ಹಳಿ ತಪ್ಪುತ್ತಿದ್ದು, ಕೂಡಲೇ ಹೈಕರ್ಟ್ ಮತ್ತು ನ್ಯಾಯಾಂಗ ಇಲಾಖೆಯು ಪರ್ಣ ಪ್ರಮಾಣದ ನ್ಯಾಯಾಧೀಶರನ್ನು ನೇಮಿಸಬೇಕು. ತರ್ತಾಗಿ ಜನನ–ಮರಣ ಪ್ರಮಾಣ ಪತ್ರಗಳ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಹಕ್ಕೊತ್ತಾಯ ಮಾಡಿದ್ದಾರೆ.

#### ನಾಗರಿಕರಿಂದ ಹಕ್ಕೊತ್ತಾಯ

**ಒಟ್ಟಾರೆಯಾಗಿ ಚಿಕ್ಕನಾಯಕನಹಳ್ಳಿಯ ನ್ಯಾಯಾಂಗ ವ್ಯವಸ್ಥೆ ಹಳಿ ತಪ್ಪುತ್ತಿದ್ದು, ಕೂಡಲೇ ಹೈಕೋರ್ಟ್ ಮತ್ತು ನ್ಯಾಯಾಂಗ ಇಲಾಖೆಯು ಪೂರ್ಣ ಪ್ರಮಾಣದ ನ್ಯಾಯಾಧೀಶರನ್ನು ನೇಮಿಸಬೇಕು. ಜನನ-ಮರಣ ಪ್ರಮಾಣ ಪತ್ರಗಳ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು ಎಂದು ನಾಗರಿಕರು ಹಕ್ಕೊತ್ತಾಯ ಮಾಡಿದ್ದಾರೆ.**

# ಪಂಚರಾಜ್ಯ ಪವರ್ ವಾರ್

## ಮೆಲುಕು

# ಮಾತಿನಲ್ಲೇ ಕುಟುಕುತ್ತಿದ್ದ ತುಘಲಕ್ ರಾಮಸ್ವಾಮಿ



ಯಾರ ಎದುರಿಗಾದರೂ 'ಶ್ರೀನಿವಾಸ ಅಯ್ಯರ್ ರಾಮಸ್ವಾಮಿ' ಎಂಬ ಹೆಸರನ್ನು ಪ್ರಸ್ತಾಪಿಸಿದರೆ, ಎದುರಿರುವವರು ''ಅವರು ಸಂಸ್ಕೃತ ಪಂಡಿತರಾ?'' ಎಂಬ ಗ್ರಹಿಕೆಯಲ್ಲಿ ಮುಖದಲ್ಲಿ ನೆರಿಗೆಗಳನ್ನು ಮೂಡಿಸಿಕೊಂಡು ಗಂಭೀರವಾಗುತ್ತಾರೆ. ''ಅದೇ ರೀ, ಚೋ ರಾಮಸ್ವಾಮೀ...'' ಅಂದು ನೋಡಿ, ಮುಖದಲ್ಲಿನ ಆ ನೆರಿಗೆಗಳು ಮಾಯವಾಗಿ ಮಂದಹಾಸ ಮೂಡುತ್ತದೆ.

ಹೌದು, 'ಚೋ ರಾಮಸ್ವಾಮಿ' ಅವರ ವರಸೆಯೇ ಹಾಗೆ. ತಮಿಳಿನ ಓರ್ವ ನಾಟಕಕಾರ, ವಿಡಂಬನಕಾರ, ರಾಜಕೀಯ ವಿಮರ್ಶಕ, ವಕೀಲ, ಚಲನಚಿತ್ರ ನಿರ್ದೇಶಕ, ಹಾಸ್ಯನಟ ಹೀಗೆ 'ಬಹುಮುಖ' ಪ್ರತಿಭೆ ಎನಿಸಿಕೊಂಡಿದ್ದರು 'ಚೋ'. ತಮಿಳಿನ ಖ್ಯಾತ ನಿಯತಕಾಲಿಕ 'ತುಘಲಕ್'ನ ಸ್ಥಾಪಕ ಸಂಪಾದಕರೂ ಆಗಿದ್ದ ಚೋ ರಾಮಸ್ವಾಮಿ, ಹಾಸ್ಯಲೇಪಿತ ನೇರ ನಡೆ-ನುಡಿಗಳಿಗೆ ಹೆಸರಾಗಿದ್ದವರು.

ಅದು 'ಎಐಎಡಿಎಂಕೆ' ಪಕ್ಷದ ಎಂ.ಜಿ. ರಾಮಚಂದ್ರನ್ (ಎಂಜಿಆರ್) ಅವರು ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಕಾಲ. ಚಿತ್ರರಂಗದಲ್ಲಿ ಸೂಪರ್‌ಸ್ಟಾರ್ ಆಗಿ ಮಿಂಚಿ, ಅದನ್ನೇ ಚಿಮ್ಮುಹಲಗೆಯಾಗಿಸಿಕೊಂಡು ರಾಜಕಾರಣದಲ್ಲಿ ರಾರಾಜಿಸಿದವರು 'ಎಂಜಿಆರ್'. ರಾಜಕೀಯಕ್ಕೆ ಬಂದ ಮೇಲೂ ಅವರ 'ಸೂಪರ್‌ಸ್ಟಾರ್'ಗಿರಿಗೆ ಸಂಚಕಾರವೇನೂ ಬಂದಿರಲಿಲ್ಲ, ಬದಲಿಗೆ ಅದು ಒಂದು ಗುಕ್ಕು ಜಾಸ್ತಿಯೇ ಆಗಿತ್ತು. ಜತೆಗೆ, ಇಂದು ಕಾಣಬರುವಂತೆ ಅಂದು ಕೂಡ, ಹಿಂಬಾಲಕರು ಎನಿಸಿಕೊಂಡವರ 'ಚಮಚಾಗಿರಿ' ಅಬಾಧಿತವಾಗಿತ್ತು. ಎಐಎಡಿಎಂಕೆ ಪಕ್ಷದ ಶಾಸಕರಲ್ಲಿ ಕೆಲವರು ತಾವು ಜನರಿಂದ ಚುನಾಯಿತರಾದವರು ಎಂಬುದನ್ನೂ ಮರೆತು 'ಎಂಜಿಆರ್' ಅವರನ್ನು ವಿನಾಕಾರಣ, ಅತಿರೇಕವಾಗಿ ಗುಣಗಾನ ಮಾಡುವುದು, ಅವರ ಜತೆಗೇ ಇದ್ದುಕೊಂಡು ಕೈ ಕೈ ಹೊಸೆಯುವುದು ಸಾಮಾನ್ಯವಾಗಿತ್ತು. ಖ್ಯಾತ ವಿಡಂಬನಕಾರರೂ, ರಾಜಕೀಯ ವಿಶ್ಲೇಷಕರೂ ಆಗಿದ್ದ 'ಚೋ ರಾಮಸ್ವಾಮಿ'ಯವರು ಇದನ್ನು ಕಣ್ಣಂಚಿನಲ್ಲೇ ಗಮನಿಸಿಕೊಂಡು ಬಂದಿದ್ದರು.

ಹೀಗೇ ಒಮ್ಮೆ, ಯಾವುದೋ ಚುನಾವಣಾ ಸಭೆಯ ಸಂದರ್ಭದಲ್ಲಿ ಎಐಎಡಿಎಂಕೆ ಪಕ್ಷದ ಕೆಲ ಶಾಸಕರು ಹಾಗೂ 'ಚೋ ರಾಮಸ್ವಾಮಿ' ಮುಖಾಮುಖಿ ಆಗುವಂತಾಯಿತು. ಆ ಶಾಸಕರು ತೆಪ್ಪಗೆ ನಮಸ್ಕಾರ ಮತ್ತು ನಗೆಯ ವಿನಿಮಯ ಮಾಡಿಕೊಂಡು ಜಾಗ ಖಾಲಿಮಾಡಿದ್ದರೆ ಚೆನ್ನಾಗಿರುತ್ತಿತ್ತು; ಆದರೆ 'ಚೋ ರಾಮಸ್ವಾಮಿ'ಯವರಿಂದ ಶಹಭಾಸ್‌ಗಿರಿ ಪಡೆಯಬೇಕೆಂಬ ಉಮೇದಿನಲ್ಲಿ ಶಾಸಕರೊಬ್ಬರು ''ನೋಡಿದ್ರಾ ಸ್ವಾಮೀ, ನಮ್ಮ ಎಂಜಿಆರ್ ಸಾಹೇಬರ ಖದರು? ಜನ ಹೇಗೆ ಸೇರ್ತಾರೆ ಅಂತ? ಜತೆಗೆ ನಾವಿದ್ದೀವಲ್ಲಾ ಶಾಸಕರು, ನಮ್ಮನ್ನೇನು ಕಮ್ಮಿ ಅಂದುಕೊಂಡ್ರಾ? ಎಂಜಿಆರ್ ಅವರು ಅಂಕಿ '1' ಇದ್ದಹಾಗೆ, ನಾವು ಶಾಸಕರು 'ಸೊನ್ನೆ' ಇದ್ದ ಹಾಗೆ. ನಮ್ಮಂಥ ಒಂದೊಂದೇ 'ಸೊನ್ನೆ' ಸೇರುತ್ತಾ ಹೋದಂತೆ, ಎಂಜಿಆರ್ ಅವರ ಬೆಲೆಯೂ ಹೆಚ್ಚಾಗುತ್ತಾ ಹೋಗುತ್ತೆ ಗೊತ್ತಾ?!'' ಎಂದು ಭರ್ಜರಿ ಹುಮ್ಮಸ್ಸಿನಲ್ಲಿ ಹೇಳಿದರು, 'ಮಾತಿನ ಮಲ್ಲ'ರಾದ ಚೋ ರಾಮಸ್ವಾಮಿಯವರು ಈ ಹೋಲಿಕೆಯನ್ನು ಮೆಚ್ಚುತ್ತಾರೆ ಎಂಬ ಭಂಡಧೈರ್ಯದೊಂದಿಗೆ.

ಆ ಶಾಸಕರ ಅಷ್ಟೂ ಮಾತನ್ನು ಗಂಭೀರವಾಗಿ ಕೇಳಿಸಿಕೊಂಡ ಚೋ ರಾಮಸ್ವಾಮಿಯವರು, ''ನಿಮ್ಮ ಮಾತು ನಿಜ ಸ್ವಾಮಿ. ಎಂಜಿಆರ್ ಅವರು ಅಂಕಿ '1' ಇದ್ದಹಾಗೆ, ನೀವೆಲ್ಲಾ ಶಾಸಕರು 'ಸೊನ್ನೆ'ಗಳಿದ್ದ ಹಾಗೆ. ಆದರೆ 'ಎಂಜಿಆರ್' ಎಂಬ ಆ '1' ಅಂಕಿ ಮಂಗಮಾಯವಾದರೆ, ನೀವೆಲ್ಲಾ ಉಳಿಯೋದು 'ಸೊನ್ನೆಗಳಾಗಿಯೇ'.... ಬರೆದಿಟ್ಟುಕೊಳ್ಳಿ'' ಎಂದು ಹೇಳಿ ಅಲ್ಲಿಂದ ನಿರ್ಗಮಿಸಿದರು.

ಅಪ್ರತಿಮ ವಾಕ್ಪಟು 'ಚೋ ರಾಮಸ್ವಾಮಿ' ಅವರ ಮುಂದೆಯೇ ತಮ್ಮ ವರಸೆಯನ್ನು ತೋರಿಸಲು ಹೋಗಿದ್ದ ಆ ಶಾಸಕರು ಇಂಗು ತಿಂದ ಮಂಗನಂತಾಗಿದ್ದರು..!!

## ಪ್ರಣಾಳಿಕೆ ಪ್ರವರ

### ಅಸ್ಸಾಂ: ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಏನುಂಟು?

- ಉದ್ಯಮ ವಿಸ್ತರಣೆಗೆ ಅಥವಾ ಹೊಸದಾಗಿ ಉದ್ಯಮ ಆರಂಭಿಸುವುದಕ್ಕೆ ಮುಂದಾಗುವ ಮಹಿಳೆಯರಿಗೆ 50,000 ರುಪಾಯಿ ಉಚಿತ ನೆರವು.
- 10 ಲಕ್ಷದಷ್ಟು ಮೂಲನಿವಾಸಿಗಳಿಗೆ ಕಾಯಂ ಪಟ್ಟಾ.
- ಕರ್ನಾಟಕದ 'ಗೃಹಲಕ್ಷ್ಮಿ' ಯೋಜನೆ ಮಾದರಿಯಲ್ಲಿ ಅಸ್ಸಾಂ ಮಹಿಳೆಯರಿಗೂ ಮಾಸಿಕ ಹಣ ವರ್ಗಾವಣೆಯ ಭಾಗ್ಯ; ಮೊತ್ತವಿನ್ನೂ ಘೋಷಣೆಯಾಗಬೇಕಿದೆ.
- ರಾಜ್ಯದ ಎಲ್ಲಾ ಕುಟುಂಬಗಳಿಗೂ 25 ಲಕ್ಷ ರು. ಮೌಲ್ಯದ ನಗದುರಹಿತ 'ಆರೋಗ್ಯ ವಿಮಾ ಯೋಜನೆ'ಯ ಅನುಷ್ಠಾನ.

## ಕೋಟ್ ಆಫ್ ದಿ ಡೇ..

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಂಗಾಳದಲ್ಲಿ ಅಶಾಂತಿಯನ್ನು ಹುಟ್ಟುಹಾಕಲು ಮತ್ತು ಅಂತಿಮವಾಗಿ ವಿಧಾನಸಭಾ ಚುನಾವಣೆಗೆ ಮುನ್ನ ರಾಷ್ಟ್ರಪತಿ ಆಡಳಿತಕ್ಕೆ ದಾರಿ ಮಾಡಿಕೊಡಲು ಪಿತೂರಿ ನಡೆಸಿದ್ದಾರೆ. ಕೇಸರಿ ಪಕ್ಷವು ರಾಜ್ಯದ ಚುನಾವಣಾ ವ್ಯವಸ್ಥೆಯನ್ನು ಹಾಳುಮಾಡಲು ಪ್ರಯತ್ನಿಸುತ್ತಿದೆ.

- ಮಮತಾ ಬ್ಯಾನರ್ಜಿ,
ಪಶ್ಚಿಮ ಬಂಗಾಳದ ಮುಖ್ಯಮಂತ್ರಿ

# ಉದಯನಿಧಿ ನಾಮಪತ್ರ ಸಲ್ಲಿಕೆ

## ಚೆಪಾಕ್-ತಿರುವಲ್ಲಿಕೇಣಿಯಿಂದ ಸ್ಪರ್ಧೆ | ಪರಂಪರೆಯ ಮುಂದುವರಿಕೆ

**ಚೆನ್ನೈ:** ತಮಿಳುನಾಡು ವಿಧಾನಸಭಾ ಚುನಾವಣೆ ದಿನದಿಂದ ದಿನಕ್ಕೆ ಕಳೆಗಟ್ಟುತ್ತಿದ್ದು, 234 ಸ್ಥಾನಗಳಿಗೆ ಏಪ್ರಿಲ್ 23ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ.

ತಮಿಳುನಾಡಿನ ರಾಜಕಾರಣದಲ್ಲಿ ಪ್ರಸ್ತುತ 'ಯುವರಾಜ'ನಂತೆ ಮೆರೆಯುತ್ತಿರುವ ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಅವರು ಚೆಪಾಕ್-ತಿರುವಲ್ಲಿಕೇಣಿ ಕ್ಷೇತ್ರದಿಂದ ಸತತ ಎರಡನೇ ಬಾರಿಗೆ ಚುನಾವಣಾ ಅಖಾಡಕ್ಕೆ ಇಳಿದಿದ್ದು, ಗುರುವಾರ (ಏ.2) ನಾಮಪತ್ರವನ್ನು ಸಲ್ಲಿಸಿದ್ದಾರೆ.

ಅದು ಚಲನಚಿತ್ರದ ಬಿಡುಗಡೆಯೇ ಇರಲಿ, ಚುನಾವಣೆಯೇ ಇರಲಿ ತಮಿಳುನಾಡಿನಲ್ಲಿ ಅದರ ಅಬ್ಬರ ಕೊಂಚ ಹೆಚ್ಚೇ ಎನ್ನಬೇಕು. ಅದರಲ್ಲೂ, ಸಾಕ್ಷಾತ್ ಮುಖ್ಯಮಂತ್ರಿಯ ಮಗ ಹಾಗೂ ಡಿಎಂಕೆ ಪಕ್ಷದ ಯುವಮೋರ್ಚಾ ಕಾರ್ಯದರ್ಶಿಯಾದ ಉದಯನಿಧಿ ಸ್ಟಾಲಿನ್ ಅವರೇ ನಾಮಪತ್ರದ ಸಲ್ಲಿಕೆಗೆ ಸಾಗುತ್ತಿರುವಾಗ, ಈ ಅಬ್ಬರಕ್ಕೆ, ಸಂಭ್ರಮ-ಸಡಗರಗಳಿಗೆ ಕತ್ತರಿ ಹಾಕಲಾದೀತೇ?! ಈ ಮಾತಿಗೆ ಪುಷ್ಟಿ ನೀಡುವಂತೆ, ನಾಮಪತ್ರ ಸಲ್ಲಿಕೆಗೂ ಮುನ್ನ ಪಕ್ಷದ ಕಾರ್ಯಕರ್ತರೊಡನೆ ಭರ್ಜರಿ ರೋಡ್ ಷೋನಲ್ಲಿ ಭಾಗವಹಿಸಿದರು ಉದಯನಿಧಿ ಸ್ಟಾಲಿನ್; ನಂತರದಲ್ಲಿ ಅವರು ಪಕ್ಷದ ಹಿರಿಯ ನಾಯಕರು ಮತ್ತು ಸ್ಥಳೀಯ ಪದಾಧಿಕಾರಿಗಳೊಂದಿಗೆ ತೆರಳಿ ಸೂಕ್ತ ದಾಖಲೆಪತ್ರಗಳೊಂದಿಗಿನ ನಾಮಪತ್ರವನ್ನು ಸಲ್ಲಿಸಿದರು. ಚೆಪಾಕ್-ತಿರುವಲ್ಲಿಕೇಣಿ ಕ್ಷೇತ್ರವನ್ನು ಒಂದು ಕಾಲಕ್ಕೆ ದಿವಂಗತ ಎಂ. ಕರುಣಾನಿಧಿಯವರು ಪ್ರತಿನಿಧಿಸುತ್ತಿದ್ದರು; ಈಗ ಆ ಪರಂಪರೆಯನ್ನು ಅವರ ಮೊಮ್ಮಗ ಉದಯನಿಧಿ ಸ್ಟಾಲಿನ್ ಮುಂದುವರಿಸುವ ಹವಣಿಕೆಯಲ್ಲಿದ್ದಾರೆ ಎಂಬುದು ಗಮನಾರ್ಹ. ಒಟ್ಟಿನಲ್ಲಿ, ಡಿಎಂಕೆ ಪಕ್ಷದ ಸಾಂಪ್ರದಾಯಿಕ ಭದ್ರಕೋಟೆ ಎನಿಸಿರುವ ಚೆಪಾಕ್-ತಿರುವಲ್ಲಿಕೇಣಿ ಕ್ಷೇತ್ರವು ಈಗ ಮತ್ತೊಂದು 'ಹೈ-ಪ್ರೊಫೈಲ್' ಸೆಣಸಾಟಕ್ಕೆ ಸಜ್ಜಾಗಿದೆ ಎನ್ನಲಡ್ಡಿಯಿಲ್ಲ.

ನಾಮಪತ್ರ ಸಲ್ಲಿಕೆಯ ತರುವಾಯದಲ್ಲಿ ಮಾಧ್ಯಮದವರೊಂದಿಗೆ ಉದಯನಿಧಿ ಅವರು ಮಾತನಾಡುತ್ತಾ, ''ಈ ಚುನಾವಣೆಯಲ್ಲಿ ನಾವು ಮತ್ತೊಮ್ಮೆ ಗೆಲ್ಲುವುದು ಶತಃಸಿದ್ಧ. ನಮಗೆ ಬಹುಮತ ಸಿಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಕಳೆದ ಐದು ವರ್ಷಗಳಲ್ಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಮಾಡಿರುವ ಉತ್ತಮ ಕೆಲಸಗಳಿಂದಾಗಿ ರಾಜ್ಯದ ಯುವಜನರು, ಅದರಲ್ಲೂ ವಿಶೇಷವಾಗಿ ಮಹಿಳೆಯರು ಸಂತಸಗೊಂಡಿದ್ದಾರೆ. ಚೆಪಾಕ್-ತಿರುವಲ್ಲಿಕೇಣಿ ಮತಕ್ಷೇತ್ರವು ನನ್ನ ಮನೆಯಿದ್ದಂತೆ. ಇಂದು ನಾಮಪತ್ರ ಸಲ್ಲಿಕೆಯ ವೇಳೆಯಲ್ಲೇ ವ್ಯಕ್ತವಾಗಿರುವ ಈ ಭಾರಿ ಜನಬೆಂಬಲವು ಡಿಎಂಕೆ ಪಕ್ಷದ ಜಯಭೇರಿಯನ್ನು ಸಾಕಷ್ಟು ಮುಂಚಿತವಾಗಿಯೇ ಖಾತ್ರಿಪಡಿಸಿದೆ'' ಎಂದರು.

ಇದೇ ಸಂದರ್ಭದಲ್ಲಿ, ಕೇಂದ್ರದ ನೀತಿಗಳ ಹೇರಿಕೆಯ ಕುರಿತು ಕಿಡಿಕಾರಿದ ಅವರು, ''ಇಂಥ ನಡೆಗಳ ವಿರುದ್ಧ ಡಿಎಂಕೆ ಪಕ್ಷದ ನಿಲುವು ಸ್ಪಷ್ಟವಾಗಿದೆ. 2026ರ ವರ್ಷದಲ್ಲಿ ನಡೆಯುತ್ತಿರುವ ಈ ಚುನಾವಣೆಯು ಕೇವಲ ಒಂದು ರಾಜಕೀಯ ಸೆಣಸಾಟವಲ್ಲ, ಇದು ತಮಿಳುನಾಡಿನ ಸ್ವಾಭಿಮಾನ ಹಾಗೂ ಹಕ್ಕುಗಳನ್ನು ರಕ್ಷಿಸುವ ಹೋರಾಟವೂ ಹೌದು'' ಎಂದು ಒತ್ತಿಹೇಳಿದರು.

# ದುರಂತದಲ್ಲಿ ಪಿತೂರಿಯ ವಾಸನೆ: ವಿಜಯ್ ಆರೋಪ

**ತಿರುಚಿರಾಪಳ್ಳಿ:** ತಮ್ಮ ವಿರುದ್ಧ ವ್ಯವಸ್ಥಿತ ರಾಜಕೀಯ ಪಿತೂರಿ ನಡೆಯುತ್ತಿರುವುದು ಅರಿವಿಗೆ ಬಂದಿದೆ ಎಂದು 'ತಮಿಳಗ ವೆಟ್ರಿ ಕಳಗಂ' (ಟಿವಿಕೆ) ಪಕ್ಷದ ನಾಯಕ ನಟ ವಿಜಯ್ ಆರೋಪಿಸಿದ್ದಾರೆ.

ತಿರುಚಿರಾಪಳ್ಳಿ ಪೂರ್ವ ವಿಧಾನಸಭಾ ಕ್ಷೇತ್ರದಿಂದ ನಾಮಪತ್ರವನ್ನು ಸಲ್ಲಿಸಿದ ತರುವಾಯ ಭಾರಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ''ನಿಮಗಾಗಿ ನ್ಯಾಯ ಕೇಳಲು ಬಂದಿರುವ ನನಗೂ ನ್ಯಾಯ ಸಿಗಬೇಕಿದೆ. ನನ್ನ ಕೊನೆಯ ಚಲನಚಿತ್ರ 'ಜನನಾಯಗನ್' ಬಿಡುಗಡೆಯು ತೀರಾ ವಿಳಂಬವಾಗುತ್ತಿರುವುದರ ಹಿಂದೆ ಕಾಣದ ಕೈಗಳು ಕೆಲಸ ಮಾಡಿವೆ. ಕೆಲ ತಿಂಗಳ ಹಿಂದೆ ಕರೂರಿನಲ್ಲಿ ನಡೆದ ಕಾಲ್ತುಳಿತದ ದುರಂತವು ಒಂದು ಯೋಜಿತ ಕುತಂತ್ರದ ಫಲಶ್ರುತಿಯಷ್ಟೇ. ಇದರ ನೇಪಥ್ಯದಲ್ಲಿ ಪಿತೂರಿಯಿದ್ದುದು ನನಗೆ ಗೊತ್ತಾಗಿದೆ'' ಎಂದರು. ಮಾತು ಮುಂದುವರಿಸಿದ ವಿಜಯ್, ''ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ತಮ್ಮ ಕುಟುಂಬಿಕರಿಗೆ ಏನಾದರೂ ಸಮಸ್ಯೆಯಾದರೆ ಅಥವಾ ಅವರ ಮೇಲೆ ದಾಳಿ ನಡೆದರೆ ವಿಮಾನದ ಮೂಲಕ ದೆಹಲಿಗೆ ಹಾರಿಹೋಗುತ್ತಾರೆ; ಆದರೆ ಎಲ್‌ಪಿಜಿ ಸಿಲಿಂಡರ್‌ಗೆ ಸಂಬಂಧಿಸಿ ಉದ್ಭವಿಸಿರುವ ಬಿಕ್ಕಟ್ಟಿನ ನಿವಾರಣೆಗೆ ಅವರು ಅಲ್ಲಿಗೆ ಹಾಗೆ ಧಾವಿಸಿದ್ದುಂಟಾ? ಎಲ್‌ಪಿಜಿ ಕೊರತೆಯಿಂದಾಗಿ ಸಣ್ಣ ಪುಟ್ಟ ಚಹಾ ಅಂಗಡಿಗಳು ಮತ್ತು ಹೋಟೆಲ್‌ಗಳು ಬಾಗಿಲು ಮುಚ್ಚುವಂತಾಗಿದೆ, ಇದರಿಂದಾಗಿ ಹಲವರಿಗೆ ಕಷ್ಟ-ನಷ್ಟಗಳಾಗಿವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಮುಂಚಿತವಾಗಿ ಯೋಜನೆ ರೂಪಿಸಿದ್ದಿದ್ದರೆ, ಸಿಲಿಂಡರ್ ಕೊರತೆಯ ಬಿಕ್ಕಟ್ಟನ್ನು ತಪ್ಪಿಸಬಹುದಿತ್ತು'' ಎಂದರು.

## ದೇವರ ಸ್ವಂತ ನಾಡಿನಲ್ಲಿ ಮತದಾರನೆಂಬ ದೇವರು ಒಲಿಯೋದು ಯಾರಿಗೆ? ಏನನ್ನುತ್ತೆ ಸಮೀಕ್ಷೆ?

# ಕಾಂಗ್ರೆಸ್ ಮೈತ್ರಿಗೆ ಹಬ್ಬದೂಟ, ಎಡರಂಗ-ಬಿಜೆಪಿಗೆ ಸಂಕಟ

**ತಿರುವನಂತಪುರಂ:** ಕೇರಳ ರಾಜ್ಯವನ್ನು 'ದೇವರ ಸ್ವಂತ ನಾಡು' ಎಂದು ಕರೆಯುವುದು ವಾಡಿಕೆ. ಇಲ್ಲಿ ಮತದಾರ ಎಂಬ 'ದೇವರು' ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಯಾರ ಬಯಕೆಗೆ 'ತಥಾಸ್ತು' ಎನ್ನಲಿದ್ದಾನೆ ಎಂಬ ಕುತೂಹಲ ಬಹುತೇಕರಲ್ಲಿ ಕೆನೆಗಟ್ಟಿದೆ. ಕಣದಲ್ಲಿರುವ ಅಭ್ಯರ್ಥಿಗಳು, ಅವರ ವೈಯಕ್ತಿಕ 'ಚರಿಷ್ಮಾ' ಮತ್ತು ಸ್ಥಳೀಯ ಸಮಸ್ಯೆಗಳು/ಚರ್ಚಾವಿಷಯಗಳು ಅಂತಿಮ ಫಲಿತಾಂಶವನ್ನು ಪ್ರಭಾವಿಸ'ಲಿವೆ' ಎಂಬುದು ಬಹುತೇಕರ ಗ್ರಹಿಕೆ. ಈ ಹಿನ್ನೆಲೆಯಲ್ಲಿ 'ಸಿ-ವೋಟರ್' ಸಂಸ್ಥೆ ಕೈಗೊಂಡಿರುವ ಸಮೀಕ್ಷೆಯು, ಮತದಾರರ ತಕ್ಕಡಿಯು 'ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್' (ಯುಡಿಎಫ್) ಕಡೆಗೇ ವಾಲಲಿದೆ ಎಂದು ಮುನ್ನುಡಿದಿದೆ.



### ಈ ಭವಿಷ್ಯಕ್ಕೆ ಆಧಾರವೇನು?

ಕೇರಳದಲ್ಲಿ ಸದ್ಯ ಅಧಿಕಾರದಲ್ಲಿರುವುದು ಎಡರಂಗದ (ಎಲ್‌ಡಿಎಫ್) ಸರಕಾರ; ಆದರೆ, ಈ ಬಾರಿಯ ಚುನಾವಣೆಯಲ್ಲಿ ಎಡರಂಗದ ಮತಗಳ ಮೇಲೆ ಬಿಜೆಪಿಯು ಪ್ರಭಾವ ಬೀರುವುದರಿಂದ, ಕಾಂಗ್ರೆಸ್ ನೇತೃತ್ವದ 'ಯುಡಿಎಫ್'ಗೆ ಅದರ ಪ್ರಯೋಜನ ದಕ್ಕಿ, ಗದ್ದುಗೆಯನ್ನು ಅಪ್ಪಲು ಅದು ಅನುವುಮಾಡಿಕೊಡಲಿದೆ ಎನ್ನುತ್ತದೆ ಈ ಸಮೀಕ್ಷೆ.

### ಹಿಡಿತವಿದ್ದರೂ ಕುಸಿತ

ಆಡಳಿತಾರೂಢ 'ಎಲ್‌ಡಿಎಫ್'ಗೆ ಮತಕ್ಷೇತ್ರಗಳ ಮೇಲೆ ವಾಡಿಕೆಯ ಹಿಡಿತವಿದ್ದರೂ, ಬಿಜೆಪಿ ನೇತೃತ್ವದ ಎನ್‌ಡಿಎ ಲಗ್ಗೆ ಹಾಕುತ್ತಿರುವ ಕಾರಣದಿಂದಾಗಿ ಕ್ಷೇತ್ರಗಳ ಮತ ಹಂಚಿಕೆಯಲ್ಲಿ ಒಂದಿಷ್ಟು ಕುಸಿತವಾಗಲಿದೆ ಎನ್ನುತ್ತದೆ ಈ ಸಮೀಕ್ಷೆ. ಅಂದರೆ, ರಾಜಕೀಯ ಭದ್ರಕೋಟೆಗಳು ಎನಿಸಿದ ತಿರುವನಂತಪುರಂ, ಅಲಪ್ಪುಳ, ಕೊಲ್ಲಂ ಮುಂತಾದೆಡೆಗಳಲ್ಲಿ 'ಎಲ್‌ಡಿಎಫ್' ಮುನ್ನಡೆಯನ್ನು ಕಾಯ್ದುಕೊಂಡರೂ ಮತಗಳ ಪ್ರಮಾಣ ಕುಸಿಯಲಿದೆ ಅಂತ ಸಮೀಕ್ಷೆಯ ಗ್ರಹಿಕೆ. ದಕ್ಷಿಣ ಕೇರಳದಲ್ಲಾದರೆ ಎಲ್‌ಡಿಎಫ್ 25, ಯುಡಿಎಫ್ 16 ಮತ್ತು ಎನ್‌ಡಿಎ 5 ಸ್ಥಾನಗಳವರೆಗೆ ಗೆಲ್ಲಬಹುದು; ನೇಮ್ಮಂ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದ್ದರೂ, ಕಾಂಗ್ರೆಸ್‌ನ ಕೆ.ಎಸ್. ಶಬರಿನಾಥನ್ ಮತ್ತು ಸಿಪಿಎಂನ ವಿ.ಶಿವನ್‌ಕುಟ್ಟಿ ಅವರನ್ನು ಬಿಜೆಪಿಯ ರಾಜೀವ್ ಚಂದ್ರಶೇಖರ್ ಅವರು ಮಣಿಸಿ ಜಯಭೇರಿ ಬಾರಿಸುವುದು ನಿಕ್ಕಿ ಎಂದಿದೆ ಸಮೀಕ್ಷೆ.

### ಸಮೀಕ್ಷಾ ಲೆಕ್ಕಾಚಾರ

- ವಿಧಾನಸಭಾ ಸ್ಥಾನಗಳು: 140
- ಗೆಲುವಿನ 'ಮ್ಯಾಜಿಕ್ ನಂಬರ್': 71
- ಯುಡಿಎಫ್ ಬುಟ್ಟಿಗೆ: 69-81 ಸ್ಥಾನಗಳು
- ಎಲ್‌ಡಿಎಫ್ ತೆಕ್ಕೆಗೆ: 57ರಿಂದ 69 ಸ್ಥಾನಗಳು
- ಎನ್‌ಡಿಎ ಮಡಿಲಿಗೆ: 1ರಿಂದ 5 ಸ್ಥಾನಗಳು

### ಕೇರಳ ವಿಧಾನಸಭೆ: ಹೀಗೊಂದು ಪಕ್ಷಿನೋಟ

| ಚುನಾವಣಾ ವರ್ಷ | ಪಕ್ಷಗಳು ಗೆದ್ದ ಸ್ಥಾನಗಳು | | | | ಆಡಳಿತಾರೂಢ ಮೈತ್ರಿಕೂಟ | ಬಹುಮತ |
|---|---|---|---|---|---|---|
| | ಎಲ್‌ಡಿಎಫ್ | ಯುಡಿಎಫ್ | ಎನ್‌ಡಿಎ | ಇತರರು | | |
| 2011 | 68 | 72 | 0 | 0 | ಯುಡಿಎಫ್ | 4 |
| 2016 | 91 | 47 | 1 | 1 | ಎಲ್‌ಡಿಎಫ್ | 44 |
| 2021 | 99 | 41 | 0 | 0 | ಎಲ್‌ಡಿಎಫ್ | 58 |

# ಅಸ್ಸಾಂ ಜನರಿಗೆ ಕೈ ಪಕ್ಷದ ಭರವಸೆ

**ಬೊಕಜನ್:** ಮಾರ್ಚ್ 29ರಂದು, ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿಯ ಸಮಯದಲ್ಲಿ, ಅಸ್ಸಾಂ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಐದು 'ಗ್ಯಾರಂಟಿ'ಗಳನ್ನು ಘೋಷಿಸಲಾಗಿತ್ತು. ಗುರುವಾರ ಬೊಕಜನ್‌ನಲ್ಲಿ ನಡೆದ ಚುನಾವಣಾ ಬಹಿರಂಗ ಸಭೆಯಲ್ಲಿ ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿಯವರು, ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೊಗೊಯ್ ಮತ್ತು ಇತರ ಹಿರಿಯ ನಾಯಕರ ಜತೆಗೂಡಿ ಪಕ್ಷದ ಪ್ರಣಾಳಿಕೆಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿದ್ದಾರೆ. ಆಡಳಿತ ವ್ಯವಸ್ಥೆ, ಆರೋಗ್ಯ, ಮೂಲಸೌಕರ್ಯ ಅಭಿವೃದ್ಧಿ, ಕೈಗಾರಿಕೀಕರಣ, ಕೃಷಿ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ಹವಾಮಾನ ಬದಲಾವಣೆ ಮತ್ತು ಅಸ್ಸಾಂನ ಭದ್ರತೆಗೆ ಸಂಬಂಧಿಸಿದಂತೆ 11 ಪ್ರಮುಖ ಭರವಸೆಗಳನ್ನು ಒಳಗೊಂಡಿರುವುದು ಈ ಪ್ರಣಾಳಿಕೆಯ ವಿಶೇಷ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದರೆ ಗಾಯಕ-ಸಂಗೀತ ಸಂಯೋಜಕ ಜುಬೀನ್ ಗರ್ಗ್ ಸಾವಿನ ಪ್ರಕರಣದ ಕುರಿತು 100 ದಿನಗಳಲ್ಲಿ ತನಿಖೆ ನಡೆಸಿ, ನ್ಯಾಯ ಒದಗಿಸುವುದಾಗಿ ಪ್ರತಿಜ್ಞೆ ಮಾಡುತ್ತೇವೆ ಎಂದು ಮಲ್ಲಿಕಾರ್ಜುನ ಖರ್ಗೆಯವರು ಈಗಾಗಲೇ ಹೇಳಿರುವುದು ಇಲ್ಲಿ ಉಲ್ಲೇಖನೀಯ.

# ಕೆಂಡಕಾರಿದ ಪ್ರಿಯಾಂಕಾ

**ತಿರುವನಂತಪುರಂ:** ಪ್ರಧಾನಿ ಮೋದಿ ಬೆನ್ನುಮೂಳೆಯಿಲ್ಲದ ವ್ಯಕ್ತಿ ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾಗ್ದಾಳಿ ನಡೆದಿದ್ದಾರೆ. ಕೇರಳ ವಿಧಾನಸಭಾ ಚುನಾವಣೆ ಸಂಬಂಧವಾಗಿ ಪ್ರಚಾರಕಾರ್ಯದ ಭಾಗವಾಗಿ ಪುತನ್‌ಥೋಪುವಿನಲ್ಲಿ ಗುರುವಾರ ಆಯೋಜಿಸಲಾಗಿದ್ದ ಸಭೆಯಲ್ಲಿ ಮಾತನಾಡಿದ ಅವರು, ''ಮೋದಿಯವರು ದೇಶದ ಇಂಧನ ಭದ್ರತೆಯಲ್ಲಿ ರಾಜಿಮಾಡಿ ಕೊಂಡಿರುವ ಹೇಡಿ. ಎಪ್‌ಸ್ಟೀನ್ ಫೈಲುಗಳಲ್ಲಿ ತಮ್ಮ ಹೆಸರು ಇರುವುದರಿಂದ ಮತ್ತು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಅವರು ಬಯಸುತ್ತಿರುವುದರಿಂದಲೇ ನಾವು ಪ್ರತಿದಿನ ಹೆಚ್ಚು ಹಣವನ್ನು ಪಾವತಿಸುವಂತಾಗಿದೆ. ಮಧ್ಯಪ್ರಾಚ್ಯ ವಲಯದಲ್ಲಿ ಭುಗಿಲೆದ್ದಿರುವ ಸಂಘರ್ಷಕ್ಕೆ ಸಂಬಂಧಿಸಿದಂತೆ ಅಮೆರಿಕ ಮತ್ತು ಇಸ್ರೇಲ್ ಮುಂದೆ ಮೋದಿಯವರು ತಲೆಬಾಗಿದ್ದರಿಂದಲೇ ಭಾರತವು ಇತರ ರಾಷ್ಟ್ರಗಳೊಂದಿಗೆ ತೀವ್ರ ಸಂಕಷ್ಟದಲ್ಲಿ ಸಿಲುಕುವಂತಾಗಿದೆ'' ಎಂದು ಆರೋಪಿಸಿದರು.

# ನನ್ನ ಅಧಿಕಾರವನ್ನು ಕಿತ್ತುಕೊಳ್ಳಲಾಗಿದೆ ಬುಸುಗುಟ್ಟಿದ ಮಮತಾ ದೀದಿ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣಾ ಕಣವು ವಿವಿಧ ಕಾರಣಗಳಿಂದಾಗಿ ಕಾವೇರುತ್ತಿದೆ. ಈಗಾಗಲೇ ಗೊತ್ತಿರುವಂತೆ, 294 ಸದಸ್ಯಬಲದ ರಾಜ್ಯ ವಿಧಾನಸಭೆಗೆ ಈ ತಿಂಗಳ 23 ಹಾಗೂ 29ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಇದಕ್ಕೂ ಮುನ್ನ ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಚುನಾವಣಾ ಆಯೋಗದ ವಿರುದ್ಧ ಕೆಂಡ ಕಾರಿದ್ದಾರೆ.

ರಾಜ್ಯದ ಮಾಲ್ಡಾದಲ್ಲಿ ಬುಧವಾರದಂದು, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣಾ ಕಾರ್ಯದಲ್ಲಿ ಪಾಲ್ಗೊಂಡಿದ್ದ 7 ಮಂದಿ ನ್ಯಾಯಾಂಗ ಅಧಿಕಾರಿಗಳನ್ನು ಸ್ಥಳೀಯರು ಘೇರಾವ್ ಮಾಡಿದ್ದರು. ಮತದಾರರ ಪಟ್ಟಿಯಿಂದ ತಮ್ಮ ಹೆಸರು ಇಲ್ಲವಾಗಿರುವುದಕ್ಕೆ ವ್ಯಗ್ರರಾಗಿದ್ದ ಆ ಜನರು, ಸದರಿ ಅಧಿಕಾರಿಗಳ ವಿರುದ್ಧ ಪ್ರತಿಭಟಿಸಿದ್ದರು. ಆಗ ಮಧ್ಯಪ್ರವೇಶಿಸಿದ ಭದ್ರತಾ ಸಿಬ್ಬಂದಿಗಳು ಅಧಿಕಾರಿಗಳಿಗೆ ರಕ್ಷಣೆ ಒದಗಿಸಿದ್ದರು. ಈ ಬೆಳವಣಿಗೆಯ ಬೆನ್ನಲ್ಲೇ ಮಮತಾರಿಂದ ಕೆಂಡದ ಮಾತುಗಳು ಹೊಮ್ಮಿವೆ.

ಮುರ್ಷಿದಾಬಾದ್ ಜಿಲ್ಲೆಯ ಸಾಗರ್‌ದಿಘಿ ಮತ್ತು ಸುತಿ ಎಂಬಲ್ಲಿ ನಡೆದ ಬಹಿರಂಗ ಸಭೆಗಳಲ್ಲಿ ಮಾತನಾಡಿದ ಅವರು, ''ಜನರಿಗೆ ಪ್ರತಿಭಟಿಸುವ ಹಕ್ಕಿದೆ, ಹಾಗಂತ ನ್ಯಾಯಾಧೀಶರು ಮತ್ತು ನ್ಯಾಯಾಂಗ ಅಧಿಕಾರಿಗಳನ್ನು ಅವರು ಮುಟ್ಟಬಾರದು. ನ್ಯಾಯಾಂಗದ ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ಒದಗಿಸುವಲ್ಲಿ ಚುನಾವಣಾ ಆಯೋಗವು ವಿಫಲವಾಗಿರುವುದು ಖಂಡನೀಯ. ರಾಜ್ಯದಲ್ಲಿ ಚುನಾವಣೆ ಘೋಷಣೆಯಾದ ನಂತರ, ಆಯೋಗವು ರಾಜ್ಯದ ನಾಗರಿಕ ಮತ್ತು ಪೊಲೀಸ್ ಆಡಳಿತದಲ್ಲಿ ತನ್ನದೇ ಅಧಿಕಾರಿಗಳನ್ನು ನೇಮಿಸಿದ್ದರ ಜತೆಗೆ, 'ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಸರಕಾರವು ಸಂಪೂರ್ಣ ವಿಫಲವಾಗಿದೆ' ಎಂಬುದಾಗಿ ವರದಿ ನೀಡಿತ್ತು. ಇಂಥ ಚುನಾವಣಾ ಆಯೋಗವನ್ನು ನಾನೆಂದೂ ಕಂಡಿದ್ದಿಲ್ಲ. ನನ್ನ ಸಂಪೂರ್ಣ ಅಧಿಕಾರವನ್ನು ಕಸಿದುಕೊಳ್ಳಲಾಗಿದೆ'' ಎಂದು ಗುಡುಗಿದರು. ಮಮತಾ ಮಾತು ಮುಂದುವರಿಸಿ, ''ಚುನಾವಣೆ ಘೋಷಣೆಯಾಗುತ್ತಿದ್ದಂತೆ, ಪೊಲೀಸ್ ಮಹಾನಿರ್ದೇಶಕರು, ಗೃಹ ಕಾರ್ಯದರ್ಶಿ, ಮುಖ್ಯ ಕಾರ್ಯದರ್ಶಿಗಳನ್ನು ಒಳಗೊಂಡಂತೆ ರಾಜ್ಯದ ಸಾಕಷ್ಟು ಉನ್ನತಾಧಿಕಾರಿಗಳನ್ನು ಬದಲಾಯಿಸಲಾಗಿದೆ. ಕೇಸರಿ ಪಕ್ಷವು ರಾಜ್ಯದ ಚುನಾವಣಾ ವ್ಯವಸ್ಥೆಯನ್ನು ಹಾಳುಮಾಡಲು ಯತ್ನಿಸುತ್ತಿದೆ. ಇಡೀ ಬಂಗಾಳವನ್ನು ಕೆಣಕಲು ಮಾಲ್ಡಾ ಘಟನೆಯನ್ನು ಬಳಸಿಕೊಳ್ಳಲಾಗುತ್ತಿದೆ.'' ಎಂದರು.

# ಕೇರಳದ ಕೊಟ್ಟಾಯಂ ಜಿಲ್ಲೆಯಲ್ಲಿ ಕ್ರೈಸ್ತರ ಮತಗಳೇ ನಿರ್ಣಾಯಕ

**ಕೇರಳದ ಮಧ್ಯ ತಿರುವಾಂಕೂರು ಪ್ರದೇಶಕ್ಕೆ ಒಳಪಟ್ಟ ಕೊಟ್ಟಾಯಂ ಜಿಲ್ಲೆಯಲ್ಲಿ ಹಿಂದೂ ಮತದಾರರ ಸಂಖ್ಯೆಯಷ್ಟೇ ಕ್ರೈಸ್ತ ಧರ್ಮದ ಮತದಾರರೂ ಇದ್ದಾರೆ. ಹಾಗಾಗಿ ಎನ್‌ಡಿಎ ಒಕ್ಕೂಟದ ಬಿಜೆಪಿಯೂ ಸೇರಿದಂತೆ ಇತರ ಎರಡು ಒಕ್ಕೂಟಗಳೂ ಕ್ರಿಶ್ಚಿಯನ್ ಮತಬ್ಯಾಂಕ್ ಒಲಿಸಿಕೊಳ್ಳಲು ಆ ಸಮುದಾಯದವರಿಗೂ ತುಸು ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ಜಿಲ್ಲೆಯ ಚುನಾವಣಾ ವೈಶಿಷ್ಟ್ಯಗಳಲ್ಲೊಂದಾಗಿದೆ.**

ಕೊಟ್ಟಾಯಂನ ಕುಮರಕಂ ಹಿನ್ನೀರು

**ನರೇಂದ್ರ ಪಾರೆಕಟ್**

ದೇಶದಲ್ಲೇ ಸಂಪೂರ್ಣ ಸಾಕ್ಷರತೆ ಸಾಧಿಸಿದ ಪ್ರಪ್ರಥಮ ಜಿಲ್ಲೆ ಎಂಬ ಹೆಗ್ಗಳಿಕೆ ಕೇರಳದ ಕೊಟ್ಟಾಯಂಗಿದೆ. ಕೇರಳದಿಂದ ಪ್ರಕಟವಾಗುವ ಪ್ರಮುಖ ಮಲಯಾಳಂ ದಿನಪತ್ರಿಕೆಗಳ ಪ್ರಧಾನ ಕಚೇರಿಗಳೂ ಇಲ್ಲಿನ ಜಿಲ್ಲಾ ಕೇಂದ್ರದಲ್ಲಿವೆ. ಇಲ್ಲಿರುವ ಹೆಚ್ಚಿನವರು ಉನ್ನತ ಶಿಕ್ಷಣ ಪಡೆದವರು, ರಬ್ಬರ್ ಕೊಟ್ಟಾಯಂ ಜಿಲ್ಲೆಯ ಪ್ರಮುಖ ಬೆಳೆ.

ಜಿಲ್ಲೆಯಲ್ಲಿಡೀ ಒಮ್ಮೆ ಸುತ್ತಾಡಿ ಬಂದರೆ ಹಿಂದೂಗಳಿಗಿಂತ ಕ್ರೈಸ್ತರ ಸಂಖ್ಯೆ ಸ್ವಲ್ಪ ಹೆಚ್ಚಿರಬಹುದೇನೋ ಅಂತ ಒಂದೇ ನೋಟಕ್ಕೆ ಅನಿಸಿದರೂ, ಚುನಾವಣಾ ಆಯೋಗದ ಪ್ರಕಾರ ಈ ಎರಡೂ ಧರ್ಮೀಯರು ಇಲ್ಲಿ ಸಮಾನ ಸಂಖ್ಯೆಯಲ್ಲಿದ್ದಾರೆ. ಕ್ರೈಸ್ತ ಧರ್ಮದ ಮತದಾರರನ್ನು ಓಲೈಸಲು ಚರ್ಚ್‌ಗಳ ನಿಕಟ ಸಂಪರ್ಕಗಳ ಮೂಲಕ ಕೇರಳದ ಮೂರು ಒಕ್ಕೂಟಗಳೂ ಹಲವಾರು ತಿಂಗಳುಗಳಿಂದಲೇ ಕಾರ್ಯ ಪ್ರವೃತ್ತವಾಗಿದ್ದವು.

ಕೊಟ್ಟಾಯಂ ಜಿಲ್ಲೆಯಲ್ಲಿ 9 ವಿಧಾನಸಭಾ ಕ್ಷೇತ್ರಗಳಿವೆ. ಚೆಂಗನಾಶ್ಶೇರಿ, ಏಟುಮಾನ್ನೂರ್, ಕಡುತುರುತ್ತಿ, ಕಾಂಞಿರಪಳ್ಳಿ, ಕೊಟ್ಟಾಯಂ, ಪಾಲಾ, ಪೂಂಞಾರ್, ಪುತುಪಳ್ಳಿ ಮತ್ತು ವೈಕ್ಕಂ. ಪುತುಪಳ್ಳಿ ವಿಧಾನಸಭಾ ಕ್ಷೇತ್ರವು ಕೇರಳದ ಮಾಜಿ ಮುಖ್ಯಮಂತ್ರಿ, ಹಿರಿಯ ಕಾಂಗ್ರೆಸ್ ನಾಯಕರಾಗಿದ್ದ ಉಮ್ಮನ್ ಚಾಂಡಿ ಅವರ ಹುಟ್ಟೂರು, ಹಾಗಾಗಿ ಅದು ಕಾಂಗ್ರೆಸ್‌ನ ಭದ್ರಕೋಟೆ. ಚೆಂಗನಾಶ್ಶೇರಿಯಲ್ಲಿ ಕಳೆದ ಸಲ ಕಾಂಗ್ರೆಸ್ (ಎಂ) ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಿದ್ದರು. ಏಟುಮಾನ್ನೂರಿನಲ್ಲಿ ಎನ್‌ಡಿಎ ಸೇರಿದಂತೆ ಮೂರೂ ಒಕ್ಕೂಟಗಳು ಬಲಿಷ್ಠವಾಗಿದ್ದು, ಕಳೆದ ಬಾರಿ ಎಡರಂಗದ ವಿ.ಎನ್. ವಾಸವನ್‌ರವರು ಅಲ್ಲಿಂದ ಗೆದ್ದು ಎಡರಂಗ ಸರಕಾರದಲ್ಲಿ ಸಚಿವರೂ ಆಗಿದ್ದರು.

ಕಡುತ್ತುರುತ್ತಿ ಮತ್ತು ವೈಕ್ಕಂ ವಿಧಾನಸಭಾ ಕ್ಷೇತ್ರದಲ್ಲಿ ಎಡರಂಗ-ಐಕ್ಯರಂಗದ ಮಧ್ಯೆಯೇ ಪ್ರಮುಖ ಸ್ಪರ್ಧೆ. ಪಾಲಾ ಮತ್ತು ಪೂಂಞಾರ್ ವಿಧಾನಸಭಾ ಕ್ಷೇತ್ರಗಳಲ್ಲಿ ಕ್ರೈಸ್ತರ ಹೆಚ್ಚಿನ ಸಂಖ್ಯೆಯಲ್ಲಿದ್ದು, ಮೂರು ಪಕ್ಷಗಳ ಅಭ್ಯರ್ಥಿಗಳೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣಾ ಅಭ್ಯರ್ಥಿಗಳಾಗಿರುವುದರಿಂದ ಈ ಸಲದ ಚುನಾವಣಾ ಚಿತ್ರಣ ಬಹಳ ರೋಚಕವಾಗಿದೆ. ಪೂಂಞಾರ್‌ನಲ್ಲಿ ವಿವಿಧ ಪಕ್ಷಗಳ ಮತ್ತು ಸ್ವತಂತ್ರ ಅಭ್ಯರ್ಥಿಯಾಗಿಯೂ ಒಟ್ಟು 6 ಸಲ ಎಂಎಲ್‌ಎ ಆಗಿದ್ದ ಪಿ.ಸಿ. ಜಾರ್ಜ್ ಅವರು ಬಿಜೆಪಿಯ ಅಭ್ಯರ್ಥಿ. ಅದೇ ಕ್ಷೇತ್ರಕ್ಕೆ ಹೊಂದಿಕೊಂಡಿರುವ ಪಾಲಾ ವಿಧಾನಸಭಾ ಕ್ಷೇತ್ರದಲ್ಲಿ ಅವರ ಮಗ, ಬಿಜೆಪಿ ಯುವ ನಾಯಕ ಶಾನ್ ಜಾರ್ಜ್‌ಗೆ ಈ ಸಲ ಬಿಜೆಪಿ ಟಿಕೆಟ್ ನೀಡಿದೆ. ತಂದೆ-ಮಗ ಆ ಎರಡೂ ಕ್ಷೇತ್ರಗಳಲ್ಲಿ ಜನಜನಿತರಾಗಿರುವುದರಿಂದ ಅಲ್ಲಿರುವ ಕ್ರೈಸ್ತರ ಬೆಂಬಲ ಪಡೆದು ಕನಿಷ್ಠ ಒಂದು ಸ್ಥಾನವಾದರೂ ಗೆಲ್ಲುತ್ತೇವೆಂಬ ಭರವಸೆ ಬಿಜೆಪಿ ನಾಯಕರಲ್ಲಿದೆ.

ಕೊಟ್ಟಾಯಂ ಜಿಲ್ಲೆಯ ಮೂಲ ಮತದಾರರು ಮಲಬಾರ್ ಕೇರಳ, ಮಂಗಳೂರು ಮತ್ತು ಬೆಂಗಳೂರಿನಲ್ಲಿ ಧಾರಾಳ ಸಂಖ್ಯೆಯಲ್ಲಿದ್ದಾರೆ. ಅಷ್ಟೇ ಅಲ್ಲದೆ ನರ್ಸಿಂಗ್ ಸೇರಿದಂತೆ ವೈದ್ಯಕೀಯ ರಂಗದಲ್ಲಿರುವ ಯುವ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಇಂಗ್ಲೆಂಡ್ ಸೇರಿದಂತೆ ವಿದೇಶದ ಹಲವು ದೇಶಗಳಲ್ಲಿದ್ದಾರೆ. ಆದರೆ ಚುನಾವಣೆ ನಡೆಯುವಾಗ ತಮ್ಮೂರಿಗೆ ಬಂದು ತಮ್ಮ ಮತದಾನದ ಹಕ್ಕನ್ನು ಚಲಾಯಿಸುವ ಅವರ ಬದ್ಧತೆಯನ್ನು ನಿಜಕ್ಕೂ ಮೆಚ್ಚಲೇ ಬೇಕಾಗುತ್ತದೆ. ಕುಮರಕಂ ಹಿನ್ನೀರು ಮತ್ತು ರೆಸಾರ್ಟ್‌ಗಳು ಕೊಟ್ಟಾಯಂನ ಪ್ರಮುಖ ಪ್ರವಾಸಿಕೇಂದ್ರವಾಗಿದ್ದು, ದಿನಾಲೂ ದೇಶದ ವಿವಿಧ ಭಾಗಗಳಿಂದ ಇಲ್ಲಿಗೆ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಹಾಗಾಗಿ ಪ್ರವಾಸೋದ್ಯಮದಲ್ಲಿ ಹೆಚ್ಚಿನವರು ಉದ್ಯೋಗ ಕಂಡುಕೊಂಡಿರುವುದರಿಂದ ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ಕಡಿಮೆ. ಕಳೆದ 20 ವರ್ಷಗಳಲ್ಲಿ ಕೊಟ್ಟಾಯಂ ಜಿಲ್ಲೆ ಎರಡೂ ರಂಗಗಳ ಆಡಳಿತ ಕಾಲದಲ್ಲಿ ಉತ್ತಮ ಅಭಿವೃದ್ಧಿ ಕಂಡಿದೆ.

### ಕೇಂದ್ರ ಸಚಿವ ಕುರಿಯನ್: ಬಿಜೆಪಿ ರಣತಂತ್ರ



2024ರಲ್ಲಿ ಕೇಂದ್ರದಲ್ಲಿ ಮೋದಿ ಸರಕಾರ ಅಧಿಕಾರಕ್ಕೆ ಬಂದಾಗ ಕೊಟ್ಟಾಯಂನ ಹಿರಿಯ ಬಿಜೆಪಿ ನಾಯಕ ಜಾರ್ಜ್ ಕುರಿಯನ್ ಅವರನ್ನು ಕೇಂದ್ರ ಸಂಪುಟಕ್ಕೆ ರಾಜ್ಯ ಸಚಿವರನ್ನಾಗಿ ಸೇರಿಸಿ ಕೊಳ್ಳಲಾಯಿತು. ಅವರನ್ನು ಮಧ್ಯಪ್ರದೇಶದ ಮೂಲಕ ರಾಜ್ಯಸಭೆಗೆ ಆರಿಸಲಾಯಿತು. ಆ ಮೂಲಕ ಕ್ರಿಶ್ಚಿಯನ್ ಧರ್ಮೀಯರನ್ನು ಬಿಜೆಪಿ ಕಡೆಗಣಿಸುತ್ತಿಲ್ಲ ಎಂಬ ಸಂದೇಶವನ್ನು ಬಿಜೆಪಿಯು ಜಿಲ್ಲೆಯ ಜನತೆಗೆ ನೀಡಿ, ಈ ಚುನಾವಣೆಯಲ್ಲಿ ಹೆಚ್ಚಿನ ಮತ ಗಳಿಸುವ ಲೆಕ್ಕಾಚ್ಚಾರ 2 ವರ್ಷಗಳಿಂದಲೇ ಹೊಂದಿತ್ತು.

ಪ್ರಖ್ಯಾತ ಚೆಂಗನಾಶ್ಶೇರಿ ಚರ್ಚ್

## ಚಿತ್ತವಿಹಾರ

### ಅನ್ವೇಷಣೆಯ ಮನೋಧರ್ಮವಿರಲಿ...

● ಮಹಾದೇವ ಬಸರಕೋಡ

ನಮ್ಮ ಹಿತೈಷಿಗಳು, ಸ್ನೇಹಿತರು ಕೆಲವು ಬಾರಿ ನಮ್ಮ ಹಿತದೃಷ್ಟಿಯಿಂದ ತೆಗೆದುಕೊಂಡ ಹಲವಾರು ನಿರ್ಧಾರಗಳ ಹಿಂದಿನ ವಾಸ್ತವ ಸಂಗತಿಯನ್ನು ಅರ್ಥೈಸಿಕೊಳ್ಳದೇ ನಾವು ದುಡುಕುತ್ತೇವೆ. ಅವರಿಗೆ ಇಲ್ಲಸಲ್ಲದ ಮಾತುಗಳನ್ನು ಆಡುತ್ತೇವೆ. ನಮ್ಮ ದುಡುಕಿನ ನಿರ್ಧಾರದಿಂದಾಗಿಯೇ ಬಹುದಿನಗಳಿಂದ ಜೋಪಾನವಾಗಿ ಕಾಪಾಡಿಕೊಂಡು ಬಂದ ಸ್ನೇಹವನ್ನೇ ಶಂಕಿಸುತ್ತೇವೆ. ಅವರ ಮೇಲೆ ಹರಿಹಾಯುತ್ತೇವೆ. ಇದು ಹಲವಾರು ಸಮಸ್ಯೆಗಳಿಗೆ ಕಾರಣವಾಗುತ್ತದೆ.

ಒಂದು ಏಡಿ ಸಮುದ್ರದ ದಡದಲ್ಲಿ ಬಹುಕಾಲದಿಂದ ವಾಸಿಸುತ್ತಿತ್ತು. ಸಮುದ್ರದ ಜತೆಗೆ ಒಳ್ಳೆಯ ಗೆಳೆತನವನ್ನು ಸಂಪಾದಿಸಿಕೊಂಡಿತ್ತು. ಕೆಲವು ಬಾರಿ ಸಮುದ್ರದ ದಂಡೆಯ ಮರಳಿನಲ್ಲಿ ಬಹಳಷ್ಟು ಸಂತಸದಿಂದ ಅತ್ತಿಂದಿತ್ತ ಓಡಾಡುತ್ತಲಿತ್ತು. ಹಾಗೆ ಓಡಾಡಿದಾಗ ಮೂಡಿದ ತನ್ನ ಹೆಜ್ಜೆಗುರುತುಗಳನ್ನು ಆಗಾಗ ಹಿಂದೆ ತಿರುಗಿ ನೋಡಿ ಇನ್ನಷ್ಟು ಸಂತೋಷಪಡುತ್ತಿತ್ತು. ಆದರೆ ಸಮುದ್ರದ ಅಲೆಗಳು ಆಗಾಗ ದಡಕ್ಕೆ ಬಂದು ಅಪ್ಪಳಿಸುತ್ತ ಏಡಿಯ ಹೆಜ್ಜೆಗುರುತುಗಳನ್ನು ಅಳಿಸಿಹಾಕುತ್ತಿದ್ದವು. ಇದನ್ನು ನೋಡಿದ ಏಡಿಗೆ ತುಂಬಾ ಬೇಜಾರಾಯಿತು. ಸಮುದ್ರದ ಮೇಲೆ ಒಂದಷ್ಟು ಕೋಪಗೊಂಡಿತು. ಒಂದು ಕ್ಷಣ ಅಲ್ಲಿಯೇ ನಿಂತು, ''ಏನು ಗೆಳೆಯಾ, ನಾನು-ನೀನು ಉತ್ತಮ ಸ್ನೇಹಿತರು. ಬಹುಕಾಲದಿಂದ ನಾವಿಬ್ಬರೂ ಜತೆಯಲ್ಲಿಯೇ ಇರುವವರು. ನಾನು ನಡೆದಾಡಿದಾಗ ಮೂಡಿದ ಹೆಜ್ಜೆಗುರುತುಗಳನ್ನು ನೋಡಿ ನಾನು ಸಂಭ್ರಮಿಸುತ್ತಿರುವುದನ್ನು ನಿನಗೆ ಸಹಿಸಲಾಗುತ್ತಿಲ್ಲವೇಕೆ? ಅದಕ್ಕಾಗಿಯೇ ಅವುಗಳನ್ನು ಅಳಿಸಿ ಹಾಕುತ್ತಿರುವೆಯಲ್ಲವೇ? ಇದು ನಿಜಕ್ಕೂ ನ್ಯಾಯವೇ?'' ಎಂದು ಸಮುದ್ರಕ್ಕೆ ಪ್ರಶ್ನಿಸಿತು. ಆಗ ಸಮುದ್ರವು ''ಇಲ್ಲ ಗೆಳೆಯಾ, ನೀನು ನನ್ನನ್ನು ತಪ್ಪಾಗಿ ಭಾವಿಸಿಕೊಂಡಿರುವೆ. ನಿನ್ನ ಕ್ಷಣಕಾಲದ ಸಂಭ್ರಮವನ್ನು ಕಂಡು ಸಂತೋಷಪಡುವುದಕ್ಕಿಂತ ನಿನ್ನ ಪ್ರಾಣರಕ್ಷಣೆ ನನ್ನ ಮೊದಲ ಆದ್ಯತೆಯಾಗಿದೆ. ಇಲ್ಲಿಗೆ ಬರುವ ಮೀನುಗಾರರು ನಿನ್ನ ಹೆಜ್ಜೆ ಗುರುತುಗಳ ಜಾಡು ಹಿಡಿದು ನಿನ್ನನ್ನು ಹಿಡಿಯಲು ಜಾಲ ಬೀಸುತ್ತಾರೆ. ಅದರಿಂದ ನಿನ್ನ ಪ್ರಾಣಕ್ಕೆ ಸಂಚಕಾರ ಬರುವ ಸಾಧ್ಯತೆಯೇ ಹೆಚ್ಚು. ಅದಕ್ಕಾಗಿ ಅವರಿಗೆ ನಿನ್ನ ಸುಳಿವು ಸಿಗದಂತೆ ನಿನ್ನ ಹೆಜ್ಜೆಗುರುತು ಗಳನ್ನು ನಾನು ಅಳಿಸಿಹಾಕುತ್ತಿರುವೆ'' ಎಂದಿತು. ಏಡಿಗೆ ಸತ್ಯದ ಅರಿವಾಗಿತ್ತು.

ಯಾವುದೇ ಕೆಲಸ ಮಾಡುವಾಗ ನಾವು ಕ್ಷಣಮಾತ್ರವನ್ನು ಗ್ರಹಿಸಿ ಇಲ್ಲಸಲ್ಲದ ಕಲ್ಪಿತ ಸಂಗತಿಗಳಲ್ಲಿ ಕಳೆದುಹೋಗುವುದಕ್ಕಿಂತ ದೂರದೃಷ್ಟಿಯಿಂದ ಎಲ್ಲವನ್ನೂ ಅವಲೋಕಿಸುವುದನ್ನು ರೂಢಿಸಿಕೊಳ್ಳಬೇಕು. ನಮ್ಮ ನಿರ್ಧಾರಗಳನ್ನು ಅಂತಃಪ್ರಜ್ಞೆಯ ಚಕ್ಷುವಿಗೆ ಒಳಗು ಮಾಡಬೇಕು. ನಮ್ಮ ತಾತ್ಕಾಲಿಕ ಪ್ರಲೋಭನೆಗಳಿಂದ ದೂರ ಸರಿದು ನಿಲ್ಲಬೇಕು. ಸಮಾಲೋಚಿಸಬೇಕು. ಭಾವನೆಗಳ ಬಂಧನದಿಂದ ಬಿಡಿಸಿಕೊಳ್ಳಬೇಕು. ಇರುವುದಕ್ಕೂ, ಇರಬಹುದಾದ್ದಕ್ಕೂ ನಡುವಿನ ಕಂದರಗಳನ್ನು ವಸ್ತುನಿಷ್ಠವಾಗಿ ಅರಿಯುವತ್ತ ನಮ್ಮ ಹೆಜ್ಜೆಗಳನ್ನಿಡಬೇಕು. ಅನ್ವೇಷಣೆಯ ಮನೋಧರ್ಮವನ್ನು ನಮ್ಮದಾಗಿಸಿಕೊಳ್ಳಬೇಕು. ಆಗಲೇ ಬದುಕು ಸುಂದರ...

ವಿಶ್ವವಾಣಿ 03-04-2026 ಶುಕ್ರವಾರ @vishwavaninews

# ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ



# ದೇವರು ಹೊರಗಿಲ್ಲದೆ, ಸದಾ ನಿಮ್ಮೊಳಗೇ ಇದ್ದರೆ?

● ಸತ್ ಶ್ರೀ ಸುಬ್ರಹ್ಮಣ್ಯ ಶಿವ ಬಾಲನ್

ದೇವರು ಎಂದೂ ದೂರವಿಲ್ಲ, ಅವನು ನಮ್ಮೊಳಗೇ ಇದ್ದಾನೆ'- ಇದೇ 'ಚಿವಾಲಿಟಿ ಪದ್ಧತಿ' ತೋರಿಸುವ ಸತ್ಯ. ಆದರೂ, ನಾವು ಹೆಚ್ಚಿನವರು ಜೀವನವಿಡೀ ಅವನನ್ನು ಹೊರಗೆ ಅಂದರೆ ದೇವಾಲಯಗಳಲ್ಲಿ, ಪುಸ್ತಕಗಳಲ್ಲಿ, ಪೂಜಾ ಆರಾಧನೆಗಳಲ್ಲಿ ಹುಡುಕುತ್ತಾ ಜೀವನವನ್ನು ಕಳೆಯುತ್ತೇವೆ. ಅವನು ನಿಜವಾಗಿ ಇರುವ ಒಂದೇ ಒಂದು ಸ್ಥಳ- ನಮ್ಮೊಳಗೆ; ಅದನ್ನು ಬಿಟ್ಟು ಎಲ್ಲೆಡೆ ನೋಡುತ್ತೇವೆ. ಆದರೆ ಅಲ್ಲಿ ನಾವು ಅವನನ್ನು ಅನುಭವ ಮಾಡಲಾಗುತ್ತಿಲ್ಲ ಏಕೆ? ಅವನು ನಿಜವಾಗಿ ತುಂಬಾ ಹತ್ತಿರ ಇದ್ದರೂ ದೂರದಲ್ಲಿದ್ದಂತೆ ಏಕೆ ತೋರುತ್ತದೆ? ನಮ್ಮೊಳಗಿರುವ ಎರಡು ರೀತಿಯ ಬ್ರಹ್ಮವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಉತ್ತರ ಇದೆ.

### ಎರಡು ರೀತಿಯ ಬ್ರಹ್ಮ

ಪ್ರತಿಯೊಬ್ಬ ಮನುಷ್ಯನೊಳಗೆ ಎರಡು ರೀತಿಯ ಬ್ರಹ್ಮ ಇವೆ- ಶುದ್ಧ ಬ್ರಹ್ಮ ಮತ್ತು ಅಶುದ್ಧ ಬ್ರಹ್ಮ. ಶುದ್ಧ ಬ್ರಹ್ಮವನ್ನು ಅಥವಾ ಪರಿಶುದ್ಧ ಆತ್ಮವನ್ನೇ ದೇವರು ಎನ್ನುವುದು. ಈ ಬ್ರಹ್ಮಕ್ಕೆ ಯಾವ ಮಿತಿಯೂ ಇಲ್ಲ ಮತ್ತು ಅದು ಯಾವಾಗಲೂ ನಿಶ್ಚಲವಾಗಿರುತ್ತದೆ. ಅಶುದ್ಧ ಬ್ರಹ್ಮವನ್ನು ನಾವು ಮನಸ್ಸು ಎಂದು ಕರೆಯುವುದು. ಇದು ಸೀಮಿತ, ಷರತ್ತುಗಳಿಂದ ತುಂಬಿದೆ ಮತ್ತು ಯಾವಾಗಲೂ ಆಲೋಚನೆಗಳಿಂದ ಚಂಚಲವಾಗಿರುತ್ತದೆ.

### ಶುದ್ಧ ಬ್ರಹ್ಮ (ದೇವರು) ಎಂದರೇನು?

ಬ್ರಹ್ಮ (ಆಕಾಶ) ಕೇವಲ ಖಾಲಿತನವಲ್ಲ. ಅದು ಜೀವಂತ ಪ್ರಜ್ಞೆ, ಶಾಶ್ವತ ಅರಿವು ಮತ್ತು ಅಂತಿಮ ನಿಶ್ಚಲತೆ. ಇದು ಎಲ್ಲಾ ಜೀವಿಗಳ ಮತ್ತು ಎಲ್ಲಾ ಚಲನೆಗಳ ಆಧಾರವಾಗಿದೆ. ಪ್ರತಿಯೊಂದು ರೂಪ, ಪ್ರತಿಯೊಂದು ಶಕ್ತಿ, ಪ್ರತಿಯೊಂದು ಕಂಪನ ಈ ವಿಶಾಲ, ನಿರಾಕಾರ ಬ್ರಹ್ಮದಿಂದ ಹುಟ್ಟುತ್ತದೆ. ಇದು ಎಲ್ಲಾ ಅಶುದ್ಧತೆ, ಆಸೆ ಮತ್ತು ದ್ವಂದ್ವಗಳಿಂದ ಸಂಪೂರ್ಣ ಮುಕ್ತವಾಗಿದೆ. ಒಬ್ಬ ಮನುಷ್ಯ ತನ್ನೊಳಗೆ ಆಳವಾಗಿ ನೋಡಿದಾಗ, ಅವನ ಸ್ವಂತ ಪ್ರಜ್ಞೆಯ ಹಿನ್ನೆಲೆಯಾಗಿ ಅದೇ ಬ್ರಹ್ಮನ ಒಂದು 'ಅಣು' ಸಿಗುತ್ತದೆ. ಅದು ಯಾವಾಗಲೂ ಇರುತ್ತದೆ. ಆದರೆ ಅದು ಆಲೋಚನೆಗಳು, ಭಾವನೆಗಳು ಮತ್ತು ವೈಯಕ್ತಿಕ ಗುರುತಿಸುವಿಕೆಗಳ ಪರದೆಯ ಹಿಂದೆ ಅಡಗಿದೆ. ಮೋಡಗಳು ಸ್ವಚ್ಛ ಆಕಾಶವನ್ನು ಮರೆಮಾಡಿದಂತೆ, ದೇವರ ಪರಿಶುದ್ಧ ಪ್ರಜ್ಞೆಯು ಮನಸ್ಸಿನ ಚಂಚಲ ಚಟುವಟಿಕೆಗಳಿಂದ ಮರೆಯಾಗಿದೆ ಮತ್ತು ವೈಯಕ್ತಿಕ ಗುರುತಿಸುವಿಕೆಗಳ ಪರದೆಯ ಹಿಂದೆ ಅಡಗಿದೆ. ಮೋಡಗಳು ಸ್ವಚ್ಛ ಆಕಾಶವನ್ನು ಮರೆಮಾಡಿದಂತೆ, ದೇವರ ಪರಿಶುದ್ಧ ಪ್ರಜ್ಞೆಯು ಮನಸ್ಸಿನ ಚಂಚಲ ಚಟುವಟಿಕೆಗಳಿಂದ ಮರೆಯಾಗಿದೆ.

### ಅಶುದ್ಧ ಬ್ರಹ್ಮ- ಮನುಷ್ಯ ಮನಸ್ಸು

ಮನಸ್ಸು ಅಶುದ್ಧ ಬ್ರಹ್ಮವಾಗಿ (ಆಕಾಶ) ನಮ್ಮೊಳಗೆ ಇದೆ. ಇದು ಮುದ್ರಣಗಳು, ಆಸೆಗಳು, ಭಯಗಳು ಮತ್ತು ಬಂಧನಗಳಿಂದ ನಿಯಂತ್ರಿತವಾದ ಸ್ಥಳ. ಇದು ಸಹ ಆಕಾಶದ ಒಂದು ರೂಪವಾದರೂ, ಆಲೋಚನೆಗಳು ಮತ್ತು ಭಾವನೆಗಳಿಂದ ಕೂಡಿದೆ ಮತ್ತು ವಿರೂಪಗೊಂಡಿದೆ. ಈ ಅಶುದ್ಧತೆಯಿಂದಾಗಿ, ವ್ಯಕ್ತಿಯು ದ್ವಂದ್ವ, ಸೀಮಿತತೆ ಮತ್ತು ದುಃಖವನ್ನು ಅನುಭವಿಸುತ್ತಾನೆ.

ಅಶುದ್ಧತೆಯಿಂದ ತುಂಬಿದ ಮನಸ್ಸು ಎಲ್ಲವನ್ನೂ ಒಳ್ಳೆಯದು ಮತ್ತು ಕೆಟ್ಟದ್ದು, ತಾನು ಮತ್ತು ಇತರರು, ಯಶಸ್ಸು ಮತ್ತು ವಿಫಲತೆ ಎಂದು ವಿಭಜಿಸುತ್ತಲೇ ಇರುತ್ತದೆ. ಇದು ಶಾಂತವಾಗಿ ಉಳಿಯಲು ಸಾಧ್ಯವಿಲ್ಲ ಏಕೆಂದರೆ ಅದು ಚಲನೆ ಮತ್ತು ಪ್ರತಿಕ್ರಿಯೆಯ ಮೇಲೆ ನಿರ್ಮಿತವಾಗಿದೆ. ವ್ಯಕ್ತಿಯು ಈ ಅಶುದ್ಧ ಬ್ರಹ್ಮನೊಂದಿಗೆ ಹೆಚ್ಚು ಗುರುತಿಸಿಕೊಂಡಷ್ಟೂ, ಅವನು ಪರಿಶುದ್ಧ ಆತ್ಮದ ಸಹಜ ನಿಶ್ಚಲತೆಯಿಂದ ದೂರ ಸರಿಯುತ್ತಾನೆ.

### ದೇವರು ಶುದ್ಧ ಸಕಾರಾತ್ಮಕತೆ

ಪರಿಶುದ್ಧ ಆತ್ಮ (ದೇವರು/ಚಿವಂ) ಸಂಪೂರ್ಣವಾಗಿ ಸಕಾರಾತ್ಮಕವಾಗಿದೆ. ಈ ಸ್ಥಿತಿಯಲ್ಲಿ ನಕಾರಾತ್ಮಕತೆ ಇಲ್ಲ, ದ್ವಂದ್ವ ಇಲ್ಲ, ವಿಭಜನೆ ಇಲ್ಲ; ಕೇವಲ ಶುದ್ಧ ಆನಂದ ಮಾತ್ರ ಉಳಿಯುತ್ತದೆ. ಪ್ರೀತಿ, ಕರುಣೆ, ಶಾಂತಿ, ತಾಳ್ಮೆ ಮತ್ತು ವಿನಮ್ರತೆಯಂಥ ಎಲ್ಲಾ ಸಕಾರಾತ್ಮಕ ಗುಣಗಳು ಈ ಮೂಲದಿಂದ ಹುಟ್ಟುತ್ತವೆ.

ಮನಸ್ಸು ನಿಜವಾದ ಸಕಾರಾತ್ಮಕತೆಯನ್ನು ಸೃಷ್ಟಿಸಲು ಸಾಧ್ಯವಿಲ್ಲ; ಅದು ಸ್ವಲ್ಪ ಸಮಯದವರೆಗೆ ಮಾತ್ರ ಅನುಕರಿಸಬಹುದು. ಮನಸ್ಸು ತೆಗೆದುಹಾಕಿದಾಗ, ಸಕಾರಾತ್ಮಕತೆಯು ಹೂವಿನಿಂದ ಸುಗಂಧ ಬಂದಂತೆ ಸಹಜವಾಗಿ ಪಸರಿಸುತ್ತದೆ. ಇದು ಭಾವನಾತ್ಮಕವಲ್ಲ, ಆದರೆ ಅಸ್ತಿತ್ವಾತ್ಮಕ- ಒಬ್ಬರೊಳಗಿನ ದಿವ್ಯತ್ವದ ಸಹಜ ಅಭಿವ್ಯಕ್ತಿ.

### ಒಳಗಿನ ದೇವರನ್ನು ಅರಿಯುವುದು

ದೇವರನ್ನು ಅರಿತುಕೊಳ್ಳುವುದು ಎಂದರೆ ತನ್ನೊಳಗಿನ ಶುದ್ಧ ಬ್ರಹ್ಮವನ್ನು ಅರಿತುಕೊಳ್ಳುವುದು. ಈ ಅರಿವು 'ಚಿವಾಲಿಟಿ ಪದ್ಧತಿ' ಅಭ್ಯಾಸದ ಮೂಲಕ ಬರುತ್ತದೆ. ಮೌನೀಕರಣ ಮತ್ತು ಗುರುಗಳ ಸ್ಮರಣೆಯ ಮೂಲಕ ಬರುವಂಥದ್ದು. ಇದು ಅಶುದ್ಧ ಬ್ರಹ್ಮವನ್ನು, ಅಂದರೆ ಮನಸ್ಸನ್ನು ಕರಗಿಸಲು ಕೆಲಸ ಮಾಡುತ್ತದೆ, ಇದರಿಂದ ಶುದ್ಧ ಬ್ರಹ್ಮ (ದೇವರು) ಸಹಜವಾಗಿ ಹೊಳೆಯಬಹುದು. ಮನಸ್ಸು ಮೌನವಾದಾಗ, ಆಲೋಚನೆಗಳು ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ ಮತ್ತು ಆಸೆಗಳು ಹಾಗೂ ಭಯಗಳು ಕ್ರಮೇಣ ತಮ್ಮ ಅರ್ಥವನ್ನು ಕಳೆದುಕೊಂಡು, ಶುದ್ಧ ನಿಶ್ಚಲತೆ ಮತ್ತು ಸಕಾರಾತ್ಮಕತೆ ಉಳಿಯುತ್ತದೆ. ಗುರುಗಳ ಊರ್ಜೆ ಒಳಗೆ ಮೌನವಾಗಿ ಕೆಲಸ ಮಾಡುತ್ತದೆ. ಸಾಧಕನಿಗೆ ಮನಸ್ಸಿನ ಆಚೆಗೆ ಮತ್ತು ಸಂಪೂರ್ಣ ನಿಶ್ಚಲತೆಗೆ ಮಾರ್ಗ ದರ್ಶನ ಮಾಡುತ್ತದೆ.

ಇದು ಏನೋ ಹೊಸದನ್ನು ಸೃಷ್ಟಿಸುವುದಲ್ಲ, ಆದರೆ ಯಾವಾಗಲೂ ಅಲ್ಲಿದ್ದದ್ದನ್ನು ಬಹಿರಂಗಪಡಿಸುವುದು. ಕೊಳವೊಂದು ಕೆಸರು ಮತ್ತು ಒಣಗಿದ ಎಲೆಗಳಿಂದ ಮುಚ್ಚಲ್ಪಟ್ಟಿದೆ ಎಂದು ಕಲ್ಪಿಸಿಕೊಳ್ಳಿ. ಸ್ವಚ್ಛ ನೀರು ಈಗಾಗಲೇ ಕೆಳಗೆ ಇದೆ, ಆದರೆ ನೀವು ಅದನ್ನು ನೋಡಲು ಸಾಧ್ಯವಿಲ್ಲ. ಮಲಿನತೆ ತೆಗೆದುಹಾಕಿದ ನಂತರ, ಶುದ್ಧ ನೀರು ಕಾಣಿಸುತ್ತದೆ. ಅದೇ ರೀತಿ, ಮನೋನಾಶವಾದ ನಂತರ ಪರಿಶುದ್ಧ ಆತ್ಮದ ಸ್ಥಿತಿಯನ್ನು, ಅಥವಾ ಚಿವಂ (ಶೂನ್ಯತೆ ಮತ್ತು ಪರಮಾನಂದದ ಸ್ಥಿತಿ) ಅನ್ನು ಬಹಿರಂಗಪಡಿಸುತ್ತದೆ. ಸಾಧಕನು ಈ ಸ್ಥಿತಿಯನ್ನು ತಲುಪಿದಾಗ, ಅವನು ಎಲ್ಲಾ ಆವರಣಗಳಿಂದ ಮುಕ್ತನಾಗುತ್ತಾನೆ. ಅವನು ಇನ್ನು ಮುಂದೆ ದೇವರನ್ನು ಹುಡುಕುತ್ತಿರುವ ಪ್ರತ್ಯೇಕ ಜೀವಿಯಲ್ಲ. ಅವನು ಸ್ವತಃ ದೇವರಾಗುತ್ತಾನೆ ಅಂದರೆ ಪರಿಶುದ್ಧ ಆತ್ಮದ ಸ್ಥಿತಿಯಲ್ಲಿ, ಯಾವಾಗಲೂ ಒಳಗೆ ಇದ್ದ, ಕಂಡುಹಿಡಿಯಲು ಕಾಯುತ್ತಿದ್ದ ಅನಂತ ಆಕಾಶದ ಅಣುವಂತೆ...

## ಹನಿ ಮಳೆ

### ಪ್ರೇಮ್‌ಕಹಾನಿ....

● ಮಹೇಶ ಅಶೋಕ ಶಿಂಗೆ, ಚಿಕ್ಕೋಡಿ



ಪ್ರತಿದಿನ ಸಂಜೆ
ಸೂರ್ಯ ಕಿರಣಗಳನ್ನು
ಹೊತ್ತು ಹರಿಯುವ
ನದಿ ತೊರೆಗಳಿಗೆ,

ಆ ದಡದಿಂದ ಈ ದಡಕ್ಕೆ
ಕುಣಿಯುತ್ತಾ ಬಂದು ಈಜುವ
ಬಾತುಕೋಳಿಗಳಿಗೆ,

ಆಕಾಶದಷ್ಟು ಅಗಲ
ತನ್ನ ಬಾಹುಗಳನ್ನು
ಹಬ್ಬಿಕೊಂಡ ಆಲದ ಮರಕ್ಕೆ,

ಮರದಲ್ಲಿನ ಗೂಡಿನಿಂದ
ಇಣುಕಿ ನಮ್ಮಿಬ್ಬರ ಮಕ್ಕಳಾಟ
ನೋಡುತ್ತಿದ್ದ ಕಾಗೆ ಮರಿಗಳಿಗೆ,

ನಮ್ಮ ಮಾತಿಗೆ ಚಿಂವ್‌ಗುಡುತ್ತ
ಖುಷಿಗೊಳ್ಳುತ್ತಿದ್ದ ಗುಬ್ಬಚ್ಚಿಗಳಿಗೆ,
ತುಂಟುಮಾತಿಗೆ ಮರವನ್ನೇ
ತಬ್ಬಿಕೊಂಡು ಕಿಸಕ್ಕನೆ ನಗುವ
ಕುರುಚಲು ಗಿಡಬಳ್ಳಿಗಳಿಗೆ,

ಅಸಂಖ್ಯ ಜನರ ಮೈ ಕೊಳೆ
ಉಜ್ಜಿಕೊಂಡು ಕರಗಿ ನುಣುಪಾಗಿ
ತೆಪ್ಪಗೆ ಕುಳಿತ ಕಲ್ಲುಗಳಿಗೆ, ಕಟ್ಟೆಗಳಿಗೆ
ನಮ್ಮಿಬ್ಬರ ನಡುವಿನ ಪಿಸುಮಾತುಗಳು
ಈಗಲೂ ನೆನಪಿವೆ.

ಮನುಷ್ಯನಿಗಷ್ಟೇ
ನೆನಪುಗಳು ಕಾಡುವುದಿಲ್ಲ ಗೆಳತಿ!
ಷಹಜಹಾನ್ ಕಟ್ಟಿದ ತಾಜ್‌ಮಹಲ್
ಒಂದೇ ಪ್ರೇಮದ ಕುರುಹು ಅಲ್ಲ,
ನಾವು ಸಂಧಿಸಿದ ಜಾಗಗಳು ಕೂಡ
ನಮ್ಮಿಬ್ಬರ ಸಾಂಗತ್ಯದ ಕಥೆ ಹೇಳುತ್ತ
ಪ್ರೇಮಿಗಳನ್ನು ಸೆಳೆಯುತ್ತಿವೆ.

## ಮಿನಿ ಕತೆಗಳು

● ಬಸವರಾಜ ಮಸೂತಿ

### ಕೆಂಪು ದೀಪದ ಕೆಳಗೆ

ದೇಹದ ಹಸಿವು ಬುದ್ಧಿಮಾತುಗಳನ್ನು ಕೇಳದೇ ಅವನನ್ನು 'ಕೆಂಪುದೀಪ'ದ ಚಾಳಿನ ಕಡೆಗೆ ಎಳೆದೊಯ್ದಿತು. ಬ್ರೋಕರ್ ಬಂದ, ಹುಡುಗಿಯನ್ನು ತೋರಿಸಿದ. ಅವಳು ಸನ್ನೆ ಮಾಡಿ ಕರೆದಳು, ಇವನು ಹಿಂಬಾಲಿಸಿದ. ಆ ಹುಡುಗಿಗೆ ಆತನ ಮಗಳ ವಯಸ್ಸು, ಸುಂದರಿ. ಎಲ್ಲೋ ನೋಡಿದ ನೆನಪು, ಗುರುತಿನ ಚಹರೆ. ಹತ್ತು ವರುಷಗಳ ಹಿಂದೆ ಅಕ್ಕನ ಮಗಳು ಕಾಣೆಯಾಗಿದ್ದ ಸ್ಪಷ್ಟ ಚಿತ್ರಣ. ಹುಡುಗಿ ಬಟ್ಟೆ ಬಿಚ್ಚುತ್ತಾ 'ಬೇಗ ಬಾ' ಎಂದು ಅವಸರಿಸಿದಳು. ''ಇರು, ಒಂದಿಷ್ಟು ಸ್ವೀಟ್ ತರುತ್ತೇನೆ'' ಎಂದು ಹೊರ ಬಂದ ಅವನು ಕಕ್ಕಾಬಿಕ್ಕಿಯಾಗಿ,ಹಿಂತಿರುಗಿ ನೋಡದೆ ಓಡತೊಡಗಿದ..

### ಮೈಮರೆವು

ವೇಗವಾಗಿ ಬಂದು ಗಕ್ಕನೆ ನಿಂತು, ಧೂಳೆಬ್ಬಿಸಿದ ಕೆಂಪು ಬಸ್ಸನ್ನು ಅವನು ಲಗುಬಗೆಯಿಂದ ಹತ್ತಿದ. ಮುಕ್ಕಾಲುಭಾಗ ಹೆಂಗಸರೇ ತುಂಬಿದ ಬಸ್ಸಿನಲ್ಲಿ ಸೀಟಿಗಾಗಿ ಕಣ್ಣಾಡಿಸಿದ. ಎಲ್ಲ ತುಂಬಿ ತುಳುಕುತ್ತಿತ್ತು. ಎರಡರ ಸೀಟಿನ ಒಂದರಲ್ಲಿ ತಾನು ಕುಳಿತು, ಪಕ್ಕದ ಸೀಟಿನಲ್ಲಿ ವ್ಯಾನಿಟಿ ಬ್ಯಾಗೊಂದನ್ನು ಇಟ್ಟುಕೊಂಡ, ವೈಯಾರದ ಮಿಂಚಿನ ಕಣ್ಣುಗಳ ತರುಣಿ ಪಿಳಿಪಿಳಿ ನೋಡುತ್ತಿದ್ದುದನ್ನು ಇವನು ನೋಡಿದ. ಸೀಟಿಗಾಗಿ ಆಸೆಗಣ್ಣಿಂದ ನೋಡಿದ ಈ ಮಧ್ಯವಯಸ್ಸಿನ ಮನುಷ್ಯನನ್ನು ಕಣ್ಣಿನಿಂದಲೇ ಕರೆದು ಪಕ್ಕದಲ್ಲಿ ಕೂಡ್ರಿಸಿಕೊಂಡಳು. ಬಸ್ಸಿನ ಓಲಾಟಕ್ಕೆ ಅವನ ಹತ್ತಿರ ಹತ್ತಿರವೇ ಬೆಸೆದುಕೊಂಡಳು. ಅವನೂ ಅವಳ ಬೆಚ್ಚಗಿನ ಸ್ಪರ್ಶವನ್ನು ಸವಿಯುತ್ತ ಪರಮಾನಂದವನ್ನು ಅನುಭವಿಸಿ ಮೈಮರೆತ. ಮುಂದಿನ ನಿಲ್ದಾಣದಲ್ಲಿ ಬಸ್ಸು ನಿಂತಿತು. ಇವಳು ಕೆಳಗಿಳಿದು ಹೊರಟುಹೋದಳು. ಇನ್ನೊಂದು ನಿಲ್ದಾಣಕ್ಕೆ ಅವನೂ ಇಳಿದು, ಆಟೋ ಕರೆದು ಹತ್ತಿದ. ಇಳಿಯಬೇಕಾದಲ್ಲಿ ಇಳಿದು, ಆಟೋದವನಿಗೆ ದುಡ್ಡು ಕೊಡಲು ಕಿಸೆಗೆ ಕೈ ಹಾಕಿದ, ಕಿಸೆ ಬರಿದು ಬರಿದು. ವೈಯಾರಿ ಅವನ ಹೃದಯವನ್ನಷ್ಟೇ ಅಲ್ಲದೆ, ಪರ್ಸನ್ನೂ ಎಗರಿಸಿಬಿಟ್ಟಿದ್ದಳು..!!



# ಎಲ್ಲಾ ಇದ್ದೂ ಏನೂ ಇಲ್ಲದವರು..

● ಬೇಲೂರು ರಾಮಮೂರ್ತಿ

ಅಂದಿನ ಗುರುಕುಲದಲ್ಲಿ ಗುರುಗಳು ''ನಮ್ಮಲ್ಲಿ ಎಲ್ಲಾ ಇದ್ದರೂ ಇನೊಬ್ಬರ ಮರ್ಜಿಗೆ ಕಾಯದೇ ನಮಗೆ ಬಾಳು ಸಾಗದು'' ಎಂದು ಹೇಳಿದಾಗ ಶಿಷ್ಯರಿಗೆ ಅಚ್ಚರಿಯಾಯಿತು. ಗುರುಗಳು ಶಿಷ್ಯರ ಮುಖದಲ್ಲಿದ್ದ ಕುತೂಹಲ ಗಮನಿಸಿ ತಮ್ಮ ಮಾತು ಮುಂದುವರಿಸಿದರು- ''ಮನುಷ್ಯನಿಗೆ ಏನು ಇಲ್ಲವೋ ಅದನ್ನು ಸಂಪಾದಿಸುವ ಗುರಿ ಇರುತ್ತದೆ. ವಿದ್ಯೆ ಇಲ್ಲದಿದ್ದರೆ ವಿದ್ಯೆ, ಹಣ ಇಲ್ಲದಿದ್ದರೆ ಹಣ, ಹೀಗೆ. ಹಣದಿಂದ ಬಹುಪಾಲು ಕೆಲಸಗಳು ಆಗುತ್ತವೆ ಎಂದು ನಂಬುವ ಜನರು ಹಣ ಸಂಪಾದನೆಗೇ ಹೆಚ್ಚು ಮಹತ್ವ ಕೊಡುತ್ತಾರೆ. ಆದರೆ ನಿಮ್ಮಲ್ಲಿ ವಿದ್ಯೆ ಇದೆಯೋ, ಇಲ್ಲವೋ, ಹಣ ಇದೆಯೋ ಇಲ್ಲವೋ; ಆದರೂ ಎಲ್ಲದಕ್ಕೂ ಒಬ್ಬರನ್ನು ನೀವು ಅವಲಂಬಿಸಲೇಬೇಕು. ಅವನೇ ಪರಬ್ರಹ್ಮ. ನಿಮಗೆ ಚೆನ್ನಾಗಿ ವಿದ್ಯೆ ಇದೆ ಎಂದುಕೊಳ್ಳಿ, ಅದರ ವಿನಿಯೋಗ ಹೇಗೆ? ನಿಮಗೆ ಎಲ್ಲಾದರೂ ಪಾಠ ಮಾಡುವ ಅವಕಾಶ ಸಿಗಬೇಕು. ಸಿಗದಿದ್ದರೆ ವಿದ್ಯೆ ಕಲಿತು ಪ್ರಯೋಜನವೇನು. ಬೇರೆ ಕಡೆ ಆ ವಿದ್ಯೆಯ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಹೀಗೆ ನೀವು ಅಂದುಕೊಂಡ ಸ್ಥಳದಿಂದ ಇನ್ನೊಂದು ಕಡೆ ಕರೆದುಕೊಂಡು ಹೋಗುವವನೇ ಪರಬ್ರಹ್ಮ. ಇದನ್ನು ನೀವು ನಂಬಲೇಬೇಕು. ಎಲ್ಲಾ ಇದ್ದೂ ಏನೂ ಇಲ್ಲದಿದ್ದರೆ ಏನಾಗುತ್ತೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೀನಿ. ನಿಮ್ಮ ಮನೆಯಲ್ಲಿ ಸುಗ್ರಾಸ ಭೋಜನ ಮಾಡುವ ಎಲ್ಲ ಪದಾರ್ಥಗಳೂ ಇವೆ. ಆದರೆ ಅಡುಗೆ ಮಾಡೋರೇ ಇಲ್ಲದಿದ್ದರೆ ಭೋಜನ ಎಲ್ಲಿಂದ ಬರಬೇಕು. ಹಾಗೆ ನಿಮಗೆ ಭೋಜನ ತಯಾರಿಸಿ ಕೊಡುವವನೇ ಪರಬ್ರಹ್ಮ ಸ್ವರೂಪಿ ಎಂದುಕೊಂಡರೆ ತಪ್ಪಿಲ್ಲ. ಯಾರೇ ಒಬ್ಬ ವ್ಯಕ್ತಿ ನನ್ನಲ್ಲಿ ಎಲ್ಲ ಇದೆ, ಎಲ್ಲ ಇದೆ ಅಂತ ಕೊಚ್ಚಿಕೊಳ್ಳುವ ಹಾಗೇ ಇಲ್ಲ. ಯಾವ ಮನುಷ್ಯನಿಗೆ ಯಾವಾಗ ಎಲ್ಲಿ ಏನು ಕೊರತೆ ಮಾಡಬೇಕು ಎನ್ನುವುದನ್ನು ಪರಬ್ರಹ್ಮನೇ ಬಲ್ಲ. ಹಾಗೆ ಅವನು ಮಾಡುತ್ತಾನೆ ಎನ್ನುವ ಒಂದಿಷ್ಟು ಹೆದರಿಕೆ ಮತ್ತು ನಂಬಿಕೆ ನಮಗೆ ಇರಲೇಬೇಕು. ಇನ್ನೊಂದು ಉದಾಹರಣೆ ತೆಗೆದುಕೊಳ್ಳಿ. ಒಬ್ಬ ಮನುಷ್ಯ ಸಾಕಷ್ಟು ಸಂಪಾದಿಸಿ ಶ್ರೀಮಂತನಾಗಿದ್ದಾನೆ, ದೊಡ್ಡ ಬಂಗಲೆ ಕಟ್ಟಿಕೊಂಡಿದ್ದಾನೆ, ಆಳು-ಕಾಳು, ವಾಹನಗಳು ಇವೆ. ಆದರೆ ಅವನು ಎಲ್ಲಾದರೂ ಹೋಗಬೇಕು ಎನ್ನುವಾಗ ವಾಹನ ಚಾಲನೆ ಮಾಡುವವನೇ ಇಲ್ಲದಿದ್ದರೆ ಅವನು ಎಲ್ಲಿಯೂ ಹೋಗಲು ಸಾಧ್ಯವಿಲ್ಲ. 'ನಾನು ಇಷ್ಟು ದೊಡ್ಡವನು, ನಾನ್ಯಾಕೆ ವಾಹನ ಓಡಿಸಬೇಕು?' ಎನ್ನುವ ಭಾವ ಬೆಳೆಸಿಕೊಂಡಿರವವನಿಗೆ ಚಾಲಕನನ್ನು ಅವಲಂಬಿಸುವುದು ಅನಿವಾರ್ಯ. ಹಾಗೆಯೇ, ಮನೆಯಲ್ಲಿ ರುಚಿಕರವಾದ ಭೋಜನವನ್ನು ತಯಾರಿಸಲಾಗಿದೆ. ಆದರೆ ಇವನಿಗೆ ಹಸಿವೇ ಇಲ್ಲ, ಪದಾರ್ಥಗಳನ್ನು ನೋಡಿದರೆ ತಿನ್ನಬೇಕು ಅಂತ ಅನಿಸುತ್ತಲೇ ಇಲ್ಲ. ಹಾಗೆ ನಮಗೆ ಹಸಿವನ್ನು ಕೊಡುವವನೇ ಪರಬ್ರಹ್ಮ. ಊಟ ಆಯಿತು. ನಮಗೆ ವಿಶ್ರಾಂತಿಗೆಂದು ಒಂದು ಬಹಳ ದೊಡ್ಡ ಐಷಾರಾಮಿ ಕೋಣೆ ಇದೆ, ಕೋಣೆಗೆ ಹೊಂದಿಕೊಂಡಂತೆ ಬಚ್ಚಲುಮನೆಯೂ ಇದೆ. ಕೋಣೆಯ ವಾತಾವರಣವನ್ನು ತಂಪಾಗಿಡುವ ವ್ಯವಸ್ಥೆ ಇದೆ. ಮೈಗೆ ತುಸುವೂ ನೋವಾಗದಂಥ ಮೆತ್ತೆ ಇದೆ. ಆದರೆ ಇಂಥಾ ಮೆತ್ತೆಯ ಮೇಲೆ ಮಲಗಿದ ಮೇಲೂ ನಿದ್ದೆ ಬಾರದೇ ಒದ್ದಾಡುತ್ತಾ ಇದ್ದರೆ ಅದಕ್ಕೆ ಅರ್ಥವೇನು? ನಮ್ಮಲ್ಲಿ ಎಲ್ಲಾ ಇದ್ದರೂ ನಮಗೆ ನಿದ್ದೆ ಕೊಡುವವನು ಪರಬ್ರಹ್ಮ. ನೆಮ್ಮದಿ, ಹಸಿವು, ನಿದ್ದೆ ಇವೆಲ್ಲವನ್ನೂ ನಾವು ಖಂಡಿತಾ ಕೊಂಡುಕೊಳ್ಳಲು ಆಗುವುದಿಲ್ಲ. ಆದರೆ ನಮ್ಮ ಬದುಕಿನ ರೀತಿಗಳನ್ನು ಬದಲಾಯಿಸಿಕೊಂಡರೆ ನಮಗೆ ಸದಾಕಾಲ ನೆಮ್ಮದಿ ಇರುವಂತೆ ಮಾಡಿಕೊಳ್ಳಬಹುದು. ತಟ್ಟೆಯ ಮುಂದೆ ಕೂತೊಡನೆಯೇ ನಮಗೆ ಹಸಿವಾಗಬೇಕು, ಊಟ ಮಾಡುವ ಆಸೆಯಾಗಬೇಕು; ಮತ್ತೆ ಎಲ್ಲಾ ಆಗಿ ನಮ್ಮ ಕೋಣೆಯ ಮೆತ್ತೆಯ ಮೇಲೆ ಮಲಗಿದ ಒಂದೈದು ನಿಮಿಷದಲ್ಲೇ ನಿದ್ದೆ ಬರಬೇಕು. ಇದು ನಿಜವಾದ ಜೀವನ. ಅದಕ್ಕೇ ಯಾವುದೇ ಮನುಷ್ಯನಾದರೂ 'ನನಗೆ ಮತ್ತು ನನಗೇ ಎಲ್ಲ ಇದೆ' ಎನ್ನುವ ಅಹಂ ಬಿಟ್ಟು 'ನಾನು ಎಷ್ಟೇ ಇದ್ದರೂ ಏನೇ ಇದ್ದರೂ ಒಂದಲ್ಲಾ ಒಂದು ವ್ಯವಸ್ಥೆಗೆ ನಾನು ಇನ್ನೊಬ್ಬರನ್ನು ಅವಲಂಬಿಸಲೇಬೇಕು. ಅವನೇ ಪರಬ್ರಹ್ಮ. ಅಂದ ಮೇಲೆ ಪರಬ್ರಹ್ಮನ ಕೃಪಾದೃಷ್ಟಿ ನನ್ನ ಮೇಲಿಲ್ಲದಿದ್ದರೆ ನನಗೆ ಏನೂ ಇಲ್ಲ' ಎನ್ನುವ ಸೌಜನ್ಯದ ಭಾವ ಇಟ್ಟುಕೊಂಡು ಬಾಳುವುದು ಮುಖ್ಯ'' ಎಂದು ಹೇಳುತ್ತ ಗುರುಗಳು ಅಂದಿನ ಪಾಠ ಮುಗಿಸಿದರು.

## ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

| | | | | | | | | |
|---|---|---|---|---|---|---|---|---|
| 1 | | | 2 | ■ | ■ | 3 | | 4 |
| | ■ | ■ | 5 | | | | ■ | |
| 6 | 7 | | | ■ | ■ | | ■ | |
| ■ | | ■ | 8 | 9 | ■ | 10 | 11 | |
| ■ | | ■ | ■ | | ■ | | | ■ |
| 12 | | 13 | ■ | 14 | 15 | ■ | | ■ |
| | ■ | | ■ | ■ | 16 | | | 17 |
| | ■ | 18 | | | | ■ | ■ | |
| 19 | | | ■ | ■ | 20 | | | |

### ಎಡದಿಂದ ಬಲಕ್ಕೆ

1. ಪದ್ಯ ರಚಿಸುವವನಿಂದ ಕೊನೆಯಾಗುವ ಬಾಗಲ ಕೋಟೆ ಜಿಲ್ಲೆಯ ಒಂದು ಸ್ಥಳ (4)
3. ನೀರಿನಲ್ಲಿ ಹುಟ್ಟುವ ಕಮಲಕ್ಕೆ ಇದು ಇನ್ನೊಂದು ಹೆಸರು (3)
5. ಮೋಸಮಾಡು ಎನ್ನುವ ನುಡಿಗಟ್ಟು (4)
6. ನಮ್ರತೆಯಿಂದ ಕೂಡಿದ (4)
8. ಎರಡಕ್ಷರದ ಬಾಗಿಲು (2)
10. ಕೆಟ್ಟ ಮದುವೆಯ ಗಂಡಲ್ಲ, ತರುಣ ಅಥವಾ ಮಗ (3)
12. ಮೊಸಳೆಯ ಜತೆಗೇಕೆ ಕೈ?
14. ಕಾಡು ತಿರುಗಿದರೆ ಹೊಸದು (2)
16. ದಿಕ್ಕು ತಪ್ಪಿಸಿ ಬಂದಿರುವ ಎಳೆಯ ಮಗು (4)
18. ಪರಿಣಯದ ಗಂಡು ತಿರುಗಿ ನಿಂತಿದ್ದಾನೆ (4)
19. ಕೆಳಕ್ಕೆ ಬಿದ್ದವನು ಎಂದರ್ಥ (3)
20. ತಾತ್ಸಾರ ಮಾಡುವುದು ಅಥವಾ ಕಡೆಗಣಿಸುವಿಕೆ (4)

### ಮೇಲಿಂದ ಕೆಳಕ್ಕೆ

1. ವೇಗವು ರಸದ ನಡುವೆ ಸಿಲುಕಿದೆ (3)
2. ಮೊದಲ ಪೂಜೆ ಪಡೆವ ದೇವರು (4)
3. ಓರೆ-ಕೋರೆ ಅಥವಾ ವಕ್ರತೆ (4)
4. ಕಸ ಗುಡಿಸುವವನು (4)
7. ಯಕ್ಷಗಾನ-ನಾಟಕಗಳಲ್ಲಿ ಕಂಡುಬರುವ ಹಾಸ್ಯಗಾರ (4)
9. ಅಗ್ನಿಯಲ್ಲಿ ಸುಡುವಿಕೆ (3)
11. ಬೇರೆಯವರಿಗೆ ಅಧಿಕಾರವನ್ನು ಹಸ್ತಾಂತರಿಸು (4)
12. ಎರಡು ಮನುಷ್ಯರ ನಡುವಿನ ವಿರಸ (4)
13. ಹುಟ್ಟಿನಿಂದ ಬಂದುದು, ನೆತ್ತರಿನಲ್ಲಿ ಸೇರಿದ್ದೂ ಆದೀತು (4)
15. ಮತಿಯೊಂದಿಗೆ ಬಂದಿದೆ ಭೂಮಿ (4)
17. ಭಾರವಿಲ್ಲದ್ದು ಮತ್ತೊಬ್ಬ ಶಿವನ ನಡುವೆ ಇದೆ (3)

### ಸರಿಯುತ್ತರಗಳು

ಎಡದಿಂದ ಬಲಕ್ಕೆ
1.ರಬಕವಿ 3.ಅಂಬುಜ 5.ನಾಮಹಾಕು 6.ಸವಿನಯ 8.ಕದ 10.ಕುವರ 12.ಮಕರ 14.ನವ 16.ಸುಗೂಸುಹ 18.ಗಮದುಮ 19.ಪತಿತ 20.ತಿರಸ್ಕಾರ

ಮೇಲಿಂದ ಕೆಳಕ್ಕೆ
1.ರಭಸ 2.ವಿನಾಯಕ 3.ಅಂಕುಡೊಂಕು 4.ಜಲಗಾರ 7.ವಿದೂಷಕ 9.ದಹನ 11.ವರ್ಗಾಯಿಸು 12.ಮನಸ್ತಾಪ 13.ರಕ್ತಗತ 15.ವಸುಮತಿ 17.ಹಗುರ

# ಶರಣಾಗತಿಯ ಶಕ್ತಿಯ ಕುರಿತು ವಿವರಿಸುವ ರಾಮಚರಿತ ಮಾನಸ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಕೈಲಾಸದ ಬೆಳ್ಳಿಯ ಶಿಖರಗಳ ಮೇಲೆ ಶಿವ ಪಾರ್ವತಿಯರ ಚರ್ಚೆ ಗಹನವಾಗುತ್ತಿತ್ತು. ಪಾರ್ವತಿ ಕೇಳಿದಳು, ''ಸ್ವಾಮೀ, ಅಂತರಂಗದ ಸಂವಾದವೇ ರಾಮನ ದರ್ಶನಕ್ಕೆ ದಾರಿ ಎಂದಿರಿ. ಆದರೆ, ಈ ಸಂವಾದವು ಕೇವಲ ಜ್ಞಾನದಿಂದ ಸಾಧ್ಯವೇ? ಅಥವಾ ಜ್ಞಾನಕ್ಕಿಂತ ಮಿಗಿಲಾದದ್ದು ಯಾವುದಾದರೂ ಇದೆಯೇ?''.

ಶಿವನು ಕಿರುನಗು ಬೀರುತ್ತಾ ಉತ್ತರಿಸಿದನು, ''ಪಾರ್ವತಿ, ಜ್ಞಾನವು ಹಾದಿಯನ್ನು ತೋರಿಸುತ್ತದೆ, ಆದರೆ ಗುರಿಯನ್ನು ತಲುಪಿಸುವುದು 'ಶರಣಾಗತಿ'. ಜ್ಞಾನಕ್ಕೆ ಅಹಂಕಾರದ ಸೋಂಕು ತಗಲುವ ಅಪಾಯವಿರುತ್ತದೆ, ಆದರೆ ಸಂಪೂರ್ಣವಾಗಿ ಶರಣಾದ ಭಕ್ತನಿಗೆ ಅಹಂಕಾರದ ಹಂಗಿರುವುದಿಲ್ಲ. ಅಲ್ಲಿ ಕೇವಲ ಪ್ರೀತಿ ಮತ್ತು ಸಮರ್ಪಣೆ ಮಾತ್ರ ಇರುತ್ತದೆ''.

ಶಿವ ಮಾತು ಮುಂದುವರಿಸುತ್ತಾ ''ನೋಡು ದೇವೀ, ಮನುಷ್ಯ ತನ್ನ ಬುದ್ಧಿವಂತಿಕೆಯಿಂದ ಎಲ್ಲವನ್ನೂ ಗೆಲ್ಲಬಲ್ಲೆ ಎಂದು ಭಾವಿಸುತ್ತಾನೆ. ಆದರೆ ಅವನ ಬುದ್ಧಿ ಎಂಬುದು ಒಂದು ಮಿತಿಯೊಳಗೆ ಬಂಧಿಯಾಗಿದೆ. ಯಾವಾಗ ಅವನು 'ನಾನು' ಎಂಬ ಭಾವವನ್ನು ಬಿಟ್ಟು 'ನಿನದೇ ಎಲ್ಲ' ಎಂದು ಪರಮಾತ್ಮನಿಗೆ ಶರಣಾಗುತ್ತಾನೋ, ಆಗ ಅವನ ಅಂತರಂಗದ ಕವಾಟಗಳು ತೆರೆಯುತ್ತವೆ. ಕಾಕಭುಶುಂಡಿಯ ಉದಾಹರಣೆಯನ್ನೇ ನೋಡು; ಆತ ಪಕ್ಷಿಯ ರೂಪದಲ್ಲಿದ್ದರೂ ತನ್ನ ಅಹಂಕಾರವಿಲ್ಲದ ಭಕ್ತಿಯಿಂದಲೇ ಪರಮ ಸತ್ಯವನ್ನು ಕಂಡುಕೊಂಡನು''.

ಪಾರ್ವತಿಯ ಕಣ್ಣುಗಳಲ್ಲಿ ಭಕ್ತಿ ತುಂಬಿ ಬಂತು. ''ಹಾಗಾದರೆ ಶರಣಾಗತಿ ಎಂದರೆ ಸೋಲಲ್ಲವೇ?'' ಎಂದು ಕೇಳಿದಳು.

ಶಿವ ಗಂಭೀರವಾಗಿ ಹೇಳಿದನು, ''ಖಂಡಿತ ಇಲ್ಲ ಪಾರ್ವತಿ. ಶರಣಾಗತಿ ಎಂದರೆ ಸೋಲಲ್ಲ, ಅದು ವಿಜಯದ ಆರಂಭ. ಅಹಂಕಾರವನ್ನು ಸೋಲಿಸುವುದೇ ಅತಿದೊಡ್ಡ ವಿಜಯ. ಸಮುದ್ರಕ್ಕೆ ಸೇರುವ ನದಿ ತನ್ನ ಹೆಸರನ್ನು ಕಳೆದುಕೊಂಡರೂ ಸಮುದ್ರವೇ ಆಗಿ ಬದಲಾಗುವಂತೆ, ಭಕ್ತನು ತನ್ನ ಅಸ್ತಿತ್ವವನ್ನು ಭಗವಂತನಲ್ಲಿ ವಿಲೀನಗೊಳಿಸಿದಾಗ ಅವನೇ ಭಗವಂತನ ಸ್ವರೂಪವಾಗುತ್ತಾನೆ''.

**ಶ್ರೀ ರಾಮಚರಿತಮಾನಸ ಶ್ಲೋಕ**

ಈ ಭಾವಕ್ಕೆ ಪೂರಕವಾಗಿ ತುಳಸಿದಾಸರು ಬಾಲಕಾಂಡದಲ್ಲಿ ಹೀಗೆ ಹೇಳುತ್ತಾರೆ:

**ಸೋಇ ಜಾನಇ ಜೇಹಿ ದೇಹು ಜನಾಯಿ ।**
**ಜಾನತ ತುಮ್ಹಹಿ ತುಮ್ಹಇ ಹೋಇ ಜಾಯಿ ॥**

ಅಂದರೆ, ಹೇ ಪ್ರಭು, ನೀನು ಯಾರಿಗೆ ನಿನ್ನನ್ನು ಅರಿಯುವಂತೆ ಮಾಡುತ್ತೀಯೋ ಅವರು ಮಾತ್ರ ನಿನ್ನನ್ನು ತಿಳಿಯಬಲ್ಲರು. ಒಮ್ಮೆ ನಿನ್ನನ್ನು ಅರಿತ ಮೇಲೆ, ಅವರು ನಿನ್ನಲ್ಲೇ ಒಂದಾಗಿ ನಿನ್ನ ಸ್ವರೂಪವೇ ಆಗಿಬಿಡುತ್ತಾರೆ ಎಂದರ್ಥ.

ಈ ಶ್ಲೋಕವು 'ಶರಣಾಗತಿ'ಯ ಪರಮ ಸತ್ಯವನ್ನು ಸಾರುತ್ತದೆ. ಜ್ಞಾನವು ನಮ್ಮನ್ನು ದೇವರೆಡೆಗೆ ಕರೆದೊಯ್ದರೆ, ಶರಣಾಗತಿಯು ನಮ್ಮನ್ನು ದೇವರೇ ಆಗಿಸಿಬಿಡುತ್ತದೆ. ನಮ್ಮ ಬದುಕಿನ ಸಂಕಷ್ಟಗಳ ಸಮಯದಲ್ಲಿ ನಾವು ಯಾರಲ್ಲಿ ಆಶ್ರಯ ಪಡೆಯುತ್ತೇವೆ ಎಂಬುದು



ಮುಖ್ಯ. ಕಷ್ಟಗಳು ಎಲ್ಲರಿಗೂ ಬರುತ್ತದೆ, ಆದರೆ ಅಂಥ ಸಮಯದಲ್ಲಿ ಉತ್ತಮರಿಂದ ಸಹಾಯ ಪಡೆದಾಗ ಕಷ್ಟದ ಪರಿಹಾರವು ಕೂಡ ಒಳ್ಳೆಯ ರೀತಿಯಲ್ಲಿ ಆಗುತ್ತದೆ. ಕಷ್ಟ ತೀರಿದರೆ ಸಾಕು ಎಂದು ವಾಮಮಾರ್ಗದಲ್ಲಿ ಸಹಾಯ ಪಡೆದಾಗ ಒಂದು ಕಷ್ಟ ನೂರಾಗುತ್ತದೆ. ಜೀವನದಲ್ಲಿ ವಿದ್ಯೆ-ಬುದ್ಧಿಯನ್ನು ಸಂಪಾದಿಸುವುದರ ಜತೆಗೆ ನಮ್ಮಲ್ಲಿ ಬೇಡದಿರುವ ಅಹಂಕಾರ ಕೂಡ ಮನೆ ಮಾಡುತ್ತಾ ಹೋಗುತ್ತದೆ.

ಅಹಂಕಾರವು ನಮ್ಮನ್ನು ಪ್ರಪಾತಕ್ಕೆ ತಳ್ಳಿದರೆ, ವಿವೇಕ ಮತ್ತು ಶರಣಾಗತಿ ನಮ್ಮನ್ನು ಉನ್ನತಿಗೆ ಒಯ್ಯುತ್ತವೆ. ಆದ್ದರಿಂದಲೇ ಬದುಕಿನಲ್ಲಿ ಮುಂದೆ ನಡೆಯುತ್ತಾ ಅಲ್ಲಲ್ಲೇ ಅಹಂಕಾರವನ್ನು ಬಿಟ್ಟು ವಿನಯವಂತಿಕೆಯಿಂದ ನಡೆದುಕೊಳ್ಳುವುದನ್ನು ರೂಢಿ ಮಾಡಿಕೊಳ್ಳಬೇಕು.. ಅಹಂಕಾರ ಪಟ್ಟಾಗ ಕಲಿತ ವಿದ್ಯೆ, ಚಿಕ್ಕ ಯಶಸ್ಸು ಯಾವುದನ್ನೂ ನಾವು ಅನುಭವಿಸಲು ಸಾಧ್ಯವಾಗುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕಲಿತ ಜ್ಞಾನವನ್ನು ಹಂಚಿದಾಗ ನಮ್ಮಲ್ಲಿರುವ ಸಾತ್ವಿಕ ಶಕ್ತಿ ಮತ್ತಷ್ಟು ಅಕ್ಷಯವಾಗುತ್ತಾ ಹೋಗುತ್ತದೆ.

ಜೀವನದಲ್ಲಿ ವಿದ್ಯೆ ಸಂಪಾದಿಸಿ, ಅಧಿಕಾರವನ್ನು ಗಳಿಸಿ ಶ್ರೀಮಂತಿಕೆಯಿಂದ ಬದುಕಿದರೆ ಯಶಸ್ಸು ಗಳಿಸಿದಂತಲ್ಲ. ಕಲಿತ ವಿದ್ಯೆಯಿಂದ ನೂರು ಜನರಿಗೆ ಒಳ್ಳೆಯದಾಗಬೇಕು. ಅಧಿಕಾರದ ಮದ ತಲೆಗೆ ಏರಬಾರದು. ಎಲ್ಲಕ್ಕಿಂತ ಹೆಚ್ಚಾಗಿ ಜ್ಞಾನದ ಅಹಂಕಾರಕ್ಕಿಂತ ಭಗವಂತನಿಗೆ ಶರಣಾಗುವ ಗುಣವನ್ನು ಬೆಳೆಸಿಕೊಂಡು ಬದುಕಿದಾಗ ನಮ್ಮೊಳಗೆ ರಾಮನ (ಸತ್ಯದ) ದರ್ಶನವಾಗುತ್ತದೆ. ಆಗ ನಮ್ಮೊಳಗೂ ರಾಮ ನೆಲೆಸುತ್ತಾನೆ...

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

## ಸಮಾಚಾರ ಸಣ್ಣದಲ್ಲ

### ರಾಷ್ಟ್ರೀಯ ಮುಕ್ತ ರಿಲೇ: ರಾಜ್ಯಕ್ಕೆ 2 ಬೆಳ್ಳಿ ಪದಕ

**ಚಂಡೀಗಢ:** ಭಾರತೀಯ ಅಥ್ಲೆಟಿಕ್ಸ್ ಫೆಡರೇಶನ್ ವತಿಯಿಂದ ನಡೆದ 3ನೇ ರಾಷ್ಟ್ರೀಯ ಮುಕ್ತ ರಿಲೇ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕವು 2 ಬೆಳ್ಳಿ ಮತ್ತು 3 ಕಂಚಿನ ಪದಕಗಳನ್ನು ಪಡೆಯಿತು. 20 ವರ್ಷದೊಳಗಿನ ಮಿಶ್ರ ರಿಲೇ ಸ್ಪರ್ಧೆಯಲ್ಲಿ ಕರ್ನಾಟಕದ ಅತೀಬ್ ಅಹ್ಮದ್, ಹೇಮಂತ್ ಗೌಡ, ಎಂ.ವೈ.ಸೃಷ್ಟಿ ಮತ್ತು ಲೇಖನ ಎಸ್ ಪ್ರಸಾದ್ ಅವರನ್ನೊಳಗೊಂಡ ತಂಡ 45.69 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಜಯಿಸಿತು. 20 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲೂ ಕರ್ನಾಟಕ ಕಂಚು ಪಡೆಯಿತು. ಸಿರಿ ಎನ್, ಅಕ್ಷಯ ಶೇಖರ್, ಎಸ್. ಕರ್ಕಡ ಮತ್ತು ಲೇಖನ ಎಸ್ ಪ್ರಸಾದ್ ಅವರನ್ನೊಳಗೊಂಡ ತಂಡ 50.12 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. 20 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಮತ್ತು 20 ವರ್ಷದೊಳಗಿನ ಪುರುಷರ ವಿಭಾಗದಲ್ಲೂ ಕರ್ನಾಟಕ ಈ ಸಲ ಪದಕಗಳನ್ನು ಗೆದ್ದಿದೆ.

ನಿತೀಶ್ ರೆಡ್ಡಿ ಆಲ್‌ರೌಂಡರ್ ಆಟ | ಹೈದರಾಬಾದ್‌ಗೆ ಈ ಆವೃತ್ತಿಯಲ್ಲಿ ಮೊದಲನೇ ಜಯ

# ಕೋಲ್ಕತ್ತಾದಲ್ಲಿ ಸನ್ ರೈಸರ್ಸ್ ಗೆಲುವು

**ಕೋಲ್ಕತಾ:** ಬ್ಲೆಸಿಂಗ್ ಮುಜರಾಬಾನಿ ಮಾರಕ ಬೌಲಿಂಗ್ ಹೊರತಾಗಿಯೂ ನಿತೀಶ್ ಕುಮಾರ್ ರೆಡ್ಡಿ ಅವರ ಆಲ್ ರೌಂಡ್ ಆಟದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ತನ್ನ ಎರಡನೇ ಪಂದ್ಯದಲ್ಲಿ ಕೋಲ್ಕತಾ ನೈಟ್ ರೈಡರ್ಸ್ ಎದುರು 65 ರನ್‌ಗಳ ಗೆಲುವು ಸಾಧಿಸಿತು. ಇದು ಐಪಿಎಲ್ ಟೂರ್ನಿಯಲ್ಲಿ ಇಶಾನ್ ಕಿಶನ್ ನಾಯಕತ್ವದ ಎಸ್ ಆರ್‌ಎಚ್ ತಂಡಕ್ಕೆ ಮೊದಲನೇ ಜಯವಾಗಿದೆ. ಕಠಿಣ ಹೋರಾಟ ನೀಡಿದ ಹೊರತಾಗಿಯೂ ಅಜಿಂಕ್ಯ ರಹಾನೆ ನೇತೃತ್ವದ ಕೋಲ್ಕತ್ತಾ ಈ ಆವೃತ್ತಿಯಲ್ಲಿ ಸತತ ಎರಡನೇ ಸೋಲೊಪ್ಪಿಕೊಂಡಿತು.

ಗುರುವಾರ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಸನ್‌ರೈಸರ್ಸ್ ನೀಡಿದ್ದ 227 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಕೋಲ್ಕತಾ ನೈಟ್ ರೈಡರ್ಸ್ ತಂಡವು ಅಂಗ್‌ಕೃಷ್ ರಘುವಂಶಿ ಅವರ ಅರ್ಧಶತಕದ ಹೊರತಾಗಿಯೂ ಉನಾದ್ಕಟ್ ಬೌಲಿಂಗ್‌ಗೆ ನಲುಗಿ 16 ಓವರ್‌ಗಳಿಗೆ 161 ರನ್‌ಗಳಿಗೆ ಆಲೌಟ್ ಆಯಿತು. ಕೆಕೆಆರ್ ತಂಡ ಗೆಲುವಿನ ಹಾದಿಯಲ್ಲಿತ್ತು. ಆದರೆ ಕ್ಯಾಮೆರಾನ್ ಗ್ರೀನ್ ಹಾಗೂ ಅರ್ಧಶತಕ ಗಳಿಸಿದ್ದ ಅಂಗ್‌ಕ್ರಿಷ್ ರಘುವಂಶಿ ಅವರ ಎರಡು ನಿರ್ಣಾಯಕ ರನೌಟ್‌ಗಳು ಅದಕ್ಕೆ ಹಿನ್ನಡೆಯನ್ನು ತಂದುಕೊಟ್ಟವು.

**ರಘುವಂಶಿ ಅರ್ಧಶತಕ ವ್ಯರ್ಥ:** ಕಳೆದ ಪಂದ್ಯದಲ್ಲಿ ಅರ್ಧಶತಕ ಬಾರಿಸಿದ್ದ ಅಂಗ್‌ಕ್ರಿಷ್, ಸನ್‌ರೈಸರ್ಸ್ ಎದುರು ಕೂಡ ಅದೇ ಲಯವನ್ನು ಮುಂದುವರಿಸಿದರು. ಅವರು ಆಡಿದ 29 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ 6 ಬೌಂಡರಿಗಳೊಂದಿಗೆ 52 ರನ್ ಗಳಿಸಿ ತಂಡವನ್ನು ಗೆಲುವಿನ ಹಾದಿಯಲ್ಲಿರಿಸಿದ್ದರೂ ಅವರು ಅನಗತ್ಯವಾಗಿ ರನೌಟ್ ಆದರು. ಇದಕ್ಕೂ ಮುನ್ನ ಆರಂಭಿಕ ಫಿನ್ ಆಲೆನ್ ಕೇವಲ 7 ಎಸೆತಗಳಲ್ಲಿ 28 ರನ್ ಬಾರಿಸಿ ಉತ್ತಮ ಆರಂಭ ಪಡೆದರೂ ಬಳಿಕ ವಿಕೆಟ್ ಕೈಚೆಲ್ಲಿದ್ದರು. ಮಧ್ಯಮ ಕ್ರಮಾಂಕದಲ್ಲಿ ರಿಂಕು ಸಿಂಗ್ 25 ಎಸೆತಗಳಲ್ಲಿ 35 ರನ್ ಗಳಿಸಿದರು.

ಹೈದರಾಬಾದ್ ಪರ ಜಯದೇವ್ ಉನಾದ್ಕಟ್ ಮೂರು ವಿಕೆಟ್ ಪಡೆದರೆ, ಎಹ್ಸಾನ್ ಮಾಲಿಂಗ ಹಾಗೂ ನಿತೀಶ್ ಕುಮಾರ್ ರೆಡ್ಡಿ ತಲಾ ಎರಡು ವಿಕೆಟ್‌ಗಳನ್ನು ಗಳಿಸಿದರು.

**ಹೈದರಾಬಾದ್ ಭರ್ಜರಿ ಆರಂಭ:** ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ಟ್ರಾವಿಸ್ ಹೆಡ್ ಹಾಗೂ ಅಭಿಷೇಕ್ ಶರ್ಮಾ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಭರ್ಜರಿ ಆರಂಭವನ್ನು ತಂದುಕೊಟ್ಟರು. ಈ ಇಬ್ಬರೂ 5.4 ಓವರ್‌ಗಳಿಗೆ 82 ರನ್‌ಗಳ ಜತೆಯಾಟವನ್ನು ಆಡಿದರು. ಸ್ಫೋಟಕ ಬ್ಯಾಟಿಂಗ್ ಮಾಡಿದ ಟ್ರಾವಿಸ್ ಹೆಡ್ 21 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 6 ಬೌಂಡರಿಗಳೊಂದಿಗೆ 46 ರನ್ ಸಿಡಿಸಿದರು, ಆದರೆ ಅರ್ಧಶತಕದಂಚಿನಲ್ಲಿ ಕಾರ್ತಿಕ್ ತ್ಯಾಗಿಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಇಶಾನ್ ಕಿಶನ್ (14 ರನ್) ಅವರನ್ನು ಬ್ಲೆಸಿಂಗ್ ಮುಜರಾಬಾನಿ ಔಟ್ ಮಾಡಿದರು.

ಒಂದು ಹಂತದಲ್ಲಿ ಸ್ಫೋಟಕ ಬ್ಯಾಟ್ ಮಾಡುತ್ತಿದ್ದ ಆರಂಭಿಕ ಅಭಿಷೇಕ್ ಶರ್ಮಾ, ಕೇವಲ 21 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 48 ರನ್ ಗಳಿಸಿ ಅರ್ಧಶತಕದಂಚಿನಲ್ಲಿ ಬ್ಲೆಸಿಂಗ್ ಮುಜರಾಬಾನಿಗೆ ಔಟ್ ಆದರು. ಕಳೆದ ಪಂದ್ಯದಲ್ಲಿ ಮಿಂಚಿದ್ದ ಅನಿಕೇತ್ ವರ್ಮಾ ಅವರನ್ನು ಅನುಕುಲ್ ರಾಯ್ ಔಟ್ ಮಾಡಿದರು, ಆದರೆ ಐದನೇ ವಿಕೆಟ್‌ಗೆ ಜತೆಯಾಟದ ಹೆನ್ರಿಚ್ ಕ್ಲಾಸೆನ್ ಹಾಗೂ ನಿತೀಶ್ ಕುಮಾರ್ ರೆಡ್ಡಿ 82 ರನ್‌ಗಳ ಜತೆಯಾಟವಾಡಿದರು. ಆ ಮೂಲಕ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು. 24 ಎಸೆತಗಳಲ್ಲಿ 39 ರನ್ ಗಳಿಸಿದ ಬಳಿಕ ನಿತೀಶ್ ರೆಡ್ಡಿ ವಿಕೆಟ್ ಕಳೆದುಕೊಂಡರು.

**ಕ್ಲಾಸೆನ್ ಅರ್ಧಶತಕ:** ಒಂದು ತುದಿಯಲ್ಲಿ ದೀರ್ಘಾವಧಿ ಬ್ಯಾಟ್ ಮಾಡಿದ ಹೆನ್ರಿಕ್ ಕ್ಲಾಸೆನ್, 35 ಎಸೆತಗಳಲ್ಲಿ ಒಂದು ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 52 ರನ್‌ಗಳನ್ನು ಗಳಿಸಿದರು, ಅವರನ್ನು ಮುಜರಾಬಾನಿ ಔಟ್ ಮಾಡಿದರು. ಅಂತಿಮವಾಗಿ ಹೈದರಾಬಾದ್ ತಂಡ ತನ್ನ ಪಾಲಿನ 20 ಓವರ್‌ಗಳಿಗೆ 8 ವಿಕೆಟ್‌ಗಳ ನಷ್ಟಕ್ಕೆ 226 ರನ್‌ಗಳನ್ನು ಕಲೆ ಹಾಕಿತು.

ಕೋಲ್ಕತ್ತಾ ಪರ ಅತ್ಯುತ್ತಮ ಬೌಲಿಂಗ್ ಪ್ರದರ್ಶನವನ್ನು ತೋರಿದ ಬ್ಲೆಸಿಂಗ್ ಮುಜರಾಬಾನಿ ಅವರು 4 ವಿಕೆಟ್ ಸಾಧನೆ ಮಾಡಿದರೆ, ವೈಭವ್ ಅರೋರಾ 2 ವಿಕೆಟ್ ಪಡೆದರು.

ಗಾಯಕ್ವಾಡ್ ಪಡೆಗೆ 2ನೇ ಅಗ್ನಿಪರೀಕ್ಷೆ

# ತವರಲ್ಲಿಂದು ಚೆನ್ನೈಗೆ ಪಂಜಾಬ್‌ನ ಸವಾಲು

**ಚೆನ್ನೈ:** ಅತಿಥೇಯ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಐಪಿಎಲ್ ಪಂದ್ಯವು ಇಲ್ಲಿನ ಚಿದಂಬರಂ ಸ್ಟೇಡಿಯಂನಲ್ಲಿ ಇಂದು ನಡೆಯಲಿದೆ.

ಈಗಾಗಲೇ ಸೋಮವಾರ ನಡೆದಿರುವ ಈ ಆವೃತ್ತಿಯ ಮೊದಲ ಪಂದ್ಯದಲ್ಲಿ ಚೆನ್ನೈ ತಂಡವು ರಾಜಸ್ಥಾನ್ ರಾಯಲ್ಸ್ ವಿರುದ್ಧ ಸೋಲ ನುಭವಿಸಿತ್ತು. ಆ ಪಂದ್ಯದಲ್ಲಿ ಮೊದಲು ಬ್ಯಾ ಟಿಂಗ್ ಮಾಡಿದ್ದ ಚೆನ್ನೈ ಬ್ಯಾಟಿಂಗ್ ಕುಸಿತ ಕಂಡು 127 ರನ್‌ಗಳಿಗೆ ಆಲೌಟ್ ಆಗಿತ್ತು. ಅದನ್ನು ಬೆಂಬತ್ತಿದ್ದ ರಾಜಸ್ಥಾನ್ ರಾಯಲ್ಸ್ ತಂಡವು ಕೇವಲ 2 ವಿಕೆಟ್ ನಷ್ಟಕ್ಕೆ 12.1 ಓವರ್‌ಗಳಲ್ಲಿ ತನ್ನ ಗುರಿ ತಲುಪಿತ್ತು.

ತನ್ನ ತವರಿನಲ್ಲಿ ಮಂಗಳವಾರ ನಡೆದಿದ್ದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವು ಗುಜರಾತ್ ಟೈಟಾನ್ಸ್ ವಿರುದ್ಧ 3 ವಿಕೆಟ್‌ಗಳ ರೋಚಕ ಗೆಲುವನ್ನು ಪಡೆದಿತ್ತು. ಮೊದಲ ಬ್ಯಾಟಿಂಗ್ ಮಾಡಿದ ಗುಜರಾತ್ 6 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿದರೆ, ಆ ಮೊತ್ತವನ್ನು ಬೆಂಬತ್ತಿದ ಪಂಜಾಬ್ ತಂಡವು 19.1 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ ಗುರಿ ತಲುಪಿತ್ತು. ಈಗಾಗಲೇ ಆಡಿರುವ 1 ಪಂದ್ಯದಲ್ಲಿ ಸೋತಿ ರುವ ಋತುರಾಜ್ ಗಾಯಕ್ವಾಡ್ ನಾಯಕತ್ವದ ಚೆನ್ನೈಗೆ ಇಂದು ನಡೆಯಲಿರುವ ತವರಿನ ಪಂದ್ಯ ಮಹತ್ವದ್ದಾಗಿದೆ. ಎಂಎಸ್ ಧೋನಿಯ ಅನುಪಸ್ಥಿತಿಯಲ್ಲಿ ಗೆಲ್ಲುವ ಅನಿವಾರ್ಯತೆ ಅದಕ್ಕಿದೆ. ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡ ಈಗಾಗಲೇ 1 ಪಂದ್ಯವನ್ನು ಗೆದ್ದಿರುವ ಆತ್ಮವಿಶ್ವಾಸದಲ್ಲಿದೆ.

**ಇಂದಿನ ಪಂದ್ಯ**
ಚೆನ್ನೈ ಸೂಪರ್ ಕಿಂಗ್ಸ್-ಪಂಜಾಬ್ ಕಿಂಗ್ಸ್
ಕ್ರೀಡಾಂಗಣ: ಚಿದಂಬರಂ ಸ್ಟೇಡಿಯಂ
ಸಮಯ: ರಾ.7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್

ಏಷ್ಯಾ ಸೀರೀಸ್ ರೇಸಿಂಗ್‌ನಲ್ಲಿ ಮಿಂಚಿದ ಬಾಲಕ | ಚೇತರಿಕೆ ಬಳಿಕ ಉನ್ನತ ಯಶಸ್ಸು

# ಕಿಯಾನ್ ಶಾಗೆ ಮೂರನೇ ಸ್ಥಾನ

**ಮುಂಬೈ:** ಭಾರತದ ಉದಯೋನ್ಮುಖ ರೇಸರ್, ರಾಯೊ ರೇಸಿಂಗ್‌ನ ಕಿಯಾನ್ ಶಾ, ಅಂತಾರಾಷ್ಟ್ರೀಯ ರೇಸಿಂಗ್‌ನ ಹಿರಿಯರ ವಿಭಾಗಕ್ಕೆ ಭರ್ಜರಿಯಾಗಿ ಪಾದಾರ್ಪಣೆ ಮಾಡಿದ್ದಾರೆ. ಐಎಎಂಇ ಏಷ್ಯಾ ಸೀರೀಸ್ ಹಾಗೂ ಐಎಎಂಇ ಥಾಯ್ಲೆಂಡ್ ಸೀರೀಸ್‌ನ ರೇಸ್‌ನಲ್ಲಿ 3ನೇ ಸ್ಥಾನ ಪಡೆದು ಅವರು ಗಮನ ಸೆಳೆದಿದ್ದಾರೆ.

ರೇಸ್‌ನಲ್ಲಿ ಮುಂಬೈನ 15 ವರ್ಷದ ಕಿಯಾನ್, ಪೋಡಿಯಂ ಫಿನಿಶ್ ಮಾಡಿದರು. ಕಳೆದ ಡಿಸೆಂಬರ್‌ನಲ್ಲಿ ಸ್ನೋಬೋರ್ಡಿಂಗ್ ವೇಳೆ ಮೊಣಕೈ ಮುರಿದುಕೊಂಡಿದ್ದ ಕಿಯಾನ್‌ಗೆ ಈ ರೇಸ್ ವೇಳೆಗೆ ಸಂಪೂರ್ಣವಾಗಿ ಚೇತರಿಕೆ ಕಾಣುವುದು ಸವಾಲಾಗಿ ಪರಿಣಮಿಸಿತ್ತು. 2 ತಿಂಗಳ ಕಾಲ ರೇಸಿಂಗ್‌ನಿಂದ ದೂರ ಉಳಿದಿದ್ದ ಕಿಯಾನ್, ಛಲ ಬಿಡದೆ ಸಮಯಕ್ಕೆ ಸರಿಯಾಗಿ ಫಿಟ್ ಆಗಿ ರೇಸ್‌ಗೆ ಕಾಲಿಟ್ಟರು.

ಹೀಟ್ಸ್‌ನಲ್ಲಿ ಗಮನ ಸೆಳೆದ ಕಿಯಾನ್, ಫೈನಲ್ ರೇಸ್‌ನ ಗ್ರಿಡ್‌ನಲ್ಲಿ 14ನೇ ಸ್ಥಾನ ಪಡೆದರು. ರೇಸ್‌ನಲ್ಲಿ ತಮ್ಮ ಕೌಶಲ್ಯಗಳ ಪ್ರದರ್ಶನ ಮಾಡಿದ ಕಿಯಾನ್, 5ನೇ ಸ್ಥಾನ ಗಳಿಸಿದರು. ಹಾಲಿ ಏಷ್ಯನ್ ಚಾಂಪಿಯನ್ ಹಾಂಕಾಂಗ್‌ನ ಯು ಕಾ ಪೋಗಿಂತ ಕೇವಲ 1.6 ಸೆಕೆಂಡ್ ಹಿಂದೆ ಉಳಿದರು. ಈ ಸ್ಪರ್ಧೆಯಲ್ಲಿ ಅಗ್ರ 5 ಸ್ಥಾನ ಪಡೆಯುವ ಚಾಲಕರನ್ನು ಪೋಡಿ ಯಂ ಫಿನಿಶರ್ಸ್ ಎಂದು ಪರಿಗಣಿಸ ಲಾಗುತ್ತದೆ.

ತಮ್ಮ ಸಾಧನೆ ಬಗ್ಗೆ ಪ್ರತಿಕ್ರಿಯಿಸಿರುವ ಕಿಯಾನ್, 'ಕಳೆದ 3 ತಿಂಗಳು ಬಹಳ ಕಷ್ಟಕರವಾಗಿದ್ದವು. ನನಗೆ ಚಿಕಿತ್ಸೆ ನೀಡಿದ ವೈದ್ಯರಿಗೆ ಧನ್ಯವಾದ ಹೇಳಲು ಇಚ್ಛಿಸುತ್ತೇನೆ. ನನ್ನ ಟ್ರೈನರ್ ರೋಹನ್‌ರ ಪರಿಶ್ರಮದಿಂದಾಗಿ ನಾನು ಹಿರಿಯರ ವಿಭಾಗದಲ್ಲಿ ಸ್ಪರ್ಧೆ ಮಾಡಲು ಸಾಧ್ಯವಾಯಿತು' ಎಂದಿದ್ದಾರೆ.

ಕಿಯಾನ್ ಮುಂಬರುವ ವಾರ ಥಾಯ್ಲೆಂಡ್‌ನಲ್ಲೇ ನಡೆ ಯಲಿರುವ ಏಷ್ಯನ್ ರೋಟಾಕ್ಸ್ ಹಾಗೂ ಐಎಎಂಇ ಸೀರೀಸ್‌ನ ಮುಂದಿನ ಎರಡು ಸುತ್ತುಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ತಂಡಕ್ಕೆ ಮರಳುವವರಿಗೆ ಕೆಎಸ್‌ಸಿಎ ಹೊಸ ನಿಯಮ

# ಕೂಲಿಂಗ್ ಆಫ್ ನಿಯಮ ಜಾರಿ

**ಬೆಂಗಳೂರು:** ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಹೊಸ ಋತು ಇದೇ 15ರಿಂದ ಆರಂಭವಾಗಲಿದ್ದು, ಎರಡು ಪ್ರಮುಖ ಬದಲಾವಣೆಗಳು ಜಾರಿಗೆ ಬಂದಿವೆ.

ಪರರಾಜ್ಯಗಳ ತಂಡಗಳಲ್ಲಿ ಆಡಲು ಕೆಎಸ್‌ಸಿಎಯಿಂದ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆದಿರುವ ಆಟಗಾರರು ಮರಳಿ ಕರ್ನಾಟಕ ತಂಡಕ್ಕೆ ಬರಬೇಕಾದರೆ ಒಂದು ಋತುವಿನಲ್ಲಿ ಕೂಲಿಂಗ್ ಆಫ್ (ಬಿಡುವು) ನಿಯಮ ಪಾಲಿಸಬೇಕು. ಎರಡನೆಯ ನಿಯಮವೆಂದರೆ, ಕೆಎಸ್‌ಸಿಎ ಸೀಮಿತ ಓವರ್‌ಗಳ ಕ್ರಿಕೆಟ್ ಟೂರ್ನಿಗಳಲ್ಲಿ ಆಡುವ ತಂಡಗಳಿಗೆ ಇನ್ನು ಮುಂದೆ ಬಣ್ಣದ ಸಮವಸ್ತ್ರ ಧರಿಸುವುದು ಕಡ್ಡಾಯವಾಗಲಿದೆ.

**ಮಾಸಿಕ ಪಿಂಚಣಿ:** ರಾಷ್ಟ್ರೀಯ ಸೀನಿಯರ್ ಚಾಂಪಿಯನ್‌ಶಿಪ್‌ಗಳಲ್ಲಿ ಆಡಿದ ಕರ್ನಾಟಕ ಮಹಿಳಾ ತಂಡವನ್ನು ಪ್ರತಿನಿಧಿಸಿರುವ ಮಾಜಿ ಆಟಗಾರ್ತಿಯರಿಗೆ ಮಾಸಿಕ ಪಿಂಚಣಿ ಯೋಜನೆಯನ್ನು ವಿಸ್ತರಿಸಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ನಿರ್ಧರಿಸಿದೆ. ಬಿಸಿಸಿಐನಿಂದ ಪಿಂಚಣಿ ಮಾದರಿಯ ಸೌಲಭ್ಯಗಳನ್ನು ಪಡೆಯದ 55 ವರ್ಷ ವಯಸ್ಸಿನ ಆಟಗಾರ್ತಿಯರು ಪಿಂಚಣಿ ಪಡೆಯಲು ಅರ್ಹರಾಗಿದ್ದಾರೆ.

'ಮಹಿಳಾ ಕ್ರಿಕೆಟ್ ಕ್ಷೇತ್ರಕ್ಕೆ ಉಪಯುಕ್ತ ಕಾಣಿಕೆ ನೀಡಿರುವ ಆಟಗಾರ್ತಿಯರನ್ನು ಗೌರವಿಸಲು ಈ ಯೋಜನೆ ವಿಸ್ತರಿಸಲಾಗುತ್ತಿದೆ. ಅರ್ಹ ಅಭ್ಯರ್ಥಿಗಳು ತಮ್ಮ ದಾಖಲಾತಿ ಪತ್ರಗಳು, ಕ್ರಿಕೆಟ್ ಆಡಿದ ವಿವರಗಳನ್ನು ಕೆಎಸಿಎಗೆ ಸಲ್ಲಿಸಬೇಕು ಎಂದು ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ತಿಳಿಸಿದ್ದಾರೆ.

ಫಿಟ್ನೆಸ್ ಪೂರೈಸಿಲ್ಲ ಎಂದು ಆರ್‌ಸಿಬಿ ತಂಡಕ್ಕೆ ಸೇರಲು ಅವಕಾಶ ನಿರಾಕರಣೆ

# ಲಂಕಾ ಮಂಡಳಿ ವಿರುದ್ಧ ತುಷಾರ ಖಟ್ಲೆ

**ದೆಹಲಿ:** ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವೇಗಿ ನುವಾನ್ ತುಷಾರ ಅವರು ಶ್ರೀಲಂಕಾ ಕ್ರಿಕೆಟ್ ಮಂಡಳಿ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದಾರೆ. ಐಪಿಎಲ್‌ನಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡಕ್ಕೆ ಸೇರುವ ಅವಕಾಶವನ್ನು ನಿರಾಕರಿಸಿದ ಹಿನ್ನೆಲೆಯಲ್ಲಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಜಾಶ್ ಹೇಜಲ್‌ವುಡ್ ಆರಂಭಿಕ ಹಂತದಲ್ಲಿ ಫಿಟ್ ಆಗಿರದ ಕಾರಣ, ರಜತ್ ಪಾಟಿದಾರ್ ನೇತೃತ್ವದ ತಂಡಕ್ಕೆ ಈ ಆವೃತ್ತಿಯಲ್ಲಿ ನುವಾನ್ ತುಷಾರ ಪ್ರಮುಖ ಪಾತ್ರವಹಿಸುವ ನಿರೀಕ್ಷೆ ಇತ್ತು. ಆದರೆ ನಿಗದಿತ ಫಿಟ್ನೆಸ್ ಮಾನದಂಡಗಳನ್ನು ಪೂರೈಸಿಲ್ಲ ಎಂಬ ಕಾರಣ ನೀಡಿ ಶ್ರೀಲಂಕಾ ಕ್ರಿಕೆಟ್ ಮಂಡಳಿಯು ತುಷಾರಾಗೆ ಎನ್‌ಒಸಿ ನೀಡಲು ನಿರಾಕರಿಸಿದೆ.

ತಾನು ಎನ್‌ಒಸಿ ಪಡೆಯಲು ಅರ್ಹನಾಗಿದ್ದೇನೆ ಎಂದು ನ್ಯಾಯಾಲಯ ಘೋಷಿಸಬೇಕೆಂದು ತುಷಾರ ಮನವಿ ಮಾಡಿದ್ದಾರೆ. ಒಂದು ವೇಳೆ ಎನ್‌ಒಸಿ ನಿರಾಕರಿಸಿದರೆ, ಆರ್‌ಸಿಬಿ ತಂಡವು ಒಪ್ಪಂದವನ್ನು ರದ್ದುಪಡಿಸಬಹುದು, ಆಗ ಅವರು ಒಪ್ಪಂದದ ಹಣ ಕಳೆದುಕೊಳ್ಳುವ ಸಾಧ್ಯತೆ ಇದೆ. ವರದಿ ಪ್ರಕಾರ, ತುಷಾರ ಅವರ ಕೇಂದ್ರ ಒಪ್ಪಂದವು ಮಾರ್ಚ್ 31ರಂದು ಮುಕ್ತಾಯಗೊಂಡಿದ್ದು, ಅದನ್ನು ನವೀಕರಿಸಲು ಅವರು ಆಸಕ್ತಿ ತೋರಿಸಿಲ್ಲ. ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ದೂರ ಸರಿಯುವ ಉದ್ದೇಶವನ್ನೂ ಅವರು ಲಂಕಾ ಕ್ರಿಕೆಟ್ ಮಂಡಳಿಗೆ ತಿಳಿಸಿರುವುದಾಗಿ ತಿಳಿದುಬಂದಿದೆ.

ಕೊಲ್ಕತ್ತಾ ತಂಡದಲ್ಲಿ 18 ಕೋಟಿ ಮೌಲ್ಯದ ಆಟಗಾರ ಮತೀಶ ಪತಿರಾನ ಹಾಗೂ ಸ್ಪಿನ್ನರ್ ವಾನಿಂದು ಹಸರಂಗ ಕೂಡ ಇದ್ದರೂ ಇಬ್ಬರೂ ಟಿ20 ವಿಶ್ವಕಪ್ ವೇಳೆ ಗಾಯಗೊಂಡಿದ್ದರು. ಹಾಗೆಯೇ ಸನ್‌ರೈಸರ್ಸ್ ಹೈದರಾಬಾದ್ ತಂಡದ ಇಶಾನ್ ಮಾಲಿಂಗ ಮತ್ತು ಕಮಿಂದು ಮೆಂಡಿಸ್ ಹೊರತುಪಡಿಸಿ ಇನ್ನೂ ಯಾವುದೇ ಶ್ರೀಲಂಕಾ ಆಟಗಾರರು ತಮ್ಮ ಐಪಿಎಲ್ ತಂಡಗಳಿಗೆ ಇನ್ನೂ ಸೇರ್ಪಡೆಯಾಗಿಲ್ಲ.

# ಡ್ರ್ಯಾಗನ್ ತೊರೆದ ಟೊವಿನೋ

ಮಲೆಯಾಳಂ ಖ್ಯಾತ ನಟ ಟೊವಿನೋ ಥಾಮಸ್, ಮಲೆಯಾಳಂನ ಸ್ಟಾರ್ ನಟರಲ್ಲಿ ಒಬ್ಬರು. ವರ್ಷವೊಂದರಲ್ಲಿ ಟೊವಿನೊ ಅಭಿನಯದ ನಾಲ್ಕು, ಐದು ಚಿತ್ರಗಳು ತೆರೆಗೆ ಬರಲಿವೆ. ಬಹುತೇಕ ಚಿತ್ರಗಳು ಪ್ರೇಕ್ಷಕರ ಮನಗೆದ್ದು ಸೂಪರ್ ಹಿಟ್ ಆಗಿವೆ. ಸದ್ಯ ಟೊವಿನೋ ಅಭಿನಯದ ಪಳ್ಳಿಚಟ್ಟಂಬಿ ಚಿತ್ರ ತೆರೆಗೆ ಸಿದ್ಧವಾಗಿದೆ. ಈ ನಡುವೆಯೇ ತೆಲುಗು ಚಿತ್ರರಂಗಕ್ಕೂ ಎಂಟ್ರಿಕೊಟ್ಟಿದ್ದ ಟೊವಿನೋ, ಪ್ರಶಾಂತ್ ನೀಲ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಡ್ರ್ಯಾಗನ್ ಸಿನಿಮಾದಲ್ಲಿ ಅಭಿನಯಿಸಲು ಸಮ್ಮತಿಸಿದ್ದರು. ಆದರೆ ಆ ಚಿತ್ರದಿಂದ ಹೊರಬಂದಿದ್ದಾರೆ. ಡ್ರ್ಯಾಗನ್ ಹೈಬಜೆಟ್ ಸಿನಿಮಾಗಿದ್ದು ಬಲು ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಹೀಗಾಗಿ ಈ ಸಿನಿಮಾದ ಶೂಟಿಂಗ್‌ಗೆ ವರ್ಷಗಟ್ಟಲೇ ಸಮಯ ಹಿಡಿಯಲಿದೆ. ಆದರೆ ಇಷ್ಟು ದಿನ ಒಂದೇ ಚಿತ್ರಕ್ಕಾಗಿ ಸಮಯ ಮೀಸಲಿಡುವುದು ಕಷ್ಟ. ಮಾಲಿವುಡ್‌ನಲ್ಲಿ ನಾವು ವರ್ಷಕ್ಕೆ ನಾಲ್ಕರಿಂದ ಐದು ಸಿನಿಮಾಗಳನ್ನು ನಿರ್ಮಾಣ ಮಾಡಿ ತೆರೆಗೆ ತರುತ್ತಿದ್ದೇವೆ. ಆದರೆ ಅದು ತೆಲುಗು ಚಿತ್ರರಂಗದಲ್ಲಿ ಕಷ್ಟ. ಯಾಕೆಂದರೆ ಇಲ್ಲಿನ ಚಿತ್ರಗಳು ಅದ್ದೂರಿ ವೆಚ್ಚದ್ದಾಗಿರುತ್ತವೆ, ಅದಕ್ಕಾಗಿ ಸಾಕಷ್ಟು ಸಮಯ ಹಿಡಿಸುತ್ತದೆ. ಒಂದು ಸಿನಿಮಾಗಾಗಿ ಐದು ಸಿನಿಮಾಗಳನ್ನು ಬಿಡಬೇಕಾಗುತ್ತದೆ ಅದು ಕಷ್ಟ ಎಂದು ಟೊವಿನೋ ಥಾಮಸ್ ಹೇಳಿದ್ದಾರೆ.

ನೀಲ್ ನಿರ್ದೇಶನದ ಡ್ರ್ಯಾಗನ್ ಸಿನಿಮಾದಲ್ಲಿ ಜೂ.ಎನ್‌ಟಿಆರ್ ನಾಯಕನಾಗಿ ಅಭಿನಯಿಸುತ್ತಿದ್ದು, ಕನ್ನಡದ ಹಲವು ಕಲಾವಿದರೂ ಸಿನಿಮಾದ ತಾರಾಬಳಗದಲ್ಲಿದ್ದಾರೆ. ಈ ಹಿಂದೆಯೇ ಚಿತ್ರೀಕರಣ ಆರಂಭಿಸಿದ್ದ ಡ್ರ್ಯಾಗನ್, ಭರದಿಂದ ಶೂಟಿಂಗ್ ನಡೆಸುತ್ತಿದೆ. ಕರ್ನಾಟಕದಲ್ಲಿಯೂ ಕೆಲವು ಸನ್ನಿವೇಶಗಳನ್ನು ಸೆರೆಹಿಡಿಯಲಾಗಿದೆ. ಪೊಲಿಟಿಕಲ್ ಡ್ರಾಮಾ ಜಾನರ್‌ನ ಈ ಚಿತ್ರದಲ್ಲಿ ಆಕ್ಷನ್‌ಗೂ ಹೆಚ್ಚಿನ ಒತ್ತು ನೀಡಲಾಗಿದ್ದು, ತಾರಕ್ ಈ ಸಿನಿಮಾದಲ್ಲಿ ಹೊಸ ಅವತಾರದಲ್ಲಿ ಅಬ್ಬರಿಸಲಿದ್ದಾರೆ.

**ಮಲೆಯಾಳಂನಂತೆಯೇ ಕನ್ನಡದಲ್ಲಿಯೂ ಸಣ್ಣ ಬಜೆಟ್‌ನ ಉತ್ತಮ ಚಿತ್ರಗಳು ನಿರ್ಮಾಣವಾಗಿ ತೆರೆಗೆ ಬಂದರೆ ಪ್ರೇಕ್ಷಕರು ಚಿತ್ರಮಂದಿರಗಳತ್ತ ಬರುತ್ತಾರೆ. ಆಗ ಚಿತ್ರಮಂದಿರಗಳ ಸಂಕಷ್ಟವೂ ನೀಗುತ್ತದೆ. ನಿರ್ಮಾಪಕರಿಗೂ ತಾವು ಹಾಕಿದ ಬಂಡವಾಳ ಮರಳಿ ಬರುತ್ತದೆ. ಇತ್ತೀಚೆಗೆ ಕನ್ನಡದಲ್ಲಿ ವಾರಕ್ಕೆ ಎಂಟರಿಂದ ಹತ್ತು ಸಿನಿಮಾಗಳು ತೆರೆಗೆ ಬಂದರೂ ಯಾವ ಸಿನಿಮಾಗಳು ಪ್ರೇಕ್ಷಕರಿಗೆ ರುಚಿಸುತ್ತಿಲ್ಲ. ಇದೇ ಕಾರಣಕ್ಕೆ ಪ್ರೇಕ್ಷಕರು ಥಿಯೇಟರ್‌ಗಳಿಗೆ ಬರುತ್ತಿಲ್ಲ. ಆದರೆ ಸಣ್ಣ ಬಜೆಟ್‌ನಲ್ಲಿ ನಿರ್ಮಾಣವಾದ ಸು ಫ್ರಮ್ ಸೋ ತೆರೆಗೆ ಬಂದು ಪ್ರೇಕ್ಷರನ್ನು ಸೆಳೆಯಿತು. ಚಿತ್ರಮಂದಿರಗಳಲ್ಲಿ ಹೌಸ್‌ಫುಲ್ ಪ್ರದರ್ಶನ ಕಂಡು ನೂರಾರು ಕೋಟಿ ಗಳಿಸಿ ಹೊಸ ದಾಖಲೆಯನ್ನೇ ಬರೆಯಿತು. ಅಂತೆಯೇ ಉತ್ತಮ ಕಂಟೆಂಟ್ ಚಿತ್ರಗಳು ಬಂದರೆ, ಅಂತಹ ಸಿನಿಮಾಗಳನ್ನು ಪ್ರೇಕ್ಷಕರು ಖಂಡಿತಾ ಕೈಹಿಡಿದು ಗೆಲ್ಲಿಸುತ್ತಾರೆ.**

# ಟ್ರೈಲರ್‌ನಲ್ಲಿ ಮನಗೆದ್ದ ಟೆರರ್

ಡೆಡ್ಲಿ ಖ್ಯಾತಿಯ ಆದಿತ್ಯ ಈಗ ಟೆರರ್ ಆಗಿ ತೆರೆಗೆ ಬರಲು ಸಿದ್ಧವಾಗಿದ್ದಾರೆ. ಹಲವು ಸಿನಿಮಾಗಳಲ್ಲಿ ಭೂಗತ ಲೋಕದ ಡಾನ್ ಆಗಿ ಮಿಂಚಿದ್ದ ಆದಿತ್ಯ ಮತ್ತೆ ಅಂಡರ್ ವರ್ಲ್ಡ್ ಡಾನ್ ಆಗಿ ಅಬ್ಬರಿಸಲಿದ್ದಾರೆ. ಟೆರರ್ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು ಸಿನಿಪ್ರಿಯರ ಮನಗೆದ್ದಿದೆ. ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರಸಿಂಗ್ ಬಾಬು, ಹಿರಿಯ ಕಲಾವಿದರಾದ ಜೈಜಗದೀಶ್, ವಿಜಯಲಕ್ಷ್ಮಿ ಸಿಂಗ್, ಸುಂದರ್‌ರಾಜ್, ಪ್ರಮೀಳಾ ಜೋಷಾಯ್, ಡಿಂಗ್ರಿ ನಾಗರಾಜ್, ಲಹರಿ ವೇಲು ಟ್ರೇಲರ್ ನೋಡಿ ಮೆಚ್ಚಿಕೊಂಡಾಡಿದರು. ಟೆರರ್ ಗ್ಯಾಂಗ್‌ಸ್ಟರ್ ಕಥೆಯಾಗಿದ್ದು, ಚಿತ್ರದುದ್ದಕ್ಕೂ ಗುಂಡಿನ ಮೊರೆತ ಕೇಳಿಸುತ್ತದೆ. ಆದಿತ್ಯ ಈ ಹಿಂದಿನ ಸಿನಿಮಾಗಳಿಂತಲೂ ಸ್ಟೈಲಿಶ್ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಅವರ ಜತೆಗೆ ಶ್ರೀನಗರ ಕಿಟ್ಟಿ, ಕುಮಾರ್ ಬಂಗಾರಪ್ಪ, ಶಶಿಕುಮಾರ್, ದೇವರಾಜ್ ಹೀಗೆ ದಿಗ್ಗಜರ ದಂಡೇ ಚಿತ್ರದಲ್ಲಿದೆ. ರಂಜನ್ ಶಿವರಾಮ್ ಗೌಡ ಚಿತ್ರದ ಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರವನ್ನು ಸಿಲ್ಕ್ ಮಂಜು, ರವಿ ಹಾಗೂ ಸ್ಮಿತಾ ವಸಿಷ್ಠ ಒಟ್ಟಾಗಿ ನಿರ್ಮಾಣ ಮಾಡಿದ್ದಾರೆ.



ಟೆರರ್‌ನಲ್ಲಿ ಅದ್ಭುತ ಕಥೆ ಇದೆ. ನಾನು ಹಾಗೂ ಶ್ರೀನಗರ ಕಿಟ್ಟಿ ಇಪ್ಪತ್ತೊಂದು ವರ್ಷಗಳ ಬಳಿಕ ಈ ಚಿತ್ರದಲ್ಲಿ ಒಟ್ಟಾಗಿ ನಟಿಸಿದ್ದೇವೆ. ಈ ಸಿನಿಮಾದಲ್ಲಿ ನನ್ನನ್ನು ಹೊಸ ಅವತಾರದಲ್ಲಿ ಕಣ್ತುಂಬಿಕೊಳ್ಳಬಹುದು. ವಿ.ನಾಗೇಂದ್ರಪ್ರಸಾದ್ ಅವರ ಸಾಹಿತ್ಯ ಹಾಗೂ ಹರ್ಷವರ್ಧನ್ ರಾಜ್ ಸಂಗೀತ ನಿರ್ದೇಶನ ಚಿತ್ರದ ಹೈಲೆಟ್ ಆಗಿದೆ ಎಂದು ಆದಿತ್ಯ ಸಂತಸದಿಂದ ನುಡಿದರು.

ನಿರ್ದೇಶಕರು ಬಂದು ಕಥೆ ಹೇಳಿದಾಗ ಕೇಳಿ ಇಷ್ಟವಾಯಿತು. ಈ ಸಿನಿಮಾವನ್ನು ಸಿಲ್ಕ್ ಮಂಜು ಅವರು ನಿರ್ಮಾಣ ಮಾಡುತ್ತಿದ್ದಾರೆ ಎಂದಾಗ ಮರು ಮಾತಾಡದೆ ನಟಿಸಲು ಒಪ್ಪಿಕೊಂಡೆ. ಯಾಕೆಂದರೆ ಮಂಜು ನನ್ನ ನಡುವೆ ಒಳ್ಳೆಯ ಗೆಳೆತನವಿದೆ. ಅವರಿಗಾಗಿ ಈ ಸಿನಿಮಾ ಮಾಡುತ್ತೇನೆ ಎಂದು ಸಮ್ಮತಿಸಿದೆ. ಅಂತೆಯೇ ಆದಿತ್ಯ ಅವರ ಜತೆಗೆ ಬಹು ವರ್ಷಗಳ ಬಳಿಕ ನಟಿಸಿದ್ದು ಖುಷಿಕೊಟ್ಟಿದೆ ಎಂದು ಶ್ರೀನಗರ ಕಿಟ್ಟಿ ಹೇಳಿದರು.

ನಿರ್ದೇಶಕರು ಹೇಳಿದ ಕಥೆ ಕುತೂಹಲ ಮೂಡಿಸಿತು. ಹಾಗಾಗಿ ನಿರ್ಮಾಣಕ್ಕೆ ಮುಂದಾದೆ. ಅಮೇರಿಕಾದಲ್ಲಿರುವ ನನ್ನ ಸ್ನೇಹಿತ ರವಿ, ನನ್ನ ಜತೆ ನಿರ್ಮಾಣಕ್ಕೆ ಕೈಜೋಡಿಸಿದರು. ಟೆರರ್ ಅದ್ಭುತವಾಗಿ ಮೂಡಿಬಂದಿದೆ. ಪ್ರೇಕ್ಷಕರಿಗೆ ಖಂಡಿತಾ ಹಿಡಿಸಲಿದೆ ಎಂದು ನಿರ್ಮಾಪಕ ಸಿಲ್ಕ್ ಮಂಜು ತಿಳಿಸಿದರು.

# ರಾಮಾಯಣದ ದೃಶ್ಯವೈಭವ

ಬಾಲಿವುಡ್‌ನಲ್ಲಿ ಸೆಟ್ಟೇರಿರುವ ರಾಮಾಯಣ ಬಲು ಅದ್ದೂರಿಯಾಗಿ ಮೂಡಿಬರುತ್ತಿದೆ. ನಿತೇಶ್ ತಿವಾರಿ ನಿರ್ದೇಶನದ ಈ ಚಿತ್ರ ತನ್ನ ಮಹತ್ವದ ಅಧ್ಯಾಯವನ್ನು ಆರಂಭಿಸಿದೆ. ಈ ಮಹಾಕಾವ್ಯದ ಟೀಸರ್ ರಿಲೀಸ್ ಆಗಿದ್ದು ಬಲು ಅದ್ದೂರಿಯಾಗಿ ಮೂಡಿಬಂದಿದೆ. ಟೀಸರ್‌ನಲ್ಲಿನ ದೃಶ್ಯ ವೈಭವ ಕಂಡು ಸಿನಿಪ್ರಿಯರು ಮಂತ್ರಮುಗ್ಧರಾಗಿದ್ದಾರೆ. ರಣಬೀರ್ ಕಪೂರ್, ರಾಮನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಮರ್ಯಾದಾ ಪುರುಷೋತ್ತಮ ಎಂದು ಕರೆಯಲ್ಪಡುವ ರಾಮ, ಇಂದಿನ ಜಗತ್ತಿನಲ್ಲಿ ಅತಿ ಅಪರೂಪ. ಆತ ಆಸೆಗಿಂತ ಕರ್ತವ್ಯವನ್ನೇ ಆರಿಸಿಕೊಂಡವನು. ದೇಶಭ್ರಷ್ಟತೆ, ನಷ್ಟ ಮತ್ತು ಅನ್ಯಾಯದ ನಡುವೆಯೂ ಘನತೆ, ಸಹಾನುಭೂತಿ ಮತ್ತು ನೈತಿಕ ಸ್ಪಷ್ಟತೆಯನ್ನು ಮೈಗೂಡಿಸಿಕೊಂಡವನು. ಮೊದಲ ಭಾಗದಲ್ಲಿ ರಾಮನ ಕಥೆ ಸಾಗಲಿದೆ. ರಣಬೀರ್ ಕಪೂರ್, ರಾಮನಾಗಿ ಅವತಾರ ತಾಳಿದ್ದರೆ, ರಾವಣನಾಗಿ ಯಶ್ ಅಬ್ಬರಿಸಲಿದ್ದಾರೆ. ಸೀತೆಯಾಗಿ ಸಾಯಿ ಪಲ್ಲವಿ ಮತ್ತು ಲಕ್ಷ್ಮಣನಾಗಿ ರವಿ ದುಬೆ ಬಣ್ಣಹಚ್ಚಿದ್ದಾರೆ. ರಾಮಾಯಣ ಎರಡು ಭಾಗಗಳಲ್ಲಿ ಬಿಡುಗಡೆಯಾಗಲಿದ್ದು, ಮೊದಲ ಭಾಗ ಇದೇ ದೀಪಾವಳಿ ಹಬ್ಬದಂದು ತೆರೆಗೆ ಬರಲಿದೆ. ಕ್ನನಡ, ಹಿಂದಿ ಸೇರಿದಂತೆ ಹಲವು ಭಾಷೆಗಳಲ್ಲಿ ರಾಮಾಯಣ ಬಿಡುಗಡೆಯಾಗಲಿದ್ದು, ನಮಿತ್ ಮಲ್ಹೋತ್ರಾ ನಿರ್ಮಾಣ ಮಾಡುತ್ತಿದ್ದಾರೆ.

**ನಾನು ಇಲ್ಲಿ ರಾಮನನ್ನು ಪ್ರತಿನಿಧಿಸಲು ಬಂದಿಲ್ಲ, ಬದಲಾಗಿ ಅವರಿಂದ ಕಲಿಯಲು ಬಂದಿದ್ದೇನೆ. ರಾಮನ ಸರಳತೆ ಮತ್ತು ಶುದ್ಧತೆ ಅತಿ ಅಪರೂಪದ್ದು. ಅದನ್ನು ಅರ್ಥಮಾಡಿಕೊಳ್ಳಲು ಮತ್ತು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ನನಗೆ ಈ ಸಿನಿಮಾ ಅತ್ಯಂತ ವಿನಮ್ರವಾದ ಅನುಭವವಾಗಿದೆ.**
-ರಣಬೀರ್ ಕಪೂರ್

**ರಾಮಾಯಣದ ಹಿರಿಮೆ ಇರುವುದು ಅದರ ಭಾವನಾತ್ಮಕ ಸಮೃದ್ಧಿಯಲ್ಲಿ. ಇದರ ತಿರುಳು ಕೇವಲ ಒಳ್ಳೆಯದು ಮತ್ತು ಕೆಟ್ಟದ್ದರ ನಡುವಿನ ಹೋರಾಟವಲ್ಲ, ಬದಲಾಗಿ ಇದು ನಾವು ಮಾಡುವ ಆಯ್ಕೆಗಳು, ಅದರ ಪರಿಣಾಮಗಳು ಮತ್ತು ಸರಿ ದಾರಿಯಲ್ಲಿ ನಡೆಯುವ ಜವಾಬ್ದಾರಿಯ ಬಗ್ಗೆ ತಿಳಿಸುತ್ತದೆ. ರಾಮನ ಪಯಣವು ಆಳವಾದ ಮಾನವೀಯತೆಯಿಂದ ಕೂಡಿದೆ.**
-ನಿತೀಶ್ ತಿವಾರಿ ನಿರ್ದೇಶಕ

# ನಮ್ಮ ನಡುವೆ ಬಿರುಕಿಲ್ಲ

ರಕ್ಷಿತ್, ರಿಷಬ್, ರಾಜ್ ಶೆಟ್ಟಿ, ಪ್ರಮೋದ್ ಈ ಮೂವರು ಚಂದನವನದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಹಿಟ್ ಸಿನಿಮಾಗಳನ್ನು ನೀಡುವ ಮೂಲಕ ಸ್ಟಾರ್ ನಟರಾಗಿ ಗುರುತಿಸಿಕೊಂಡಿದ್ದಾರೆ. ರಾಜ್, ರಿಷಬ್, ರಕ್ಷಿತ್ ಈ ಮೂವರು ಒಂದೇ ಸಿನಿಮಾದಲ್ಲಿ ನಟಿಸಲಿದ್ದಾರೆ. ಅದಕ್ಕೆ ಈಗಾಗಲೇ ಕಥೆಯೂ ರೆಡಿಯಾಗಿದೆ ಎಂಬ ಮಾತುಗಳು ಕೇಳಿ ಬಂದಿದ್ದವು. ಈ ಮೂವರನ್ನು ಒಂದೇ ಸಿನಿಮಾದಲ್ಲಿ ತೆರೆಗೆ ತರಲು ನಿರ್ಮಾಪಕ, ನಿರ್ದೇಶಕರು ಪ್ರಯತ್ನಿಸಿದ್ದರು. ಅದು ಇನ್ನೇನು ಯಶಸ್ಸು ಕಾಣಲಿತ್ತು. ಹೀಗಿರುವಾಗಲೇ ಈ ಮೂವರ ನಡುವೆ ಬಿರುಕು ಮೂಡಿದೆ ಎಂಬ ಮಾತುಗಳೂ ಕೇಳಿಬಂದಿದ್ದವು, ಇದಕ್ಕೆ ಪೂರಕ ಎಂಬಂತೆ ರಿಷಬ್ ಶೆಟ್ಟಿ ಸೋಷಿಯಲ್ ಮೀಡಿಯಾದಿಂದ ರಾಜ್ ಶೆಟ್ಟಿ, ರಕ್ಷಿತ್ ಹಾಗೂ ಪ್ರಮೋದ್ ಶೆಟ್ಟಿ ಅವರನ್ನು ಅನ್ ಫಾಲೋ ಮಾಡಿದ್ದರು. ಇದನ್ನು ನೋಡಿ ಈ ಮೂವರ ನಡುವೆ ಬಿರುಕಿರುವುದು ಖಚಿತ ಎಂಬ ಮಾತುಗಳು ಕೇಳಿಬಂದವು.ಈ ವಿಚಾರ ಸಾಮಾಜಿಕ ಜಾಲತಾಣದಲ್ಲಿಯೂ ಸಖತ್ ಸದ್ದು ಮಾಡಿತ್ತು. ಆದರೆ ಹಾಗೇನು ಆಗಿಲ್ಲ, ನಾವೆಲ್ಲರೂ ಚೆನ್ನಾಗಿದ್ದೇವೆ. ಮೊದಲು ನಮ್ಮ ನಡುವೆ ಇದ್ದ ಗೆಳೆತನ ಇಂದಿಗೂ ಮುಂದುವರಿದಿದೆ. ಕೆಲವು ಕಾರಣಗಳಿಂದ ರಿಷಬ್, ಸೋಷಿಯಲ್ ಮೀಡಿಯಾದಲ್ಲಿ ಎಲ್ಲರನ್ನು ಅನ್ ಫಾಲೋ ಮಾಡಿದ್ದಾರೆ. ಅಂದ ಮಾತ್ರಕ್ಕೆ ನಾವೆಲ್ಲರೂ ದೂರಾಗಿದ್ದೇವೆ ಅಂತ ಏನಿಲ್ಲ, ನಮ್ಮ ನಡುವೆ ಮೊದಲಿದ್ದ ಆತ್ಮೀಯತೆ ಇಂದಿಗೂ ಇದೆ ಎಂದು ಪ್ರಮೋದ್ ಶೆಟ್ಟಿ ಸ್ಪಷ್ಟನೆ ನಿಡಿದ್ದಾರೆ.